ಅಧ್ಯಕ್ಷರು.—ಪ್ರಾರಂಭ, ಉತ್ತರ ಎರಡೂ ಆಗಬೇಕು. ಸಭೆಯ ಅಭಿಪ್ರಾಯ ಚರ್ಚೆ, ಉತ್ತರ ಎರಡೂ ಆಗಬೇಕು ಎಂಬುದು. ಆದಕ್ಕೆ ಇವತ್ತೇ ಉತ್ತರ ಕೊಡಿಸಬೇಕು, ಸಬ್ಜೆಕ್ಟ್ ಮುಗಿಯಬೇಕು ಇಲ್ಲ ಅಂದರೆ ನಾಳೆ ಅವಕಾಶ ಕೊಡುತ್ತೇನೆ. ಒಂದು ತಾಸು ಎರಡು ತಾಸು ಹೆಚ್ಚಾಗಲಿ.

ಶ್ರೀ ಧರ್ಮಸಿಂಗ್.—ಇವತ್ತೇ ಮಾಡಬೇಕು ಎಂದು ಕಂಡೀಷನ್ ಹಾಕುತ್ತೀರಾ ?

ಶ್ರೀ ಆರ್ ಎಲ್. ಜಾಲಪ್ಪ.—ಹೌದು. ಆ ರೀತಿ ನಿಯಮ ಇಲ್ಲವೇ ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಇವತ್ತೇ ಆಗಬೇಕು. ನಾಳೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿಲ್ಲ.

ಶ್ರೀ ಧರ್ಮಸಿಂಗ್.—ಇವತ್ತೇ ಆಗಬೇಕು ಎಂದು ಕಂಡೀಷನ್ ಹಾಕುತ್ತೀರಾ ?

ನಿಯಮ 68ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಇತ್ತೀಚೆಗೆ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಸುಮಾರು ಒಂದು ತಾಸು ಚರ್ಚೆ ಆದಮೇಲೆ ಚರ್ಚೆಗೆ ಒಪ್ಪಿಕೊಂಡಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದಂಥ ದೌರ್ಜನ್ಯ ಮತ್ತು ಅದಕ್ಕೆ ಪೋಲೀಸ್ ಇಲಾಖೆಯ ಕುಮ್ಮಕ್ಕು ಈ ವಿಚಾರದಲ್ಲಿ ನಾವು ಒಂದು ನಿಲುವಳಿ ಸೂಚನೆಯನ್ನು ತಮ್ಮ ಮುಂದೆ ಇಟ್ಟಿದ್ದೆವು, ಆದರೆ ತಾವು ಅದನ್ನು ರೂಲ್ ೬೮ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ದಲಿತರ ಮೇಲೆ ಆಗಿರುವಂಥ ಅನೇಕ ಇನ್ಸಿಡೆಂಟ್ಸ್ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಜೊತೆಯಲ್ಲಿ ಹೋದ ಅಧಿವೇಶನದಲ್ಲಿ ನಾವು ದಲಿತರ ಮೇಲೆ ಆಗತಕ್ಕ ಅನ್ಯಾಯ ಮತ್ತು ದಬ್ಬಾಳಿಕೆ, ಹಾಗೂ ಶೋಷಣೆ ಇದರ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದೆವು.

(ಉಪಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಒಂದು ಸದನದ ಸಮಿತಿಯನ್ನೇ ಮಾಡಬೇಕೆಂದು ಒತ್ತಾಯ ಮಾಡಿದೆವು. ಆದರೆ ಸರ್ಕಾರ ವಿಧಾನ ಮಂಡಲದಲ್ಲೇ ಇರತಕ್ಕ ಹರಿಜನ-ಗಿರಿಜನ ಕಲ್ಯಾಣ ಸಮಿತಿಯೇ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಜವಾಗಿಯೂ ಅಲ್ಲಿರತಕ್ಕ ಹರಿಜನ-ಗಿರಿಜನರ ಮೇಲೆ ಅನ್ಯಾಯ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಂಡು ಬಂದು ವರದಿಯನ್ನು ಸದನಕ್ಕೆ ಸಲ್ಲಿಸಬೇಕೆಂಬ ಒಂದು ನಿರ್ಣಯ ಕೂಡ ಇಲ್ಲಿ ಆಯಿತು. ಅದರಂತೆ ಹರಿಜನ-ಗಿರಿಜನ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಡಾ. ಬಿ.ಎಂ. ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿನ ಸಮಿತಿ ಘಟನೆ ನಡೆದ ಅನೇಕ ಸ್ಥಳಗಳಲ್ಲಿ ಭೇಟಿ ಕೊಟ್ಟು, ಅದರಲ್ಲೂ ಮುಖ್ಯವಾಗಿ ಬೆಂಡಿಗೇರಿ, ಕುಮ್ಮನಸಿರಸಿ ಹಾಗೂ ಬಿದರೊಳ್ಳಿ ಈ ಮೂರು ಹಳ್ಳಿಗಳಿಗೂ ಎಸ್.ಸಿ.ಎಸ್.ಟಿ. ಕಲ್ಯಾಣ ಸಮಿತಿಯು ಭೇಟಿ ನೀಡಿ ವರದಿಯನ್ನು ಕೊಟ್ಟರು. ಅತ್ಯಂತ ಕಠಿಣವಾದ ಒಂದು ವರದಿಯನ್ನು ಕೊಟ್ಟರು ಅದು ದಿನಾಂಕ ೪-೧೧-೧೯೮೭ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಈ ಮೂರು ಇನ್‌ಸ್ಟೆನ್ಸ್‌ಗಳನ್ನು ನಾನು ಏಕೆ ತೆಗೆದುಕೊಂಡಿದ್ದೇನೆಂದರೆ, ನಾವು ಈ ಸದನದಲ್ಲಿ ಏನೇ ಆಪಾದನೆಗಳನ್ನು ಮಾಡಿದರೂ, ಅನೇಕ ಸಲ ಸರ್ಕಾರದವರು ಬಹಳ ಹಗುರವಾಗಿ ಹಾಗೂ ಲಘುವಾಗಿ ತೆಗೆದುಕೊಳ್ಳುತ್ತಾರೆ. ಏನೋ ವಿರೋಧ ಪಕ್ಷದವರು ಯಾವಾಗಲೂ ಚರ್ಚೆ ಮಾಡತಕ್ಕಂಥದ್ದು ಇಷ್ಟೆ, ಅದರಲ್ಲೇನೂ ಹುರುಳು ಇರುವುದಿಲ್ಲ. ಮತ್ತು ಅನೇಕ ಸಾರಿ ಚರ್ಚೆ ನಡೆಯುವಂತಹ ಕಾಲದಲ್ಲಿ ತಾವು ಕೂಡ ನೋಡಿದ್ದೀರಿ. ಆರೋಪ ಪ್ರತ್ಯಾರೋಪ ಮಾಡತಕ್ಕಂಥದ್ದು ಇದ್ದೇ ಇರುತ್ತದೆ ಆಗ ನಿಮ್ಮ ಕಾಲದಲ್ಲಿ ಆಗಿಲ್ಲವೆ ? ನೀವು ಹೆಚ್ಚು ಮಾಡಿಲ್ಲವೇ ಎಂಬುದಾಗಿ ನಮ್ಮ ಮೇಲೆ ಅವರು, ಅವರ ಮೇಲೆ ನಾವು. ಇಂತಹ ಪದಗಳನ್ನು ಬಳಸಿ ಒಬ್ಬರಿಗೊಬ್ಬರು ಚರ್ಚೆ ಮಾಡತಕ್ಕಂಥದ್ದು ಈ ಸದನದಲ್ಲಿ

ನಡೆಯುವುದನ್ನು ತಾವೂ ನೋಡಿದ್ದೀರಿ. ನಾವು ಹೇಳುವುದು ಯಾವುದೂ ಸರಿಯಿಲ್ಲವೆಂದು ಕೆಲವು ಸದಸ್ಯರಿಗೆ ಭಾವನೆ ಬಂದಿದ್ದರೂ ಕೂಡ ಆ ಹಳ್ಳಿಗಳಿಗೆ ಭೇಟಿಯನ್ನು ನೀಡಿದಂತಹ ಸಮಿತಿಯು ಕೊಟ್ಟಂತಹ ವರದಿಯನ್ನು ನೋಡಿದ ಮೇಲೆ ೧೧ನೇ ಸೆಪ್ಟೆಂಬರ್ ೧೯೮೭ ರಂದು ಶಾಸಕರಾದಂತಹ ಶ್ರೀಮತಿ ಕೆ. ಎಸ್. ನಾಗರತ್ನಮ್ಮ, ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ರಮೇಶ್ ಕುಮಾರ್, ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀ ಜಿ. ರಾಮಕೃಷ್ಣ, ಶ್ರೀ ಆರ್. ರಾಮಯ್ಯ ಇನ್ನೂ ಮುಂತಾದವರು ಇದೇ ಸದನದಲ್ಲಿ ಅಂದು ನಾವು ಏನು ವಿಷಯವನ್ನು ರೈಸ್ ಮಾಡಿದ್ದೆವು ಆಗಲೂ ಬಹಳ ಒತ್ತಾಯದಿಂದ ಬಹಳ ಕಷ್ಟದಿಂದ ನಾವು ಸದನದ ಸಮಿತಿಯನ್ನೇ ಕಳುಹಿಸಿ ಎಂದು ಕೇಳಿದರೂ ಕೂಡ ಅದಕ್ಕೆ ಸರ್ಕಾರದವರು ಒಪ್ಪಲಿಲ್ಲ. ಕೊನೆಗೆ ಇರುವಂತಹ ಎಸ್.ಸಿ. ಎಸ್.ಟಿ. ಕಲ್ಯಾಣ ಸಮಿತಿಯನ್ನೇ ಕಳುಹಿಸಬಹುದೆಂದು ಹೇಳಿದರು. ಅದೇ ರೀತಿ ವಾದ ವಿವಾದ ಆದಮೇಲೆ ಸುಮಾರು ೩ ಗಂಟೆಯ ನಂತರ ಅದಕ್ಕೆ ಸರ್ಕಾರದವರು ಒಪ್ಪಿಕೊಂಡರು. ಅವರು ಅಂದು ಅದಕ್ಕೆ ಒಪ್ಪಿಕೊಂಡ ನಂತರ ಸಮಿತಿಯು ಸಂಬಂಧಪಟ್ಟ ಗ್ರಾಮಗಳಿಗೆ ಸೆಪ್ಟೆಂಬರ್ ೨೪ ಮತ್ತು ೨೬ ರಂದು ಭೇಟಿಕೊಟ್ಟಿದ್ದಾರೆ. ಆ ಒಂದು ಅಧಿವೇಶನದಲ್ಲಿ ಒಂದು ವಾರದಲ್ಲೇ ಆ ಬಗ್ಗೆ ವರದಿಯನ್ನು ಕೊಡಬೇಕೆಂದು ಆಗಿತ್ತು ಆದರೆ ವರದಿಯನ್ನು ಕೊಡುವುದರಲ್ಲಿ ಸ್ವಲ್ಪ ತಡವಾಗಿದೆ. ಆದರೂ ಕೂಡ ಇವತ್ತು ಅವರ ಒಂದು ವರದಿ ಸದನದ ಮುಂದಿದೆ. ಇದು ಒಂದು ಕಡೆ. ಅದರ ನಂತರವೂ ಬೆಳಕಿಗೆ ಬಾರದಂತಹ ಘಟನೆಗಳು ಅನೇಕ ಹಳ್ಳಿಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಇನ್ನೂ ಆಗುತ್ತಿವೆ. ಈಗ ಒಂದೇ ಒಂದನ್ನು ನಿಮಗೆ ಹೇಳುತ್ತಿದ್ದೇನೆ. ಅದೇನೆಂದರೆ, ಈ ಒಂದು ಹರಿಜನ-ಗಿರಿಜನ ಕಲ್ಯಾಣ ಸಮಿತಿ ತನ್ನ ವರದಿಯನ್ನು ಇವತ್ತು ಏನು ಕೊಟ್ಟಿದೆ ?

ನಾವು ಏನೇನು ಆಪಾದನೆಗಳನ್ನು ಮಾಡಿದ್ದೇವೆ ಅದರಲ್ಲಿ ಸತ್ಯಾಂಶವಿದೆ, ಹುರುಳು ಇದೆ, ಅದರ ಮೇಲೆ ಗಮನಹರಿಸಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯವರು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ ಅವರ ಮೇಲೆ ದಬ್ಬಾಳಿಕೆ ಯಾರು ಮಾಡಿದ್ದಾರೆ, ಶೋಷಣೆ ಯಾರು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇವೆಲ್ಲಾ ಘಟನೆಗಳು ನಡೆದ ಸಂದರ್ಭ ಯಾವಾಗ ? ಯಾವ ತಿಂಗಳು ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದವು ಎಂದು ಆಚರಣೆ ಮಾಡಿದೆವೋ ಆ ತಿಂಗಳು ಈ ಘಟನೆಗಳು ನಡೆದಿವೆ. ಆಗಸ್ಟ್ ೭ ರಂದು, ೨ರಂದು ಹಾಗೂ ೧೫ ರಂದು ಈ ಮೂರೂ ಘಟನೆಗಳು ನಡೆದಿವೆ. ನಮಗೆಲ್ಲಾ ಏನು ಸ್ವಾತಂತ್ರ್ಯ ಸಿಕ್ಕಿತು, ನಾವೆಲ್ಲಾ ಮುಕ್ತ ಪ್ರಜೆಗಳಾಗಿ ಬಾಳಬಹುದೆಂದು ಒಳ್ಳೆಯ ಸ್ಥಾನಮಾನ ಪಡೆಯಬಹುದೆನ್ನುವ ಸಂತೋಷದಿಂದ ಹೆಮ್ಮೆಯಿಂದ ಇದ್ದ ಕಾಲದಲ್ಲಿ ಈ ಘಟನೆಗಳು ಮತ್ತೆ ನಡೆದವು ಇವತ್ತು ಅಲ್ಲಿ ಎಂತಹವರಿಗೆ ರಕ್ಷಣೆ ಸಿಕ್ಕಿತು ? ಇವತ್ತು ಅಲ್ಲಿ ಯಾರು ಈ ಜನರ ಮೇಲೆ ಅನ್ಯಾಯ ಮಾಡಿದ್ದಾರೆ, ಯಾವ ಜನ ಈ ಮುಗ್ಧ ಜನರ ಮೇಲೆ ಶೋಷಣೆ ಮಾಡಿದ್ದಾರೆ ಅಂತಹವರಿಗೆ ಇವತ್ತಿನ ದಿವಸ ಸರ್ಕಾರ ಮತ್ತು ಪೋಲೀಸರಿಂದ ರಕ್ಷಣೆ ಸಿಕ್ಕಿದೆ. ಮಾನ್ಯ ಡಾ|| ತಿಪ್ಪೇಸ್ವಾಮಿಯವರ ಸಮಿತಿಯಲ್ಲಿ ಎರಡೂ ಸದನಗಳ ಎಲ್ಲಾ ಪಕ್ಷದ ಸದಸ್ಯರು ಇದ್ದಾರೆ. ಶ್ರೀಯುತರುಗಳಾದ ಚಿನ್ನಪ್ಪನವರು, ಕುಮಾರಸ್ವಾಮಿಯವರು, ಡಿಸೌಜ ಅವರು, ಚಂದ್ರಕಾಂತ ಬೆಲ್ಲದ್ ಅವರು, ಶಿವಪುತ್ರಪ್ಪ ದೇಸಾಯಿಯವರು ಜಿ.ಎಂ. ಕಾನಡೆಯವರು, ಎಂ.ಕೆ. ಕುಲಕರ್ಣಿಯವರಲ್ಲದೆ ಮೋಲ್ಮನೆಯ ಪೂಜಾರ್ ಅವರು ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಬಿ.ಟಿ.ಲಲಿತಾ ನಾಯಕ್ ಅವರು ಈ ಸಮಿತಿಯ ಸದಸ್ಯರಿದ್ದಾರೆ.ಈ ಸಮಿತಿಯ ಒಮ್ಮತದ ಅಭಿಪ್ರಾಯ ಏನು ? ಜೇವರ್ಗಿ ತಾಲ್ಲೂಕಿನ ಕುಪ್ಪನ ಸಿರಸಗಿ ಬಗ್ಗೆ ಅವರು ಈ ರೀತಿ ಹೇಳಿದ್ದಾರೆ.

> ಮುಖ್ಯ ಆರೋಪಿಯಾದ ಶ್ರೀ ಮಹದೇವಪ್ಪ ಸಂಕಾಲಿ ದುಷ್ಟ ಮನುಷ್ಯನಿದ್ದು, ರಾಜಕೀಯ ಮುಖಂಡನಾಗಿದ್ದು ಈತನ ವಿರುದ್ಧ ಹಲವಾರು ಮೊಕದ್ದಮೆಗಳು ಪೋಲೀಸ್ ಠಾಣೆ ಹಾಗೂ ನ್ಯಾಯಾಲಯಗಳಲ್ಲಿ ದಾಖಲಾಗಿದ್ದು ಕಂಡುಬಂದಿದೆ ಮತ್ತು ಈತನು ಜೈಲು ವಾಸವನ್ನೂ ಅನುಭವಿಸಿರುತ್ತಾನೆ. ಈತ ಜನತಾ ಪಕ್ಷದ ಮಂಡಲ ಪಂಚಾಯಿತಿ ಸದಸ್ಯನಾಗಿ ಚುನಾಯಿತನಾಗಿದ್ದಾನೆ. ಈ ಘಟನೆಯು ಜಾತಿಯ ಘರ್ಷಣೆಯಲ್ಲವೆಂದು ಆಕಸ್ಮಿಕವಾಗಿ ಜರುಗಿದೆಯೆಂದು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರ ವರದಿಯಿಂದ ತಿಳಿದು ಬಂದಿರುತ್ತದೆ.
>
> ಈತನ ಇನ್ನು ೩ ಜನ ಅಣ್ಣತಮ್ಮಂದಿರುಗಳ ಕುಟುಂಬವು ಏಕತ್ರ ಕುಟುಂಬವಾಗಿದ್ದು ಪಿತ್ರಾರ್ಜಿತ ಆಸ್ತಿಯು ಹೆಚ್ಚಿಗೆ ಇಲ್ಲದಿದ್ದರೂ, ತನ್ನ ದರ್ಪ ಹಾಗೂ ದಬ್ಬಾಳಿಕೆಯಿಂದ

> ಆಸ್ತಿಯನ್ನು ವರ್ಷೇವರ್ಷೇ ಹೆಚ್ಚಿಸಿಕೊಂಡಿದ್ದು ಈಗ ಸುಮಾರು ೨೫೦ ಎಕರೆ ಜಮೀನು ಉಳ್ಳವನಾಗಿದ್ದಾನೆಂದು ತಿಳಿದು ಬಂದಿದೆ.''

ಎಂದರೆ ಈ ರೀತಿ ದಬ್ಬಾಳಿಕೆ ಮಾಡತಕ್ಕ ಮನುಷ್ಯನಿಗೆ ಜನತಾ ಪಕ್ಷದ ವತಿಯಿಂದ ಮಂಡಲಪಂಚಾಯಿತಿಗೆ ಟಿಕೆಟ್ ಸಿಕ್ಕಿತು. ಈ ಮಾತನ್ನು ಈ ಪಕ್ಷದವರು ಮಾಡಿದ್ದಾರೆ, ಆ ಪಕ್ಷದವರು ಮಾಡಿದ್ದಾರೆಂದು ಹೇಳುತ್ತಿಲ್ಲ. ಆದರೆ ಎಂತಹ ಜನರಿಗೆ ರಕ್ಷಣೆ ಸಿಗುತ್ತದೆ? ಜೈಲುವಾಸಿಯಾಗಿದ್ದವನಿಗೆ, ಗೂಂಡಾ ಮನುಷ್ಯನಿಗೆ. ಇವತ್ತು ಆತ ಅಂತಹವನು ಎಂದು ಗೊತ್ತಿದ್ದರೂ ಕೂಡಾ ಟಿಕೆಟ್ ಕೊಟ್ಟು ನಿಲ್ಲಿಸಿ ಗೆಲ್ಲಿಸಿ ಅವನ ಕೈಯಿಂದ ಅದೇ ಹಳ್ಳಿಯಲ್ಲಿರತಕ್ಕ ಬುದ್ದವ್ವನ ಕೊಲೆ ಕೂಡಾ ಆಗಿದೆ. ಇವತ್ತು ಆತ ಮರ್ಡರ್ ಮಾಡಿದ್ದರೂ ಕೂಡಾ ರಕ್ಷಣೆ ಆತನಿಗೆ ಇದೆ. ಆತನನ್ನು ಅರೆಸ್ಟ್ ಮಾಡಲಿಲ್ಲ. ಅವನು ಬಿಜಾಪುರದಲ್ಲಿದ್ದಾನೆ ಗುಲ್ಬರ್ಗದಲ್ಲಿ ಕೋರ್ಟ್ ಹತ್ತಿರ ಅಡ್ಡಾಡುತ್ತಿದ್ದಾನೆಂದು ನಾವು ಹೋದ ಸಲ ಗಲಾಟೆ ಮಾಡಿ ಹೇಳಿದರೂ ಪೋಲೀಸ್‌ನವರು ಹಿಡಿಯಲಿಲ್ಲ. ಅವನಿಗೆ ರಕ್ಷಣೆ ಕೊಡುತ್ತಿದ್ದರು, ಏಕೆಂದು ಮಾನ್ಯ ಚೌಲಪ್ಪನವರನ್ನು ಕೇಳಿದರೆ ಅವರು ಆತನನ್ನು ಆದಷ್ಟು ಬೇಗ ಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಿಡಿದು ಶಿಕ್ಷೆ ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಕೊನೆಗೆ ಏನಾಯಿತು? ಅವನು ಪೋಲೀಸ್‌ನವರ ಕೈಗೆ ಸಿಗಲಿಲ್ಲ. ಹೈಕೋರ್ಟ್‌ನಲ್ಲಿ ಬೇಲ್ ಮೇಲೆ ಬಚಾವ್ ಆದ. ಅಷ್ಟೊಂದು ಕೆಟ್ಟವನು ಎಂದು ಗೊತ್ತಿದ್ದು, ಇವನ ವಿಚಾರ ಎಸ್.ಪಿ.ಯವರಿಗೆ ಗೊತ್ತಿದ್ದರೂ ಏನೂ ಮಾಡಲಿಲ್ಲ. ಈ ಮಾತನ್ನು ನಾನು ಹೇಳುತ್ತಿಲ್ಲ. ಎಲ್ಲಾ ಪಕ್ಷದ ಜನರು ಹೇಳುತ್ತಿದ್ದಾರೆ. ಅವನು ಕೆಟ್ಟವನು, ಆಸ್ತಿವಂತನಲ್ಲ, ದೌರ್ಜನ್ಯದಿಂದ ಪುಂಡಾಟಿಕೆಯಿಂದ ಆಸ್ತಿಯನ್ನು ಗಳಿಸಿದ್ದಾನೆ ಎನ್ನುವ ಮಾತನ್ನು ಜನರು ಹೇಳುತ್ತಾರೆ. ಸರ್ಕಾರ ಅವನ ಮೇಲೆ ಇವತ್ತು ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವನಿಗೆ ಬೆಂಬಲವಾಗಿ ಅನೇಕ ಮುಖಂಡರು ನಿಂತಿದ್ದಾರೆ.

ಶ್ರೀ ಕೆ ಎಚ್, ಶ್ರೀನಿವಾಸ್.—ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಅಪ್ಪಣೆ ಪಡೆದು ಮಾತನಾಡುತ್ತಿದ್ದೇನೆ. ನಾನು ಒಂದು ಮಾತನ್ನು ಮಾನ್ಯ ರಘುಪತಿಯವರಿಗೆ ಹೇಳಿದ್ದೆ. ಆ ಮಾತಿನಿಂದ ಅವರ ಮನಸ್ಸಿಗೆ ತುಂಬಾ ನೋವಾಗಿದೆಯೆಂದು ಒಂದು ಕಾಗದ ಕಳುಹಿಸಿದ್ದಾರೆ. ಸಂದರ್ಭಕ್ಕನುಸಾರವಾಗಿ ಆ ಮಾತನ್ನು ಹೇಳಬೇಕಾಯಿತು, ಅವರು ಆ ಮಾತನ್ನು ಆ ರೀತಿ ಅರ್ಥಮಾಡಿಕೊಳ್ಳುವ ಅಗತ್ಯವಿಲ್ಲ. ಆದರೂ ಕೂಡ ಅವರ ಮನಸ್ಸಿಗೆ ನೋವುಂಟು ಮಾಡಿದ್ದಕ್ಕಾಗಿ ನಾನು ಅವರಲ್ಲಿ ಕ್ಷಮಾಪಣೆ ಕೇಳುತ್ತಿದ್ದೇನೆ ಮತ್ತು ಅದಕ್ಕಾಗಿ ವಿಷಾದಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಶ್ರೀನಿವಾಸ್‌ರವರ ಬಾಯಿಂದ ಅಂತಹ ಮಾತು ಬರುವುದಿಲ್ಲ, ಸಹವಾಸ ದೋಷದಿಂದ ಬರುತ್ತಿದೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ನೀವು ಹೇಳಿಕೊಟ್ಟ ತರಹ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬುದ್ದವ್ವ ಎನ್ನುವ ಹೆಣ್ಣುಮಗಳ ಮರ್ಡರ್ ಆಯಿತು. ದನಗಳನ್ನು ಹೊಲದಲ್ಲಿ ಬಿಟ್ಟಿದ್ದ ಒಂದು ಸಣ್ಣ ಆಪಾದನೆಯ ಮೇಲೆ ಅವರ ಮನೆಗೆ ಹೋಗಿ ಸವರ್ಣೀಯರಾದ ಮಹದೇವಪ್ಪ ಮತ್ತು ಅಣ್ಣತಮ್ಮಂದಿರು ಕಲ್ಲಿನಿಂದ ಹೊಡೆದು ಆಕೆಯನ್ನು ಸಾಯಿಸಿದ್ದಾರೆ ಈ ರೀತಿ ಅನ್ಯಾಯವಾಗಿದೆಯೆಂದು ಹೇಳಿದ ಮೇಲೆ ಹರಿಜನ ಗಿರಿಜನ ಕಲ್ಯಾಣ ಸಮಿತಿಯು ಸ್ಥಳಕ್ಕೆ ಹೋಗಿ, ಅವರ ಅನಿಸಿಕೆಗಳನ್ನು ಮತ್ತು ಅವರು ಹೇಳಿದ ಮಾತನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಮುಂದೆ ಏನು ಹೇಳಿದ್ದಾರೆಂದರೆ ಸಮಿತಿಯವರು ತನ್ನ ಸ್ವಂತ ಅನಿಸಿಕೆಗಳನ್ನು ಮುಂದೆ ಇಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ, ಅವರು ಯಾವಾಗಲೂ ಇಂಥದ್ದನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ಹೇಳುತ್ತಾರೆ. ನಮ್ಮ ಕರ್ನಾಟಕ ರಾಜ್ಯದ ಪರಿಸ್ಥಿತಿಯೇ ಬೇರೆ ಇದೆ. ಬೇರೆ ಕಡೆ ಬೇರೆ ಇದೆ. ಅವರು ಪದೇ ಪದೇ ಬಿಹಾರ, ಉತ್ತರಪ್ರದೇಶ ರಾಜ್ಯಗಳ ಬಗ್ಗೆ ಹೇಳುತ್ತಾರೆ, ಅಲ್ಲಿ ಆ ರೀತಿ ಆಗಿರಬಹುದು. ಆದರೆ ಕರ್ನಾಟಕ ರಾಜ್ಯದ ಪರಿಸ್ಥಿತಿ ಬೇರೆ ಇದೆ. ಅಂತಹ ಒಂದು ವಾತಾವರಣದಲ್ಲಿ ಬೆಳೆದಂತಹ ನಮ್ಮ ರಾಜ್ಯದಲ್ಲಿ ವೀಕರ್ ಸೆಕ್ಷನ್‌ಗೆ ಪ್ರೊಟೆಕ್ಷನ್ ಅನ್ನು ಎಲ್ಲಾ ಸರ್ಕಾರಗಳು ಕೊಟ್ಟುಕೊಂಡು ಬಂದಿವೆ. ಅಂದರೆ ನಮ್ಮ ದಕ್ಷಿಣ ರಾಜ್ಯಗಳಲ್ಲಿನ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಜನರ ಪರಿಸ್ಥಿತಿಯನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬಹಳ ಉತ್ತಮ ರೀತಿಯಲ್ಲಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಅವಕ್ಕೆ ಕಾರಣಗಳು ಇಲ್ಲಿಯ ಜನರ ಹೋರಾಟ ಇರಬಹುದು, ಬೇರೆಯವರ ಸಹಕಾರ ಇರಬಹುದು ಎಲ್ಲರೂ ಕೂಡ ಹೊಂದಾಣಿಕೆಯಿಂದ ಹೋದ ಕಾರಣ ಸ್ವಲ್ಪ

ಮಟ್ಟಿಗೆ ಅವರ ಪರಿಸ್ಥಿತಿ ಸುಧಾರಿಸಿರಬಹುದು ಆದರೆ ಇವತ್ತಿನ ದಿವಸ ಏನಾಗಿದೆ ಎಂದರೆ ಜನ ದಬ್ಬಾಳಿಕೆ ಮಾಡುತ್ತಾರೆ. ಅನ್ಯಾಯ ಮಾಡುತ್ತಾರೆಂದು ಹೇಳಿದರೆ ಅನ್ಯಾಯ ದಬ್ಬಾಳಿಕೆ ಮಾಡಿದಂತಹ ಜನಾಂಗದ ಬೆಂಬಲ ಕಳೆದುಕೊಳ್ಳಬೇಕಾಗುತ್ತದೆಂದು ಏನೋ ಒಂದು ಹೇಳಿ ನಮ್ಮ ಮುಖ್ಯಮಂತ್ರಿಗಳು ಅದರಿಂದ ದೂರ ಸರಿದುಕೊಳ್ಳುತ್ತಾರೆ. ಏನಾದರೂ ಅನ್ಯಾಯವಾದರೆ ಅದು ಹೇಗಾಯಿತು ಎಂದು ಯಾರೂ ಹೇಳುವುದಿಲ್ಲ. ಇಂಥಿಂಥವರು ಅನ್ಯಾಯ ದಬ್ಬಾಳಿಕೆ ಮಾಡುತ್ತಾರೆಂದು ಗೊತ್ತಾದರೂ ಮೆಂಜಾರಿಟಿ ಕಮ್ಯೂನಿಟಿಯವರು ಈ ರೀತಿ ಮಾಡುತ್ತಾರೆಂದು ಗೊತ್ತಾದರೂ ಆ ಕಮ್ಯೂನಿಟಿಯ ಎಂ.ಎಲ್.ಎ ಗಳು ಎಲ್ಲಿ ಸಿಟ್ಟಿಗೇಳುತ್ತಾರೋ ಎಂದು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಅಲ್ಲಿಯ ಪೋಲೀಸ್ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡರೆ ಅಲ್ಲಿಯ ಜನರ ನಿಷ್ಠೂರ ಕಟ್ಟಿಕೊಳ್ಳಬೇಕಾಗುತ್ತದೆಂದು ತಿಳಿದುಕೊಂಡು ಏಕೋ ಸುಮ್ಮನಾಗಿ ಬಿಡುತ್ತಾರೆ.

ಹೀಗೆ ತಿಳಿದುಕೊಂಡು ಅವರಿಂದಲೇ ಸ್ವಲ್ಪಮಟ್ಟಿಗೆ ರಕ್ಷಣೆ ಸಿಕ್ಕಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಈ ಪರಿಸ್ಥಿತಿ ಆಗಿದೆ. ಅವರ ಒಂದು ಕ್ಲಚೆಸ್‌ನಲ್ಲಿ ತಾವು ಸಿಕ್ಕಿಬಿದ್ದಿದ್ದೀರಿ. ತಾವು ಮುಕ್ತವಾಗಿ ಹುಕುಂ ಅನ್ನು ಚಲಾಯಿಸತಕ್ಕಂಥ ವಾತಾವರಣ ಇಲ್ಲ. ಈ ಒಂದು ವಾತಾವರಣದಲ್ಲಿ ತಾವು ಸಿಕ್ಕಿಬಿದ್ದಿರುವ ಕಾರಣ ಇವೊತ್ತು ಈ ಪರಿಸ್ಥಿತಿ ಉಂಟಾಗಿದೆ. ತಾವು ಬೇಕಾದರೆ ವೇಷ ಬದಲಾಯಿಸಿ, ಹೆಗಡೆ ಎಂದು ಹೇಳಿಕೊಳ್ಳದೆ ಒಂದೆರಡು ಹಳ್ಳಿಗಳಿಗೆ ಹೋಗಿ ನೋಡಿ. ಹಿಂದೆ ಹೇಗೆ ಇತ್ತು, ೧೯೭೩,೭೪,೭೫,೭೬ರಲ್ಲಿ ವೀಕರ್ ಸೆಕ್ಷನ್‌ಗಳಿಗೆ ಏನು ಪರಿಸ್ಥಿತಿ ಇತ್ತು ಎಂದು ಕೇಳಿ. ನಿಜವಾಗಿಯೂ, ಹೆಮ್ಮೆಯಿಂದ ಹೇಳುತ್ತಿದ್ದೇನೆ ಎಂದು ಅಲ್ಲ. ಇದನ್ನು ನೀವು ಕೇಳಿ ತಿಳಿದುಕೊಳ್ಳಿ ಅಥವಾ ನಿಮ್ಮ ಶಾಸಕರು ಏನಿದ್ದಾರೆ ಅವರ ಬಾಯಿಂದಲೇ ಕೇಳಿ ತಿಳಿದುಕೊಳ್ಳಿ. ವೀಕರ್ ಸೆಕ್ಷನ್‌ಗಳಿಗೆ ಒಂದು ಪ್ರೊಟೆಕ್ಷನ್ ಇತ್ತು. ವಿಧಾನಸೌಧದಲ್ಲಿ ನಮ್ಮನ್ನು ಕೇಳುವವರು ಇದ್ದಾರೆ, ಅಥವಾ ಅವರು ತಮ್ಮ ಮಟ್ಟದಲ್ಲಿ ಏನಾದರೂ ಅನ್ಯಾಯವಾದರೆ ಸರಿಪಡಿಸುತ್ತಾರೆ ಎನ್ನತಕ್ಕಂಥ ಭಾವನೆ ಇತ್ತು. ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ. ಈ ಮಾತು ಶ್ರೀ ದೇವರಾಜ ಅರಸು ಅವರ ಕಾಲದಲ್ಲಿ ಇತ್ತು ಎನ್ನತಕ್ಕದ್ದನ್ನು ತಮ್ಮ ಅನೇಕ ಜನ ಸ್ನೇಹಿತರು ಒಪ್ಪುತ್ತಾರೆ. ತಾವು ಕೂಡ ಇನ್‌ಡೈರೆಕ್ಟ್ ಆಗಿ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ನಿಮಗೆ ಈಗ ಆ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ. ನಿಮ್ಮ ಮೇಲೆ ಒತ್ತಡ ಇದೆ, ಯಾರೋ ಒಬ್ಬ ಸಬ್ ಇನ್‌ಸ್ಪೆಕ್ಟರ್‌ನ್ನು ಹಾಕಿಬಿಡುತ್ತೀರಿ. ಆಮೇಲೆ ಅವನಿಗೆ ಬೇಕಾದವರು, ಅವರ ಜಾತಿಯವರು ಬಂದಾಗ ಅವರ ಸಪೋರ್ಟ್ ಬೇಕು ನಿಮಗೆ. ಮೈನಾರಿಟಿ ಜನಾಂಗಕ್ಕೆ ಸೇರಿದ ಮುಖ್ಯ ಮಂತ್ರಿ ಇದ್ದೀನಿ, ನಾಳೆ ಏನಾಗುತ್ತದೋ ಎಂದು ಹೇಳಲಿಕ್ಕೆ ಬರುವುದಿಲ್ಲ ಎಂದು 'ಸರಿ' ಎನ್ನುತ್ತೀರಿ. ಅವರು ಬಂದರೂ ಎಸ್ ಅನ್ನುತ್ತೀರಿ ಇವರು ಬಂದರೂ ಎಸ್ ಅನ್ನುತ್ತೀರಿ. ಹೀಗಾಗಿ ಆಡಳಿತ ಇವತ್ತು ಕೆಟ್ಟುಹೋಗಿದೆ ಹಿಡಿತ ಇಲ್ಲ. ನಾಳೆ ಬೆಳಿಗ್ಗೆಯೊಳಗೆ ಮುಖ್ಯ ಮಂತ್ರಿಗಳನ್ನು ಹಿಡಿದು ಆರ್ಡರ್ ಅನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬರುತ್ತೇನೆ ಎಂದು ಅವರು ಹೇಳುತ್ತಾರೆ. ಹೀಗೆ ಇರುವಾಗ ಅಲ್ಲಿ ಪೋಲೀಸ್ ಆಫೀಸರ್ ಏನು ಮಾಡಿದರೂ ನಡೆಯುತ್ತದೆ. ಅಲ್ಲಿರತಕ್ಕಂಥ ಶಾಸಕರು, ನನ್ನ ಮೇಲೆ ಹಾಕಿಕೊಂಡು ಹೇಳುತ್ತೇನೆ, ಬೇರೆಯವರು ಬೇಡ, ನಾನು ಹೇಳಿದ್ದು ನಡೆಯುವಾಗ ಆ ಸಬ್‌ಇನ್‌ಸ್ಪೆಕ್ಟರ್ ಎಷ್ಟೇ ಅನ್ಯಾಯ ಮಾಡಲಿ ಲಂಚಕೋರ ಇರಲಿ, ಎಷ್ಟೇ ಜನರ ಶೋಷಣೆಯನ್ನು ಮಾಡಲಿ. ನಾನು ಮತ್ತು ಅವನು ಸೇರಿಬಿಟ್ಟರೆ ಎಲ್ಲಾ ರೀತಿಯಿಂದ ಅನ್ಯಾಯ ಮಾಡುವುದಕ್ಕೆ ಸಾಧ್ಯತೆ ಇದೆ. ಹೀಗಾಗಿ ಇವತ್ತೇನು ನಡೆಯುತ್ತಿದೆ, ಅದನ್ನು ತಪ್ಪಿಸಲಿಕ್ಕೆ ನಿಮ್ಮ ಕೈಯಿಂದ ಆಗುತ್ತಿಲ್ಲ. ನಿಮ್ಮ ಸಮಿತಿಯವರೇ ಈ ಮಾತನ್ನು ಹೇಳಿದ್ದಾರೆ. ''ಸದರಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮತ್ತು ಸವರ್ಣೀಯರ ನಡುವೆ ಹೊಲದ ಬಗ್ಗೆ ವೈಮನಸ್ಯ ಇದ್ದು ಅವರ ನಡುವೆ ಆಗಾಗ ಘರ್ಷಣೆ ಆಗಿದ್ದು ಕಂಡುಬಂದಿದೆ'' ಎರಡನೆಯದು ''ಆರೋಪಿ ಮಹದೇವಪ್ಪ ಸಂಕಾಲಿ ಮತ್ತು ಅವರ ಸಹೋದರರು ಒಟ್ಟು ೨೫೦ ಎಕರೆ ಜಮೀನನ್ನು ಪಡೆದಿದ್ದರು. ಕೇವಲ ಸಣ್ಣ ಜಮೀನಿಗೋಸ್ಕರ ಹರಿಜನರ ವಿರುದ್ಧ ದ್ವೇಷ ಕಟ್ಟಿ ಅಲ್ಲಿಯ ಸವರ್ಣೀಯರನ್ನು ಸೇರಿಸಿ ಹರಿಜನರನ್ನು ಮುಂದೆ ಬರಲು ಅವಕಾಶ ಕೊಡದೇ ಇರುವುದು ಸಮಿತಿಗೆ ಬಹಳ ನೋವನ್ನು ಉಂಟು ಮಾಡಿದೆ. ಅಂತೆಯೇ ಆರೋಪಿ ಮಹದೇವಪ್ಪ ಸಂಕಾಲಿ ಮತ್ತು ಆತನ ಹಿಂಬಾಲಕರು ಸ್ಥಳೀಯ ಮುಖಂಡರಾಗಿದ್ದು ಬಡತನ ರೇಖೆಯಿಂದ ಕೆಳಗೆ ಇರುವ ಜನರಿಗೆ ಸಹಾಯವನ್ನು ಮಾಡದೆ ತಮ್ಮದೇ ಆದ ದರ್ಪ ಮತ್ತು ದಬ್ಬಾಳಿಕೆಯಿಂದ ಇತರರ ಜಮೀನನ್ನು ಒಂದೊಂದಾಗಿ ಕಬಳಿಸಿ ಬಡಜನರು ಶಾಂತ ರೀತಿಯಿಂದ ಜೀವನ ನಡೆಸಲು ಅವಕಾಶ ಮಾಡಿರುವುದಿಲ್ಲ

ಎಂದು ಸಮಿತಿಗೆ ತಿಳಿದುಬಂದಿದೆ. ಈ ವಿಷಯವನ್ನು ನಾವು ಪ್ರಸ್ತಾಪ ಮಾಡಿದ್ದಕ್ಕೆ ನೀವು ನಗುತ್ತಾ ಇದ್ದಿರಿ. ಶ್ರೀಮಾನ್ ಸಿಂಧ್ಯಾರವರು ನಮ್ಮ ಮೇಲೆ ಬಿದ್ದು, ಕಾಂಗ್ರೆಸ್ಸಿನ ಕಾಲದಲ್ಲಿ ಇದು ಆಗಿರಲಿಲ್ಲವೇ ಎಂದು ಕೇಳಿದರು. ಇದು ಸಮಿತಿಯ ರಿಪೋರ್ಟ್ ನನ್ನದಲ್ಲ. ಆವತ್ತು ನಾವು ಇದನ್ನು ರೈಸ್ ಮಾಡುವಾಗ ಅನೇಕ ಜನ ಹೇಳಿದರು. ಏನೆಂದರೆ ನಿಮ್ಮ ಕಾಲದಲ್ಲಿ ಆಗಿರಲಿಲ್ಲವೇ? ಇದು ಸುಳ್ಳಿನದು ಅಥವಾ ಸತ್ಯಕ್ಕೆ ದೂರವಾದುದು ಎಂಬ ಅಪಾದನೆಯನ್ನು ಮಾಡಿದರು. ಈ ಸದನದ ಒಂಭತ್ತು ಜನ ಸದಸ್ಯರು ಹೋಗಿ ನೋಡಿಕೊಂಡು ಬಂದು ಕೊಟ್ಟಂಥ ವರದಿ ಇದು. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ? ಇವತ್ತು ಕೂಡ ಇದೇ ರೀತಿಯ ದೌರ್ಜನ್ಯ ಇದೆ. ಇವತ್ತು ಹೆಣ್ಣುಮಗಳು ಶ್ರೀಮತಿ ಬುದ್ದವ್ವ ತೀರಿಕೊಂಡಿದ್ದಾರೆ. ಆಕೆಯ ಮಕ್ಕಳ ಮೇಲೆ ಈಗಲೂ ಕೂಡ ಅದೇ ರೀತಿಯ ದಬ್ಬಾಳಿಕೆ ನಡೆದಿದೆ. ಹೆದರಿಕೊಂಡು ಅವರು ಇನ್ನೂ ಕೂಡ ಊರಿಗೆ ಹೋಗಿಲ್ಲ. ಏಕೆಂದರೆ ಎಂಟಿಸಿಪೇಟರಿ ಬೇಲ್ ತಗೊಂಡು ಹೈಕೋರ್ಟಿನಿಂದ ಈತನ ಬಿಡುಗಡೆ ಆಯಿತು ''ನನ್ನ ವಿರುದ್ಧ ಅಪ್ಲಿಕೇಶನ್ ಕೊಟ್ಟಿದೆಯಾ? ಈ ಸದನದ ಸಮಿತಿ ಬಂದಿತ್ತಾ? ಎಲ್ಲಾ ಎಂ.ಎಲ್.ಎ. ಗಳು ಬಂದು ನನ್ನನ್ನು ಏನು ಮಾಡಿದರು? ಇದರಿಂದ ಏನಾಯ್ತು? ನನಗೇನಾದರೂ ತೊಂದರೆ ಆಯಿತೇ? ನೀನು ಅಪ್ಲಿಕೇಶನ್ ಕೊಡೋದ್ರಿಂದ ಆ ಎಂ.ಎಲ್.ಎ.ಗಳು ಬಂದು ಏನು ಮಾಡಿಕೊಂಡು ಹೋದ್ರು? ನನಗೆ ಯಾರು ಕೈಮುಟ್ಟಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ನನ್ನ ಹಿಂದೆ ಇದೆ'' ಅಂತ ಹೇಳಿ ಇವತ್ತು ಕೂಡ ಅದೇ ಒಂದು ದರ್ಪದಿಂದ, ಅದೇ ರೀತಿಯಾದ ಹೆಬ್ಬಾಳಿಕೆಯನ್ನು ಆ ಹಳ್ಳಿಯಲ್ಲಿ ಆತ ಇದ್ದಾನೆ. ಶ್ರೀ ಧರ್ಮಸಿಂಗ್ ಅವರು ಆ ಕ್ಷೇತ್ರದವರು. ಅವರು ಪುನಃ ಈ ರೀತಿಯಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತಂದರು. ಇಲ್ಲ, ಇದನ್ನು ಸರಿಪಡಿಸುತ್ತೇವೆ ಎಂದು ಮಾನ್ಯ ಶ್ರೀ ಜಾಲಪ್ಪನವರು ಹೇಳಿದರು. ಆದರೆ ಅಧ್ಯಕ್ಷರೇ, ಇಲ್ಲಿಯವರೆಗೆ ಇದರ ಬಗ್ಗೆ ಏನೂ ಆಗಿಲ್ಲ; ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

೪-೩೦ ಪಿ.ಎಂ.

ಮತ್ತೆ ಈ ವರದಿಯ ಬಗ್ಗೆ ಇಲ್ಲಿ ರೈಸ್ ಮಾಡಿ, ಇಂತಹ ರೀತಿಯಲ್ಲಿ ಅನ್ಯಾಯವಾಗುತ್ತಿದೆ, ಇದನ್ನು ತಡೆಗಟ್ಟಬೇಕೆಂದು ಹೇಳಿ, ನಾವು ಏಕೆ ಪ್ರಸ್ತಾಪ ಮಾಡಬೇಕು. ಇವತ್ತು ಶಾಸಕರ ಸಮಿತಿ ಹೋಗಿ ವರದಿ ಕೊಟ್ಟರೆ ಬೆಲೆ ಇಲ್ಲ, ನಾವು ಮಾತನಾಡಿದ್ದಕ್ಕೆ ಬೆಲೆ ಇಲ್ಲ, ಪ್ರಸ್ತಾಪ ಮಾಡಿದ್ದಕ್ಕೆ ಬೆಲೆ ಇಲ್ಲ. ಹಾಗಾದರೆ ಈ ಸದನ ಏಕೆ ಇರಬೇಕು ? ಸುಮ್ಮನೇ ನೀವು ಹೇಳಿಕೊಳ್ಳಬಹುದು, ನಾವು ಈ ಐದು ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದೇವೆಂದು. ಯಾವ ಜನಾಂಗಕ್ಕೆ ರಕ್ಷಣೆ ಬೇಕು, ಯಾರಿಗೆ ನಿಮ್ಮ ಬೆಂಬಲ ಬೇಕು ಅವರಿಗೆ ನೀವು ಬೆಂಬಲ ಕೊಡುತ್ತಿಲ್ಲ. ಯಾರು ದಬ್ಬಾಳಿಕೆ ಮಾಡುತ್ತಾರೆ, ಶೋಷಣೆ ಮಾಡುತ್ತಾರೆ ಅವರಿಗೆ ಬೆಂಬಲ ಕೊಡುತ್ತೀರಿ. ಇದು ಸದನದ ಸಮಿತಿಯ ರಿಪೋರ್ಟ್. ಇದರಲ್ಲಿ ಸಮಿತಿಯವರು ಇನ್ನೊಂದು ಮಾತು ಹೇಳಿದ್ದಾರೆ. ಅಲ್ಲಿರತಕ್ಕಂಥ ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ನೀವು ಕೆಲವು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ ಡೆಪ್ಯೂಟಿ ಕಮೀಷನರ್ ಅವರಿಗೆ ಹೇಳಿದ್ದಾರೆ. ತದನಂತರ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ್ದಾರೆ. ಮೃತ ಶ್ರೀಮತಿ ಬುದ್ದವ್ವಳ ಗಂಡ ಸಿದ್ದಪ್ಪ ಮಾಡುತ್ತಿರುವ ಜಮೀನು ವಿವಾದ ಬಗೆಹರಿಸಿ ಅವರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ಸಮಿತಿ ಶಿಫಾರಸ್ ಮಾಡಿದೆ. ಇಲ್ಲಿಯವರೆಗೂ ಇದು ಬಗೆಹರಿದಿಲ್ಲ. ಮಹದೇವಪ್ಪನ ಬಿಡುಗಡೆ ಆಗಿದೆ, ೯ ಜನರ ಬಿಡುಗಡೆ ಆಗಿದೆ. ಅವರು ಇವತ್ತು ಬೇರೆಯವರನ್ನು ಹೆದರಿಸುತ್ತಿದ್ದಾರೆ. ನನ್ನ ಮೇಲೆ ಅಪ್ಲಿಕೇಷನ್ ಕೊಟ್ಟರೆ ಹೆದರುತ್ತೇನೆಂದು ತಿಳಿದುಕೊಂಡಿದ್ದೀರಾ ಎಂದು ಹೇಳಿ, ಮೀಸೆ ಮೇಲೆ ಕೈ ಹಾಕಿಕೊಂಡು ಓಡಾಡುತ್ತಿದ್ದಾರೆ. ಇವತ್ತು ನಮ್ಮ ಶಿಫಾರಸ್ಸಿಗೆ ಏನು ಬೆಲೆ, ಡಾ. ತಿಪ್ಪೇಸ್ವಾಮಿಯವರು ವರದಿ ಕೊಟ್ಟಿರುವುದಕ್ಕೆ ಏನು ಬೆಲೆ ? ನೀವು ಹರಿಜನರನ್ನು ಉದ್ಧಾರ ಮಾಡುತ್ತೇವೆ, ಅವರಿಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತು ನಮಗೆ ಈ ನೋಟೀಸ್ ಬಂದಿದೆ. ಈ ರೀತಿ ನೋಟೀಸ್ ಬಾರದೆ ಇರತಕ್ಕ ಘಟನೆಗಳೂ ಇವೆ, ಎಲ್ಲಿ ನೋಟೀಸ್ ಬಂದಿದೆ, ಎಲ್ಲಿ ಎಂ.ಎಲ್.ಎ. ವಿಸಿಟ್ ಮಾಡಿದ್ದಾರೆ, ಎಲ್ಲಿ ಮಂತ್ರಿಗಳು ಹೋಗಿದ್ದಾರೆ, ಅಲ್ಲಿಯ ಜನರಿಗೆ ರಕ್ಷಣೆ ಸಿಗುತ್ತಿಲ್ಲ. ಅಂದರೆ ನಿಮಗೆ ಅಧಿಕಾರಿಗಳು ಎಷ್ಟರಮಟ್ಟಿಗೆ ಹೆದರುತ್ತಾರೆ ಎಂಬುದನ್ನು ತಾವೇ ಯೋಚನೆ ಮಾಡಿ. ಅಧಿಕಾರಿಗಳು ಎಷ್ಟರಮಟ್ಟಿಗೆ ಸರ್ಕಾರಕ್ಕೆ ಬೆಲೆ ಕೊಡುತ್ತಾರೆಂದು ನಾನು ಇವತ್ತು ಕೇಳುತ್ತೇನೆ. ಬಿದರಹಳ್ಳಿ ಬಗ್ಗೆ ನಾನು ಹೇಳಿದ್ದೇನೆ. ಈ

ವಿಚಾರದಲ್ಲೂ ಕೂಡ ಸದನದಲ್ಲಿ ಆಪಾದನೆ ಮಾಡಿದ್ದೇವೆ. ಇದೂ ಕೂಡ ಸರಿ ಇದೆಯೆಂದು ಒಪ್ಪಿಕೊಂಡಿದ್ದೀರಿ. ಪರಿಶಿಷ್ಟ ಜನಾಂಗದವರಿಗೆ, ಅವರ ಮೇಲೆ ಕೈ ಮಾಡಿರತಕ್ಕ, ಹೊಡೆದಿರತಕ್ಕ ಘಟನೆ ಬಗ್ಗೆ ಸಮಿತಿಯವರು ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದಾರೆ. ಎರಡು ಪಕ್ಷದವರೂ ಅಲ್ಲಿಗೆ ಭೇಟಿ ಮಾಡಿ ಬಂದಿದ್ದೇವೆ ಈ ಘಟನೆ ನಡೆದಿರುವ ಬಗ್ಗೆ ಕೂಡ ಒಪ್ಪಿದ್ದೀರಿ. ಆದರೆ ಅಲ್ಲಿಯೂ ಕೂಡ ಯಾವ ಕ್ರಮವನ್ನೂ ತಾವು ತೆಗೆದುಕೊಂಡಿಲ್ಲ. ಮೂರನೆಯದಾಗಿ ಬೆಂಡಿಗೇರಿ ಗ್ರಾಮ. ಇಲ್ಲಿಗೂ ಶಾಸಕರ ಸಮಿತಿ ಭೇಟಿ ಕೊಟ್ಟಿದೆ. ಇದು ಬೆಳಗಾಂ ತಾಲ್ಲೂಕಿನಲ್ಲಿ ಬರತಕ್ಕ ಊರು. ಬಾಗೇವಾಡಿ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಬರುತ್ತದೆ. ಸುಮಾರು ೫ ಸಾವಿರ ಜನಸಂಖ್ಯೆ ಇರತಕ್ಕ ಊರು. ಇದೇನೂ ಸಣ್ಣ ಊರಲ್ಲ ಈ ಊರಿನಲ್ಲಿ ಆಗಸ್ಟ್ ೨ರಲ್ಲಿ ಘಟನೆ ನಡೆದಿದೆ. ಈ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ಶ್ರೀಯುತರಾದ ಕಲ್ಲಪ್ಪ ದ್ಯಾಮರ ತಳವಾರ. ಸುಭಾಷ್ ಕಲ್ಲಪ್ಪ ಕೋಲ್ಕಾರ, ಸಾವಂತ ಸದೆಪ್ಪ ಕೋಲ್ಕಾರ ಯಲ್ಲಪ್ಪ, ದೊಡ್ಡಪ್ಪ ಕೋಲ್ಕಾರ, ಮತ್ತು ಮರಾಠಿ ಜಾತಿಗೆ ಸೇರಿದ ಶ್ರೀ ಮಡಿವಾಳಿ ಮುದುಕಪ್ಪ ಹೈಬತ್ತಿ ಇವರು ಮಾಡಿರುವ ತಪ್ಪು ಏನೆಂದರೆ, ಈ ಬಗ್ಗೆ ಈಗಾಗಲೇ ಸವಿಸ್ತಾರವಾಗಿ ಹೇಳಿದ್ದಾರೆ. ಆ ದಿವಸ ಮಳೆ ಬರುವಾಗ, ಎಲ್ಲನಗೌಡ ಎಂಬುವರ ಹೊಲದಲ್ಲಿ, ಜೋಳದ ಬೆಳೆ ಕೊಯ್ದುಕೊಂಡು ತಂದರು ಎಂದು ತೆನೆಗಳು ಆಗುವುದಿಲ್ಲ ಅಂತಹ ಜೋಳವನ್ನು ಕಿತ್ತುಕೊಂಡು ತಂದು ದನಗಳಿಗೆ ಹಾಕಬೇಕೆಂದು ಹೇಳಿ ಹೋಗುತ್ತಿದ್ದಾಗ, ಅದನ್ನು ತಮಗೆ ಹೇಳದೆ ಕೇಳದೆ ಕದ್ದು ತಂದರು ಎಂದು ಹೇಳಿ ಆಪಾದನೆ ಮಾಡಿ ಅವರನ್ನು ಹಿಡಿದುಕೊಂಡು ಹೋದರು. ಹಿಡಿದುಕೊಂಡು ಹೋದವರಲ್ಲಿ ಗುರುಪಾದಪ್ಪ ಗಂಗಪ್ಪ ಮೇಳದ್ ಇವರು ಟೀಚರ್, ಇವರು ಹಾಗೂ ಇವರ ಜೊತೆಯಲ್ಲಿ ಹದಿಮೂರು ಜನರು ಸೇರಿ, ಈ ಐದು ಜನರನ್ನು ಕರೆದುಕೊಂಡು ಹೋಗಿ ನೀವು ಮಾಡಿದ್ದುದು ಸರಿಯಲ್ಲ, ನೀವು ಕಳ್ಳತನದಿಂದ ಮಾಡಿರುತ್ತೀರಿ, ಇದಕ್ಕೆ ನಿಮಗೆ ತಕ್ಕ ಶಿಕ್ಷೆಯಾಗಬೇಕು ಎಂದು ಹೇಳಿ, ಈ ಗುರುಪಾದಪ್ಪ ಗಂಗಪ್ಪ ಮೇಳದ್ ಹಾಗೂ ಇತರ ಹದಿಮೂರು ಜನರು ಸೇರಿ ಇವರನ್ನು ತುಂಬಾ ಹೊಡೆದರು. ನೀವು ಕಳ್ಳತನ ಮಾಡಿದ್ದೀರಿ, ಇದನ್ನು ಯಾರು ಮಾಡಿ ಎಂದು ನಿಮಗೆ ಹೇಳಿದರು, ನನ್ನ ಹೊಲಕ್ಕೇ ಹೋಗಿ ಇದನ್ನು ಮಾಡಿ ಎಂದು ನಿಮಗೆ ಯಾರು ಹೇಳಿದರು ಎಂದು ಹೇಳಿ ತುಂಬಾ ಹೊಡೆದರು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ನಿಜ ಹೇಳಿದರೆ ನಿಮ್ಮನ್ನು ಬಿಡುತ್ತೇವೆ ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಹೊಡೆದರು. ಅದಕ್ಕೆ ಈ ಐದು ಜನರು, ಇದನ್ನು ನಾವೇ ಮಾಡಿದ್ದೇವೆ, ಮಳೆ ಬರುತ್ತಿತ್ತು, ಆದ ಕಾರಣ ಸಮೀಪದಲ್ಲಿರುವ ಹೊಲ ಎಂದು ತಂದಿದ್ದೇವೆ, ನಮ್ಮನ್ನು ಕ್ಷಮಿಸಿ ಎಂದು ಹೇಳಿದರು. ಆದರೂ ಸಹ ಇವರು ನಿಮಗೆ ಯಾರು ಕಳುಹಿಸಿದರು, ನನ್ನ ಹೊಲದಿಂದ ಈ ಹುಲ್ಲನ್ನು ತೆಗೆದುಕೊಂಡು ಹೋಗಿ ಎಂದು ಯಾರು ಹೇಳಿದ್ದಾರೆ, ಅವರ ಹೆಸರು ಹೇಳಿ, ಹೇಳುವವರೆಗೆ ಬಿಡುವುದಿಲ್ಲ ಎಂದು ಹೇಳಿ ಪುನಃ ಮೈ ತುಂಬಾ ಹೊಡೆದರು. ನಾಲ್ಕೈದು ತಾಸು ಸತತವಾಗಿ ಹೊಡೆಯುತ್ತಿದ್ದಾರೆ, ಪ್ರತಿಯೊಬ್ಬರೂ ಬರುವುದು, ಅವರಿಗೆ ಹೊಡೆಯುವುದು. ಕೊನೆಗೆ ೧. ಗುರುಪಾದಪ್ಪ ಗಂಗಪ್ಪ ಮೇಳದ್ ಇವರು ಟೀಚರ್ ೨. ಗೋಪಾಲ ಗಂಗಪ್ಪ ಮೇಳದ್, ಇವರು ಬೈಲಹೊಂಗಲ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಎಫ್.ಡಿ.ಸಿ. ೩. ಎಲ್ಲನಗೌಡ ಬಸವಣ್ಣಪ್ಪ ಮೇಳದ್, ಇವರು ಮಲಪ್ರಭಾ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ೪. ಶಂಕರ್ ಶಿವಲಿಂಗಪ್ಪ, ಹೀಗೆ ನಾಲ್ಕು ಜನ, ಇಬ್ಬರು ಸರ್ಕಾರಿ ಹುದ್ದೆಯಲ್ಲಿ ಕೆಲಸ ಮಾಡುವವರು, ಒಬ್ಬರು ಟೀಚರ್ ಒಬ್ಬರು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಫಸ್ಟ್ ಡಿವಿಜನ್ ಕ್ಲರ್ಕ್, ಒಬ್ಬರು ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರು, ಇನ್ನೊಬ್ಬರೂ ಕೋ-ಆಪರೇಟೀವ್ ಸೊಸೈಟಿಯಲ್ಲಿ ಕೆಲಸ ಮಾಡುವವರು. ಈ ನಾಲ್ಕು ಜನ ಮತ್ತು ಇತರ ೧೫–೧೬ ಜನರು ಸೇರಿ ಇವರ ಮೇಲೆ ದೌರ್ಜನ್ಯ ನಡೆಸಿದರು. ಇಡೀ ಪ್ರಪಂಚದಲ್ಲೇ ಎಲ್ಲಿ ಕೂಡಾ ಈ ರೀತಿ ಆಗುವುದಿಲ್ಲ. ನಂತರ ಅವರಿಗೆ ಏನು ಮಾಡಿದರು ಎಂದರೆ, ನೀವು ಯಾರ ಹೆಸರು ಹೇಳಿ ಎಂದು ಹೇಳುತ್ತಿದ್ದರೂ ಹೇಳುವುದಿಲ್ಲ, ನಿಜವಾದುದನ್ನು ನೀವು ಬಹಿರಂಗ ಪಡಿಸುವುದಿಲ್ಲ, ನೀವು ಹೇಳುವ ವರೆಗೂ ಹೀಗೆ ಹೊಡೆಯುವುದು ಎಂದು ಹೇಳಿ ಹೊಡೆದರು. ಕೊನೆಗೆ ಅವರು ಇವರ ಹೊಡೆತವನ್ನು ತಾಳದೆ ಒಪ್ಪಿಕೊಂಡು ಬಿಟ್ಟರು. ನೀವು ಏನು ಹೇಳುತ್ತೀರಿ ಅದು ಸರಿ, ನಾವು ಕಳ್ಳತನ ಮಾಡಿದೇವೆ ಎಂದು ಒಪ್ಪಿಕೊಂಡರು. ಒಪ್ಪಿಕೊಂಡ ನಂತರ ಇವರು ಅಷ್ಟಕ್ಕೇ ಬಿಡಲಿಲ್ಲ. ನೀವು ನಾಳೆ ಸಾಯಂಕಾಲ ಬನ್ನಿ, ಅಂದರೆ ೬ನೇ ತಾರೀಖು ಸಾಯಂಕಾಲ ಬನ್ನಿ, ನಾವು ಎಲ್ಲಾ ಜನರನ್ನು ಕರೆಸುತ್ತೇವೆ, ಎಲ್ಲಾ

ಪಂಚರನ್ನು. ಊರಿನಲ್ಲಿರತಕ್ಕ ಸವರ್ಣೀಯರನ್ನು ಕರೆಸುತ್ತೇವೆ, ಅವರು ಏನು ಹೇಳುತ್ತಾರೆ. ಅಂತಹ ಶಿಕ್ಷೆ ತೆಗೆದುಕೊಂಡರೆ ನಿಮ್ಮನ್ನು ಬಿಟ್ಟು ಬಿಡುತ್ತೇವೆ ಎಂದು ಹೇಳಿದರು. ಕೊನೆಗೆ ತಮಗೆ ಬೇಕಾದಂತಹ ಊರಿನ ನೂರಾರು ಜನರನ್ನು ಕರೆಯಿಸಿ, ಇವರನ್ನೆಲ್ಲಾ ಅವರ ಎದುರಿಗೆ ಕೂರಿಸಿ ಮತ್ತೆ ಹೊಡೆಯುವುದಕ್ಕೆ ಒದೆಯುವುದಕ್ಕೆ ಪ್ರಾರಂಭ ಮಾಡಿದರು.

ಹೊಡೆದುಕೊಂಡಿದ್ದರೂ ಸಹ ಏಕೆ ಸುಮ್ಮನಿದ್ದರೆಂದರೆ ಅವರು ಬಡವರು. ಅವರಿಗೆ ಶಕ್ತಿ ಇಲ್ಲ. ಅವರಿಗೆ ಶಕ್ತಿ ಇದ್ದಿದ್ದರೆ ಅವರು ಇವತ್ತಿನ ದಿವಸ ಬಹುಶಃ ಜೀವಂತವಾಗಿರುತ್ತಿರಲಿಲ್ಲ. ಶಕ್ತಿ ಇಲ್ಲದೆ ಇರುವ ಕಾರಣ ಅವರು ಏನಾದರೂ ಮಾಡಿ ಹೈಕೋರ್ಟಿಗೆ ಹೋಗಿ, ತಡೆಯಾಜ್ಞೆ ತಂದರೆ ಆಗ ಅವರನ್ನು ಯಾರೂ ಕೇಳುವಂತಿರುವುದಿಲ್ಲ. ಆ ಶಕ್ತಿ ಇಲ್ಲವಲ್ಲ......

ಶ್ರೀ ಧರ್ಮಸಿಂಗ್.— ಮಾನ್ಯ ರಾಚಯ್ಯನವರ ಕಾಲದಲ್ಲಿ ಮತ್ತು ಜಾಲಪ್ಪನವರ ಕಾಲದಲ್ಲಿ ಆ ಬಡಜನರಿಗೆ ಶಕ್ತಿ ಹೋಗಿದೆ,

ಅಧ್ಯಕ್ಷರು.— ಮಾನ್ಯ ಧರ್ಮಸಿಂಗ್‌ರವರೇ ತಾವು ಕುಳಿತುಕೊಳ್ಳಿ. ತಮ್ಮ ಅವಕಾಶ ಬಂದಾಗ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಏನಾದರೂ ಅವರಿಗೆ ಎದುರು ಹೋದರೆ ಅವರ ಗತಿ ಈ ರೀತಿಯಾಗುತ್ತದೆ. ಶ್ರೀ ಸಂಗಪ್ಪ ಟೀಚರ್ ಎನ್ನುವವರು ಏನಿದ್ದಾರೆ ಅವರು ಮತ್ತು ಶ್ರೀ ಗುರು ಪಾದಪ್ಪ ಗಂಗಪ್ಪ ಮೆಲ್ಲಡ್ ಅವರಿಗೆ ಸೇರಿ ಏನೊಂದು ಶಿಕ್ಷೆ ಕೊಟ್ಟರು ಗೊತ್ತೇ ನೀವು ಮಾಡಿದ್ದು ತಪ್ಪು. ಆ ತಪ್ಪನ್ನು ನೀವೇ ಒಪ್ಪಿ ಕೊಂಡಿದ್ದೀರಿ. ಅದಕ್ಕೆ ನೀವು ನಾವು ಶಿಕ್ಷೆಯನ್ನು ಅನುಭವಿಸಲೇ ಬೇಕು. ಅದಕ್ಕಾಗಿ ನೀವು ಮನುಷ್ಯನ ಮಲ ತಿನ್ನಬೇಕು ಎಂದಾಗ ಅದು ಹೇಗೆ ಸಾಧ್ಯವಾಗುತ್ತದೆ ಅದು ಸಾಧ್ಯವೇ ಎಂದು ಆ ಟೀಚರ ಮತ್ತು ಗುರುಪಾದಪ್ಪ ಸಂಗಪ್ಪ ಮೆಲ್ಲಡ್‌ರವರು ಕೇಳಿದರು. ನಮಗೆ ವಾಂತಿ ಬರುತ್ತದೆ ಮಲ ತಿನ್ನಲು ಸಾಧ್ಯವಿಲ್ಲ. ಬೇಕಾದರೆ ಇನ್ನು ಒಂದು ೧೦ ಏಟು ಕೊಡಿ ಎಂದಾಗ ಇಲ್ಲ ಇಲ್ಲ ನೀವು ಈ ಶಿಕ್ಷೆಯನ್ನು ಅನುಭವಿಸಲೇ ಬೇಕು ಕಳ್ಳತನ ಮಾಡುವುದಕ್ಕೆ ಬರುತ್ತದೆ. ಕದಿಯುವುದಕ್ಕೆ ಬರುತ್ತದೆ ತಪ್ಪು ಮಾಡಿದಾಗ ಈ ಶಿಕ್ಷೆ ಬಿಟ್ಟು ಬೇರೆ ಮಾತೇ ಇಲ್ಲ, ನೀವು ಈ ಶಿಕ್ಷೆಯನ್ನು ಅನುಭವಿಸಲಿಲ್ಲವೆಂದರೆ ನಾವು ನಿಮ್ಮನ್ನು ಕೊಲೆ ಮಾಡುತ್ತೇವೆ, ನಾಲ್ಕು ಎಕರೆ ಜಮೀನು ಹೋದರೂ ಸರಿ, ೨ ಲಕ್ಷ ರೂಪಾಯಿಗಳು ಹೋದರೂ ಅಡ್ಡಿ ಇಲ್ಲ ನೀವು ಈಗ ಮನುಷ್ಯನ ಮಲ ತಿಂದು ಹೋಗಬೇಕು ಇಲ್ಲದಿದ್ದರೆ ಕೊಲೆ ಮಾಡುತ್ತೇವೆಂದು ಹೇಳಿದರು, ಈ ಮಾತನ್ನು ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಈ ವರದಿಯನ್ನು ಮಾನ್ಯ ಜಾಲಪ್ಪನವರು ಓದಿದ್ದಾರೋ ಇಲ್ಲವೊ ಗೊತ್ತಿಲ್ಲ. ಆಮೇಲೆ ಅವರು ಏನು ಶಿಫಾರಸ್ಸು ಮಾಡಿದ್ದಾರೆಂದರೆ ಸಮಿತಿಯು ಸ್ಥಳಕ್ಕೆ ಹೋಗಿ ಸವರ್ಣೀಯರ ಜೊತೆ ಮತ್ತು ಹರಿಜನ ಮತ್ತು ಗಿರಿಜನರ ಸಂಪರ್ಕ ಮಾಡಿ ಬೇರೆ ಬೇರೆ ರೀತಿಯಲ್ಲಿ ಎವಿಡೆನ್ಸ್ ಪಡೆದುಕೊಂಡಿದ್ದಾರೆ. ಒಬ್ಬೊಬ್ಬರಾಗಿ ಬಂದು ಹೇಳಿಕೆ ಕೊಟ್ಟು ಹೋಗಿದ್ದಾರೆ. ಅವರು ಸಹ ಹೇಳಿದ್ದಾರೆ ಕೊನೆಗೆ ನಾಲ್ಕು ಜನರಿಗೆ ಮಲ ತಿನ್ನಿಸಿದ್ದಾರೆ. ಅದೂ ನಮ್ಮ ಕಣ್ಣು ಎದುರಿಗೆ. ಈ ಮಾತನ್ನು ಎಲ್ಲಾ ಜನರೂ ಹೇಳಿದ್ದಾರೆ. ಮನುಷ್ಯನ ಜಾತಿಯ ಮೇಲೆ ಇದೊಂದು ದೊಡ್ಡ ಕಳಂಕ. ಇಂತಹ ಘಟನೆ ಎಲ್ಲಿ ಯಾವಾಗಲೂ ನಡೆದಿಲ್ಲ. ನೀವು ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತೀರಿ. ನಿಮ್ಮ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಯಾರಿಗೆ ಬೇಕು? ಮನುಷ್ಯನನ್ನು ಮನುಷ್ಯನನ್ನಾಗಿ ನೋಡು ತ್ತಿಲ್ಲ. ನನಗನ್ನಿಸುತ್ತದೆ ಪೇಶ್ವರ ಕಾಲದಲ್ಲಿಯೂ ಈ ರೀತಿಯಾಗಿಲ್ಲ. ಹಿಂದೆ ಪೇಶ್ವರ ಕಾಲದಲ್ಲಿ ಊರಿಂದ ಹೊರಗೆ ಒಂದು ಜಾಡು ಹಿಡಿದು ಮಡಿಕೆ ಇಟ್ಟುಕೊಂಡು ಹೋಗಬೇಕಾಗಿತ್ತು. ಆ ಕಾಲದಲ್ಲಿ ಕೂಡ ಮನುಷ್ಯನ ಮೇಲೆ ಈ ರೀತಿ ನಡೆದಿರಲ್ಲ. ಆದರೆ ನಮ್ಮ ರಾಜ್ಯದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಗಳ ಕಾಲದಲ್ಲಿ, ಮಾನ್ಯ ಜಾಲಪ್ಪನವರು ಗೃಹ ಸಚಿವರಾದಂತಹ ಕಾಲದಲ್ಲಿ ಮನುಷ್ಯ ಮಲ ತಿನ್ನುವ ವ್ಯವಸ್ಥೆಯಾಗಿದೆ ಎಂದರೆ ನಾಚಿಕೆಯಾಗಬೇಕು. ಏನಿದೆ ವ್ಯವಸ್ಥೆ?

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಲಿ ಅದು ಬಿಟ್ಟು. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ಮತ್ತು ಜಾಲಪ್ಪನವರ ಬಗ್ಗೆ ಯಾವ ರೀತಿ ಮಾತ ನಾಡುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ಆಡಳಿತ ನಡೆಸುತ್ತಿರುತ್ತಾರೋ ಅವರು ಜವಾಬ್ದಾರಿ ಹೊರಬೇಕಾಗುತ್ತದೆ. ನಿಮಗೆ ಬಿಟ್ಟು ಯಾರಿಗೆ ನಾವು ಹೇಳಬೇಕು.

ಶ್ರೀ ಜಿ. ನಾರಾಯಣ್ ಕುಮಾರ್.— ವಿಷಯ ಇದ್ದರೆ ವಿಷಯದ ಮೇಲೆ ಮಾತನಾಡಿ. ಸುಮ್ಮನೆ ಮುಖ್ಯ ಮಂತ್ರಿಗಳ ಹೆಸರು ಮತ್ತು ಜಾಲಪ್ಪನವರಹೆಸರನ್ನು ಏಕೆ ಹೇಳುತ್ತೀರಿ? ವಿಷಯ ಗೊತ್ತಿಲ್ಲದೇ ಇದ್ದರೆ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ನಾನು ಹೇಳುತ್ತಿರುವುದು ಸಮಿತಿಯು ಕೊಟ್ಟಿರುವ ರಿಪೋರ್ಟನ್ನು ನೋಡಿಕೊಂಡು. ನಿಮಗೆ ಇದರ ಬಗ್ಗೆ ಗೊತ್ತಿದ್ದರೆ ತಾನೆ?

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ವಿಷಯ ಗೊತ್ತಿಲ್ಲದೇ ಇದ್ದರೆ ಸುಮ್ಮನೆ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಸಮಿತಿಯವರು ಸ್ಥಳಕ್ಕೆ ಹೋಗಿ ವಿಚಾರಿಸಿದಾಗ, ಅಲ್ಲಿನ ಜನರು ಧೈರ್ಯವಾಗಿ ಹೇಳುವ ಸ್ಥಿತಿಯಲ್ಲಿ ಇರಲಿಲ್ಲವಾದ್ದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಜನರನ್ನು ವಿಚಾರಿಸಲಾಗಿದೆ, ಈ ಕೃತ್ಯ ನಡೆದದ್ದು ನಿಜವೆಂದು ಹೇಳಿದ್ದಾರೆ, ಅಲ್ಲಿನ ಮಂಡಲ ಪಂಚಾಯಿತಿ ಪ್ರಧಾನರೂ ಕೂಡ ಈ ಕೃತ್ಯ ನಡೆದಿದ್ದು ನಿಜವೆಂದು ಹೇಳಿದ್ದಾರೆ. ಈ ಕೃತ್ಯ ನಡೆದ ಮೇಲೆ ಕಮಿಟಿಯವರು ಅಲ್ಲಿಗೆ ಹೋಗಿ ಎಲ್ಲಾ ವಿಚಾರಿಸಿಕೊಂಡು ಈ ರೀತಿ ಇನ್ನು ಮುಂದೆ ರಾಜ್ಯದ ಯಾವುದೇ ಹಳ್ಳಿಯಲ್ಲೂ ಕೂಡ ಆಗದಂತೆ ಮಾಡಲು ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂಬ ಬಗ್ಗೆ ಕೆಲವೊಂದು ಶಿಫಾರಸ್ಸುಗಳನ್ನು ಕೂಡ ಮಾಡಿದ್ದಾರೆ. ಇಂಥ ಕೃತ್ಯಗಳನ್ನು ಮಾಡಿರುವವರಿಗೆ ಪ್ಯೂನಿಟಿ ಫೈನ್ (ಪುಂಡು ಕಂದಾಯ) ಹಾಕಬೇಕೆಂದು ಕಮಿಟಿಯವರು ರೆಕಮೆಂಡ್ ಮಾಡಿದ್ದಾರೆ. ಈ ರೀತಿ ಪುಂಡು ಕಂದಾಯ ಹಾಕುವುದು ನಮ್ಮ ಐ.ಪಿ.ಸಿ ಕೋಡ್‌ನಲ್ಲಿ ಇದೆ. ಈ ಕೃತ್ಯವನ್ನು ಎಸಗಿದವರು ಯಾರಿದ್ದಾರೆ ಅವರ ಮೇಲೆ ಯಾವುದೇ ರೀತಿಯ ಕ್ರಮಗಳನ್ನು ಸರ್ಕಾರ ಇದುವರೆಗೆ ತೆಗೆದುಕೊಂಡಿಲ್ಲ. ಇವತ್ತಿನವರೆಗೂ ಅವರು ಅದೇ ಊರಿನಲ್ಲಿ ಇದ್ದಾರೆ. ಇವರ ಮೇಲೆ ಕೇಸ್ ರಿಜಿಸ್ಟರ್ ಏನಾಗಿತ್ತೋ ಅಷ್ಟೇ ಹೊರತು ಅವರು ಯಾವ ಶಿಕ್ಷೆಯೂ ಆಗಿಲ್ಲ. ಈ ರೀತಿ ಅನ್ಯಾಯ ಮಾಡಿದವರಿಗೆ ಶಿಕ್ಷೆ ಕೊಡದಿದ್ದರೆ ಯಾರಿಗೇ ತಾನೇ ಭಯ ಇರುತ್ತದೆ? ತಪ್ಪಿತಸ್ಥರ ಮೇಲೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ವೀಕರ್ ಸಕ್ಷನ್ ಜನರು ಬದುಕುವುದಕ್ಕೇ ಆಗುವುದಿಲ್ಲ. ಅನ್ಯಾಯ ಮಾಡಿದವರಿಗೆ ತಕ್ಷಣ ಶಿಕ್ಷೆಯನ್ನು ಕೊಡಬೇಕು. ಆ ತರಹ ಶಿಕ್ಷೆಯನ್ನು ಮಾಡಿದ್ದೀರಾ? ಪ್ಯೂನಿಟಿ ಫೈನನ್ನು ಹಾಕಬೇಕೆಂದು ಸಮಿತಿ ಶಿಫಾರಸ್ ಮಾಡಿದೆ. ಅದರಂತೆ ಸರ್ಕಾರ ಪ್ಯೂನಿಟಿ ಫೈನನ್ನು ತಪ್ಪಿತಸ್ಥರ ಮೇಲೆ ಹಾಕಿದೆಯೋ? ಯಾವುದನ್ನೂ ಮಾಡಿಲ್ಲ. ತಕ್ಷಣ ಸರ್ಕಾರ ಕ್ರಮ ತೆಗೆದುಕೊಂಡಿದ್ದರೆ ಬೇರೆ ಕಡೆ ಇಂಥ ರೀತಿಯಲ್ಲಿ ಪುನಃ ಆಗುತ್ತಿರಲಿಲ್ಲ. ನೀವು ಇದೇ ರೀತಿ ಹೇಳಿಕೊಂಡು ಬಂದರೆ ಬಡ ಜನರು ಬಹಳ ದಿನ ಬದುಕುವುದಕ್ಕೆ ಆಗುತ್ತಿಲ್ಲ ಬಡ ಜನರಿಗೆ ಸರ್ಕಾರ ಕಳಕಳಿ ಇಟ್ಟುಕೊಂಡು ಕೆಲಸ ಮಾಡಿದರೆ ಮಾತ್ರ ಒಳ್ಳೆಯ ವಾತಾವರಣವೂ ಇರುತ್ತದೆ.

ಅಧ್ಯಕ್ಷರು.— ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸಮಿತಿಯವರು ಇಂಥ ಕೆಲಸ ಮಾಡಿದವರಿಗೆ ಶಿಕ್ಷೆ ಕೊಡಬೇಕೆಂದು ಶಿಫಾರಸ್ ಮಾಡಿದ್ದರೂ ಸರ್ಕಾರ ಏಕೆ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಲಿಲ್ಲ? ಅಲ್ಲಿ ಒಂದು ತರದ ಭಯದ ವಾತಾವರಣ ಉಂಟಾಗಿದೆ. ಇಲ್ಲಿ ಬಡ ಜನರ ಮೇಲೆ ದಬ್ಬಾಳಿಕೆ ಮಾಡುವವರ ಮೇಲೆ ಸರ್ಕಾರ ಕ್ರಮ ಕೈಗೊಂಡಿದ್ದರೆ, ಇಂಥ ದಬ್ಬಾಳಿಕೆ ಮಾಡುವುದಕ್ಕೆ ಯಾರೂ ಸಾಹಸ ಮಾಡುತ್ತಿರಲಿಲ್ಲ. ಆಳಂದ್ ತಾಲ್ಲೂಕಿನಲ್ಲಿ ಪೋಲೀಸಿನವರೇ ಹೊಡೆದ ಪ್ರಕರಣ ಬೆಳಕಿಗೆ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಇಬ್ಬರು ತರುಣರನ್ನು ಪೋಲೀಸಿನವರೇ ಹೊಡೆದು ಹಾಕಿದ್ದಾರೆ, ಕೊನೆಗೆ ಆ ಇಬ್ಬರು ನೇಣು ಹಾಕಿಕೊಂಡು ಸತ್ತರೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಕೆ.ಹೆಚ್ ಶ್ರೀನಿವಾಸ್ ರವರು ಡೀಟೇಲ್ ಆಗಿ ಮುಂಚೆ ಮಾತನಾಡುವವರಿದ್ದಾರೆ. ಇದೇ ತರಹ ಇನ್ನೂ ಹತ್ತಾರು ಇನ್ಸಿಡೆಂಟ್‌ಗಳು ನಡೆದಿರುವುದು ಎಲ್ಲರಿಗೂ ಗೊತ್ತಿದೆ. ಅನ್ಯಾಯ ಮಾಡತಕ್ಕವರಿಗೆ ಪೋಲೀಸ

ನವರೇ ನಮಗೆ ಬೆಂಬಲ ಕೊಡುತ್ತಾರೆ ಎಂದು ತಿಳಿದರೆ ಅವರು ಇನ್ನೂ ಹೆಚ್ಚು ಅನ್ಯಾಯವನ್ನು ಮಾಡುತ್ತಾರೆ. ಅನ್ಯಾಯ ಮಾಡಿದರೆ ಶಿಕ್ಷೆ ಸಿಗುತ್ತದೆಂದು ತಿಳಿದರೆ ನಿಜವಾಗಲೂ ಇಂಥ ಎಲ್ಲಾ ಅನ್ಯಾಯ ಗಳು ನಿಂತು ಹೋಗುತ್ತವೆ. ಶಿಕ್ಷೆ ಕೊಟ್ಟರೆ ಮಾತ್ರ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಸಾಧ್ಯ ವಾಗುತ್ತದೆ. ಮೊನ್ನೆ ತಾನೇ ನನ್ನ ಕ್ಷೇತ್ರದ ಒಡಗೇರಾ ಎಂಬಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯನಾದ ಲಕ್ಷ್ಮಣ್‌ನಾಯಕ್ ಎಂಬ ಷೆಡ್ಯೂಲ್ ಕಾಸ್ಟ್‌ನವನನ್ನು ಸಾಯಿಸಿದರು ಈ ಲಕ್ಷ್ಮಣ್‌ನಾಯಕ್ ಜನತಾ ಪಾರ್ಟಿಯ ಸದಸ್ಯನೇ ಆಗಿದ್ದ. ನಾನು ಪಕ್ಷದ ಬಗ್ಗೆ ಹೇಳುತ್ತಿಲ್ಲ. ವೀಕರ್-ಸಕ್ಷನ್‌ನವರು ಯಾವುದೇ ಪಕ್ಷದಲ್ಲಿದ್ದರೂ ಅವರಿಗೆ ಬೇರೆಯವರು ತೊಂದರೆ ಕೊಡುತ್ತಾರೆ.

ಶ್ರೀ ಧರ್ಮಸಿಂಗ್.--ನಮ್ಮಲ್ಲಿಯೂ ಒಬ್ಬ ವ್ಯಕ್ತಿ ಸತ್ತು ಹೋದ...

ಅಧ್ಯಕ್ಷರು.--ಮಾನ್ಯ ಧರ್ಮಸಿಂಗ್‌ರವರೇ, ಖರ್ಗೆಯವರಿಗೆ ಅನುಭವ ಇದೆ ಅವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಅಲ್ಲಿ ಲಕ್ಷ್ಮಣ್‌ನಾಯಕ್ ಎಂಬ ವ್ಯಕ್ತಿ, ಜಿಲ್ಲಾಪರಿಷತ್ತಿನ ಸದಸ್ಯನಾಗಿ ಗೆದ್ದು ಬಂದ ಲೋಕಲ್‌ನಲ್ಲಿ ಬೇಕಾದಷ್ಟು ಜನ ಸಾಹುಕಾರರು ಇದ್ದರು ಅವರಲ್ಲಿ ಕೆಲವರು ಸ್ಪರ್ಧೆಗೆ ಇಳಿಯುವವರಿದ್ದರು. ಅಂತಹವರ ಮನಸ್ಸಿಗೆ ವಿರುದ್ಧವಾಗಿ ಜನತಾ ಪಕ್ಷದವರು ಇವನಿಗೆ ಟಿಕೆಟ್ ಕೊಟ್ಟರು. ಅವನು ಗೌಡರ ಗುಂಪಿಗೆ ಸೇರಿದವನು ಇದರಿಂದಾಗಿ ಸಾಹುಕಾರರು ರೊಚ್ಚಿಗೆದ್ದ ಕಾರಣ, ಚುನಾವಣೆಯಲ್ಲಿ ಅವರನ್ನು ಸೋಲಿಸತಕ್ಕ, ಅಥವಾ ಗೆಲ್ಲಿಸತಕ್ಕಂಥ ಪ್ರಯತ್ನ ಗಳು ಆಗಿರಬಹುದು ಚುನಾವಣೆಯ ವಿಚಾರವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಈ ಮನುಷ್ಯ ಗೆದ್ದು ಬಂದ, ತದನಂತರ ಮಂಡಲ ಪಂಚಾಯತ್‌ನಲ್ಲಿ ಅವನು ಏನು ಮಾಡಿದ ಎಂದರೆ, ಆ ಮಂಡಳದ ೨೭ ಸದಸ್ಯರಲ್ಲಿ ೨೦ ಜನ ಸದಸ್ಯರು ಅವನಿಗೆ ಬೇಕಾದವರು ಆರಿಸಿ ಬಂದರು. ಸಾಹುಕಾರರಿಗೆ ತಾನೇ ಆ ಮಂಡಳದ ಪ್ರಧಾನ ಆಗಬೇಕೆಂಬ ಒಂದು ಆಸೆ ಇತ್ತು. ಆದರೆ ಅವರ ಆಶೆ ಈಡೇರಲಿಲ್ಲ. ಬಹುಮತ ಇರುವ ಸದಸ್ಯರು ತಮ್ಮ ಬೆಂಬಲಿಗರೊಂದಿಗೆ ಒಬ್ಬ ಬೆಸ್ತ ಸಮಾಜಕ್ಕೆ ಸೇರಿದವನನ್ನು ಆ ಮಂಡಳದ ಪ್ರಧಾನರನ್ನಾಗಿ ಮಾಡಿದರು. ಅಲ್ಲಿಂದ ವೈಮನಸ್ಸು ಬೆಳೆಯಿತು. ಇದರ ಪರಿಣಾಮ ಏನಾಯಿತೆಂದರೆ ಆ ವಡಗೇರ ಮಂಡಳಪಂಚಾಯತ್‌ನಲ್ಲಿ ಒಂದು ಮೀಟಿಂಗ್ ಕೂಡ ನಡೆಯಲಿಲ್ಲ. ಅಲ್ಲಿಯ ಮಂಡಳ ಪ್ರಧಾನನಿಗೆ ಅಷ್ಟೊಂದು ಬೆಂಬಲ ಇದ್ದರೂ ಕೂಡ ಅಲ್ಲ ಮೀಟಿಂಗ್ ಮಾಡಲಿಕ್ಕೆ ಆಗಲಿಲ್ಲ ಯಾರು ಇದರಲ್ಲಿ ತಾನು ಪ್ರಧಾನನಾಗ ಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರೋ ಅವರೇ ಪ್ರಧಾನರಾಗಿ ಬರಲಿಲ್ಲ ಎಂಬ ಕಾರಣಕ್ಕಾಗಿ ಮೀಟಿಂಗ್ ಮಾಡಲು ಪೋಲೀಸ್ ವ್ಯಾನ್ ಸಹಾಯ ಬಂದರೂ ಕೂಡ ಮೀಟಿಂಗ್ ಆಗಲಿಲ್ಲ. ಬಹುಶ: ಆ ಮಂಡಳವು ಪೋಲೀಸ್ ಸ್ಟೇಶನ್‌ಗೆ ೩೦೦ ಅಡಿಗಳ ದೂರದಲ್ಲಿ ಇರಬಹುದು ಎಂದು ಕಾಣುತ್ತದೆ. ಆ ಪೋಲೀಸ್ ಸ್ಟೇಶನ್‌ನಲ್ಲಿ ಇನ್ಸ್‌ಪೆಕ್ಟರ್ ೨೦ ಮಂದಿ ಕಾನ್ಸ್‌ಟೇಬಲ್‌ಗಳು ಇದ್ದರೂ ಕೂಡ ಮಂಡಳದಲ್ಲಿ ಒಂದು ಮೀಟಿಂಗ್‌ನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಹೀಗೆ ನಾಲ್ಕು ಮೀಟಿಂಗ್‌ಗಳು ಮುಂದಕ್ಕೆ ಹೋಯಿತು. ಈ ಮರ್ಡರ್ ಆಗುವವರೆಗೆ ಮೀಟಿಂಗ್ ಆಗಲಿಲ್ಲ. ಇದೆಲ್ಲಾ ಆಗಿಯೂ ಕೊನೆಗೆ ಆ ಸಾಹುಕಾರ ಮತ್ತು ಅವನ ಬೆಂಬಲಿಗರು ಸೇರಿ, ಪೋಲೀಸ್ ಸ್ಟೇಶನ್‌ನಿಂದ ಕೇವಲ ೪೦ ಅಡಿಗಳ ದೂರದ ಅಂತರದಲ್ಲಿನ ಸ್ಥಳದಲ್ಲಿ ಲಕ್ಷ್ಮಣ ನಾಯಕನ ಮರ್ಡರ್ ಮಾಡಿದರು. ಅಂತಹ ಕೊಲೆಗಾರ ವ್ಯಕ್ತಿಯನ್ನು ಇಲ್ಲಿಯವರೆಗೆ ಸರಕಾರಕ್ಕೆ ಹಿಡಿಯುವುದಕ್ಕೆ ಆಗಲಿಲ್ಲ. ಆ ಒಂದು ಶಕ್ತಿ ಈ ಸರ್ಕಾರಕ್ಕೆ ಇಲ್ಲವಾಯಿತು. ಊರಲ್ಲಿದ್ದ ಕೆಲವರು ಸರೆಂಡರ್ ಆದರು. ಮರ್ಡರ್ ಮಾಡಿದ ವ್ಯಕ್ತಿ ಇನ್ನೂ ಸಿಕ್ಕಿಲ್ಲ. ಈ ಮರ್ಡರ್ ಆಗಿದ್ದ ಕೇವಲ ೪೦ ಅಡಿಗಳ ಅಂತರದ ಸ್ಥಳದಲ್ಲಿ ಹಾಗಾದರೆ ಹೇಗೆ? ಇದು ಅಲ್ಲಿಯ ಪೋಲೀಸರಿಗೆ ಗೊತ್ತಿರಲಿಲ್ಲವೇ? ಮರ್ಡರ್ ಆದಮೇಲೆಯೂ ಕೂಡ ಅಪರಾಧಿಯನ್ನು ಹಿಡಿಯತಕ್ಕ ಕೆಲಸವನ್ನು ಸರಕಾರ ಏತಕ್ಕೆ ಮಾಡಲಿಲ್ಲ? ಅವನು ಹೇಗೆ ಪರಾರಿಯಾದ? ಏಕೆಂದರೆ ಒಂದು ಕಡೆ ಅಲ್ಲಿ ಕೃಷ್ಣ ನದಿ ಇದೆ, ಮತ್ತೊಂದು ಕಡೆ ಭೀಮಾ ನದಿ ಇದೆ. ಅಷ್ಟು ಸುಲಭವಾಗಿ ಪಕ್ಕನೆ ಧಾಟಿ ಹೋಗುವುದಕ್ಕೆ ಶಕ್ಯವಿಲ್ಲ ಹಾಗೆ ಹೋಗುವುದಕ್ಕೆ ಇರುವ ದಾರಿ ಒಂದೇ ಒಂದು ಇದ್ದು. ಅದು ವಡಗೇರಿ, ಯಾದಗೀರ್ ಮಾರ್ಗ ಮಾತ್ರವಾಗಿದೆ ಎಂಬುದು ಸ್ಪಷ್ಟ. ಅದನ್ನು ಬಿಟ್ಟರೆ ಬೇರೆ ರಸ್ತೆ ಇಲ್ಲ. ಆದರೂ ಕೂಡ ಆ ವ್ಯಕ್ತಿ ಇನ್ನೂ ಪತ್ತೆಯಾಗಿಲ್ಲ. ಸರಕಾರದವರು ಪತ್ರಿಕೆಯಲ್ಲಿ ಕೂಡ ಕೊಟ್ಟರು. ನಾನು ಈ ರೀತಿಯಾಗಿ ಏತಕ್ಕೆ

ಹೇಳುತ್ತಾ ಇದ್ದೇನೆ ಅಂದರೆ. ನಿಮ್ಮ ಮನಸ್ಸಿಗೆ ನೀವೆ ಪ್ರಶ್ನೆ ಹಾಕಿಕೊಳ್ಳಿ, ಈ ಕೃತ್ಯದಲ್ಲಿ ಈ ಅನ್ಯಾಯದಲ್ಲಿ ರಾಜಕೀಯ ಬೆಂಬಲ ಇದ್ದ ಕಾರಣ ಇದು ಆಗುತ್ತಿಲ್ಲ. ಇಲ್ಲವಾದಲ್ಲಿ ಸಾಧ್ಯವಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಅಲ್ಲಿರುವ ಶ್ರೀಮಂತರು ಬಡವರು ಮೇಲೆ ಬರಬಾರದು ಎಂಬ ಉದ್ದೇಶವನ್ನು ಹೊಂದಿದ್ದಾರೆ. ಒಟ್ಟಿನಲ್ಲಿ ಯಾವುದೇ ಪಕ್ಷದಲ್ಲಾಗಲಿ, ಅದು ಕಾಂಗ್ರೆಸ್ ಪಕ್ಷದಲ್ಲಾಗಲಿ, ಕಮ್ಯೂನಿಸ್ಟ್ ಪಕ್ಷದಲ್ಲಾಗಲಿ, ಜನತಾ ಪಕ್ಷದಲ್ಲಾಗಲೀ, ಇವೊತ್ತು ಬಡವರು ಯಾರಿದ್ದಾರೆ ಅವರು ಮೇಲೆ ಬರಬಾರದು ಎಂದು ಛಲ ತೊಟ್ಟರೆ. ಬಡವರ ಗತಿ ಏನಾಗುತ್ತದೆ? ಅಂತಹವರಿಗೆ ಇವೊತ್ತಿನ ದಿವಸ ನೀವು ರಕ್ಷಣೆ ಕೊಡುತ್ತೀರಾ? ಇವತ್ತು ನಿಮ್ಮ ಪಕ್ಷದಲ್ಲಿನ ಒಬ್ಬರು ಕೊಲೆಯಾದರೂ ಕೂಡ ಅವರಿಗೆ ರಕ್ಷಣೆ ಕೊಡಲು ಆಗಲಿಲ್ಲ. ಇದೇ ರೀತಿ ಹತ್ತಾರು ಪ್ರಕರಣಗಳು ನಡೆದಿದೆ ಅವರ ಬಗ್ಗೆ ಯಾವ ಕ್ರಮವೂ ಇಲ್ಲ. ಈ ಕೊಲೆಯ ಹಿಂದೆ ದೊಡ್ಡ ದೊಡ್ಡ ಶ್ರೀಮಂತರ ಕೈ ಇದೆ, ಪೊಲಿಟೆಷಿಯನ್ಸ್‌ಗಳ ಕೈ ಇದೆ. ನಾವು ಏನಾದರೂ ಹೇಳಿದರೆ ಅವರ ಹೆಸರು ಕೊಡಿ ಅದಕ್ಕೆ ಎವಿಡೆನ್ಸ್ ಕೊಡಿ ಎಂದು ಹೇಳುತ್ತಾರೆ. ಸಿ. ಓ. ಡಿ. ಯನ್ನು ಕಳುಹಿಸಿ, ನಿಮ್ಮಲ್ಲೇ ಪೋಲೀಸರು ಇಲ್ಲವೆ? ಕೊಲೆಯಾದ ಒಂದು ಗಂಟೆಯಲ್ಲಿ ಹಿಡಿಯತಕ್ಕಂತಹ ಸಂದರ್ಭ ಇತ್ತು ಅಂತಹ ಸಂದರ್ಭವಿದ್ದರೂ ಕೂಡ ಇವರನ್ನು ಹಿಡಿದಿಲ್ಲ. ೪೦ ಅಡಿ ಅಂತರದಲ್ಲಿ ನಡೆದಿದೆ. ಇದಕ್ಕಿಂತ ಡೆಟಿರಿಯೋರೇಟಿಂಗ್ ಸಿಚ್ಯುಯೇಷನ್ ಬೇರೆ ಇಲ್ಲ ಇದಕ್ಕಿಂತ ಉದಾಹರಣೆ ಬೇಕೇ ? ಇದು ಬಹಳ ಗಂಭೀರವಾದ ವಿಷಯ. ಮಾನ್ಯ ಜಾಲಪ್ಪನವರೂ ಕೂಡ ಖುದ್ದಾಗಿ ಆ ಊರಿಗೆ ಬಂದಿದ್ದರು ನಾನು ಅಂದುಕೊಂಡಿದ್ದೆ ಕನಿಷ್ಟ ಪಕ್ಷ ಡಿ. ಐ ಜಿ. ಯವರಿಗೆ ಮತ್ತೆ ಇನ್ನಿತರರಿಗೆ ಹೇಳುತ್ತಾರೆ ಎಲ್ಲಿ ಆ ಸಾಹುಕಾರ ಇದ್ದಾನೋ ಅದನ್ನು ತಿಳಿದುಕೊಂಡು ಹುಡುಕಿ ತರುತ್ತಾರೆಂದು. ಆದರೆ ಅವರು ಇಲ್ಲಿಯವರೆಗೆ ಪತ್ತೆ ಇಲ್ಲ. ಆ ಏರಿಯಾದಲ್ಲಿ ಏನಾಗಿದೆ ಭಯದ ವಾತಾವರಣ ಉಂಟಾಗಿದೆ. ಜೇವರ್ಗಿ ತಾಲ್ಲೂಕಿನ ಭಾಗದಲ್ಲೂ ಕೂಡ ಅದೇ ರೀತಿಯಾಯಿತು. ಇಲ್ಲಿ ಲಕ್ಷ್ಮಣನಾಯಕನನ್ನು ಹಗಲು ಹೊತ್ತಿನಲ್ಲಿ ಪೋಲೀಸ್ ಸ್ಟೇಷನ್ ಮುಂದೆಯೇ ಮರ್ಡರ್ ಮಾಡಿದ್ದಾರೆ. ಇವೊತ್ತು ನೀವು ಅಧಿಕಾರದಲ್ಲಿ ಇರಬಹುದು ನಾಳೆ ನಾವು ಅಧಿಕಾರಕ್ಕೆ ಬರಬಹುದು. ಆಗ ಇವತ್ತು ನಿಮಗೆ ಬೆಂಬಲ ಕೊಡತಕ್ಕಂಥವರು ಯಾರು ಇದ್ದಾರೆ ಅವರು ಯೋಚನೆ ಮಾಡುತ್ತಾರೆ ನಾವು ಎಲ್ಲಿ ಹೋದರೂ ಕೂಡ ರಕ್ಷಣೆ ಇಲ್ಲ ನಮಗೇಕೆ ಎಂದು ವಿಚಾರ ಮಾಡುತ್ತಾರೆ ಪ್ರಜಾಪ್ರಭುತ್ವದಲ್ಲಿ ಅವರೂ ಆರಿಸಿ ಬರಬೇಕು ನಾವೂ ಕೂಡ ಆರಿಸಿ ಬರಬೇಕು. ನಾವು ವೀಕರ್ ಸೆಕ್ಷನ್ಸ್‌ಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುತ್ತೀರಿ ಅವರಿಗೆ ರಕ್ಷಣೆ ಎಲ್ಲಿ ಇದೆ. ಭಯದ ವಾತಾವರಣ ಇವತ್ತು ಅಲ್ಲಿ ಇದೆ. ಗುಲ್ಬರ್ಗ ಜಿಲ್ಲೆಯಲ್ಲಿ ಇದೇ ಮಾತನಾಡುತ್ತಾರೆ, ರಾಯಚೂರು ಜಿಲ್ಲೆಯಲ್ಲಿ ಇದೇ ಮಾತನಾಡುತ್ತಾರೆ. ಜಿಲ್ಲಾ ಪರಿಷತ್ತಿನ ಸದಸ್ಯರಿಗೇ ಹೊಡೆದರೆ ನಮ್ಮನ್ನು ಕೇಳುವವರು ಇಲ್ಲ ನಮಗೆ ಇದರ ಗೊಡವೆ ಬೇಡ ಎಂದು ಹೇಳುತ್ತಾರೆ. ಮೆ ದಕಿನಾಳದಲ್ಲಿ ಯಾರಾದರೂ ಹರಿಜನರ ಹತ್ತಿರ ಮಾತನಾಡಿದರೆ ಅವರಿಗೆ ೫೦೦ರೂಪಾಯಿಗಳ ಫೈನ್ ಎಂದು ಮಾಡಿದರು ಅದು ತಮಗೂ ಗೊತ್ತಿದೆ. ಮಾನ್ಯ ಬಸವಣ್ಣೆಪ್ಪನವರು ಅಲ್ಲಿಗೆ ಭೇಟಿ ಮಾಡಿದರು, ನಂತರ ಅನೇಕ ಜನ ಹೇಳಿದ ಮೇಲೆ ಸ್ವಲ್ಪ ಮಟ್ಟಿಗೆ ಅಲ್ಲಿ ತಿಳಿ ವಾತಾವರಣ ಆಗಿರಬಹುದು. ಪ್ರತಿಯೊಂದು ಕಡೆ ಮಾನ್ಯ ಮಂತ್ರಿಗಳು ಹೋಗಲಿಕ್ಕೆ ಆಗುವುದಿಲ್ಲ ಪ್ರತಿಯೊಂದು ಕಡೆ ಐ.ಜಿ.ಪಿ. ಹೋಗಲಿಕ್ಕೆ ಆಗುವುದಿಲ್ಲ. ಸರಕಾರ ಒಂದು ವಾತಾವರಣ ತಯಾರು ಮಾಡಿದರೆ, ಈ ಸರಕಾರ ಬಡವರಿಗೆ ರಕ್ಷಣೆ ಕೊಡತಕ್ಕಂಥ ಅವರಿಗೆ ಪ್ರೊಟೆಕ್ಷನ್ ಕೊಡತಕ್ಕಂಥ ಸರಕಾರ ಎನ್ನತಕ್ಕಂತಹ ವಾತಾವರಣವನ್ನು ತಯಾರು ಮಾಡಿದರೆ ಮಂತ್ರಿಗಳೂ ಕೂಡ ಅಲ್ಲಿಗೆ ಹೋಗಬೇಕಾಗಿಲ್ಲ ಆ ವಾತಾವರಣದ ಮೇಲೆ ಆ ಭಯದ ಮೇಲೆ ಜನ ಸರಿಯಾಗುತ್ತಾರೆ. ಎಲ್ಲಾ ಜಮೀನ್ದಾರರಿಗೆ, ಶ್ರೀಮಂತರುಗಳಿಗೆ ರಾಜ್ಯ ನಾವು ಏನು ಮಾಡಿದರೂ ನಡೆಯುತ್ತದೆ ಯಾರಿಗೆ ಹೊಡೆದರೂ ನಡೆಯುತ್ತದೆ ನಮ್ಮನ್ನು ಸೇಫ್‌ಗಾರ್ಡ್ ಮಾಡತಕ್ಕಂತಹವರು ಇದ್ದಾರೆ ನಮ್ಮ ಇಂಟರೆಸ್ಟ್ ಅನ್ನು ಕಾಪಾಡತಕ್ಕಂತಹವರು ಇದ್ದಾರೆ ಎಂಬ ಭಾವನೆ ಬಂದಿದೆ. ಇವತ್ತು ಹಿಂದುಳಿದವರು, ವೀಕರ್ ಸೆಕ್ಷನ್ಸ್ ಯಾವ ರೀತಿಯಲ್ಲಿ ಇದ್ದಾರೆಂದರೆ, ಹಣವಿಲ್ಲದಂತಹವರು ಯಾವ ಸ್ಥಿತಿಯಲ್ಲಿದ್ದಾರೆಂದರೆ ೧೯೬೦ಕ್ಕಿಂತಲೂ ಇಸವಿಗಿಂತಲೂ ಹಿಂದೆ ಏನು ಪರಿಸ್ಥಿತಿ ಇತ್ತು ನಮ್ಮ ಭಾಗದಲ್ಲಿ ಮತ್ತು ಬೇರೆ ಭಾಗದಲ್ಲಿ ಆ ಪರಿಸ್ಥಿತಿ ಇವತ್ತು ಬಂದಿದೆ. ಅದಕ್ಕೆ ನೀವು ಕಾರಣ ಕರ್ತರಿದ್ದೀರಿ ಎಂದು ನೇರವಾಗಿ ನಾನು ಆಪಾದನೆ ಮಾಡುತ್ತಿದ್ದೇನೆ. ನಿಮ್ಮಲ್ಲಿ ಗಟ್ಸ್ ಇಲ್ಲ ಅವರಿಗೆ ರಕ್ಷಣೆ ಕೊಡತಕ್ಕಂತಹ ಹಠ ಇಲ್ಲ. ಇಂತಹ ಘಟನೆಗಳಾದ ತಕ್ಷಣ ಕ್ರಮ ತೆಗೆದುಕೊಂಡರೆ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆ ಕೊಟ್ಟರೆ ಇಂತಹ ಘಟನೆಗಳು ನಡೆಯುವುದಿಲ್ಲ, ಇಲ್ಲದಿದ್ದರೆ ಇವೆಲ್ಲಾ ನಡೆಯುತ್ತಿರುತ್ತವೆ. ಹೆಚ್ಚಿನ

ವಿಷಯವನ್ನು ಪ್ರಸ್ತಾಪ ಮಾಡದೇ ಈಗ ನಾನು ಏನು ವಿಷಯವನ್ನು ಹೇಳಿದ್ದೇನೆ ಅದರ ಬಗ್ಗೆ ಸರಕಾರದವರು ಈಗಲಾದರೂ ಮನಸ್ಸು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

೫-೦೦ ಪಿ. ಎಂ.

ನಾನು ಮುಂಚಿನಿಂದಲೂ ಇದನ್ನು ಹೇಳಿದ್ದೇನೆ ಏತಕ್ಕೋ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಈ ಒಂದು ಸಮಸ್ಯೆಗೆ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಈ ದಲಿತರ ಸಮಸ್ಯೆ ಏನು ಇದೆ ಈ ಕಡೆ ಅವರು ಗಮನವನ್ನು ಕೊಡುತ್ತಿಲ್ಲ. ಜನೋತ್ಸವ ಆಯಿತು, ಐದು ವರ್ಷಗಳು ಆಯಿತು ಮತ್ತೆ ದೆಹಲಿಗೆ ಹೋಗುವ ಪ್ಲಾನ್ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ ಅದೆಲ್ಲಾ ಮುಗಿಯಿತು. ಯಾವ ಜನ ಮತ ಕೊಟ್ಟಿದ್ದಾರೆ ಯಾವ ಜನ ನಿಮಗೆ ವೋಟ್ ಕೊಟ್ಟಿದ್ದಾರೆ, ಯಾವ ಜನ ನಿಮ್ಮನ್ನು ಈ ಕುರ್ಚಿ ಮೇಲೆ ಕೂಡಿಸಿದ್ದಾರೆ, ಅವರ ರಕ್ಷಣೆಯನ್ನು ನೀವು ಮಾಡಬೇಕು ಎನ್ನತಕ್ಕಂಥ ಭಾವನೆ ನಿಮ್ಮಲ್ಲಿ ಏತಕ್ಕೆ ಬರುತ್ತಿಲ್ಲ ಎಂದು ನಾನು ಕೇಳುತ್ತಿದ್ದೇನೆ. ಇವರ ಬಗ್ಗೆ ನಿಮಗೆ ಅನುಕಂಪ ಏತಕ್ಕೆ ಇಲ್ಲ ? ನಿಮಗೆ ದೊಡ್ಡ ದೊಡ್ಡ ಜನರು ಬಂದು ಪುಡಾರಿಗಳು ಬಂದು ಪ್ರೆಷರ್ ಹಾಕುತ್ತಾರೆ ಅವರ ಪ್ರೆಷರ್‌ಗೆ ಯೀಲ್ಡ್ ಆಗಿ ಅವರು ಹೇಳಿದಂಥ ಅಧಿಕಾರಿಗಳನ್ನು ನೀವು ಹಾಕುತ್ತಿದ್ದೀರಿ. ೨೪ ಗಂಟೆಗಳಲ್ಲಿ ಎಷ್ಟೋ ಜನರಿಗೆ ಕ್ಯಾನ್ಸಲ್ ಮಾಡಿದ್ದೀರಿ, ವೀಕರ್ ಸೆಕ್ಷನ್ಸ್, ಬಡವರು ನಿಮ್ಮ ಮಾತು ಕೇಳುವವರು ಅಲ್ಲಿರುತ್ತಾರೆ. ನಿಮ್ಮ ಮಾತನ್ನು ಕೇಳುವವರು ಇರಬೇಕು ಇವರ ಮಾತನ್ನು ಕೇಳದಿದ್ದರೆ ಮುಂದಿನ ದಿನವೇ ಅವನನ್ನು ವರ್ಗಾವಣೆ ಮಾಡುತ್ತಾರೆ. ಯಾದಗಿರಿಯಲ್ಲಿ ಹೀಗೆ ಇದೆ ಎಂದು ಕೇಳಿದ್ದೇವೆ ಗುಲ್ಬರ್ಗದ ಅನೇಕ ಕಡೆ ಹೀಗೆ ಇದೆ ಎಂದು ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮನಸ್ಸು ಮಾಡಲಿಲ್ಲ ಹೋಂ ಮಿನಿಸ್ಟರ್ ಪ್ರೀ-ಮೆಚ್ಯೂರ್ ಟ್ರಾನ್ಸ್‌ಫರ್ ಮಾಡುವ ಅಧಿಕಾರ ನನ್ನ ಕೈಯಲ್ಲಿ ಇಲ್ಲ ಡಿವೈಎಸ್‌ಪಿ ಯನ್ನು ಟ್ರಾನ್ಸ್‌ಫರ್ ಮಾಡುವ ಅಧಿಕಾರ ನನಗೆ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಯಾವಾಗ ಹೇಳಿದ್ದ ಸ್ವಾಮಿ ಇದನ್ನು ನಾನು ಮಾಡುತ್ತಿಲ್ಲ ಎಂದು ನಾನು ಯಾರ ಹತ್ತಿರ ಹೇಳಿದ್ದೆ. ಸಬ್ ಇನ್ಸ್‌ಪೆಕ್ಟರ್‌ನ್ನು ಟ್ರಾನ್ಸ್‌ಫರ್ ಮಾಡುವ ಅಧಿಕಾರ ನನ್ನ ಕೈಯಲ್ಲಿಯೇ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರೀ-ಮೆಚ್ಯೂರ್ ಟ್ರಾನ್ಸ್‌ಫರ್ಸ್ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ಸರ್ಕಾರದಲ್ಲಿ ಮಾನ್ಯ ಜಾಲಪ್ಪನವರು ಇದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ —ಡಿವೈಎಸ್‌ಪಿ, ಸಬ್-ಇನ್ಸ್‌ಪೆಕ್ಟರ್ಸ್ ಟ್ರಾನ್ಸ್‌ಫರ್ ಮಾಡುವ ಅಧಿಕಾರವನ್ನು ನನಗೆ ಕೊಟ್ಟಿದ್ದಾರೆ ಎಸ್‌ಪಿ.ಗಳನ್ನು ಟ್ರಾನ್ಸ್‌ಫರ್ ಮಾಡುವ ಅಧಿಕಾರ ಕೂಡ ಇದೆ. ಅವರು ಏನೂ ಇಂಟರ್‌ಫಿಯರ್ ಆಗಿಲ್ಲ ನಾನು ಇದನ್ನು ನಿಮಗೆ ಯಾವತ್ತೂ ಹೇಳಲಿಲ್ಲ.

ಅಧ್ಯಕ್ಷರು.—ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಿ-ಮೆಚ್ಯೂರ್ ಟ್ರಾನ್ಸ್‌ಫರ್ ಮಾಡತಕ್ಕಂಥದನ್ನು ಅನೇಕ ಸಲ ಮಂತ್ರಿಗಳು ಮಾಡುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಎಂದು ಆದೇಶ ಇದೆ ಅದು ಇರಲಿ ನಾನು ಹೇಳತಕ್ಕಂಥದ್ದು ಏತಕ್ಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಬಡವರನ್ನು ರಕ್ಷಣೆ ಮಾಡಬೇಕು ಇವರ ಮಾತನ್ನು ಬೇರೆಯವರು ಕೇಳುವುದಿಲ್ಲ. ನಮ್ಮ ಪಾರ್ಟಿಯವರು ಇರಲಿ, ಅವರ ಕಡೆ ಪಾರ್ಟಿಯವನೇ ಇರಲಿ ಅವರಿಗೆ ಬಡವರನ್ನು ರಕ್ಷಣೆ ಮಾಡತಕ್ಕಂಥ ಮನಸ್ಸು ಬರಬೇಕು. ಇದು ಅನ್ಯಾಯ ಇದನ್ನು ಸರಿಪಡಿಸಿ ಎಂದು ಹೇಳಿದಾಗ ಅದನ್ನು ಸರಿಪಡಿಸುವ ತಾಕತ್ತು ಇರಬೇಕು. ಯಾರು ನ್ಯಾಯ ಕೊಡುತ್ತಾರೆ ಯಾರು ಕಾನೂನು ಪ್ರಕಾರ ನಡೆಯುತ್ತಾರೆ, ಯಾರು ಬಡವರನ್ನು ರಕ್ಷಣೆ ಮಾಡುತ್ತಾರೆ, ಅಂಥವರು ಆ ಜಾಗದಲ್ಲಿ ಇರಬೇಕು. ಅಂತಹ ಶಕ್ತಿ ನಿಮ್ಮಲ್ಲಿ ಇಲ್ಲ ಆ ಶಕ್ತಿಯನ್ನು ಕಳೆದುಕೊಂಡಿದ್ದೀರಿ ಇವತ್ತು ಶ್ರೀಮಂತರ ಕೈಯಲ್ಲಿ ನೀವು ಸಿಕ್ಕಿದ್ದೀರಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದೀರಿ ಈಗಲಾದರೂ ಕನಿಷ್ಟಪಕ್ಷ ಬಡವರ ರಕ್ಷಣೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಕೆ. ಹೆಚ್. ಶ್ರೀನಿವಾಸ್ ಇನ್ನು ಹತ್ತು ಮಿನಿಟ್‌ನಲ್ಲಿ ಮುಗಿಸಬೇಕು.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ ಈ ವಿಚಾರ ಒಂದು ರೀತಿಯಲ್ಲಿ 'ಅಮ್ನಿ ಬಸ್' ಎಂದು ಏನು ಹೇಳುತ್ತಾರೆ, ಆ ರೀತಿಯ ಒಂದು ಚರ್ಚೆಯನ್ನು ಏರ್ಪಾಡು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ ಏಕೆಂದರೆ ನಾವು ಎತ್ತಬೇಕು ಎಂದು ಇರತಕ್ಕಂಥ ವಿಷಯಗಳು ಒಂದೊಂದು ಕೂಡಾ ಒಂದೊಂದು ನಿಲುವಳಿ ಸೂಚನೆಯಾಗಿ ಅರ್ಹತೆಯನ್ನು ಪಡೆದಂಥ ವಿಚಾರಗಳು ಆದರೆ ನೀವು ಬಹಳ ದಿವಸ ಇಲ್ಲಿ ಈ ಸಭೆ ಸೇರುವ ಸಂದರ್ಭಗಳು ಇಲ್ಲ ಮತ್ತು ಸಮಯ ಇಲ್ಲ ಎನ್ನುವ ಕಾರಣಕ್ಕೋಸ್ಕರವಾಗಿ ಈ ಒಂದು ಗಂಭೀರವಾದಂಥ ಚರ್ಚೆಯನ್ನು ಕೆಲವೊಂದು ಪ್ರಾತಿನಿಧಿಕ ಘಟನೆಗಳ ಬಗ್ಗೆ ಮಾಡೋಣ ಎಂದು ಅದಕ್ಕೆ ಸರ್ಕಾರ ಏನು ಪ್ರತಿಕ್ರಿಯೆ ಕೊಡುತ್ತದೆ ಅದನ್ನು ಕೊಡಲಿ ಎನ್ನತಕ್ಕಂಥ ದೃಷ್ಟಿಯಿಂದ ಈ ಚರ್ಚೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಈ ಚರ್ಚೆಯ ಶೃತಿ ಏನಿದೆ ಎಂದರೆ ಈ ಸರ್ಕಾರ ಬಂದಮೇಲೆ ಅಂದಿನಿಂದ ಇಂದಿನವರೆಗೆ ಒಂದು ವಾತಾವರಣ ಏನು ನಿರ್ಮಾಣ ಆಗಿದೆ ಎಂದರೆ, ಯಾರು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಜನರಿದ್ದಾರೆ ದಲಿತ ಎನ್ನುವ ಪದದ ವ್ಯಾಪ್ತಿಯಲ್ಲಿ ಬರತಕ್ಕ ಜನರು ಯಾರಿದ್ದಾರೆ, ತುಂಬಾ ಹಿಂದುಳಿದಿರತಕ್ಕ ಸಣ್ಣಪುಟ್ಟ ಜಾತಿಗಳಿಗೆ ಸೇರಿರತಕ್ಕ ದುರ್ಬಲರೇನಿದ್ದಾರೆ ಅವರಿಗೆ ಈ ಸರ್ಕಾರದಿಂದ ಯಾವುದೇ ರೀತಿಯ ನಿಜವಾದ ರಕ್ಷಣೆ ದೊರೆಯುತ್ತಿಲ್ಲ ಮತ್ತು ಅದರ ಮೇಲೆ ನಾನಾ ರೀತಿಯ ದಬ್ಬಾಳಿಕೆಗಳು ನಡೆಯುತ್ತಿದ್ದರೂ ಕೂಡ ಆ ಬಗ್ಗೆ ಸರ್ಕಾರ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ ಎಂಬುದು ನಮ್ಮ ಚರ್ಚೆಯ ಮೂಲ ಶೃತಿ. ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೆಲವು ವಿವರಗಳನ್ನು ಹೇಳಿದರು ಅದನ್ನು ನಾನು ಮತ್ತೆ ಪುನರುಚ್ಚಾರ ಮಾಡುವುದಿಲ್ಲ. ಆದರೆ ಅವರು ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ ಆ ಭಾವನೆಗಳು ನಾನು ಹೇಳುವ ಎಲ್ಲಾ ಘಟನೆಗಳ ಬಗ್ಗೆ ಮಾಡುತ್ತಾ ಇರತಕ್ಕ ಚರ್ಚೆಗೆ ಶೃತಿಪ್ರಾಯವಾಗಿದೆ ಎಂದು ಅವರ ಮಾತಿಗೆ ಬೆಂಬಲವಾಗಿ ಪ್ರಸ್ತಾವ ಮಾಡುತ್ತೇನೆ. ತಾವು ಹೇಳಬಹುದು ಯಾವುದೇ ಸರ್ಕಾರ ಇರಲಿ ಯಾವುದಾದರೂ ಒಂದು ಕ್ಷೇತ್ರದಲ್ಲಿ ಏನಾದರೂ ಆದರೆ ಏನು ಮಾಡುವುದಕ್ಕಾಗುತ್ತದೆ ಎಂದು. ನಿಜ ಅದನ್ನು ಒಪ್ಪೋಣ ಯಾರೇ ಸರ್ಕಾರದಲ್ಲಿರಲಿ ಬ್ರಹ್ಮ, ವಿಷ್ಣು, ಮಹೇಶ್ವರರ ತರಹ ಕಾದುಕೊಂಡು ಕುಳಿತಿರುವುದಕ್ಕಾಗುವುದಿಲ್ಲ. ಆದರೆ ಒಂದು ವಾತಾವರಣ ಸರಿಯಾಗಿದ್ದರೆ ಘಟನೆಗಳು ಏನು ಆಗುತ್ತವೆ ಅದನ್ನು ತಡೆಗಟ್ಟಬಹುದು. ಈ ದೇಶದಲ್ಲಿ, ರಾಜ್ಯದಲ್ಲಿ ಒಳ್ಳೆಯ ಸರ್ಕಾರ ಇದೆ ನ್ಯಾಯ ನೀತಿಗೆ ಅನುಸಾರವಾಗಿ ನಿಷ್ಠೂರವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬ ಮಾತು ಜನಜನಿತವಾಗಿದ್ದರೆ ಯಾವ ಕೆಲಸ ಆಗಬಾರದೋ ಅದು ಆಗುವುದಿಲ್ಲ. ಆದರೆ ಇವತ್ತು ಅದಾಗಿವೆ ಆದಮೇಲಾದರೂ ಏನು ಮಾಡಿದ್ದೀರಿ? ಅದನ್ನು ಯೋಚನೆ ಮಾಡಬೇಕಲ್ಲ ನಿಮ್ಮ ದುರಾದೃಷ್ಟಕ್ಕೆ ನಿಮ್ಮ ಕಾಲದಲ್ಲೇ ಆಯಿತು ಎಂದು ಇಟ್ಟುಕೊಳ್ಳೋಣ. ಅದಕ್ಕೆ ನಿಮ್ಮ ಆಡಳಿತ ಕಾರಣವಲ್ಲ, ಏನೋ ಕಾಕತಾಳೀಯವಾಗಿ ಆಗಿದೆ ಎಂದು ನೀವು ಹೇಳಬಹುದು. ಆದಾದಮೇಲೆ ನಿಮ್ಮ ಸರ್ಕಾರ ಪ್ರತಿಯೊಂದು ಪ್ರಕರಣದಲ್ಲಿ ಯಾವರೀತಿ ವರ್ತನೆ ಮಾಡಿದೆ ? ಕುದುರೆಮೋಟಿಯಿಂದ ಪ್ರಾರಂಭ ಮಾಡಿ ಬೆಂಡಿಗೇರಿ ಪ್ರಕರಣ ಯಾವುದೇ ಇರಲಿ ಆ ಪ್ರಕರಣಗಳು ನಡೆದಾಗ ನೀವು ನಡೆದುಕೊಂಡ ರೀತಿಯಿಂದ ಮೊರೆಯುವವನಿಗೆ ಅನುಭವಿಸುತ್ತಿರತಕ್ಕ ಕೆಲವೊಂದು ವರ್ಗಗಳ ಜನರಿಗೆ ಏನು ಭಾವನೆ ಬರುತ್ತಿದೆ ಅವರ ಮನಸ್ಸಿನಲ್ಲಿ, ನಮಗೆ ರಕ್ಷಣೆ ಇಲ್ಲ ಎಂಬ ಭಾವನೆ ಬಂದಿದೆ ಓಟು ಕೊಟ್ಟಿರುವ ಜನರ ಮನಸ್ಸಿನಲ್ಲಿ ಕೂಡ ಓಟು ಕೊಟ್ಟು ತಪ್ಪಾಗಿದೆ ಎಂಬ ಭಾವನೆ ಮೂಡುತ್ತಿದೆ,

ಶ್ರೀ ಜಿ. ನಾರಾಯಣಕುಮಾರ್.— ನೀವು ವಿಜಯೋತ್ಸವ ನೋಡಿದ್ದರೆ ಗೊತ್ತಾಗುತ್ತಿತ್ತು.

ಶ್ರೀ ಕೆ. ಎಚ್. ಶ್ರೀನಿವಾಸ್.— ನಾವೂ ಅದನ್ನು ಮಾಡಿದ್ದೇವೆ. ಅದಕ್ಕೂ ಇದಕ್ಕೂ ಏನು ವ್ಯತ್ಯಾಸ ಇಲ್ಲ. ಅದೇ ಕೆ ಎಸ್. ಆರ್. ಟಿ. ಸಿ. ಬಸ್ಸೇ ಉಪಯೋಗಿಸಿರುವುದು ಬೇರೆ ಬಸ್ಸನ್ನು ಓಡಿಸುತ್ತಿಲ್ಲ. ಅದೇ ಲೆಕ್ಕಾಚಾರದ ಮೇಲೆ ತರುತ್ತಿದ್ದೀರಿ. ಆ ವಿಜಯೋತ್ಸವದ ಪ್ರಶ್ನೆ ಬೇಡ.

ಶ್ರೀ ಕೆ. ಮಲ್ಲಪ್ಪ.— ನಮ್ಮ ಕಾರ್ಯಕರ್ತರು ಹಣ ತಂದು ಕೊಟ್ಟು ಬಂದಿದ್ದಾರೆ.

ಶ್ರೀ ಕೆ. ಎಚ್ ಶ್ರೀನಿವಾಸ್.— ನಿಮ್ಮ ಕಾರ್ಯಕರ್ತರಲ್ಲಿ ಹಣವಂತರಿದ್ದಾರೆ. ಅವರ ಹಣವೇ ನಿಮ್ಮ ಕಾರ್ಯವನ್ನು ನಡೆಸುತ್ತಿರುವುದು ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.— ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡಿರುವ ಬಗ್ಗೆ ಹೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ನಾವೂ ಬಹಳ ಜನ ಸಾಗರ ನೋಡಿಯಾಗಿದೆ. ನೀವು ಮೊದಲ ಸಾರಿ ನೋಡುತ್ತಿದ್ದೀರಿ. ಕಂಠೀರವ ಸ್ಟೇಡಿಯಂನಲ್ಲಿ ನಾವು ಎಷ್ಟು ರ್‍ಯಾಲಿ ಮಾಡಿದ್ದೇವೆ ?

ಶ್ರೀ ಜಿ. ನಾರಾಯಣಕುಮಾರ್.— ನೀವು ಮಾಡಿದಾಗ ಲಂಚ ಕೊಟ್ಟು ಕರೆದುಕೊಂಡು ಬಂದಿರುವ ಜನ ಇದ್ದರು. ಇವರು ಪ್ರೀತಿಯಿಂದ ಬಂದಿರುವ ಜನ.

ಶ್ರೀ ಕೆ. ಎಚ್. ಶ್ರೀನಿವಾಸ್.— ಜನ ಮಾರಾಟ ಆಗಿಲ್ಲ. ಮಾರಾಟ ಆಗಬಾರದು ಎಂಬುದು ನಮ್ಮ ಅಭಿಪ್ರಾಯ. ಜನರ ಮನಸ್ಸಿನ ಸ್ಪಂದನದ ಬಗ್ಗೆ ಹೇಳುತ್ತಿದ್ದರಲ್ಲಾ ಅದರ ಬಗ್ಗೆ ಹೇಳುತ್ತಿದ್ದೇನೆ. ನಾವು ಏನು ಮಾಡಿದರೂ ಜನ ಮಾಫಿ ಮಾಡುತ್ತಾರೆ ಎಂಬ ನಂಬಿಕೆ ನಿಮಗಿದ್ದರೆ ನಿಮ್ಮ ನಂಬಿಕೆ ನಿಮ್ಮನ್ನು ಕಾಪಾಡಲಿ. ಆದರೆ ನನಗೆ ಗೊತ್ತಿರುವ ಮಟ್ಟಿಗೆ ಬಹಳ ದಿವಸ ಈ ನಂಬಿಕೆ ನಿಲ್ಲುವುದಿಲ್ಲ. ಸರ್ಕಾರ ಯಾವುದೇ ಇದ್ದರೂ ಘಟನೆಗಳು ನಡೆಯಬಹುದು. ಆದರೆ ಅದರ ಬಗ್ಗೆ ಸರ್ಕಾರ ಯಾವ ರೀತಿ ವರ್ತನೆ ಮಾಡಿದೆ ಎಂಬುದು ಕೂಡ ಸರ್ಕಾರದ ಸ್ವರೂಪಕ್ಕೆ ಸಾಕ್ಷಿಯಾಗಿ ಸದಾ ಕಾಲ ನಿಲ್ಲುತ್ತದೆಂದು ಪೂರ್ವಭಾವಿಯಾಗಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತು ನಮ್ಮ ನಾಯಕರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮುಖ್ಯವಾಗಿ ಶಿವಮೊಗ್ಗದಲ್ಲಿ ಇತ್ತೀಚೆಗೆ ನಡೆದ ಒಂದು ಘೋರವಾದಂಥ ಪ್ರಸಂಗವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಶಿವಮೊಗ್ಗದಲ್ಲಿ ಕಳೆದ ೩೧ರಂದು ನಲ್ಲಕುಮಾರ್ ಪುರುಷೋತ್ತಮ್ ಎಂಬುವರು ಹೋಟೆಲ್‌ನಲ್ಲಿ ಬಿಲ್ ಸಂದಾಯ ಮಾಡುವುದರ ಬಗ್ಗೆ ತಕರಾರು ಮಾಡುತ್ತಿದ್ದ ಸಂದರ್ಭದಲ್ಲಿ ಅವರನ್ನು ಪೋಲೀಸರು ಹಿಡಿದುಕೊಂಡು ಹೋದರು. ಇವರುಗಳಿಂದ ಪೋಲೀಸರಿಗೆ ಯಾವುದೇ ಮಾಹಿತಿಗಳು ಬೇಕಾಗಿರಲಿಲ್ಲ. ಆದರೂ ಸಹ ಇವರನ್ನು ಜನವರಿ ೧೩ನೇ ತಾರೀಖಿನ ರಾತ್ರಿಯವರೆಗೆ ತಮ್ಮ ಕಸ್ಟಡಿಯಲ್ಲಿಟ್ಟುಕೊಂಡು ಚಿತ್ರಹಿಂಸೆಯನ್ನು ಕೊಟ್ಟಿದ್ದಾರೆ. ಮತ್ತೆ ೧೩ನೇ ತಾರೀಖು ರಾಜಕುಮಾರ್, ಗುರುಮೂರ್ತಿ, ಪ್ರಕಾಶ್ ಎಂಬುವವರನ್ನು ಬಂಧಿಸಿ ೧೩ನೇ ತಾರೀಖು ಬೆಳಗಿನ ಜಾವದವರೆಗೂ ಸಹ ಚಿತ್ರಹಿಂಸೆಯನ್ನು ಕೊಟ್ಟಿದ್ದಾರೆ. ಇವರುಗಳನ್ನು ಕಲ್ಲಿಗೆ ಕಟ್ಟಿ ಹೊಡೆದಿದ್ದಾರೆ. ಕಬ್ಬಿಣದ ರಾಡಿನಿಂದ ಹೊಡೆದಿದ್ದಾರೆ ಹಾಗೂ ರಬ್ಬರ್‌ನ್ನು ಬಿಸಿ ಮಾಡಿ ಅದರಿಂದ ಹೊಡೆದಿದ್ದಾರೆ. ಯಾವ ಯಾವ ರೀತಿಯಿಂದ ಚಿತ್ರಹಿಂಸೆ ಕೊಡಬಹುದೋ ಆ ರೀತಿಯೆಲ್ಲಾ ಕೊಟ್ಟಿದ್ದಾರೆ. ಇದರ ಜೊತೆಗೆ ಅವರು ಕುಡಿಯಲು ನೀರು ಕೇಳಿದಾಗ ಮೂತ್ರವನ್ನು ಕೊಡುವುದು ಇವರ ಖಾಯಂ ಕೆಲಸವಾಗಿಬಿಟ್ಟಿದೆ. ಇವರು ಕೊಟ್ಟಿರುವ ಚಿತ್ರ ಹಿಂಸೆಯನ್ನು ವರ್ಣಿಸಲು ಹಾಗೂ ಇವರ ವರ್ತನೆಯನ್ನು ಕಂಡೆಮ್ ಮಾಡಲು ಯಾವ ನಾಗರೀಕ ಶಬ್ದಗಳನ್ನು ಬಳಸಬೇಕೋ ನನಗೆ ತಿಳಿಯುತ್ತಿಲ್ಲ. ಇವರ ಚಿತ್ರಹಿಂಸೆಯನ್ನು ತಾಳಲಾರದೆ ಮೊದಲು ಗುರುಮೂರ್ತಿ ಎಂಬುವನು ಸತ್ತು ಹೋದ. ಆ ಸಂದರ್ಭದಲ್ಲಿ ಆತನು ಸತ್ತನೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಡಾಕ್ಟರ್ ಅವರನ್ನು ಕರೆಸದೆ ಅವರೇ ಆತನನ್ನು ಸುಟ್ಟು ನೋಡಿದ್ದಾರೆ, ಆತ ಸತ್ತಿದ್ದಾನೆಂಬುದು ಖಚಿತವಾದ ಮೇಲೆ ಆ ಹೆಣವನ್ನು ತೆಗೆದುಕೊಂಡು ಹೋಗಿ ರಿಜರ್ವ್ ಪೋಲೀಸ್ ಗ್ಯಾರೇಜ್‌ನಲ್ಲಿಟ್ಟರು. ಈತ ಸತ್ತ ಮೇಲೆ ಇನ್ನುಳಿದವರು ಸಹ ಸಾಯುವ ಪರಿಸ್ಥಿತಿಗೆ ಬಂದಿದ್ದರು, ಸಾಯುವ ಸ್ಥಿತಿಯಲ್ಲಿದ್ದ ರಾಜಕುಮಾರ್‌ನನ್ನು ಹಾಗೂ ಇತರ ಮೂರು ಜನರನ್ನು ಪೋಲೀಸರು ಭದ್ರಾವತಿಗೆ ತೆಗೆದುಕೊಂಡು ಹೋದರು. ಶಿವಮೊಗ್ಗದಲ್ಲಿ ಒಬ್ಬರು ಸತ್ತರೆ, ಮತ್ತು ಭದ್ರಾವತಿಯಲ್ಲಿ ಒಬ್ಬರು ಸತ್ತರೆ ಪರಿಸ್ಥಿತಿ ಅಷ್ಟು ಗಂಭೀರ ಪರಿಸ್ಥಿತಿಗೆ ಹೋಗುವುದಿಲ್ಲವೆಂದು ಅವರು ತಮ್ಮ ಬುದ್ಧಿವಂತಿಕೆಯನ್ನು ಹಾಗೂ ಅವರದೇ ಆದಂಥ ಪ್ಲಾನನ್ನು ಉಪಯೋಗಿಸಿ ಭದ್ರಾವತಿಗೆ ಕರೆದುಕೊಂಡು ಹೋದರು. ಆದರೆ ಭದ್ರಾವತಿಯಲ್ಲಿನ ಸಬ್–ಇನ್ಸ್‌ಪೆಕ್ಟರ್ ಅವರು ಸಾಯುವ ಪರಿಸ್ಥಿತಿಯಲ್ಲಿರುವವರನ್ನು ತಮ್ಮ ಸ್ಟೇಷನ್‌ನಲ್ಲಿಟ್ಟುಕೊಳ್ಳುವುದಿಲ್ಲವೆಂದು ಹೇಳಿದರು. ಆಗ ಅವರು ಪುನಃ ಅವರನ್ನೆಲ್ಲಾ ಶಿವಮೊಗ್ಗಕ್ಕೆ ಕರೆದುಕೊಂಡು ಬಂದರು. ನಂತರ ರಾಜಕುಮಾರ್ ಸತ್ತು ಹೋದ. ಈ ಎರಡು ಹೆಣಗಳ ಪೈಕಿ ಒಂದನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಉಳಿದವರನ್ನು ಮೊದಲೇ ಒಂದು ಹೆಣ ಇಟ್ಟಿದ್ದ ಗ್ಯಾರೇಜ್‌ನಲ್ಲಿಟ್ಟಿದ್ದರು. ಆಸ್ಪತ್ರೆಗೆ ಸಾಗಿಸಿದ ಹೆಣವನ್ನು ನೋಡಿದ ಡಾಕ್ಟರ್ ಅವರು, ರೋಗಿಯಾಗಿದ್ದರೆ ಅಡ್ಮಿಟ್ ಮಾಡಿಕೊಳ್ಳಬಹುದಾಗಿತ್ತು. ಆದರೆ ಈಗಾಗಲೇ ವ್ಯಕ್ತಿ ಸತ್ತಿರುವುದರಿಂದ ಅಡ್ಮಿಟ್ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲವೆಂದು ಹೇಳಿದರು. ಇಷ್ಟೆಲ್ಲಾ ೧೩ನೇ ತಾರೀಖು ಬೆಳಿಗ್ಗೆ ೧೧ ಗಂಟೆಯವರೆಗೆ ನಡೆದಿದೆ. ಇನ್ನುಳಿದವರ ಬಗ್ಗೆ ಕೋರ್ಟಿನಲ್ಲಿ ಪ್ರಸ್ತಾಪ ಮಾಡಿದ್ದರಿಂದ, ಅವರನ್ನೆಲ್ಲಾ ಆ ದಿನ ಸಾಯಂಕಾಲದ ಹೊತ್ತಿಗೆ ಆಸ್ಪತ್ರೆಗೆ ಸೇರಿಸಲು ಸಾಧ್ಯವಾಯಿತು, ಇಲ್ಲದಿದ್ದರೆ ಇನ್ನುಳಿದ ೩ ಜನರನ್ನು ತೆಗೆದುಕೊಂಡು ಹೋಗಿ ಲಕ್ಕವಳ್ಳಿ ಡ್ಯಾಮ್‌ನಲ್ಲಿ ಹಾಕಬೇಕೆಂದು

ಅವರು ತೀರ್ಮಾನ ಮಾಡಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಕೋರ್ಟಿನವರು ಈ ಮೂರು ಜನರನ್ನು ತಮ್ಮ ಮುಂದೆ ಹಾಜರ್‌ಪಡಿಸಬೇಕೆಂದು ಆಜ್ಞೆ ಮಾಡಿದ್ದರಿಂದ ಇವರು ಏನೂ ಮಾಡಲು ಸಾಧ್ಯವಾಗಲಿಲ್ಲ. ನಂತರ ಗ್ಯಾರೇಜ್‌ನಲ್ಲಿ ಒಂದು ಹೆಣ ಇದೆ ಎಂಬುದು ಅಲ್ಲಿನ ಜನರಿಗೆ ತಿಳಿಯಿತು. ಪೋಲೀಸರ ಚಿತ್ರಹಿಂಸೆಗೆ ಒಳಗಾದವರು ಸಾಯುವ ಸ್ಥಿತಿಯಲ್ಲಿದ್ದರೂ ಸಹ ಅವರನ್ನು ಆಸ್ಪತ್ರೆಗೆ ಸೇರಿಸದೆ, ಸತ್ತ ಹೆಣವನ್ನು ಆಸ್ಪತ್ರೆಗೆ ಸೇರಿಸುವಂತಹ ದಯೆಯನ್ನು ಅಲ್ಲಿನ ಪೋಲೀಸರು ತೋರಿಸಿದ್ದಾರೆ. ಇಷ್ಟು ಘಟನೆ ಅಲ್ಲಿ ನಡೆದಿದೆ.

ಇದರ ಬಗ್ಗೆ ಅವನ ಹೇಳಿಕೆಗಳು ಇವೆ. ಇಲ್ಲಿ ಯಾವ ಯಾವ ರೀತಿ ಶಿಕ್ಷೆ ಕೊಟ್ಟಿದ್ದಾರೆ ಎನ್ನುವುದಕ್ಕೆ ಫೋಟೋಗಳಿವೆ. ಈ ಫೋಟೋಗಳನ್ನು ದಯವಿಟ್ಟು ತಾವು ನೋಡಿ. ಮಾನ್ಯ ಮುಖ್ಯ ಮಂತ್ರಿಗಳೂ ಒಂದು ಸಾರಿ ನೋಡಿದರೆ ಒಳ್ಳೆಯದು. ಮಾನ್ಯ ಜೆ. ಹೆಚ್. ಪಟೇಲರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ, ಒಂದು ಸಾರಿ ನೋಡಿದರೆ ಒಳ್ಳೆಯದು. ನಮಗೆ ಗೊತ್ತಿದೆ, ಇವತ್ತು ಹಿಂಸೆ ಇದೆ. ನಮ್ಮ ಸಮಾಜದಲ್ಲಿ ಮಕ್ಕಳನ್ನು ಹೊಡೆಯುತ್ತೇವೆ, ಶಾಲೆಗಳಲ್ಲಿ ಮಕ್ಕಳನ್ನು ಹೊಡೆಯುತ್ತಾರೆ, ಪೋಲೀಸರು ಪೋಲೀಸ್ ಸ್ಟೇಷನ್‌ನಲ್ಲಿ ಹೊಡೆಯುತ್ತಾರೆ ಎನ್ನುವುದು ಗೊತ್ತಿದೆ. ಕೆಲವು ಸಾರಿ ಹೊಡೆಯದೆ, ಬಡಿಯದೆ ಯಾವುದೂ ಪತ್ತೆಯಾಗುವುದಿಲ್ಲ ಎನ್ನುವುದು ಗೊತ್ತಿದೆ. ಪ್ರಶ್ನೆ ಏನೆಂದರೆ, ಯಾವುದೋ ಸಂದರ್ಭದಲ್ಲಿ ಯಾರೋ ಅಕಸ್ಮಾತ್ ಹೊಡೆದರೆ ಹೊಡೆದ ಏಟು ಎಲ್ಲಿಗೋ ಬಿತ್ತು ಅವನು ಸತ್ತು ಹೋದ ಎನ್ನತಕ್ಕಂಥ ಘಟನೆಯಲ್ಲ ಇದು. ಸುಮ್ಮಸುಮ್ಮನೆ ತೆಗೆದುಕೊಂಡು ಹೋಗಿ ವಾರಗಟ್ಟಲೆ ಇಟ್ಟುಕೊಂಡು ಚಿತ್ರಹಿಂಸೆ ಮಾಡಿ, ಮಾಡಿ ಸತ್ತಿದ್ದಾನೆ, ಸತ್ತಮೇಲೂ ನೋಡುವುದಕ್ಕೆ ಆಗದ ರೀತಿ ಸುಡುತ್ತಾರೆ ಅಂದರೆ ಇಂತಹ ಪೋಲೀಸರನ್ನು ಇಟ್ಟುಕೊಂಡು ಯಾವ ಉದ್ಧಾರ ಮಾಡಬಹುದು. ದಯವಿಟ್ಟು ನೀವು ಯೋಚನೆ ಮಾಡತಕ್ಕಂಥ ಪ್ರಸಂಗ ಇದೆ. ಇದಕ್ಕಿಂತ ನಮಗೆ ಬೇರೆ ವ್ಯವಸ್ಥೆ ಇಲ್ಲದೇ ಇರಬಹುದು, ಅದು ಬೇರೆ ವಿಚಾರ. ಆದರೆ ಈರೀತಿ ಏಕೆ ಆಗುತ್ತಿದೆ? ಇವತ್ತು ಅವರು ಯಾರನ್ನು ಹಿಡಿದಿದ್ದಾರೆ ಅವರು ಪರಿಪೂರ್ಣ ಸಂಭಾವಿತರಾಗಿರತಕ್ಕಂಥ ನಾಗರೀಕರು ಇಲ್ಲದೇ ಇರಬಹುದು. ಅವರ ಮೇಲೆ ಸಣ್ಣಪುಟ್ಟ ಚಾರ್ಜಸ್ ಇದೆ ಎಂದು ಹೇಳುತ್ತಾರೆ. ಪೋಲೀಸರು ಬಚಾವ್ ಆಗುವುದಕ್ಕೆ ಅಂಥಾದ್ದು ಇತ್ತು, ಇಂಥಾದ್ದು ಇತ್ತು ಎಂದು ಹೇಳುತ್ತಾರೆ. ಆದರೆ ನಿಜವಾಗಿ ಯಾವುದೂ ಕೇಸ್ ರಿಜಿಸ್ಟರಾಗಿಲ್ಲ, ಕನ್ವಿಕ್ಷನ್ ಏನೂ ಆಗಿಲ್ಲ. ಇವತ್ತು ನನಗೆ ಒಬ್ಬರಿಂದ ಕಾಗದ ಬಂದಿದೆ. ಒಬ್ಬ ನಕ್ಸಲೈಟ್ ಬರೆದಿರತಕ್ಕಂಥ ಕಾಗದ ಇದು. ಇದು ಇವತ್ತು ರಿಜಿಸ್ಟರ್ ಪೋಸ್ಟ್‌ನಲ್ಲಿ ನಾನು ಇಲ್ಲೇ ಕುಳಿತಿದ್ದಾಗ ಬಂದಿರುವುದು. ಈ ವ್ಯಕ್ತಿ ಸ್ವಲ್ಪ ಕಾಲದ ಹಿಂದೆ ನನ್ನನ್ನು ಭೆಟ್ಟಿಯಾಗಿದ್ದ. ಸಮಾಜದಲ್ಲಿ ಕ್ರಾಂತಿ ತರುತ್ತೇನೆ ಎಂದುಹೇಳಿದ ನಿಮ್ಮನ್ನೂ ಭೆಟ್ಟಿಯಾಗುತ್ತೇನೆ ಎಂದು ಹೇಳಿದ ಭೇಟಿಮಾಡಿ ಮಾತನಾಡು ಎಂದು ಹೇಳಿದೆ. ಅವನಲ್ಲಿ ಅರೆಬೆಂದ ಅಭಿಪ್ರಾಯಗಳು ಇತ್ತು. ಆದುದರಿಂದ ನಾನು ಸ್ಪಷ್ಟವಾಗಿ ಹೇಳಿದೆ, ಸಮಾಜ ಸುಧಾರಣೆ ಮಾಡುವುದಕ್ಕೆ ಬೇಕಾದಷ್ಟು ಮಾರ್ಗ ಇದೆ, ಹೋರಾಟ ಮಾಡುವುದಕ್ಕೆ ಕ್ರಮ ಇದೆ, ಅದನ್ನು ಮಾಡು ಈರೀತಿ ಮಾಡಲಿಕ್ಕೆ ಹೋಗಬೇಡಿ ಎಂದು ಹೇಳಿದೆ. ಅವನು ಇದರಲ್ಲಿ ಬರೆದಿದ್ದಾನೆ, ''ನೆನಪು ಇರಬಹುದು, ಆಗ ನನ್ನ ಸಿದ್ಧಾಂತವನ್ನು ಅರ್ಧಬೆಂದ ಉಪಾಯಗಳು ಎಂದು ಹೇಳಿದ್ದಿರಿ'' ಎಂದು ಟೀಕಿಸಿದ್ದಾನೆ. ಇವರಲ್ಲಿ ಇಬ್ಬರು ನನ್ನ ಸಹಚರರು, ಸಮಾಜದಲ್ಲಿ ಒಂದು ಕಡೆ ಅನ್ನ ತಿಂದು ತೇಗಿದ್ದಾರೆ, ಇನ್ನೊಂದು ಕಡೆ ಎಂಜಲು ತಿನ್ನುತ್ತಾ ಇರುತ್ತಾರೆ. ಈ ಸಮಾಜದಲ್ಲಿ ಬದಲಾವಣೆ ಮಾಡುವುದಕ್ಕೆ ಇವರನ್ನು ನಾನು ಉಪಯೋಗ ಮಾಡಿಕೊಂಡಿದ್ದೇನೆ ಎಂದು ಬರೆದಿದ್ದಾನೆ. ಇವರು ಯಾರು ಅಂದರೆ ತುಂಬ ಬಡ ಕುಟುಂಬಕ್ಕೆ ಸೇರಿದಂಥ ವ್ಯಕ್ತಿ ಗುರುಮೂರ್ತಿ ಎನ್ನುವವರ ತಾಯಿ ಹೂವು, ಹಣ್ಣು ಮಾರಿಕೊಂಡು ಜೀವನ ಮಾಡತಕ್ಕಂಥವರು, ಕಲ್ಲು ಹೊಡೆದು ಜೀವನ ಮಾಡುವಂಥವರೇ ಹೊರತು, ಬೇರೆ ಇನ್ನಾವುದೇ ಬಹಳ ದೊಡ್ಡ ಕಳ್ಳ ವ್ಯಾಪಾರ, ಬಹಳ ದೊಡ್ಡ ಗೂಂಡಾಗಿರಿ ಮಾಡತಕ್ಕಂಥ ಶಕ್ತಿ ಇರುವ ಜನಗಳಲ್ಲ. ಗೂಂಡಾಗಳನ್ನು ನಿಯಂತ್ರಣ ಮಾಡಬೇಕು ಎಂದು ಮಾನ್ಯ ರಾಚಯ್ಯನವರು ಹಿಂದೆ ಬ್ರಹ್ಮಾಸ್ತ್ರವನ್ನು ಪಡೆದುಕೊಂಡಿದ್ದಾರೆ. ಗೂಂಡಾ ನಿಶೇಧ ಕಾಯಿದೆಯನ್ನು ಇಟ್ಟುಕೊಂಡಿದ್ದೀರಿ. ಅದನ್ನು ಪ್ರಯೋಗ ಮಾಡಿ ಡಿಟೆನ್‌ಷನ್‌ನಲ್ಲಿಡಿ, ಒಂದು ವರ್ಷ, ಎರಡು ವರ್ಷ ಇಟ್ಟು, ಬಿಡಿ. ಯಾರೂ ಬೇಡ ಎಂದು ಹೇಳುತ್ತಾ ಇರಲಿಲ್ಲ. ಅಂಥಾದ್ದು ಏನೂ ಇಲ್ಲ. ಆದರೆ ಇವರನ್ನು ಹಿಡಿದು ಈ ರೀತಿ ಚಿತ್ರಹಿಂಸೆ ಕೊಟ್ಟು ಇಬ್ಬರನ್ನು ಕೊಂದು ಹಾಕಿದ್ದಾರೆ. ಉಳಿದ ಜನರು ಮರಣಾವಸ್ಥೆಯಲ್ಲಿದ್ದರು. ಶಿವಮೊಗ್ಗ ಆಸ್ಪತ್ರೆಯಲ್ಲಿ ಡಾಕ್ಟರ,

ಇನ್ನು ಸ್ವಲ್ಪ ಹೊತ್ತು ಇದ್ದರೆ ಮತ್ತೊಬ್ಬ ಸತ್ತುಹೋಗುತ್ತಿದ್ದ ಎಂದು ಹೇಳಿದ್ದಾರೆ. ಅವರು ಚಿಕಿತ್ಸೆ ಪಡೆಯುತ್ತಾ ಇದ್ದಾರೆ. ನಂತರ ಪೋಲೀಸ್ ಹೆಡ್ ಕಾನ್‌ಸ್ಟೇಬಲ್ ಮತ್ತು ಉಳಿದ ೬ ಜನರನ್ನು ದಸ್ತಗಿರಿ ಮಾಡಿ ಅವರ ಮೇಲೆ ಕೇಸನ್ನು ಹಾಕುವುದಕ್ಕೆ ಏರ್ಪಾಟುಮಾಡಿ ಪೋಲೀಸ್ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಇದು ಎಷ್ಟು ಕಾಲದ ನಂತರ ಆಯಿತು ಅಂದರೆ ಸುಮಾರು ೪೮ ಗಂಟೆಗಳ ನಂತರ ಬಂಧನ ಆಯಿತು. ಈ ಅವಧಿಯಲ್ಲಿ ತನ್ಮಧ್ಯದಲ್ಲಿ ಅವರು ಬೆಂಗಳೂರಿಗೆ ಬಂದು ಬೇಲ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು, ಆಮೇಲೆ ಆಂಧ್ರಪ್ರದೇಶಕ್ಕೆ ಓಡಿ ಹೋಗುವುದಕ್ಕೆ ಎಲ್ಲಾ ಸಂಚು ಮಾಡಿದರು ಸ್ಥಳೀಯ ಪೋಲೀಸರ ಬೆಂಬಲದಿಂದ. ಶ್ರೀನಿವಾಸ ಆಳ್ವರವರು ಕಂಗಾಲಾಗಿದ್ದರು, ನಾನು ಹೇಳಿದೆ. ಇವರೂ ತಪ್ಪಿಸಿಕೊಂಡು ಹೋದರೆ ಹೇಗೆ? ಈಗಾಗಲೇ ಸರ್ಕಾರ ಸಂಪೂರ್ಣವಾಗಿ ಮಸಿ ಬಳಿದಿದೆ, ಇವರೂ ತಪ್ಪಿಸಿಕೊಂಡು ಹೋಗಿಬಿಟ್ಟರೆ ಇನ್ನೇನೂ ಉಳಿಯುವುದಿಲ್ಲ. ಅವತ್ತು ಬಂಧನ ಮಾಡಿದ್ದಾರೆ. ಬರೀ ಅಷ್ಟೇ ಕಾನ್‌ಸ್ಟೇಬಲ್ಸ್ ಮಾಡಿರತಕ್ಕಂಥಾದ್ದಲ್ಲ, ಇನ್ನೂ ಬೇರೆ ಅಧಿಕಾರಿಗಳು ಎದುರುಗಡೆ ಇದ್ದರು ಎಂದು ಸ್ಟೇಟ್‌ಮೆಂಟ್‌ನಲ್ಲಿದೆ.

ಇದು ಕೊಲೆ ಪ್ರಕರಣದಲ್ಲಿ ಪರ್ಯಾವಸಾನವಾಗಿರತಕ್ಕ ಸೂಕ್ಷ್ಮ ವಿಚಾರ. ಇಂಥವನು ಇದ್ದ, ಇಂಥವನು ಇಲ್ಲ ಎನ್ನುವ ವಿಚಾರವಲ್ಲ. ಪೋಲೀಸಿನವರು ಮಾಡಿರುವ ದೌರ್ಜನ್ಯವನ್ನು ಮುಚ್ಚುವುದಕ್ಕೆ ಸ್ಥಳದಲ್ಲಿರತಕ್ಕ ಪೋಲೀಸಿನವರು ಎಷ್ಟರಮಟ್ಟಿಗೆ ನಾಳೆ ಇದರ ಬಗ್ಗೆ ಸರಿಯಾದಂಥ ಕ್ರಮ ತೆಗೆದುಕೊಳ್ಳಬಹುದು, ಎನ್ನುವುದರ ಬಗ್ಗೆ ನಾವೆಲ್ಲಾ ಗಂಭೀರವಾಗಿ ಯೋಚನೆ ಮಾಡಬೇಕು. ನಮಗಿಂತ ಸರ್ಕಾರದವರು ಹೆಚ್ಚು ಗಂಭೀರವಾಗಿ ಯೋಚನೆ ಮಾಡಬೇಕು. ಸ್ಥಳದಲ್ಲಿರತಕ್ಕ ಪೋಲೀಸಿನವರು ಮೇಲುಗಡೆ ಇರತಕ್ಕ ಆಫೀಸರ್ ನಮಗೆ ನಂಬಿಸಿದ್ದಾರೆ. ನಮಗೆ ಏನೇ ಆದರೂ ಬಿಡಿಸುತ್ತಾರೆ, ನೀವು ಏನೇ ಹೇಳಿಕೊಂಡರೂ ಚಿಂತೆಯಿಲ್ಲ ಎನ್ನುವ ಮಟ್ಟಿಗೆ ಜನಗಳ ಭಾವನೆ ಇದೆ. ಇದು ಸತ್ಯ ಇರಬಹುದು, ಅಸತ್ಯ ಇರಬಹುದು. ಪೋಲೀಸಿನವರಿಂದ ನಿಂದಿತವಾಗಿಯೂ ಯಾವುದೇ ರೀತಿಯಲ್ಲಿಯೂ ನ್ಯಾಯವಾದಂಥ ಶಿಕ್ಷೆ ಇವರುಗಳಿಗೆ ಆಗುವುದಿಲ್ಲ ಎನ್ನತಕ್ಕ ವಿಚಾರ ಕೂಡ ಜನರ ಮನಸ್ಸಿನಲ್ಲಿ ಆ ಒಂದು ಭಾವನೆ ಮೂಡಿದೆ. ನಾನು ಸಿ.ಬಿ.ಐ, ಅಂದರೆ, ನೀವೂ ಬೇರೆ ಪಾರ್ಟಿಯವರು ಹಾಗೆ ಹೇಳುತ್ತೀರೆಂದು ಹೇಳುತ್ತಾರೆ. ಸಿ.ಓ.ಡಿ, ಅಂದರೆ ಆ ದೇವರೇ ಕಾಪಾಡಬೇಕು. ಭದ್ರಾವತಿಯಲ್ಲಿ ಜಂಬರ್‌ಘಟ್ಟೆಯಲ್ಲಿ ಗಲಾಟೆ ನಡೆದು ನೂರ್‌ಜಾನ ಮರ್ಡರ್ ಸಂಬಂಧದಲ್ಲಿ ಸಿ.ಓ.ಡಿ.ಗೆ ಹಾಕಿದರು. ರಾಚಯ್ಯನವರು ಇಲ್ಲಿಯೇ ಹೇಳಿಕೆ ಕೊಟ್ಟರು. ಮರ್ಡರ್ ಅಗಿದ್ದನ್ನು ಸೂಯಿಸೈಡ್ ಎಂದು ಹೇಳಿದರು. ಈಗ ಮತ್ತೊಬ್ಬ ಅಧಿಕಾರಿಯನ್ನು ಹಾಕಿದ್ದಾರೆ. ಲಂಚ ಹೊಡೆದಿದ್ದಾನೆಂದು ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದರು. ಇವತ್ತಿನವರೆಗೂ ಅದು ಪತ್ತೆಯಾಗಿಲ್ಲ. ಈ ರೀತಿ ಪೋಲೀಸಿನವರು ನಿಷ್ಕ್ರಿಯರಾದರೆ ಹೇಗೆ? ಚನ್ನಗಿರಿ ತಾಲ್ಲೂಕು ಗೊಪ್ಪೇನಹಳ್ಳಿ ಮಂಡಲ ಪಂಚಾಯ್ತಿ ಆಫೀಸಿನೊಳಗೆ ಶೇಖರಪ್ಪ ಎನ್ನುವವನ್ನು ಕೊಲೆ ಮಾಡಿದರು. ಆತ ನೇಣು ಹಾಕಿಕೊಂಡು ಸತ್ತಿದ್ದಾನೆಂದು ಹೇಳಿದರು. ಮಂಡಲ್ ಪಂಚಾಯ್ತಿ ಆಫೀಸ್ ಲಾಕಪ್ಪೇ. ನೇಣು ಹಾಕಿಕೊಂಡು ಸತ್ತಿದ್ದಾನೆಂದರೆ ಹೇಗೆ ನಂಬಲಿಕ್ಕೆ ಸಾಧ್ಯ. ನಿಷ್ಪಕ್ಷಪಾತವಾಗಿ ಪೋಲೀಸರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆಯೇ? ನಿರ್ವಹಿಸಿದ್ದಾರೆ ಎನ್ನುವುದಕ್ಕೆ ಯಾವ ಎವಿಡೆನ್ಸ್ ಇದೆ. ಶಿವಮೊಗ್ಗದಲ್ಲಿ ತಮ್ಮ ಎದುರಿಗೇ ಜೈಲ್ ಅಧಿಕಾರಿಗಳನ್ನು ಪೋಲೀಸಿನವರು ತಂದು ಹೊಡೆದರು. ಆ ಸಂದರ್ಭದಲ್ಲಿ ಎರಡು ಜನ ಸಬ್ ಇನ್ಸ್‌ಪೆಕ್ಟರುಗಳನ್ನು ಮಾನ್ಯ ರಾಚಯ್ಯನವರೇ ತಮ್ಮ ಸ್ವಂತ ಹಸ್ತಾಕ್ಷರದಲ್ಲಿ ಬರೆದು ಸಸ್ಪೆಂಡ್ ಮಾಡಿದರು. ಅದೇ ಜನರನ್ನು ಮಾರನೆಯ ದಿವಸ ಎಸ್.ಪಿ.ಯವರು ರೀಇನ್‌ಸ್ಟೇಟ್ ಮಾಡಿದ್ದಾರೆ. ರಿವೋಕ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಫೈಲು ನಿಮ್ಮ ಕನ್‌ಕರೆನ್ಸ್‌ಗೆ ಬರಬೇಕಲ್ಲ ಎಂದು ರಾಚಯ್ಯನವರನ್ನು ಕೇಳಿದರೆ, ರಿವೋಕ್ ಮಾಡಿದ್ದಾನೆ. ನಾನು ಮಾಡಬೇಕು ಎಂದು ನಮ್ಮನ್ನು ಕೇಳುತ್ತಾರೆ ನೀವು ಮಂತ್ರಿಗಳೋ, ಎಸ್.ಪಿ. ಮಂತ್ರಿಗಳೋ ಎಂದು ನೇರವಾಗಿ ಅವರನ್ನೇ ಕೇಳಿದೆ, ಕಡೆಯತನಕ ಯಾವ ಪ್ರಯತ್ನವನ್ನು ಅವರು ಮಾಡಲಿಲ್ಲ. ಈಗ ಮಾನ್ಯ ಜಾಲಪ್ಪನವರು ಪೋಲೀಸ್ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ನಾನು ಕೇಳುವುದು ಇಷ್ಟೆ, ಇದರಲ್ಲಿ ಏನಾಗುತ್ತದೆಂದರೆ ಒಂದುರೀತಿಯ ಜಾಗೀರ್ ವ್ಯವಸ್ಥೆ ಇರುವುದು ಸರಿಯಲ್ಲ. ಮಾನ್ಯ ಪಟೇಲರ ಬಗ್ಗೆ ನನಗೆ ಅಪಾರವಾದಂಥ ಗೌರವ ಇದೆ. ನಾನು ಅದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಯಾವುದೇ ಸಮಸ್ಯೆ ಬಂದರೂ ಜಾತಿ ಮತವನ್ನು ಮೀರಿ ಯೋಚನೆ ಮಾಡಬಲ್ಲರು. ಆದರೆ, ಅವರಿಗೆ ಯಾವುದು ಹೌದು ಯಾವುದು ಅಲ್ಲ, ಎನ್ನುವುದನ್ನು ಯೋಚನೆ ಮಾಡುವುದಕ್ಕೆ ಪುರುಸೊತ್ತು ಇಲ್ಲ. ನಾನು ಅವರನ್ನು

ಕನ್‌ವಿನ್ಸ್ ಮಾಡಬಹುದು ಎನ್ನುವ ವಿಶ್ವಾಸ ಇದೆ, ಅವರನ್ನು ಹುಡುಕುವುದು ಎಲ್ಲಿ. ಅವರು ನನಗೆ ಸಿಗುವುದೇ ಕಷ್ಟವಾಗಿದೆ. ಅವರು ಎಲ್ಲಿಗೆ ಹೋಗುತ್ತಾರೋ ಗೊತ್ತಿಲ್ಲ. ಮಂತ್ರಿಪದವಿಯಲ್ಲಿ ಏನು ಮಾಡುತ್ತಾರೆನ್ನುವುದಕ್ಕೆ ಯಾವ ಇಲಾಖೆಯಲ್ಲಿಯೂ ಎವಿಡೆನ್ಸ್ ಸಿಕ್ಕಿಲ್ಲ. ನಮ್ಮ ಜಿಲ್ಲೆಯ ಉಸ್ತುವಾರಿ ಅವರ ಕೈಯಲ್ಲಿದೆ. ಎಸ್. ಪಿ.ಯವರು ಅವರ ಜಾತಿಯೋ ಬಂಧುವೋ ನನಗೆ ಗೊತ್ತಿಲ್ಲ ಅವನ ತಲೆಯಲ್ಲಿ ತಾನು ಹೇಳಿದ್ದೇ ಸರಿ ಎನ್ನುವ ಭಾವನೆ ಇದೆ. ಕೆಲವು ಪ್ಯಾದೆಗಳನ್ನು ಸಾಕಿಕೊಂಡಿದ್ದಾನೆ. ಅವರು ಚಾರಾಯಿಖೂನ್ ಮಾಡಿದರೂ ಮಾಫ್ ಆಗುತ್ತದೆ, ಪ್ರೊಮೋಷನ್ ಸಿಗುತ್ತದೆ ಎನ್ನುವ ಮಟದಲ್ಲಿದ್ದಾರೆ. ಈ ರೀತಿಯ ಜಾಗೀರ್ ವ್ಯವಸ್ಥೆ ಸರಿಯಲ್ಲ. ಇಂಥ ಜಾಗೀರ್ ವ್ಯವಸ್ಥೆಯಿಂದ ಯಾವ ಪ್ರಯೋಜನವೂ ಇಲ್ಲ. ಬೇರೆ ವ್ಯವಸ್ಥೆ ಮಾಡಿ, ಯಾವ ಅಧಿಕಾರಿಗಳೇ ಆಗಲಿ ಅವರು ಮಾಡಿದ್ದೆಲ್ಲಾ ಮಾಫ್ ಮಾಡುವಂಥ ಭರವಸೆ ಬರುವ ರೀತಿಯಲ್ಲಿ ವರ್ತನೆ ಮಾಡಬಾರದು. ಇವತ್ತು ಅದನ್ನು ಮಾಡಿರುವುದರಿಂದಲೇ ಶಿವಮೊಗ್ಗ ಜಿಲ್ಲೆಯಲ್ಲಿ ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಮಾನ್ಯ ಬಸವಣ್ಣಪ್ಪನವರು ಪ್ರೆಸ್ ಕಾನ್‌ಫರೆನ್ಸ್ ಕರೆದು ಪೋಲೀಸ್ ವ್ಯವಸ್ಥೆ ಹದಗೆಟ್ಟಿಲ್ಲವೆಂದು ಹೇಳಿದ್ದಾರೆ. ನೀವು ಹದಗೆಟ್ಟಿಲ್ಲ ಅಂದರೆ, ಜನಕ್ಕೆ ಗೊತ್ತಾಗಿದೆ, ನಿಮಗೆ ಗೊತ್ತಿಲ್ಲ ಅಂದರೆ ನಿಮ್ಮ ದುರಾದೃಷ್ಟ.

ಶ್ರೀ ಜಿ. ಬಸವಣ್ಣಪ್ಪ.—ಪೋಲೀಸ್ ಠಾಣೆಯಲ್ಲಿ ನಡೆದಂಥ ಘಟನೆಯನ್ನು ಖಂಡಿಸಿದ್ದೇನೆ. ಪೋಲೀಸ್ ಇಲಾಖೆ ಹದಗೆಟ್ಟಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಚಂದ್ರಗುತ್ತಿ ಬೆತ್ತಲೆ ಸೇವೆ ಪ್ರಕರಣ, ಜಂಬರ್‌ಗಟ್ಟೆ ಪ್ರಕರಣ, ಪೋಲೀಸಿನವರು ಜೈಲರುಗಳನ್ನು ಹೊಡೆದದ್ದು ಇದೆಲ್ಲಾ ಏನು ತೋರಿಸುತ್ತದೆ? ಮಾನ್ಯ ರಾಚಯ್ಯನವರಿಗೆ ಎರಡೂ ನಿಮ್ಮ ಇಲಾಖೆಗಳೇ, ನೀವು ಕರೆಸಿ ರಾಜೀ ಮಾಡಿ, ದೊಡ್ಡದು ಮಾಡಬೇಡಿ ಎಂದು ಹೇಳಿದ್ದೆ.

ಅಧ್ಯಕ್ಷರೆ, ಈಗ ಏನು ಮಾಡಿದ್ದಾರೆ ಎಂದು ಗೊತ್ತಿದೆ. ಇವರು ಸಸ್ಪೆಂಡ್ ಮಾಡಿದವರು ಎಸ್. ಪಿ. ಅವರು ಅವರೇ ಇದರಲ್ಲಿ ಸಿಕ್ಕಿಬಿದ್ದಿದ್ದಾರೆ. ಇದರಲ್ಲಿ ಸಸ್ಪೆಂಡ್ ಆದಂಥ ಸಬ್ ಇನ್ಸ್‌ಪೆಕ್ಟರ್ ಅದರಲ್ಲಿದ್ದ. ಅವರು ಟ್ರಾನ್ಸ್‌ಫರ್ ಮಾಡಿಕೊಂಡು ಹೋಗಿದ್ದರೆ ಅದರಲ್ಲಿ ಸಿಕ್ಕಿ ಬೀಳುತ್ತಾ ಇರಲಿಲ್ಲ. ಇವರು ಏನು ಮಾಡಿದ್ದಾರೆ ಅಂದರೆ ಸಸ್ಪೆನ್‌ಷನ್ ಆಗಿದ್ದುದು ಒಂದೇ ಅಲ್ಲದೆ, ಪೋಲೀಸನವರಿಗೆ ಆ ಜೈಲಿನ ಅಧಿಕಾರಿಗಳನ್ನು ಪ್ರಾಸಿಕ್ಯೂಟ್ ಮಾಡಲಿಕ್ಕೆ ಪರ್‌ಮಿಷನ್ ಕೊಟ್ಟಿದ್ದಾರೆ. ಆ ಜೈಲಿನ ಅಧಿಕಾರಿಗಳು ಅದೇ ಪರ್‌ಮಿಷನ್ ಕೇಳಿದ್ದಾರೆ ಅವರಿಗೆ ಇದುವರೆಗೂ ಕೊಟ್ಟಿಲ್ಲ. ಇಬ್ಬರಿಗೂ ರಸ್ತೆಯ ಮೇಲೆ ಹೊಡೆದಾಡಲಿಕ್ಕಾದರೂ ಬಿಡಿ, ಇಲ್ಲದೇ ಇದ ರೆ ಕೋರ್ಟಿನಲ್ಲಿಯಾದರೂ ಹೊಡೆದಾಡಲಿಕ್ಕೆ ಬಿಡಿ, ಇಲ್ಲದೇ ಇದ್ದರೆ ರಾಜಿಯನ್ನಾದರೂ ಮಾಡಿ ಈ ಮೂರರಲ್ಲಿ ಯಾವುದಾದರೂ ಮಾಡಿ ಇಲಾಖೆಯ ಸ್ಥೈರ್ಯ ಮತ್ತು ಸರ್ಕಾರದ ಮರ್ಯಾದೆಯನ್ನು ಕಾಪಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಈ ಮೂರರಲ್ಲಿ ಯಾವುದನ್ನೂ ಮಾಡದೇ ಇದ್ದರೆ ನಾವು ಯಾರಿಗೆ ಹೇಳಬೇಕು ಇವೊತ್ತು ಜೈಲರ್ ಇವರನ್ನು ಪ್ರಾಸಿಕ್ಯೂಟ್ ಮಾಡಲಿಕ್ಕೆ ಪೋಲೀಸ್‌ನವರಿಗೆ ಪರ್‌ಮಿಷನ್ ಕೊಟ್ಟು ಪೋಲೀಸಿನವರು ಸಸ್ಪೆಂಡ್ ಆದರೂ ಅಂದರೆ ಏತಕ್ಕೆ ಆದರೂ ಎಂದು ಇಲ್ಲ, ರಿವೋಕ್ ಯಾರು ಮಾಡಿದರು ಎಂದು ಇಲ್ಲ. ಯಾರು ಹೇಳುವವರು ಕೇಳುವವರು ಇಲ್ಲ. ನಾನು ಹೋದ ಸಾರಿ ಬ್ರೀಚ್ ಆಫ್ ಪ್ರಿವಿಲೇಜ್ ಮೂವ್ ಮಾಡಿದ್ದೆ ಅಷ್ಟು ಹೊತ್ತಿಗೆ ಇಲ್ಲಿ ಏನೇನೋ ಗಲಾಟೆ ಆಯಿತು. ಮಾನ್ಯ ರಾಚಯ್ಯನವರು ಪೋರ್ಟ್‌ಪೋಲಿಯೋ ಬಿಟ್ಟು ಹೋದರು ಏತಕ್ಕೆ ಎಂದು ನಾನು ಸುಮ್ಮನೆ ಆದೆ. ಇದರಲ್ಲಿ ನಿಮ್ಮ ಜವಾಬ್ದಾರಿ ಇಲ್ಲವೇ ಅವರು ಏತಕ್ಕೆ ಸಸ್ಪೆಂಡ್ ಆದರು. ಅವರನ್ನು ಏತಕ್ಕೆ ರಿವೋಕ್ ಮಾಡಿದರು ಅದರ ಬಗ್ಗೆ ಜವಾಬ್ದಾರಿ ಬೇಡವೇ? ಏನು ಭಾವನೆ ಬಂದಿದೆ. ಇಲ್ಲಿರತಕ್ಕಂತಹವರು ಯಾರೇ ಆಗಲಿ, ಜನತಾ ಪಕ್ಷದಲ್ಲಿರತಕ್ಕಂತಹವರು ನಮಗಿಂತಲೂ ಬಹಳ ಕಡಿಮೆಯವರು ಅವರಿಗೆ ಬಡವರ ಬಗ್ಗೆ ಕಳಕಳಿ ಇಲ್ಲ ಎನ್ನತಕ್ಕಂಥ ಉದ್ಧಟತನದ, ಅವಿವೇಕದ ಮಾತನ್ನು ನಾನ ಹೇಳುವುದಿಲ್ಲ. ಪ್ರತಿಯೊಂದು ಪಕ್ಷ ಇರಲಿ, ವ್ಯಕ್ತಿ ಇರಲಿ, ಯಾರ ಬೆಂಬಲದಿಂದ ಗೆಲ್ಲುತ್ತೇವೆ ಅವರ ಆಟಾಟೋಪಗಳನ್ನು ನಿಯಂತ್ರಿಸುವುದಕ್ಕೆ ಶಕ್ತಿ ಇಲ್ಲದೇ ಇದ್ದರ ಅವಕ್ಕೆ ನಾವು ಬಲಿಯಾಗುತ್ತೇವೆ. ಇವೊತ್ತು ಏನಾಗಿದೆ, ನೀವು ಜನಗಳಿಂದ ಗೆದಿದ್ದೀರಿ. ಒಂದು ಪೋರ್‌ಷನ್ ಬಡವರು ಓಟು ಕೊಟ್ಟಿದ್ದಾರೆ. ಬಡವರ ಓಟು ಬರದೇ ಯಾರು ಈ ದೇಶದಲ್ಲಿ ಗೆಲ್ಲಲಿಕ್ಕೆ ಆಗುವುದಿಲ್ಲ. ಆದ್ದರಿಂದ ನಿಮಗೂ ಬಂದ್ರ

ಪ್ರೋರ್‌ಷನ್ ಓಟುಗಳು ಬಂದೇ ಬಂದಿರಬೇಕು. ಇವೊತ್ತು ನೀವು ಬಡವರ ಓಟಿನಿಂದ ನಾವು ಗೆದ್ದಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳುತ್ತಿಲ್ಲ. ಇವೊತ್ತು ನಿಮ್ಮನ್ನು ಗೆಲ್ಲಿಸಿದ ದೊಡ್ಡ ಮಹಾನ್ ಬೃಹಸ್ಪತಿ ಇವನೇ ಎನ್ನುವ ಭ್ರಮೆಯಿಂದ ಸರ್ಕಾರ ನಡೆಸುತ್ತಿದ್ದೀರಿ. ಊರಿನಲ್ಲಿರತಕ್ಕವರು ನಮ್ಮದು ಸರ್ಕಾರ ಎಂದು ಅವರು ಹೇಳುತ್ತಾರೆ. ಯಾರಿಗೆ ಹಣ ಇದೆ, ಯಾರಿಗೆ ಶಕ್ತಿ ಇದೆ, ಯಾರಿಗೆ ಬೆಂಬಲ ಇದೆ ಅವರು ಇದು ನಮ್ಮ ಸರ್ಕಾರ ಗುತ್ತಿಗೆ ಹಿಡಿದುಕೊಂಡಿದ್ದೇವೆಂದು ಹೇಳಿ ಕುತ್ತಿಗೆ ಹಿಡಿಯುತ್ತಾ ಇದ್ದರೂ ತಾವು ಸುಮ್ಮನೆ ಕುಳಿತುಕೊಂಡರೆ ಹೇಗೆ ? ಒಟ್ಟಿನಲ್ಲಿ ತಾತ್ಪರ್ಯ ಏನಾಗುತ್ತದೆ, ಉಳ್ಳವರ ಮತ್ತು ಬಲಿಷ್ಟರ ಸರ್ಕಾರವಾಗುತ್ತದೆ. ನೀವು ಹಲವಾಲರು ಪ್ರಯತ್ನಗಳನ್ನು ಮಾಡುತ್ತಿದ್ದೀರಿ ಯಾರೂ ಇಲ್ಲದೇ ಇರತಕ್ಕಂಥ ದುರ್ಬಲರಿಗೆ ನಿಮ್ಮ ಸರ್ಕಾರವನ್ನು ಒಪ್ಪಿಸುವುದಕ್ಕೆ ನಿಮ್ಮ ಪರವಾಗಿ ಬಗ್ಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ನೀವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ, ತಾವು ಅಪ್ರಾಮಾಣಿಕವಾಗಿ ಮಾಡಿದರೆ ಅದು ಆಗುವುದಿಲ್ಲ. ಯಾರೋ ಒಬ್ಬರಿಗೆ ಎಂ.ಎಲ್‌.ಸಿ. ಮಾಡಿಬಿಟ್ಟೆ ಮತ್ತೊಂದು ಮಾಡಿಬಿಟ್ಟೆ ಅಂದರೆ ಆಗುವುದಿಲ್ಲ. ಲಂಬಾಣಿ ಜನಾಂಗದ ಕಾನ್‌ಫರೆನ್ಸಿನಲ್ಲಿ ಮಾನ್ಯ ಬಸವಣ್ಣಪ್ಪನವರು ಬಹಳ ಚೆನ್ನಾಗಿ ಭಾಷಣ ಮಾಡಿ ಹೊರಟು ಹೋದರು. ಆವರು ನನ್ನ ಭಾಷಣವನ್ನು ಕೇಳಲಿಕ್ಕೆ ಇರಲಿಲ್ಲ, ಅವರು ಇದ್ದಿದ್ದರೆ ಚೆನ್ನಾಗಿತ್ತು. ಲಂಬಾಣಿಯವರ ಓಟುಗಳೆಲ್ಲಾ ಇವರಿಗೆ ಗುತ್ತಿಗೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಯಾರೋ ಒಬ್ಬರಿಗೆ ಎಂ.ಎಲ್‌.ಸಿ. ಮಾಡಿದರೆ ಆಗುವುದಿಲ್ಲ, ಲಕ್ಷ್ಮಣ ನಾಯಕನ ಕೊಲೆಯಾದ ೪೮ ತಾಸಿನಲ್ಲಿ ಅವರ ಜನಾಂಗಕ್ಕೆ ಇದು ಹೌದು, ಇದು ನನ್ನ ಸರ್ಕಾರ ಎಂದು ಬರುವ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಮಾಡಿದ್ದೀರಾ ? ಆ ರೀತಿ ತಾವು ಕಾರ್ಯ ನಿರ್ವಹಿಸಿ ಮಾಡಿದ್ದರೆ ಅವರು ಖಂಡಿತ ನಿಮ್ಮ ಪರವಾಗಿ ಬಂದೇ ಬರುತ್ತಾರೆ. ಇಲ್ಲಿ ನಿಮ್ಮ ಸರ್ಕಾರ ಇರಬಹುದು, ಕರ್ನಾಟಕದ ದುರಾದೃಷ್ಟ ಎಲ್ಲಿಯವರೆಗೆ ಇರುತ್ತದೆ ಅಲ್ಲಿನವರೆಗೆ ನಿಮ್ಮ ಸರ್ಕಾರ ಮುಂದುವರೆಯಬಹುದು. ಆದರೆ, ನಿಮಗೆ ಕೊಟ್ಟಂತಹ ಒಂದು ಅವಕಾಶವನ್ನು ನೀವು ಸಾರ್ಥಕಪಡಿಸಬೇಕೆನ್ನುವುದು ಇದ್ದರೆ, ಯಾರಿಗೂ ಕುತ್ತಿಗೆ ಹಿಡಿದುಕೊಳ್ಳುವುದಕ್ಕೆ ಬಿಡುವುದಿಲ್ಲ ಎಂದು ಹೇಳಬೇಕು. ಯಾರು ದಲಿತರು. ದುರ್ಬಲರು ಇದ್ದಾರೆ. ಯಾರು ನಿಜವಾಗಿ ಹಿಂದುಳಿದವರು ಇದ್ದಾರೆ, ಯಾರು ಶೋಷಣೆಗೆ ತುತ್ತಾಗತಕ್ಕ ಜನರು ಇದ್ದಾರೆ ಅವರಿಗೆ ವಿಶ್ವಾಸ ಮಾಡಬೇಕೆಂದು ಇದ್ದರೆ, ದಯವಿಟ್ಟು ಈ ವ್ಯವಸ್ಥೆ ಬದಲಾವಣೆ ಮಾಡಬೇಕು.

ಪಿ. ಎಂ. ೫-೩೦

ಶಿವಮೊಗ್ಗದಲ್ಲಿರತಕ್ಕ ಪೋಲೀಸ್ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಅಲ್ಲಿರುವ ಎಸ್‌.ಪಿ. ಯಾರಿದ್ದಾನೆ ಅವನು ಯೂಸ್‌ಲೆಸ್ ಅಂತ ಎಲ್ಲಾ ಕಡೆಯಿಂದಲೂ ಗೊತ್ತಾಗಿದೆ ಮಾನ್ಯ ಜೆ.ಹೆಚ್‌. ಪಟೇಲ್‌ರವರಿಗೆ ಯಾರು ಬೇಕೋ ಅವರನ್ನು ಹಾಕಿಕೊಳ್ಳಿ. ನೀವು ಮಾಡಿದಾಗ ನಾವು ಯಾವಾಗಲಾದರೂ ತಕರಾರು ಮಾಡಿದ್ದೇವೆಯೇ? ನಿಮಗೆ ಯಾರು ಬೇಕೋ ಅವರನ್ನು ಹಾಕಿಕೊಳ್ಳಿ. ನಿಮಗೆ ಇಷ್ಟ ಬಂದವರನ್ನು ಹಾಕಿಕೊಳ್ಳಿ. ಆದರೆ ನಿಮ್ಮ ಹೆಸರಿನಲ್ಲಿ ಮಾಡಬಾರದ್ದನ್ನು ಮಾಡದೇ ಇರತಕ್ಕವರನ್ನು ಹಾಕಿಕೊಳ್ಳಿ......

ಶ್ರೀ ಜೆ.ಹೆಚ್‌. ಪಟೇಲ್‌.— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಯಾವುದೇ ಅಧಿಕಾರಿಯ ಮೇಲೂ ಇದುವರೆಗೆ ಆಪಾದನೆಯನ್ನು ಮಾಡಿದ್ದು ನನಗೆ ನೆನಪಿಲ್ಲ. ಆದರೆ ಈಗ ಆ ಎಸ್‌ ಪಿ.ಯ ಬಗ್ಗೆ ಈ ತರಹ ವಿನಾಕಾರಣ ಮಾತನಾಡುವುದು ಸರಿಯಲ್ಲ. ಆ ಜಿಲ್ಲೆಯಲ್ಲಿ ನಡೆದಿದ್ದಕ್ಕೆಲ್ಲಾ ಆ ಎಸ್‌. ಪಿ ಯೇ ಕಾರಣ ಎಂದು ಅವರು ಹೇಳುವುದು ಸರಿಯಲ್ಲ, ಇರಬಹುದು. ಶಿವಮೊಗ್ಗಾ ಪೋಲೀಸ್ ಠಾಣೆಯಲ್ಲಿ ನಡೆದಿರತಕ್ಕ ಘಟನೆಯನ್ನು ನಾವು ಒಂದು ವಿಶಿಷ್ಟವಾಗಿ ನೋಡೋಣ, ಅದು ಹೇಗೆ ಆಯಿತು ಎಂಬುದನ್ನು ನೋಡೋಣ. ಬೆಂಡಿಗೇರಿಯಲ್ಲಿ ನಡೆದಿದ್ದನ್ನೆಲ್ಲಾ ಸೇರಿಸಿ ಜನತಾ ಪಕ್ಷದವರಿಗೆ, ದಲಿತರಿಗೂ. ಹಿಂದುಳಿದವರಿಗೂ ಇರತಕ್ಕ ಸಂಬಂಧದ ಮೇಲೆ ನಿಮ್ಮ ಮೀಮಾಂಸೆ ಬೇಡ, ನಿಮ್ಮ ಹಿತೋಪದೇಶ ಬೇಡ. ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ತಾವು ಯಾವುದೇ ವಿಚಾರಗಳನ್ನಾಗಲಿ ಫ್ರಾಂಕ್ ಆಗಿ ಡಿಸ್ಕಸ್ ಮಾಡಬೇಕೆಂದಾಗಲೂ ನಾನು ತಮಗೆ ಸಿಕ್ಕಿದ್ದೇನೆ. ಮಾನ್ಯ ಅಧ್ಯಕ್ಷರೇ, ಅವರ ಸಮಸ್ಯೆಗಳನ್ನು ಕೇಳುವುದಕ್ಕೆ ನನಗೆ ಪುರುಸೊತ್ತು ಸಿಕ್ಕಿಲ್ಲವೆಂದು ಹೇಳಿದ್ದಾರೆ. ಬಹುಶಃ ಅವರಿಗೆ ನಾನು ಸಿಕ್ಕಿದಷ್ಟು ಹೆಚ್ಚು ಸಮಯ ಬೇರೆ ಯಾರಿಗೂ

ನಾನೂ ಸಿಕ್ಕಿಲ್ಲ. ಬೇರೆ ಯಾರಿಗೂ ನಾನು ಅಷ್ಟು ಸಮಯವನ್ನು ಕೊಟ್ಟಿಲ್ಲ. ಬಹಳ ಸಮಯದವರೆಗೂ ನಾನೂ, ಅವರೂ ಜೊತೆಯಲ್ಲಿ ಇರುತ್ತಿದ್ದೆವು. ಇದಕ್ಕಿಂತ ಹೆಚ್ಚಿಗೆ ನಾನು ಇನ್ನೇನು ಹೇಳಲಿ.

ಶ್ರೀ ವೇದಾಂತಹೆಮ್ಮಿಗೆ.— ಎಷ್ಟು ಹೊತ್ತಿನಲ್ಲಿ ಸ್ವಾಮಿ?

(ನಗು)

ಶ್ರೀ ಜೆ.ಹೆಚ್. ಪಟೇಲ್.— ಜಿಲ್ಲಾ ಪರಿಷತ್ತಿನ ಸಭೆಯಲ್ಲಿ, ಅಥವಾ ನಮ್ಮ ಗೆಳೆಯರ ಕೂಟದಲ್ಲಿ ಅಥವಾ ಊಟಕ್ಕೆ ಹೋದರೂ ಕೂಡ ಅವರ ಜೊತೆಯಲ್ಲೇ ಇರುತ್ತಿದ್ದೆ. ಆದರೂ ನನಗೆ ಪುರುಸೊತ್ತು ಸಿಕ್ಕಿಲ್ಲ ಎಂದರೆ, ಇದಕ್ಕಿಂತ ಪುರುಸೊತ್ತು ಅವರಿಗೆ ಇನ್ನೇನು ಬೇಕು?

ಶ್ರೀ ಎಸ್, ಜಿ. ನಂಜಯ್ಯನಮಠ.— ಅವರು ಬಹಳ ಸುಂದರವಾಗಿದ್ದಾರೆಂದು ತಾವು ಬಹಳ ಹೊತ್ತು ಅವರ ಜೊತೆ ಇದ್ದಿರಾ?

ಶ್ರೀ ಜೆ. ಹೆಚ್. ಪಟೇಲ್.— ಈ ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮ್ಮ ಪಕ್ಷದ ಚೌಕಟ್ಟನ್ನೂ ಬಿಟ್ಟು ಯಾವನೇ ಅಧಿಕಾರಿಯ ಬಗ್ಗೆಯಾಗಲಿ, ಅಥವಾ ಬೇರೆ ಯಾವುದೇ ವಿಚಾರದಲ್ಲಾಗಲಿ ನಾವಿಬ್ಬರೂ ಸೇರಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಕೆಲಸಮಾಡಿದ್ದೇವೆ. ಆದ್ದರಿಂದ ಅಲ್ಲಿಯ ಪೋಲೀಸ್ ಠಾಣೆಯಲ್ಲಿ ನಡೆದಿರುವ ಘಟನೆಯನ್ನು ಮಿತಿಮೀರಿ ವರ್ಣಿಸುವುದಕ್ಕೆ ಹೋಗಬೇಡಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.— ನಾನು ಮಿತಿಯನ್ನು ಮೀರಿ ವರ್ಣಿಸಲು ಏನೂ ಹೋಗಿಲ್ಲ. ನಾನು ಎಷ್ಟು ಮಿತಿಯೊಳಗೆ ಮಾತನಾಡಿದ್ದೇನೆಂಬುದನ್ನು ನೋಡಬೇಕಾದರೆ ತಾವು ಈ ಚಿತ್ರವನ್ನು (ಫೋಟೋ) ನೋಡಿದರೇ ಗೊತ್ತಾಗುತ್ತದೆ. ನನಗೆ ಅವಕಾಶ ಕೊಡಲಿಲ್ಲವೆಂದು ನಾನು ಹೇಳಲಿಲ್ಲ. ನಾನು ಹೇಳುವುದನ್ನು ಅವರು ಕೇಳುವುದಕ್ಕೆ ಪುರುಸೊತ್ತು ಇಲ್ಲ, ಬೇರೆ ಹಲವಾರು ವಿಷಯಗಳಿಗೆ ಪುರುಸೊತ್ತು ಇದೆ ಆದರೆ ಅವರ ಮಂತ್ರಿ ಪದವಿಗೆ ಪುರುಸೊತ್ತು ಇಲ್ಲ, ಅದಕ್ಕೆ ಅವರಿಗೆ ಇರತಕ್ಕ ಪುರುಸೊತ್ತು ಕಡಿಮೆ ಎಂದು ನಾನು ಹೇಳುತ್ತಿದ್ದೇನೆ. ಸ್ವಾಮಿ ಆ ಒಬ್ಬ ಆಫೀಸರ್‌ನ ಮೇಲೆ ಮೋಹ ಏತಕ್ಕೆ? ಇದನ್ನು ಪ್ರೆಸ್ಟೀಜ್ ಎಂದು ಮಾಡಿಕೊಳ್ಳಬೇಡಿ. ನಾನು ಹೇಳಿದೆ ಎಂದು ಈಗಲೆ ಮಾಡಬೇಡಿ, ಇನ್ನು ೩ ತಿಂಗಳು ಬಿಟ್ಟು ಮಾಡಿ. ಆದರೆ ಅಷ್ಟರವರೆಗೂ ಅಲ್ಲಿ ಯಾವುದೇ ಘಟನೆ ಆಗದಂತೆ ಜವಾಬ್ದಾರಿಯಿಂದ ನೋಡಿಕೊಂಡರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಇಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಒಬ್ಬ ಎಸ್.ಪಿ.ಯನ್ನು ಇವತ್ತೇ ಟ್ರಾನ್ಸ್‌ಫರ್ ಮಾಡಿಸಿದೆ ಎನ್ನತಕ್ಕ ಹೆಚ್ಚುಗಾರಿಕೆ ನನಗೇನೂ ಬೇಕಿಲ್ಲ, ಅಥವಾ ಇದರಿಂದ ನಂಗೆ ಕೋಡು ಬಂತು ಅಂತಲೂ ಅಲ್ಲ. Personally I have also some respect for him. ಅವರು ಸ್ವಲ್ಪ ಓದಿದ್ದಾರೆ. ನಾನು ಯಾರ ಬಗ್ಗೆಯೂ ಅನಾದಾರಣೆ ಮಾಡುವುದಕ್ಕೂ ತಯಾರಾಗಿಲ್ಲ. It is not that I do not respect him as a man. But, I do not respect him as the head of police administration in the district His understanding of men and matters is poor. That is my understanding. That is all. Nothing more than that. ಮತ್ತೆ ಇನ್ನೊಂದು ವಿಚಾರ ಎಂದರೆ ಅಲ್ಲಿ ತೊಂದರೆಗೆ ಒಳಗಾಗಿರುವವರು ಎಂದರೆ ದಟ್ಟ ದರಿದ್ರರು. ಆದ್ದರಿಂದ ನಾನೂ ಮತ್ತು ನನ್ನ ಕೆಲವು ಸ್ನೇಹಿತರೂ ಸೇರಿ ಸ್ವಲ್ಪ ಹಣವನ್ನು ಕಲೆಕ್ಟ್ ಮಾಡಿ ಅದನ್ನು ಆಸ್ಪತ್ರೆಗೆ ಹೋಗಿ ಕೊಟ್ಟು ಬಂದಿದ್ದೇವೆ. ಆದರೆ ಅವರಿಂದ ರಾಜಕೀಯ ಪ್ರತಿಫಲವನ್ನು ಪಡೆಯಬೇಕೆಂದೇನೂ ಅಲ್ಲ. ಅವರು ಇರತಕ್ಕ ಪರಿಸ್ಥಿತಿಯಲ್ಲಿ ನಾವು ಏನು ಸಮಾಧಾನವನ್ನು ಹೇಳುವುದಕ್ಕಾಗುತ್ತದೆ? ನನಗಂತೂ ಒಂದು ಗೊತ್ತಾಗಲಿಲ್ಲ. ಗುರುಮೂರ್ತಿಯ ತಾಯಿ ಹೇಳಿದಳು, "ನೋಡಿ ನನ್ನ ಮಾಂಗಲ್ಯವನ್ನೂ ಕೂಡ ಮಾರಾಟ ಮಾಡಿ ನನ್ನ ಮಗನನ್ನು ಬಿಡಿಸಿಕೊಳ್ಳುವುದಕ್ಕಾಗಿ ಪೋಲೀಸರಿಗೆ ಹಣವನ್ನು ಕೊಟ್ಟೆ. ಆದರೆ ನನ್ನ ಮಗನನ್ನು ಬಿಟ್ಟುಕೊಡಲಿಲ್ಲ ಕೊನೆಗೂ ಸಾಯಿಸಿಯೇ ಬಿಟ್ಟರು ಅಂತ ಹೇಳಿಕೊಂಡಳು. ಅಷ್ಟೇ ಅಲ್ಲ ಮದುವೆಗೆ ಬಂದಿರತಕ್ಕ ಹೆಣ್ಣುಮಗಳು ನನಗೆ ಇದ್ದಾರೆ ಪೋಲೀಸರು ರಾತ್ರಿ ಬಂದು ಬಾಗಿಲನ್ನು ಹೊಡೆದು, ತೆಗೆದು ಅವನು ಎಲ್ಲಿದ್ದಾನೆ, ಅವನು ಎಲ್ಲಿದ್ದಾನೆ ಎಂದು ಹೊದ್ದುಕೊಂಡಿದ್ದ ಹೊದಿಕೆಯನ್ನೆಲ್ಲಾ ತೆಗೆದೂ, ತೆಗೆದೂ ನೋಡಿದರು ಎಂದು ಹೇಳಿದಳು ಈಗೇನೋ ೨೦–೩೦ ಸಾವಿರ ರೂಪಾಯಿಗಳನ್ನು ಕೊಡಿಸುತ್ತೇವೆಂದು ಮಾನ್ಯ ಬಸವಣ್ಣಪ್ಪನವರು.

ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡುವುದಕ್ಕೆ ನಿಮಗೆ ಪುರುಸೊತ್ತು ಸಿಕ್ಕಿತೋ, ಏನೋ ಗೊತ್ತಿಲ್ಲ. ದಯವಿಟ್ಟು ಈ ಘಟನೆಗೆ ತುತ್ತಾಗಿರುವವರಿಗೆ ಧಾರಾಳವಾಗಿ ಕಾಂಪನ್‌ಸೇಷನ್ ಕೊಡಿ. ಪೋಲೀಸರು ದಬ್ಬಾಳಿಕೆ ಮಾಡಿದಾಗ, ಅವರು ತಪ್ಪು ಮಾಡಿದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಏಜೆನ್ಸಿಯನ್ನು ಮಾಡುತ್ತೀರಿ? ಅಥವಾ ಯಾವ ರೀತಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಮುಂದೆ ಅಂಥ ಪ್ರಕರಣಗಳು ನಡೆದಾಗ ಏಜೆನ್ಸಿ ಏನು ಎಂಬುದು ಬೇಕು. ಈಗ ಅಂದರೆ ಇಷ್ಟು ದಿವಸಗಳವರೆಗೆ ಗೋಲಿಬಾರ್‌ನಲ್ಲಿ ಸತ್ತವರ ಸಂಬಂಧಿಕರಿಗೆ ೫ ಸಾವಿರ ರೂಪಾಯಿಗಳ ಪರಿಹಾರಧನ ಎಂದು ಕೊಡುತ್ತಿದ್ದೀರಿ. ಇದರೆ ಪೋಲೀಸ್ ಲಾಕಪ್‌ನಲ್ಲಿ ಸತ್ತವರ ಸಂಬಂಧಿಕರಿಗೆ ಕಾಂಪನ್‌ಸೇಷನ್ ಕೊಡುವುದಕ್ಕೆ ನಿಮ್ಮಲ್ಲಿ ರೂಲ್ಸ್ ಇಲ್ಲ. ಈಗ ನೀವು ಹೊಸದಾಗಿ ಕಾನೂನು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಪೋಲೀಸ್ ಲಾಕಪ್‌ನಲ್ಲಿ ಪೋಲೀಸರು ಯಾರನ್ನಾದರೂ ಹೊಡೆದು ಸಾಯಿಸಿದರೆ ಎಷ್ಟು ದಂಡ ಕೊಡಬೇಕೆಂದು ಕಾನೂನು ಮಾಡಬೇಕಾಗಿದೆ. ತಪ್ಪು ಮಾಡಿದ ಪೋಲೀಸ್‌ನವರ ಮೇಲೆ ನಿಜವಾಗಿಯೂ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳುವಂಥ ರೀತಿಯಲ್ಲಿ ಜನರಲ್ಲಿ ಭರವಸೆ ಬರುವಂತೆ ವ್ಯವಸ್ಥೆಯಾಗಬೇಕೆಂದು ನಾನು ಆಗ್ರಹಪಡಿಸುತ್ತೇನೆ. ತಮ್ಮಲ್ಲಿರತಕ್ಕ ಸಿ.ಬಿ.ಐ. ಸಿ.ಓ.ಡಿ. ಮುಂತಾದುವುಗಳನ್ನು ಸರ್ಕಾರದವರು ಬಹಳ ವಿವೇಕದಿಂದ ಉಪಯೋಗ ಮಾಡಿಕೊಳ್ಳಬೇಕು. ಇದನ್ನು ರೂಟೀನ್ ಆಗಿ ಟ್ರೀಟ್ ಮಾಡಬೇಡಿ. ಇಲ್ಲಿ ನಡೆದಿರತಕ್ಕ ಘಟನೆ ಬಹಳ ಗಂಭೀರವಾದುದು. ಪೋಲೀಸರ ಮತ್ತು ಸರ್ಕಾರದವರ ಅಂದರೆ ನಿಮ್ಮಿಬ್ಬರ ಮಾನ, ಮರ್ಯಾದೆಯ ಪ್ರಶ್ನೆ ಇದರಲ್ಲಿ ಅಡಗಿದೆಯೆಂದು ಹೇಳಿ ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ರಾಮಯ್ಯ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷರೇ ಈಗತಾನೆ ಜಾರ್‍ಯಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದಮೇಲೆ, ದೀನದಲಿತರಮೇಲೆ ಹೇಗೆ ಅತ್ಯಾಚಾರ ನಡೆಯುತ್ತಿದೆ ಎನ್ನುವ ಬಗ್ಗೆ ಸವಿಸ್ತಾರವಾಗಿ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನಾದರೂ ಹೇಳುವುದೇನೆಂದರೆ ಪ್ರತಿವೇದಿಕೆಗಳ ಮೇಲೆ, ಸಭೆ ಸಮಾರಂಭಗಳಲ್ಲಿ ಭಾಷಣ ಮಾಡುವಾಗ ಅಲ್ಲಿ ಮುಖ್ಯವಾಗಿ ಹೇಳುವ ಸ್ಲೋಗಾನ್ ಏನೆಂದರೆ ನಾವು ಹರಿಜನರನ್ನು ಉದ್ಧಾರ ಮಾಡುತ್ತೇವೆ, ಅವರನ್ನು ರಕ್ಷಿಸುತ್ತೇವೆ, ನಮಗೆ ಏನೇ ಕಷ್ಟಬಂದರೂ ಅವರಿಗೆ ರಾಜ್ಯಾಂಗಬದ್ಧವಾಗಿ ಇರತಕ್ಕಂಥ ಎಲ್ಲಾ ಹಕ್ಕುಗಳನ್ನು ಕೊಟ್ಟು ಅವರ ಹಕ್ಕುಗಳನ್ನು ಕಾಪಾಡುತ್ತೇವೆಂದು ಹೇಳುತ್ತಾರೆ. ಆದರೆ ನನಗಾದರೂ ಅನಿಸುತ್ತದೆ ಪೋಲೀಸ್‌ನವರು ಎಲ್ಲರ ಮನೆಗಳನ್ನು ಕಾಯುಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಘಟನೆಗಳು ನಡೆದಮೇಲೆ ಅದನ್ನು ತನ್ನ ವಿವೇಚನೆಗೆ ಒಳಪಡಿಸಿಕೊಂಡು ಅದಕ್ಕೆ ಏನು ಶಕ್ತಿಯನ್ನು ತುಂಬಬೇಕೋ ಆದನ್ನು ಕಾನೂನು ಪ್ರಕಾರ ಯೋಗ್ಯ ರೀತಿಯಲ್ಲಿ ಸಮಯಕ್ಕೆ ಸರಿಯಾಗಿ ಮಾಡಿದರೆ ಅದು ಸರ್ಕಾರದ ಇರುವಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆಂದು ನನಗನಿಸುತ್ತದೆ. ಆದರೆ ಬಹುಶಃ ಬಹಳಷ್ಟು ಪ್ರಕರಣಗಳನ್ನು ನೋಡಿದಾಗ ಅದಕ್ಕೆ ಬೇಕಾದಂಥ ರೀತಿಯಲ್ಲಿ ಬಣ್ಣವನ್ನು ಕೊಟ್ಟು, ಕೆಲವುಗಳನ್ನು ತಳ್ಳಿಹಾಕುತ್ತಾ, ಕೆಲವುಗಳನ್ನು ಎತ್ತಿ ಹಿಡಿಯತಕ್ಕಂಥದ್ದನ್ನು ನೋಡಿದರೆ ಸರ್ಕಾರ ಯಾವ ಜನ ಈ ಸರ್ಕಾರದ ಆಯ್ಕೆಗೆ ಚೇತನ ನೀಡಿತ್ತೋ ಅಂಥವರ ಸಾಮಾಜಿಕ ವ್ಯವಸ್ಥೆಯನ್ನು ಬಹಳ ಹಿಂದಕ್ಕೆ ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನವನ್ನು ಇತ್ತೀಚಿನ ಪ್ರಕರಣಗಳಿಂದ ಮಾಡುತ್ತಿದೆ. ಎನ್ನುವ ಒಂದು ಭಾವನೆ ಎಲ್ಲಾ ಬುದ್ಧಿಜೀವಿಗಳಿಗೂ ಮನವರಿಕೆಯಾಗುತ್ತದೆಂದು ನನಗನ್ನಿಸುತ್ತದೆ. ಈಗಾಗಲೇ ರಾಜ್ಯಾದ್ಯಂತ ನಡೆದಂಥ ಅನೇಕ ಪ್ರಕರಣಗಳ ವಿಶ್ಲೇಷಣೆಯನ್ನು ಇಲ್ಲಿ ಮಾಡಿದ್ದಾರೆ. ನಾನು ನನ್ನ ಹಿರಿಯೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ೫-೬ ಘಟನೆಗಳನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸದನದಲ್ಲಿ ಪಟ್ರಹಳ್ಳಿಯಲ್ಲಿ ಲಕ್ಷ್ಮೀ ಎಂಬ ಒಬ್ಬ ಲಂಬಾಣಿ ಯುವತಿಯಮೇಲೆ ಅತ್ಯಾಚಾರ ನಡೆದಿರತಕ್ಕ ವಿಷಯದ ಬಗ್ಗೆ ಇಲ್ಲಿ ಚರ್ಚೆ ನಡೆದಾಗ ತಕ್ಷಣವೇ ಅಲ್ಲಿಯ ಸಬ್‌ಇನ್‌ಸ್ಪೆಕ್ಟರನ್ನು ಅಮಾನತ್ತಿನಲ್ಲಿಟ್ಟರು. ಆದರೆ ಅತ್ಯಾಚಾರ ಮಾಡಿದಂಥ ವ್ಯಕ್ತಿಯಮೇಲೆ ಯಾವುದೇ ಕ್ರಮತೆಗೆದುಕೊಳ್ಳಲಿಲ್ಲ. ಅದಕ್ಕೆ ಏನು ಮಾಡಿದರು ಎಂದರೆ ಅದನ್ನು ಫೋರ್‌ಹ್ಯಾನ್ಸಿಕ್ ಲ್ಯಾಬರೇಟರೆಗೆ ಕಳುಹಿಸಿಕೊಟ್ಟಿದ್ದೇವೆ, ಅಲ್ಲಿಂದ ವರದಿ ಬಂದ ಮೇಲೆ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿ ಇಲ್ಲಿಯವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ, ಜೊತೆಗೆ ಸೋಶಿಯಲ್ ವೆಲ್‌ಫೇರ್ ಡೈರೆಕ್ಟರವರು ಆಕೆಗೆ ಐದು ಸಾವಿರ ರೂಪಾಯಿಗಳ ಪರಿಹಾರಧನವನ್ನು ಕೊಡುವುದಾಗಿ ಘೋಷಿಸಿದರು. ಅದನ್ನು ಯಾರು ಕೊಡಬೇಕೆಂಬುದು ಇದುವರೆಗೂ ಇತ್ಯರ್ಥವಾಗಿಲ್ಲ. ಆವತ್ತು ಅಲ್ಲಿಗೆ ಬಂದಿದ್ದ ಪರಿಶಿಷ್ಟ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಡಾ|| ತಿಪ್ಪೆಸ್ವಾಮಿಯವರು

ಮತ್ತು ಸಮಿತಿಯ ಸದಸ್ಯರುಗಳು ಆಕೆಯ ಗುಡಿಸಲಿಗೆ ಭೇಟಿಯನ್ನು ಕೊಟ್ಟು ಆಕೆಯನ್ನು ವಿವರಣೆ ಕೇಳಿದರು. ಆಕೆಯ ವರದಿ ಇಲ್ಲಿ ಇರಬಹುದು. ಇಷ್ಟಿದ್ದಾಗ್ಯೂ ಸಹ ಸರ್ಕಾರ ಯಾರು ಯಾರು ಆಕೆಯ ಮೇಲೆ ಕ್ರೌರ್ಯ ನಡೆಸಿದರೋ ಅವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ ವೆಂದರೆ ಇದು ಎಷ್ಟು ಶೋಚನೀಯವಾದ ಪರಿಸ್ಥಿತಿ ಎನ್ನುವುದನ್ನು ತಾವು ಗಮನಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಹೋದವರ್ಷ ಡಿಸೆಂಬರ್ ೧೬ನೇ ತಾರೀಖು ಹಿರಿಯೂರು ತಾಲ್ಲೂಕು ಅರ್ತಿಕೋಟೆ ಗ್ರಾಮದಲ್ಲಿ ಕೆಲವು ಪರಿಶಿಷ್ಟ ಜಾತಿ ಯುವಕರು ಡಾ॥ ಅಂಬೇಡ್ಕರ್ ಅವರ ಭಾವಚಿತ್ರವನ್ನು ಮೆರವಣಿಗೆ ತೆಗೆದುಕೊಂಡು ಹೋದರು ಎನ್ನುವ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಯಿತು. ಯಾವುದೋ ಒಂದು ಸಣ್ಣ ವಿಷಯಕ್ಕೋಸ್ಕರವಾಗಿ ಹಲ್ಲೆ ನಡೆಯಿತು ಎನ್ನುವ ಕಾರಣವನು ಬಹುಶಃ ಸರ್ಕಾರದ ಮುಂದೆ ಕೊಟ್ಟಿರತಕ್ಕಂಥ ಅರ್ಜಿಯಲ್ಲಿ ಇರಬಹುದು. ಅವರ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವಾಗ ರಸ್ತೆಯ ಬದಿಯಲ್ಲಿ ಇರತಕ್ಕಂಥ ಕೋವೇ ಬಾವಿಯಿಂದ ಬಾಯಾರಿಕೆಗೆ ನೀರನ್ನು ಕುಡಿಯುವುದಕ್ಕೆ ಹೋದಾಗ ನೀವು ಅಸ್ಪೃಶ್ಯರು, ನೀವು ಇದನ್ನು ಮುಟ್ಟಬಾರದು ಎನ್ನತಕ್ಕಂಥ ಕಾರಣಕ್ಕೋಸ್ಕರವಾಗಿ ಅವರಮೇಲೆ ಹಲ್ಲೆ ನಡೆಯುವುದಕ್ಕೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ಅವರು ನನ್ನ ಬಳಿ ಬಂದಾಗ ನಾನು ಎಸ್‌ಪಿಯವರಿಗೆ ತಕ್ಷಣವೇ ಸಂಪರ್ಕ ಮಾಡಿ ಅವರು ಹೇಳುವ ರೀತಿಯಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿ ಇದೆ. ಸ್ಥಳಕ್ಕೆ ಹೋಗಿಬಂದರೆ ಬಹಳ ಒಳ್ಳೆಯದು ಎನ್ನುವ ಮಾತನ್ನು ಹೇಳಿದರೆ, ಎಸ್‌ಪಿಯವರು ನನಗೆ ನೀವೇ ಆದೇಶವನ್ನು ಕೊಡುತ್ತಿರುವಿರಲ್ಲ ಎಂದು ಹೇಳಿದರು. ನೀವು ಸ್ಥಳಕ್ಕೆ ಹೋಗಿಬಂದರೆ ಆ ಸ್ಥಳದಲ್ಲಿ ವಾತಾವರಣ ತಿಳಿಯಾಗಬಹುದು ಎಂದು ಅವರಲ್ಲಿ ಮನವರಿಕೆ ಮಾಡಿಕೊಂಡೆ. ಆದರೆ ಅವರು ನನಗೆ ಒಂದು ಮಾತನ್ನು ಹೇಳಿದರು. ನೀವು ವಿನಯ ಕಲಿತುಕೊಳ್ಳಬೇಕೆಂದು. ಹಿಂದೆ ಈವತ್ತು ಮಂತ್ರಿಯಾಗಿರುವ ಮಾನ್ಯ ಸಿಂಧ್ಯರವರು ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್‌ಗಳ ಬಗ್ಗೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಅವರಿಗೆ ಬಹಳ ಅಹಂಕಾರವಿದೆ, ಅವರ ಒಂದು ಹೋರಾಟದ ಮುಂಚೂಣಿಯನ್ನು ಹಿಡಿದು ಹೋರಾಟ ಮಾಡುವುದಕ್ಕೆ ಸಿದ್ಧವೆಂದು ಹೇಳಿದರು. ಅಷ್ಟೊಂದು ಗಮ್ಮತ್ತು ಮತ್ತು ಅಹಂಕಾರವನ್ನು ಇಟ್ಟುಕೊಂಡು ಅಧಿಕಾರವನ್ನು ಇಟ್ಟುಕೊಂಡು ಅಧಿಕಾರವನ್ನು ನಡೆಸಿದರೆ ಹೇಗೆ ಆಗುತ್ತದೆ. ಆಯ್ಕೆಯಾದ ಪ್ರತಿನಿಧಿಗಳು ಕೇವಲ ಜನರ ಅನಿಸಿಕೆಯನ್ನು ಹೇಳುತ್ತಾರೆ. ಅದನ್ನು ಪರಿಶೀಲನೆ ಮಾಡುವುದು ಅವರ ವಿವೇಚನೆಗೆ ಒಳಪಟ್ಟಿದ್ದು. ಅದನ್ನು ಬಿಟ್ಟುಬಿಟ್ಟು ನಮ್ಮನ್ನೇ ವಿನಯವನ್ನು ಕಲಿತುಕೊಳ್ಳಿ, ಸಂಪ್ರದಾಯ ಕಲಿತುಕೊಳ್ಳಿ ಎಂದು ಹೇಳತಕ್ಕಂಥದ್ದು ಇದು ನಮ್ಮನ್ನು ಎದುರಿಸ ತಕ್ಕಂಥ ಒಂದು ರೀತಿಯಾದ ವರ್ತನೆ ಎಂದು ಹೇಳಬೇಕಾಗುತ್ತದೆ.

ಇಷ್ಟಾದ ಮೇಲೆ ಅವರು ಏನು ಮಾಡಿದರು ಅಂದರೆ ನಿಜವಾಗಿಯೂ ಪೆಟ್ಟು ತಿಂದಿದ್ದಂಥಹ ಹರಿಜನರ ಕೇಸನ್ನು ಅವರು ದೂರು ಕೊಟ್ಟ ಮೇಲೂ ಬುಕ್ ಮಾಡಿಕೊಳ್ಳಲಿಲ್ಲ. ಅವರಿಂದ ಕಂಪ್ಲೇಟ್ ತೆಗೆದುಕೊಂಡು ೨ ಕೇಸ್‌ಗಳನ್ನು ಬುಕ್ ಮಾಡಿ ಕೋರ್ಟಿಗೆ ತೆಗೆದುಕೊಂಡು ಹೋಗುವ ಹಾಗೆ ಮಾಡಿ ಕಾರ್ಯವನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆ. ಇತ್ತೀಚಿನ ದಿನಗಳಲ್ಲಿ ಹೊಸ ವರ್ಷ ೮೮ನೇ ಇಸವಿಯಲ್ಲಿ ಮತ್ತೊಂದು ಘಟನೆ ಹಿರಿಯೂರು ತಾಲ್ಲೂಕಿನ ಧರ್ಮಪುರ ಎಂಬ ಹಳ್ಳಿಯಲ್ಲಿ ನಡೆದಿದೆ. ಆ ಹಳ್ಳಿಯಲ್ಲಿ ಮಂಡಲ ಪಂಚಾಯತ್ ಕೇಂದ್ರ ಇದೆ. ಪ್ರಧಾನರು ಸಾಯಂಕಾಲದ ಹೊತ್ತು ಕುಡಿದು ಕುಳಿತಿದ್ದ ಸಮಯದಲ್ಲಿ ಅರಳಮ್ಮ ಎಂಬ ಹರಿಜನ ಮಹಿಳೆ ಇವರ ಹತ್ತಿರ ಹೋಗಿ ಮನೆ ಕೊಡಿ ಎಂದು ಕೇಳಿದಾಗ ಬಲಾತ್ಕಾರ ಮಾಡಿದ್ದುದು ಸಹ ಪ್ರಕರಣ ಬೆಳಕಿಗೆ ಬಂದಿದೆ. ಆಕೆ ಪೋಲೀಸ್ ಸ್ಟೇಷನ್‌ಗೆ ಹೋಗಿ ಆತನ ಮೇಲೆ ಕಂಪ್ಲೇಂಟ್ ಕೊಟ್ಟಾಗ ಅಲ್ಲಿಯೂ ಸಹ ಸರಿಯಾದ ಉಸ್ತುವಾರಿ ನಡೆದಿಲ್ಲ. ಜೊತೆಗೆ ಇಂತಹ ಕೃತ್ಯಗಳಲ್ಲಿ ಕಾರಣರಾದವರನ್ನು ತಕ್ಷಣ ಬಂಧನ ಮಾಡಬೇಕು ಅಂಥ ವ್ಯಕ್ತಿ ಸುಮಾರು ೮-೧೦ ದಿನ ಹಿರಿಯೂರಿನಲ್ಲಿ ರೂಮ್ ಮಾಡಿಕೊಂಡು ಇದ್ದರೂ ಪೋಲೀಸ್ ಠಾಣೆಯವರು ಕಣ್ಣಾರೆ ನೋಡಿದ್ದರೂ ಇವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆತನು ನನ್ನ ಹೆಸರನ್ನು ಕೂಗಿಕೊಂಡು ೧೦-೨೦ ಜನ ಚಪ್ಪಲಿ ಹಿಡಿದುಕೊಂಡು ಓಡಾಡಿದರು ಎಂದು ಹೇಳಿದಾಕ್ಷಣ ಅವರುಗಳನ್ನು ಹಿಡಿದು ಕಸ್ಟಡಿಯಲ್ಲಿಟ್ಟರು. ನೇರವಾಗಿ ಘಟನೆಯನ್ನು ಅವಲೋಕಿಸಿದಾಗ ಪೋಲೀಸ್ ಇಲಾಖೆಯ ಶಕ್ತಿ ಬಹಳ ಕಡಿಮೆ ಆಗಿದೆ ಎಂದು ಅನ್ನಿಸುತ್ತದೆ. ಹಿಂದೆ ರಾಚಯ್ಯನವರು ಗೃಹ ಮಂತ್ರಿಗಳಾಗಿದ್ದಾಗ ಒಂದು ಹೇಳಿಕೆಯನ್ನು ಕೊಟ್ಟರು. ಹರಿಜನರ ಮೇಲೆ ದೌರ್ಜನ್ಯ ನಡೆದರೆ ಅಲ್ಲಿರತಕ್ಕ ಎಸ್. ಪಿ. ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ದೌರ್ಜನ್ಯಕ್ಕೆ ಸಂಬಂಧಪಟ್ಟ ಎಸ್.ಪಿ ಹೊಣೆಗಾರ ಎಂದು ಹೇಳಿದ್ದರು. ಆದರೆ ರಾಜ್ಯಾದ್ಯಂತ ಎಲ್ಲಾ ಕಡೆ ಕ್ರೌರ್ಯಗಳು ನಡೆದಿದ್ದರೂ

ಸಹ ಎಷ್ಟು ಜನ ಎಸ್.ಪಿ. ಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರೀ? ಎಷ್ಟು ಜನ ಅಧಿಕಾರಿಗಳನ್ನು ದೌರ್ಜನ್ಯಕ್ಕೆ ಹೊಣೆ ಎಂದು ರುಜುವಾತು ಮಾಡಿದ್ದೀರಿ. ಈ ರೀತಿ ಎಲ್ಲೂ ಮಾಡಿದ ಸಂದರ್ಭ ಕಡಿಮೆ. ಇದರ ಜೊತೆಗೆ ಒಂದು ಕಾಯಿದೆಯನ್ನು ಸರ್ಕಾರದವರು ಮಾಡಿದ್ದಾರೆ. ಯಾವ ಹರಿಜನ ಭೂಮಿಯನ್ನು ತೆಗೆದುಕೊಂಡಿದ್ದಾನೆ ಆ ಭೂಮಿಯನ್ನು ಅವರಿಗೆ ಮಾಡಿ ತಿರುಗಿಸಿಕೊಟ್ಟು ವಾಯಿದೆ ಒಳಗೆ ನೋಂದಣಿ ಮಾಡಿಕೊಡಬೇಕೆಂದು ಇದೆ. ನನ್ನ ತಾಲ್ಲೂಕಿನಲ್ಲಿ ಸುಮಾರು ೨೪೯ ಕೇಸುಗಳು ಇವೆ. ನಮ್ಮ ಹಳ್ಳಿಯ ಜನ ಪೋಲೀಸ್ ಮೊರೆಯನ್ನು ಹೊಕ್ಕು ನಮ್ಮ ಜಮೀನನ್ನು ನಮಗೆ ವಹಿಸಿಕೊಡಿ, ನಮಗೆ ಉಪ ಅಧಿಕಾರಿಗಳಿಂದ, ಮತ್ತು ಡಿ.ಸಿ ಯಿಂದ ಆದೇಶ ಬಂದಿದೆ ಎಂದು ಹೇಳಿದರೆ ಅವರಿಗೆ ಯಾವುದೇ ರೀತಿಯ ಪ್ರೋತ್ಸಾಹವಾಗಲಿ, ಅಥವಾ ಸಹಕಾರವಾಗಲೀ ಕೊಟ್ಟಿಲ್ಲ. ಈಗ ಓಬನ-ಹಳ್ಳಿಯಲ್ಲಿ ರಂಗಪ್ಪ ಎನ್ನುವ ರೈತ ಜಮೀನನ್ನು ಆದೇಶದ ಪ್ರಕಾರ ಪಡೆಯುವುದಕ್ಕೆ ಹೋದಾಗ ಕಂದಾಯ ಅಧಿಕಾರಿಗಳ ಕಚೇರಿಯಲ್ಲಿ ಸುಮಾರು ೧೫೦ ಜನ ಹರಿತವಾದ ಆಯುಧಗಳಿಂದ ಅವನನ್ನು ಹೊಡೆದಿದ್ದಾರೆ. ಪೋಲೀಸ್‌ನವರ ಎದುರಿಗೆ ಈ ಘಟನೆ ನಡೆದರೂ ಇದರ ಬಗ್ಗೆ ಯಾವ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿಲ್ಲ. ಪೋಲೀಸರ ಸಮಕ್ಷಮದಲ್ಲಿ ಹರಿತವಾದ ಆಯುಧ ಗಳಿಂದ ಗಾಯಗೊಳಿಸುವ ಮಟ್ಟಕ್ಕೆ ಹೋದಾಗ ಅಪಾಯಕರವಾದ ಹರಿಜನರು ತಮ್ಮನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದೇ ರೀತಿ ದಾಮೂರ್ ಎಂಬ ಗ್ರಾಮದಲ್ಲಿ ಹರಿಜನರ ಮೇಲೆ ಹರಿಜನರನ್ನೇ ಎತ್ತಿ ಕಟ್ಟಿ ಇದರಲ್ಲಿ ಒಂದು ದೊಡ್ಡ ಅಪವಾದವನ್ನು ತರತಕ್ಕಂಥ ಪ್ರಕರಣ ನಡೆದಿದೆ. ಸಾಮಾನ್ಯವಾದ ಗಲಾಟೆಯಲ್ಲಿ ಒಬ್ಬ ಮಹಿಳೆಗೆ ಸಾಧಾರಣ ಹೊಡೆತ ಗಳು ಬಿದ್ದು ಸುಶ್ರೂಷೆ ಆಗಿ ಕಾಲರಾದಿಂದ ಆಕೆ ಮೃತ ಪಟ್ಟಿದ್ದರೆ ಹರಿಜನರುಗಳ ಮೇಲೆ ಆಕೆಯನ್ನು ಹೊಡೆದು ಸಾಯಿಸಿದ್ದಾರೆಂದು ಆ ಜನರುಗಳ ಮೇಲೆ ಮೊಕದ್ದಮೆ ಜಾರಿ ಮಾಡಿದ್ದಾರೆ. ಭೀತರಾದ ಹರಿಜನರು ಈ ಘಟನೆಯಿಂದ ಜರ್ಜರಿತರಾಗಿದ್ದಾರೆ ಪೋಲೀಸರು ಇಲ್ಲದಸಲ್ಲದ ಕಿರುಕುಳವನ್ನು ಕೊಡುತ್ತಿದ್ದಾರೆ. ಸೀಗೆಹಟ್ಟಿ ಎಂಬ ಒಂದು ಹಳ್ಳಿ ಹಿರಿಯೂರು ತಾಲ್ಲೂಕಿನ ಸಮೀಪ ಇದೆ. ಅಲ್ಲಿ ತಿಪ್ಪೇಸ್ವಾಮಿ ಎಂಬ ವಿದ್ಯಾರ್ಥಿ ಪಿ.ಯು.ಸಿ. ಓದುತ್ತಿದ್ದಾನೆ. ಅವನು ಶಾಲೆಗೆ ಬರತಕ್ಕ ಸಂದರ್ಭದಲ್ಲಿ ತಮಿಳು ಮಾತನಾಡುತ್ತಾ ಇದ್ದ ಒಬ್ಬ ವ್ಯಕ್ತಿ ಆತನ ಹೆಸರು ಗೊತ್ತಿಲ್ಲ, ಆ ವಿದ್ಯಾರ್ಥಿಯ ಸೈಕಲ್ ತೆಗೆದುಕೊಂಡು ಚೆನ್ನಾಗಿ ಹೊಡೆದು ಹೋಗಿದ್ದಾನೆ. ಆತನು ಪೋಲೀಸ್ ಠಾಣೆಗೆ ಕಂಪ್ಲೈಂಟ್ ಕೊಟ್ಟರೆ ಅದರ ಬಗ್ಗೆ ಏನೂ ಕ್ರಮ ಇಲ್ಲ. ಇದೆಲ್ಲಾ ನಡೆಯುತ್ತಾ ಹೋದರೆ ಅಮಾಯಕರನ್ನು ಯಾವ ಶಕ್ತಿ ಕಾಪಾಡಬೇಕಾಗಿತ್ತೋ ಅಂಥ ಶಕ್ತಿ ಅವರನ್ನು ಕಾಪಾಡುವುದಕ್ಕೆ ಹಿಂಜರಿಯುತ್ತಿದೆ. ಇದರಲ್ಲಿ ಯಾರು ಇವರುಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ ಅಥವಾ ಈ ಆಳ್ವಿಕೆಯಲ್ಲಿ ಪಾಲ್ಗೊಂಡ ಜನ ಇದ್ದರೂ ಇರಬಹುದೇ. ಇದು ಬಹಳ ಗಂಭೀರವಾದ ಮತ್ತು ಮಾರ್ಮಿಕವಾದ ವಿಚಾರ, ಹಾಗೂ ಪ್ರಶ್ನೆ ಯಾಗಿದೆ. ಆದ್ದರಿಂದ ಸರ್ಕಾರ ಈ ಹೊತ್ತಿನಲ್ಲಿ ಬಹಳ ಧೈರ್ಯದಿಂದ ಮತ್ತು ಯಾವ ಪೂರ್ವಾಗ್ರಹ ಬಾಲ-ಪೀಡೆ ಇಲ್ಲದೆ ಬಹಳ ಯೋಜನಾ ಪೂರ್ವಕವಾಗಿ ಇವೊತ್ತು ಇವತ ಉಳಿವನ್ನು ಮತ್ತು ರಕ್ಷಣೆ ಯನ್ನು ಹೊರಬೇಕಾಗಿದೆ. ಒಂದು ಸಮಾಜ ಸುಧಾರಣೆ ಆಗಬೇಕಾದರೆ ಕೆಲವೇ ಜನರ ಸ್ಥಿತಿ ಮುಂದುವರೆದರೆ ಆಗುವುದಿಲ್ಲ. ಶೋಷಣೆಗೊಳಗಾಗಿರುವವರ, ದೈನಂದಿನ ದುಡಿಮೆ ಮಾಡಿ ಯಾರು ನರಳುತ್ತಿದ್ದಾರೋ ಅವರ ಸ್ಥಿತಿ ಸುಧಾರಣೆ ಆದರೆ ಸಮಾಜ ಸುಸ್ಥಿತಿಯಲ್ಲಿದೆ ಎಂದು ಅರ್ಥ. ಅದನ್ನು ಮಾಡದೇ ಹೋದರೆ ಸರ್ಕಾರ ಇದ್ದರೂ ಪ್ರಯೋಜನವಾಗುವುದಿಲ್ಲ. ಮುಖ್ಯವಾಗಿ ಒಂದು ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಿಮ್ಮ ಸರ್ಕಾರ ಬಂದನಂತರ ಸಾರ್ವಜನಿಕ ದೂರು ವಿಭಾಗ ಎಂದು ತೆರೆದಿದ್ದೀರಿ. ಅಲ್ಲಿಗೆ ಎಷ್ಟು ಸಾವಿರ ದೂರುಗಳು ಬಂದಿದ್ದವು, ಎಷ್ಟು ಬಗೆಹರಿಸಿದ್ದೀರಿ ಎಂಬುದನ್ನು ಒಂದೂ ಹೇಳಲಿಲ್ಲ. ನಾವೇ ಕಾಗದ ಬರೆದರೆ ಪರಿಶೀಲನೆ ಮಾಡಿ ಉತ್ತರ ಕೊಡುವ ವ್ಯವಧಾನ ಇಲ್ಲ. ಇದನ್ನು ನೋಡಿದರೆ ಪ್ರಜಾಪ್ರಭುತ್ವದಲ್ಲಿ ನಿಮಗಿರುವ ನಂಬಿಕೆ ಎಷ್ಟು ಎಂಬುದನ್ನು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಸಾರ್ವಜನಿಕ ದೂರು ವಿಭಾಗ ಸಂಪೂರ್ಣವಾಗಿ ಮಲಗಿದೆ. ಅದನ್ನು ಪುನಶ್ಚೇತನ ಮಾಡುವ ಶಕ್ತಿ ಇಲ್ಲ ಎಂದರೆ ಜನರ ಸಮಸ್ಯೆಗಳನ್ನು ಅಧ್ಯಯನ ಮಾಡತಕ್ಕ ಯೋಚನೆ ಕೂಡ ಇಲ್ಲ ಎಂದು ಹೇಳಬೇಕಾಗಿದೆ. ರಾಜ್ಯಾದ್ಯಂತ ಅತಿರೇಕಗಳು ಏನು ನಡೆದಿವೆ ಇವುಗಳ ಬಗ್ಗೆ ಸಮಯೋಚಿತವಾಗಿ ಕಾನೂನು ಪ್ರಕಾರ ಕ್ರಮ ಕೈಗೊಂಡು ರಕ್ಷಣೆ ಮಾಡದೇ ಹೋದರೆ ಅನಿವಾರ್ಯವಾಗಿ ಜನ ಮತ್ತೆ ಹಿಂದಿನ ಕಾಲದಲ್ಲಿದ್ದಂಥ ಪರಿಸ್ಥಿತಿಗೇ ಹೋಗಬೇಕಾದ ಪರಿಸ್ಥಿತಿ ಬರಬಹುದು ಎಂದು ಹೇಳಿ ಈಗ ನಡೆದಿರುವ ಎಲ್ಲಾ ಕ್ರೌರ್ಯಗಳನ್ನೂ ಖಂಡಿಸುತ್ತಾ, ತಾವು ಇನ್ನೂ ಒಳ್ಳೆಯ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ...

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಬಹಳ ಜನರಿದ್ದಾರೆ.

ಅಧ್ಯಕ್ಷರು.—ನಾನು ಈ ಸಭೆಯ ಅಭಿಪ್ರಾಯಂದ ಪ್ರಕಾರ ಸದನವನ್ನು ನಡೆಸಬೇಕಾಗಿದೆ. ಇವತ್ತು ಈ ಚರ್ಚೆಯನ್ನು ಮುಗಿಸಲೇಬೇಕೆಂದು ಸಭೆ ಅಭಿಪ್ರಾಯ ಕೊಟ್ಟಿದೆ. ಅದರ ಪ್ರಕಾರ ಸದನ ನಡೆಸಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ಕಂಟಿನ್ಯೂ ಮಾಡಬಹುದಲ್ಲ. ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಿದ್ದುದು.

ಅಧ್ಯಕ್ಷರು.—ಇಲ್ಲ ಇಲ್ಲ. ಸಭೆಯ ಅಭಿಪ್ರಾಯ ಇವೊತ್ತು ಮುಗಿಸಲೇಬೇಕು ಎಂದಿದೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗೆಂತ ರಾತ್ರಿ ೨ ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ಪಾರ್ಲಿಮೆಂಟಿನಲ್ಲಿ ೧೨–೧೩ ಗಂಟೆ ಕುಳಿತ್ತಿದ್ದಾರೆ. ನಾವೂ ಹಿಂದೆ ಕುಳಿತಿದ್ದೇವೆ. ಆದ್ದರಿಂದ ಅವರು ಮಾತನಾಡಲಿ. ಮಾನ್ಯ ರಾಮಕೃಷ್ಣ ಅವರೇ ಮಾತನಾಡಿ. ೧೦ ಮಿನಿಟ್‌ನಲ್ಲಿ ತಾವು ಮುಗಿಸಿ.

ಶ್ರೀ ಜಿ. ರಾಮಕೃಷ್ಣ.—ಬಹಳ ಮಹತ್ವಪೂರ್ಣವಾದ ಸಮಸ್ಯೆ ಇಲ್ಲಿ ಚರ್ಚೆಯಾಗುತ್ತಿದೆ. ಇಲ್ಲಿಯವರೆಗೆ ದಲಿತರ ಮೇಲೆ ಆಗಿರತಕ್ಕ ಅನ್ಯಾಯ ಅತ್ಯಾಚಾರಗಳ ಬಹಳಷ್ಟು ಸದಸ್ಯರು ಮಾತನಾಡಿ ಅದು ಯಾವರೀತಿ ಆಗುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬೆಂಡಿಗೇರಿ, ಕುಮ್ಮನಸಿರ್ಸಿಗಿ ಪ್ರಕರಣ, ಲಕ್ಷ್ಮಣ ನಾಯ್ಕನ ಕೊಲೆ ಪ್ರಕರಣ ಪ್ರತಿಯೊಂದರ ಬಗ್ಗೆಯೂ ವಿವರವಾಗಿ ಹೇಳಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ನೋಡುವುದಾದರೆ ಈ ರಾಜ್ಯದಲ್ಲಿರತಕ್ಕ ದಲಿತ ಜನ ಏನಿದ್ದಾರೆ, ಕೆಳಗಿನ ಮಟ್ಟದಲ್ಲಿ ವಾಸ ಮಾಡತಕ್ಕ ಜನ ಏನಿದ್ದಾರೆ ಅವರು ಎಲ್ಲಾ ಜಿಲ್ಲೆಗಳಲ್ಲೂ ಸಹ ನಮಗೆ ರಕ್ಷಣೆ ಇಲ್ಲವಲ್ಲ, ಈ ಸರ್ಕಾರದ ಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಅನ್ಯಾಯಗಳು, ಅತ್ಯಾಚಾರಗಳು ಆಗುತ್ತಿವೆ ಎಂಬ ಭಾವನೆಗಳಿಂದ ಕೂಡಿದವರಾಗಿದ್ದಾರೆ. ಇವತ್ತು ಅಧಿಕಾರದಲ್ಲಿರುವ ಸರ್ಕಾರ ಮತ್ತು ಅದಕ್ಕೆ ಸಂಬಂಧಪಟ್ಟ ಸದಸ್ಯರು ಸ್ವಾಭಾವಿಕವಾಗಿ ಹೇಳತಕ್ಕದ್ದು ಇದೇನೂ ಹೊಸ ವಿಚಾರವಲ್ಲ, ಹೊಸ ಸಮಸ್ಯೆ ಅಲ್ಲ, ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ ಬಹಳಷ್ಟು ಅತ್ಯಾಚಾರಗಳಾಗಿವೆ ಎಂಬ ಭಾವನೆಯಿಂದ ಹೇಳಿರುವುದನ್ನು ಕೇಳಿದ್ದೇವೆ. ಸಮಸ್ಯೆಗಳು ಬಹಳ ಇವೆ. ಮಾನ್ಯ ಖರ್ಗೆಯವರು ಹೇಳಿದ ಪ್ರಕಾರ ಜನರಲ್ಲಿ ಏನು ಭಾವನೆ ಇದೆ ಎಂದರೆ ಯಾವ ರಕ್ಷಣೆ ನಮಗೆ ಆ ಕಾಲದಲ್ಲಿತ್ತು ಆ ರಕ್ಷಣೆ ನಮಗೆ ಈಗ ಇಲ್ಲವಲ್ಲ, ಆ ರೀತಿಯ ರಕ್ಷಣೆಯಿಂದ ನಾವು ಬಹಳ ದೂರ ಇದ್ದೇವೆ ಎಂಬ ಭಾವನೆ ಪ್ರತಿಯೊಂದು ಹಳ್ಳಿಯಲ್ಲೂ ಇದೆ. ಅದು ಸರ್ಕಾರಕ್ಕೂ ಗೊತ್ತಾಗುತ್ತಿದೆ. ಸರ್ಕಾರದಲ್ಲಿ ಯಾರೇ ಇರಲಿ ಅವರಿಗೆ ರಕ್ಷಣೆ ಕೊಡತಕ್ಕದ್ದು ಅವರ ಕರ್ತವ್ಯ.

ಮಾನ್ಯ ಗೃಹ ಮಂತ್ರಿಗಳು ನೀವು ಹಿಂದೆ ಅಧಿಕಾರದಲ್ಲಿದ್ದಾಗ ಎಷ್ಟು ಪ್ರಕರಣಗಳಾಗಿವೆ ? ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಎಷ್ಟು ಪ್ರಕರಣಗಳಾಗಿವೆ? ಎಂಬ ಪಟ್ಟಿಯನ್ನು ಅವರು ಇಟ್ಟುಕೊಂಡಿರಬೇಕು. ಅಂಥ ವಿಷಯ ಇದಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಇದು ಕಾಣುತ್ತದೆ. ಜನರು ಬಹಳಷ್ಟು ನೊಂದು ಬೇಸರಪಟ್ಟು ಕೊಂಡಿದ್ದಾರೆ. ದೂರುಗಳನ್ನು ತೆಗೆದುಕೊಂಡು ಪೋಲೀಸ್ ಠಾಣೆಯ ಸಹಿತ ಯಾರೂ ಹೋಗುತ್ತಿಲ್ಲ. ಇವೊತ್ತಿನ ಅಂತಹ ಸಮಸ್ಯೆಗಳ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ. ಅದು ಸರ್ಕಾರದ ಗಮನಕ್ಕೂ ಬಂದಿದೆ. ಅಂತಹವರ ಬಗ್ಗೆ ಇಲ್ಲಿ ವಿಚಾರ ಮಾಡುತ್ತಿದ್ದೇವೆ. ಇಂತಹ ಎಷ್ಟೋ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಾರದೇ ನಡೆಯುತ್ತಿವೆ. ನನ್ನ ಭಾಗದಲ್ಲಿ ಬರತಕ್ಕ ಆಳಂದ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಸುಮಾರು ೬೫–೭೦ ವರ್ಷ ವಯಸ್ಸಿನ ಮುದುಕ ಬೆಳಗ್ಗೆ ೪–೩೦ ಗಂಟೆಗೆ ಎದ್ದು ಹೊಲಕ್ಕೆ ಹೋಗುತ್ತಿದ್ದಾಗ. ಇನ್ನೊಂದು ಹೊಲದಲ್ಲಿರತಕ್ಕ ಸ್ವಲ್ಪ ತೊಗರಿ ಪೆಂಡಿಯೊಂದನ್ನು ಹೊತ್ತುಕೊಂಡು ಹೋಗುತ್ತಿದ್ದ. ಆ ಸಮಯದಲ್ಲಿ ಇನ್ನೊಬ್ಬ ಹೊಲದ ಮಾಲಿಕ ಅಡ್ಡ ಬಂದು, ಆ ಮುದುಕನನ್ನು ಕುರಿತು ಯಾರ ಹೊಲದಿಂದ ಈ ಪೆಂಡಿಯನ್ನು ತೆಗೆದುಕೊಂಡು ಹೋಗುತ್ತಿದ್ದೀಯಾ ಎಂಬುದಾಗಿ ಕೇಳಿದಾಗ, ಆ ಮುದುಕ ಪಕ್ಕದ ಹೊಲದಿಂದ

ತೆಗೆದುಕೊಂಡು ಹೋಗುತ್ತಿದ್ದೇನೆಂದು ಹೇಳಿದ್ದಾನೆ. ಅದು ಸಿದ್ಧರಾಮಪ್ಪನ ಹೊಲ. ಹಾಗಾದರೆ ನೀವು ಕಳ್ಳತನ ಮಾಡಿಕೊಂಡು ತೆಗೆದುಕೊಂಡು ಹೋಗುತ್ತಿದ್ದೀಯಾ ಎಂಬುದಾಗಿ ಕಂಡಂತಹ ಪಕ್ಕದ ಹೊಲದ ಮಾಲೀಕ ಆ ಪೆಂಡಿಯ ಸಮೇತ ಊರಿಗೆ ಕರೆದುಕೊಂಡು ಬರುತ್ತಾನೆ. ಊರಿಗೆ ಬಂದ ಮೇಲೆ ಆ ಜನರನ್ನು ಕರೆಸಿಕೊಳ್ಳುತ್ತಾನೆ. ಸಿದ್ರಾಮಪ್ಪ, ಬಸವರಾಜ್ ಪಾಟೀಲ್, ಆನಂದರಾವ್ ಮುಂತಾದವರನ್ನು ಕರೆಯಿಸಿಕೊಂಡು ಅವರ ಎದುರು ಚರ್ಚೆ ಮಾಡಿದ ಮೇಲೆ ಈ ವಿಷಯ ಅವರ ಗಮನಕ್ಕೆ ಬಂದ ಮೇಲೆ ನಾವು ಇಲ್ಲೇ ತೀರ್ಮಾನ ಮಾಡುವುದು ಬೇಡ, ಪೋಲೀಸ್ ಠಾಣೆಗೆ ಹೋಗೋಣ ವೆಂದು ತೀರ್ಮಾನ ಮಾಡಿ ೯ ಮೈಲಿ ದೂರದಲ್ಲಿರುವ ಆಳಂದ್ ಪೋಲೀಸ್ ಠಾಣೆಗೆ ಬರುತ್ತಾರೆ, ಆಗ ೧೦–೩೦ ಗಂಟೆಯಾಗಿರಬಹುದು. ಆಗ ಪೋಲೀಸ್ ಠಾಣೆಗೆ ಬಂದು ಈ ರೀತಿಯಾಗಿ ಇವನು ಊರಿನಲ್ಲಿ ಕಳ್ಳತನ ಮಾಡಿದ್ದಾನೆ, ಇವರ ಮೇಲೆ ಕ್ರಮ ತೆಗೆದ ಕೊಳ್ಳಬೇಕೆಂದು ಹೇಳಿದಾಗ, ಪೋಲೀಸ್ ಠಾಣೆ ಯಲ್ಲಿದ್ದವರು, ಆ ಬಗ್ಗೆ ದೂರು ಏನಾದರೂ ಇದ್ದರೆ ಕೊಡಿ ಎಂದು ಕೇಳುತ್ತಾರೆ. ಈಗ ದೂರು ತಂದಿಲ್ಲ, ಆಮೇಲೆ ಬಂದು ಕೊಡುತ್ತೇವೆಂದು ಹೇಳುತ್ತಾರೆ. ನಂತರ ಅವರು ಹೊರಟು ಹೋಗು ತ್ತಾರೆ. ಪೋಲೀಸ್ ಠಾಣೆಯಲ್ಲಿ ೭೦ ವರ್ಷ ವಯಸ್ಸಿನ ಮುದುಕನನ್ನು ಕೂಡಿ ಹಾಕುತ್ತಾರೆ. ಡ್ಯೂಟಿ ಮೇಲೆ ಇದ್ದವರು, ಪಿ ಎಸ್ ಐ. ರಾಜೇಂದ್ರ ಪ್ರಸಾದ್. ಹವಲ್ದಾರ್, ಹೆಡ್ ಕಾನ್ಸ್ಟೆಬಲ್, ಶ್ರೀ ಸುಭಾಸ್ ಸೆಟ್ರಿ, ಹಾಗೂ ಶ್ರೀ ಮಲ್ಲಿಕಾರ್ಜುನ ದಫೇದಾರ್. ಊರಿನ ಆ ಜನರು. ಬಂದು ೭೦ ವರ್ಷ ವಯಸ್ಸಿನ ಮುದುಕನ ಮೈಮೇಲೆ ಎಲ್ಲೂ ಪೆಟ್ಟು ಬಿದ್ದಿರಲಿಲ್ಲ. ಅಥವಾ ಎಲ್ಲೂ ಗಾಯ ವಾಗಿರಲಿಲ್ಲ ಅವರು ಹೋದ ಮೇಲೆ ಪೋಲೀಸ್‌ನವರು ಆತನನ್ನು ಹೊಡೆದು ಬೇರೆ ರೂಮೊಂದರಲ್ಲಿ ಕೂಡಿ ಹಾಕಿದ್ದಾರೆ. ಆ ಮುದುಕ ಪೋಲೀಸ್ ಠಾಣೆಯಲ್ಲೇ ಉರುಲು ಹಾಕಿಕೊಂಡಿದ್ದಾನೆ. ಆ ರೀತಿ ಪೋಲೀಸ್‌ನವರು ಹೇಳುತ್ತಾರೆ. ೭೦ ವರ್ಷ ವಯಸ್ಸಿನ ಮುದುಕ ಉರುಳು ಹಾಕುವುದಾದರೆ ಹೇಗೆಂಬುದನ್ನು ವಿಮರ್ಶೆ ಮಾಡಬೇಕು. ಆ ರೂಮಿನಲ್ಲಿ ಪೋಲೀಸ್‌ನವರ ಪೆಟ್ಟಿಗೆಗಳು ಇವೆ. ಇದನ್ನು ನಾನು ಸ್ವತಃ ಭೇಟಿ ನೀಡಿದಾಗ ನೋಡಿದ್ದೇನೆ. ಆ ರೂಮಿನಲ್ಲಿದ್ದ ಪೆಟ್ಟಿಗಳಲ್ಲಿ ಮೂರನ್ನು ಒಂದರ ಮೇಲೆ ಒಂದರಂತೆ ಏರಿಸಿ ನಂತರ ಅದರ ಮೇಲೆ ನಿಂತುಕೊಂಡು ಮಾಳಿಗೆಗೆ ಹಗ್ಗ ಹಾಕಿಕೊಂಡು ಉರುಲು ಹಾಕಿಕೊಂಡಿದ್ದಾನೆ ಎಂಬುದಾಗಿ ಅವರು ಹೇಳುತ್ತಾರೆ. ಆ ಹಗ್ಗ ಸುಮಾರು ೩೨ ಸುತ್ತು ಇದೆ. ಈ ಹಗ್ಗ ಎಲ್ಲಿಂದ ಬಂತು ಎಂಬುದಾಗಿ ಕೇಳಿದರೆ, ಅದು ನಮಗೆ ಗೊತ್ತಿಲ್ಲವೆಂದು ಸೆಂಟ್ರಿಯವರು ಹೇಳುತ್ತಾರೆ, ಇದನ್ನು ನೋಡಿದಾಗ ಅವನ ಸಾವಿಗೆ ಪೋಲೀಸ್‌ನವರೇ ಮುಖ್ಯ ಕಾರಣರು ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಪೋಲೀಸ್‌ನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ಮಗ ಶವ ಪರೀಕ್ಷೆ ಮಾಡಿದಾಗ, ಕುತ್ತಿಗೆಯ ಭಾಗದಲ್ಲಿ ರಕ್ತ ಗಂಟು ಆಗಿದ್ದನ್ನು ನೋಡಿದ್ದೇನೆಂದು ಹೇಳಿ ದ್ದಾನೆ. ಕಾಲುಗಳ ಮೇಲೆ ಹೊಡೆತದ ಗಾಯ ಇತ್ತು ಎಂಬುದಾಗಿ ಹೇಳಿದ್ದಾನೆ. ಪೋಲೀಸ್‌ನವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹವಲ್ದಾರ್‌ರವರ ಮೇಲೆ ತೀವ್ರ ರೀತಿಯ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು,—ಮಾನ್ಯ ಕೆ. ಕುಶಾಲ ಅವರು ಸಭೆಯಲ್ಲಿಲ್ಲ. ಮಾನ್ಯ ಕೋಳಿವಾಡ್ ಅವರು ಸಭೆ ಯಲ್ಲಿ ಇಲ್ಲ. ಮಾನ್ಯ ಧರ್ಮಸಿಂಗ್ ಅವರು ಸಭೆಯಲ್ಲಿ ಇಲ್ಲ, ಮಾನ್ಯ ಮಲ್ಲಾರಿಗೌಡ ಪಾಟೀಲ್ ಅವರೇ ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ವಿಷಯವನ್ನು ನಾಳೆ ಮುಂದುವರೆಸೋಣ.

ಅಧ್ಯಕ್ಷರು.—ಇವತ್ತೇ ಈ ವಿಷಯ ಮುಗಿಯಬೇಕೆಂದು ಸಭೆಯ ಅಭಿಪ್ರಾಯವಾಗಿದೆ

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಇವತ್ತೇ ಚರ್ಚೆಯಾಗಬೇಕೆಂದು ಹಠ ಮಾಡಿದವರು ನಾವೆಲ್ಲ. ಇವತ್ತೇ ಚರ್ಚೆಯಾಗಬೇಕೆಂದು ತಾವು ಹೇಳಿದ್ದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಇದು ಬಹಳ ಮಹತ್ವದ ವಿಚಾರ. ಇವತ್ತೇ ಪೂರ್ತಿಯಾಗಲಿ.

(ಗೊಂದಲ)

ಶ್ರೀ ಧರ್ಮಸಿಂಗ್,—ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನೂ ಮಾತನಾಡಬೇಕಾಗಿದೆ.

ಅಧ್ಯಕ್ಷರು,—ನಿಮ್ಮ ಹೆಸರು ಕರೆದಾಗ ನೀವು ಇರಲಿಲ್ಲ.

ಶ್ರೀ ಧರ್ಮಸಿಂಗ್.—ನನ್ನ ಹೆಸರು ಕರೆದಾಗ ಕೇಳಿಸಲಿಲ್ಲ. ನಾನು ಅಲ್ಲಿಂದ ಬರುತ್ತಾ ಇದ್ದೆ ನನಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ತಮ್ಮ ಪಕ್ಷದ ಮುಖ್ಯ ಸಚೇತಕರೇ ಈಗ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇನ್ನೂ ೮-೧೦ ಜನ ಮಾತನಾಡುವವರಿದ್ದಾರೆ. ಇವತ್ತೇ ಮುಗಿಯಬೇಕೆಂದರೆ ಬಹಳ ವಿಳಂಬವಾಗುತ್ತದೆ.

ಅಧ್ಯಕ್ಷರು.—ಇವತ್ತೇ ಆಗಬೇಕೆಂದು ತಾವೇ ಹೇಳಿದಿರಿ. ಈಗ ಏಕೆ ಇಷ್ಟು ನಿರಾಸಕ್ತಿ?

ಶ್ರೀ ಎಸ್, ಬಂಗಾರಪ್ಪ.—ಇವತ್ತೇ ಮುಗಿಸಬೇಕೇ?

ಅಧ್ಯಕ್ಷರು.—ಸಭೆಯ ಅಭಿಪ್ರಾಯ ಹಾಗೆ ಇದೆ. ವಿರೋಧಪಕ್ಷದ ನಾಯಕರು ಹಾಗೂ ಸಭಾ ನಾಯಕರಿಬ್ಬರ ಅಭಿಪ್ರಾಯ ಅದೇ ಆಗಿದೆ. ಇವರ ಅಭಿಪ್ರಾಯವೇ ಆಯಾ ಪಕ್ಷಗಳ ಅಭಿಪ್ರಾಯ ಇವರು ಇವತ್ತೇ ಮುಗಿಸಬೇಕೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ತಾವು ೫-೧೦ ನಿಮಿಷ ಕಾಲಾವಕಾಶ ಕೊಡುತ್ತೀರಿ. ಅಷ್ಟರಲ್ಲಿ ನಾವು ಎಲ್ಲಾ ವಿಷಯಗಳನ್ನು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—೨ ಗಂಟೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ ೬೮ರ ಕೆಳಗೆ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಯಮ ೬೮ರ ಕೆಳಗೆ ಇಲ್ಲಿ ೩-೪ ದಿವಸ ಚರ್ಚೆಯಾದ ನಿದರ್ಶನಗಳು ಇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಚರ್ಚೆ ಇವತ್ತೇ ಮುಗಿಯಬೇಕಾಗಿದೆ.

ಶ್ರೀ ಜಿ. ನಾರಾಯಣಕುಮಾರ್.—ನಾಳೆ ಬೆಳಿಗ್ಗೆ ೬ಗಂಟೆಯಾದರೂ ಸರಿಯೇ ಸತತ ಚರ್ಚೆಯಾಗಿ ಈ ವಿಷಯ ಮುಗಿಯಲೇಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ೬ ಗಂಟೆಯಾಯಿತು. ಇನ್ನೂ ೮-೯ ಜನ ಮಾತನಾಡುವವರಿದ್ದಾರೆ.

ಅಧ್ಯಕ್ಷರು.—ಒಬ್ಬೊಬ್ಬರಿಗೆ ೫ ನಿಮಿಷ ಅವಕಾಶ ಕೊಡುತ್ತೇನೆ, ಮಾನ್ಯ ಖರ್ಗೆ ಅವರು ಹಾಗೂ ಶ್ರೀನಿವಾಸ್ ಅವರು ಎಲ್ಲವನ್ನೂ ಹೇಳಿದ್ದಾರೆ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕಡಿಮೆ ಎಂದರೆ ೩-೪ ತಾಸು ಆಗುತ್ತದೆ. ಎಂದರೆ, ನಾವು ರಾತ್ರಿ ೧೦-೧೧ ಗಂಟೆಯವರೆಗೆ ಕೊಡಬೇಕೇ?

ಅಧ್ಯಕ್ಷರು.—ಸಭೆ ನಡೆಸುವುದಕ್ಕೆ ಬೆಳಿಗ್ಗೆಯೂ ತೊಂದರೆ ಕೊಟ್ಟಿರಿ, ಈಗಲೂ ತಾವು ತೊಂದರೆ ಕೊಡುತ್ತಿದ್ದೀರಿ.

೬-೦೦ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ಅನೇಕ ವಿಚಾರಗಳು ಇರುವುದರಿಂದ ಟೈಮ್ ಜಾಸ್ತಿ ಬೇಕಾಗುತ್ತದೆ.

ಅಧ್ಯಕ್ಷರು ಮಾತನಾಡಲಿಕ್ಕೆ ತಮಗೆ ಅವಕಾಶ ಕೊಡುತ್ತೇನೆ. ಯಾರೂ ಮಾತನಾಡದಿದ್ದರೆ ಉತ್ತರ ಹೇಳಲಿಕ್ಕೆ ಮಂತ್ರಿಗಳನ್ನು ಕರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವು ವಿನಂತಿ ಮಾಡಿಕೊಳ್ಳುತ್ತೇವೆ. ನಾವು ದೊಡ್ಡ ಮ್ಯಾಜಿಕ್ ಮಾಡುವುದಕ್ಕೆ ಆಗುತ್ತದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಸಮಯ ಸಾಲದೆಂದು ಹೇಳುತ್ತಿದ್ದಾರೆ ಅವರಿಗೆ ಮಾತನಾಡಲಿಕ್ಕೆ ೧ ಗಂಟೆ ಸಮಯ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ನಾವು ವಿಷಯದಮೇಲೆ ಬೆಳಕು ಹರಿಸುತ್ತೇವೆ. ಬೇರೆಯವರಿಗೆ ಸಮಯ ಬೇಡವೆ? ನಿಮಗೂ ಬೇರೆ ಬೇರೆ ಕಾರ್ಯಕ್ರಮಗಳು ಇರುತ್ತವೆ ಅದಕ್ಕೋಸ್ಕರ ಹೇಳುತ್ತಿದ್ದೇನೆ, ಬೇರೆ ಬೇರೆ ವಿಷಯಗಳು ಬರುತ್ತವೆ. ಆ ವಿಷಯಗಳಿಗೂ ಇದೇರೀತಿ ಕುಳಿತುಕೊಳ್ಳಬೇಕಾಗುತ್ತದೆ. ಆಗ ಹೌಸ್ ಅಡ್ಜರ್ನ್ ಮಾಡಬಾರದು.

† ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ೧೯೮೩ರ ಚುನಾವಣೆಯ ನಂತರ ಇತ್ತೀಚೆಗೆ ರಾಜಕೀಯ ಬದಲಾವಣೆಯಿಂದ ಹಿಂದುಳಿದ ಸಮಾಜ ಪರಿಶಿಷ್ಟಜಾತಿ ಜನಾಂಗದವರ ಮೇಲೆ ನಡೆಯುತಕ್ಕ ದೌರ್ಜನ್ಯದ ಬಗ್ಗೆ ಇವತ್ತು ಈ ಸದನದಲ್ಲಿ ಚರ್ಚೆ ಮಾಡತಕ್ಕ ಅವಕಾಶ ಬಂದಿದೆ. ರಾಜಕೀಯ ಬದಲಾವಣೆಯಾಗುವುದು ಸಹಜ. ಆದರೆ ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಎಂದರೆ, ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸಮಾಜದಲ್ಲಿ ದುರ್ಬಲ ವರ್ಗದವರ ಮೇಲೆ ಏನೊಂದು ದೌರ್ಜನ್ಯ ನಡೆಯುತ್ತಿದೆ ಅದು ಪ್ರತಿಯೊಂದು ಹಳ್ಳಿಯಲ್ಲೂ ನಡೆಯುತ್ತಿದೆ. ಆದು ಆ ಕಡೆಯ ಶಾಸಕರಿಗೂ ಗೊತ್ತಿದೆ, ನಾವು ಕೂಡ ಅನುಭವಿಸುತ್ತಿದ್ದೇವೆ. ಬೆಳಗಾಂ ಜಿಲ್ಲೆಯ ಬೆಂಡಿಗೇರಿಯಲ್ಲಿ ಆಗಿರಬಹುದು, ಹುಕ್ಕೇರಿ ತಾಲ್ಲೂಕಿನಲ್ಲಿ ಆಗಿರಬಹುದು ರಾಜ್ಯದಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ನಡೆಯುತಕ್ಕ ದೌರ್ಜನ್ಯಗಳ ಬಗ್ಗೆ ಯಾವ ಒಂದು ಅನುಕಂಪ ಆಡಳಿತ ಪಕ್ಷದ ಸದಸ್ಯರಿಗೆ ಇರಬೇಕಾಗಿತ್ತೋ ಅದು ಇಲ್ಲವಾಗಿದೆಯೆಂದು ನಾನು ತಮ್ಮ ಮುಖೇನ ಅವರ ಮೇಲೆ ಆರೋಪ ಮಾಡುತ್ತಿದ್ದೇನೆ, ಈಗಾಗಲೇ ನಮ್ಮ ವಿರೋಧ ಪಕ್ಷದ ಕಡೆಯಿಂದ ಹೇಳಿದ್ದಾರೆ ಸರ್ಕಾರ ನಡೆಸತಕ್ಕ ಮಂತ್ರಿಗಳಿಗೆ ಪಕ್ಷಾತೀತವಾದ ರಾಜಕೀಯ ಹಿನ್ನೆಲೆ ಇರಬೇಕಾಗುತ್ತದೆ ಪಕ್ಷ ಯಾವುದೇ ಇರಬಹುದು, ಪಕ್ಷದ ರಾಜಕೀಯ ಹಿನ್ನೆಲೆ ಏನೇ ಇರಬಹುದು ಆದರೆ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿವರ್ಯರಿಗೆ ಪಕ್ಷಾತೀತವಾದ ಮನೋಭಾವ ಸ್ವಾಭಾವಿಕವಾಗಿ ಬರಬೇಕಾಗುತ್ತದೆ. ಬಡತನದಲ್ಲಿರತಕ್ಕ ಜನರ ಮೇಲೆ ನಡೆಸತಕ್ಕ ದಬ್ಬಾಳಿಕೆ ಅನಾಹುತವನ್ನು ಸಮಾಜದಲ್ಲಿರತಕ್ಕ ಪಟ್ಟಭದ್ರ ಹಿತಾಸಕ್ತಿಗಳು, ಬೇರೆ ಸಮಾಜದ ಪಟ್ಟಭದ್ರಹಿತಾಸಕ್ತಿಗಳು ಅಥವಾ ರಾಜಕೀಯ ಪಟ್ಟಭದ್ರಹಿತಾಸಕ್ತಿಗಳು ನಡೆಸುತ್ತಿದ್ದರೆ ಅವರನ್ನು ಮುಗಿಸುತ್ತೇವೆ ಎನ್ನುವ ಧೈರ್ಯ ಸರ್ಕಾರಕ್ಕೆ ಇರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅವರಿಗೆ ೨೫-೩೦ ವರ್ಷಗಳ ರಾಜಕೀಯ ಅನುಭವವಿದೆ, ಇವತ್ತು ಏನು ನಡೆಯುತ್ತಿದೆ ಎಂಬುದು ಅವರಿಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜನರ ಮೇಲೆ ಹಳ್ಳಿಗಳಲ್ಲಿ ಕೆಲವೊಂದು ಕಡೆಗೆ ಮಂಡಲಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಚುನಾವಣೆ ಆದ ನಂತರ ದೂರುಗಳು ಇಲ್ಲದೇ ಇರತಕ್ಕ ಊರುಗಳು ಇಲ್ಲ. ಮಂಡಲ ಪಂಚಾಯತಿ ನಮ್ಮ ಪಕ್ಷದ್ದು ಇರಬಹುದು ಅಥವಾ ಜನತಾ ಪಕ್ಷದ್ದು ಇರಬಹುದು. ಅವರಲ್ಲಿರತಕ್ಕ ಭಿನ್ನಾಭಿಪ್ರಾಯ ಇರಬಹುದು ಇದರ ಹಿನ್ನೆಲೆಯಲ್ಲಿ ಕೆಲವೊಂದು ಪಟ್ಟಭದ್ರಹಿತಾಸಕ್ತಿಗಳು ಏನೊಂದು ದಬ್ಬಾಳಿಕೆಯನ್ನು ಪರಿಶಿಷ್ಟ ಜನರ ಮೇಲೆ ಮಾಡುತ್ತಿದ್ದಾರೆ ಅದಕ್ಕೆ ಕಡಿವಾಣ ಹಾಕದಿದ್ದರೆ ನಿಮ್ಮ ಪಕ್ಷಕ್ಕೆ ಮಾನ್ಯ ಶ್ರೀನಿವಾಸ್‌ರವರು ಹೇಳಿದ ಪ್ರಕಾರ ಒಳ್ಳೆಯ ಹೆಸರು ಬರುವುದಿಲ್ಲ

ಮಾನ್ಯ ಮುಖ್ಯಮಂತ್ರಿಗಳು ನವೆಂಬರ್ ತಿಂಗಳಿನಲ್ಲಿ ಬೆಳಗಾವಿಗೆ ಬಂದಿದ್ದರು, ಅವರು ಬೆಂಡಿಗೇರಿ ಗ್ರಾಮಕ್ಕೆ ಹೋಗಿ ಬಂದಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ದುರ್ದೈವದಿಂದ ಸಮಯಾವಕಾಶ ಇಲ್ಲದೇ ಇದ್ದುದರಿಂದ ಅವರು ಅಲ್ಲಿಗೆ ಹೋಗಿಬರಲಿಲ್ಲ. ಅವರು ಅಲ್ಲಿಗೆ ಹೋಗಿ ಬಂದಿದ್ದರೆ, ಇಲ್ಲಿಯವರೆಗೆ ನಡೆದಂಥ ಘಟನೆಗಳ ಹಿನ್ನಲೆಯಲ್ಲಿ ನೇರವಾಗಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬಹುದಿತ್ತು.

ಅಧ್ಯಕ್ಷರು.—ಶ್ರೀ ಖರ್ಗೆಯವರು ಇದನ್ನು ಸವಿಸ್ತಾರವಾಗಿ ಹೇಳಿದ್ದಾರೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಶ್ರೀ ಖರ್ಗೆಯವರು ಹೇಳಿರಬಹುದು. ಅದರ ಜೊತೆಗೆ ಕೆಲವೊಂದು ವಿಷಯಗಳನ್ನು ನಾನೂ ಹೇಳಬೇಕಾಗುತ್ತದೆ. ಅವರು ಯಾವುದೇ ಸಮಾಜದವರು ಇರಬಹುದು. ಯಾವುದೇ ಸಮಾಜದ ಹಿನ್ನಲೆಯಲ್ಲಿ ಬೆಳೆದವರು ಇರಬಹುದು. ಆದರೆ ಯಾವ ಸಮಾಜದಿಂದ ಈ ಒಂದು ಪರಿಶಿಷ್ಟ ವರ್ಗದ ರಕ್ಷಣೆ ಆಗಬೇಕಾಗುತ್ತದೆ, ಅಂತಹ ಸಮಾಜಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ, ಮಾಡಿರತಕ್ಕಂಥ ಕಾರ್ಯ ಸರಿಯಿಲ್ಲವೆಂದು ಈ ಕಾರ್ಯಕ್ಕೆ ಹೋಗತಕ್ಕಂಥ

ಅವರ ಧೈರ್ಯಕ್ಕೆ ಕಡಿವಾಣ ಹಾಕಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ ತಮಗೆ ಸರ್ಕಾರದ ಬೆಂಬಲ ಇದೆ, ಮಂತ್ರಿಗಳ ಬೆಂಬಲ ಇದೆ, ರಾಜಕೀಯ ಬೆಂಬಲ ಇದೆಯೆಂದು ಏನು ಬೇಕಾದರೂ ಮಾಡಿ ಬಿಡಿಸಿಕೊಳ್ಳತಕ್ಕಂಥ ವಿಶಿಷ್ಟ ಬೆಂಬಲ ಇರುವುದರಿಂದ ಆ ಜನರಿಗೆ ಯಾವ ಭಯವೂ ಇರುವುದಿಲ್ಲ. ಈ ರಾಜಕೀಯ ಬೆಂಬಲ ಇರತಕ್ಕಂಥ ಸಮಾಜಕ್ಕೆ ಯಾವ ಹಿಂಜರಿಕೆಯೂ ಇರುವುದಿಲ್ಲ. ಏನು ಬೇಕಾದರೂ ಅವರು ಮಾಡುತ್ತಾರೆ. ಬೆಂಡಿಗೇರಿಯಲ್ಲಿ ನಡೆದಂಥ ಘಟನೆಯಿಂದ ಇಡೀ ಸಮಾಜಕ್ಕೆ ಅಲ್ಲ, ಇಡೀ ರಾಷ್ಟ್ರಕ್ಕೆ ತಲೆತಗ್ಗಿಸತಕ್ಕಂಥ ಸಂದರ್ಭ ಬಂದಿದೆ. ಯಾವ ಸಮಾಜದ ಪಾಲನೆ ಪೋಷಣೆ ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ, ಅವರ ಆರ್ಥಿಕ ಮಟ್ಟವನ್ನು ಎತ್ತರಿಸಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ, ಅದು ಆಡಳಿತ ಪಕ್ಷದವರು ಇರಬಹುದು ಅಥವಾ ವಿರೋಧ ಪಕ್ಷದವರಾದ ನಾವು ಇರಬಹುದು. ಈ ಜವಾಬ್ದಾರಿಯನ್ನು ಇವತ್ತಿನ ದಿವಸ ಮರೆತು ಬೆಂಡಿಗೇರಿ ಗ್ರಾಮದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಯಾವ ತಪ್ಪಿತಸ್ಥರ ಮೇಲೂ ಕ್ರಮವನ್ನು ತೆಗೆದುಕೊಂಡಿಲ್ಲ. ಯಾವುದೇ ಸರ್ಕಾರ ಇರಬಹುದು. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಏನೆಂದರೆ ಇಷ್ಟು ದಿವಸಗಳಾದರೂ ಈ ಘಟನೆ ಏನು ನಡೆದಿದೆ, ಅದಕ್ಕೆ ಆರೋಪಿಗಳು ಯಾರು ಇದ್ದಾರೆ, ಅದರ ಮೇಲೆ ರಿಪೋರ್ಟ್ ಬಂದಮೇಲೂ ಕೂಡ ಏಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ? ತಮ್ಮ ಮೇಲೆ ಅವರ ಒತ್ತಡ ಇದೆ, ಹಿಡಿತ ಇದೆ. ಅದಕ್ಕೆ ತಾವು ಮಣಿಯುತ್ತಿದ್ದೀರಿ ಎಂಬ ಆರೋಪವನ್ನು ತಮ್ಮ ಮುಖಾಂತರ ನಾನು ತಮ್ಮ ಮೇಲೆ ಮಾಡಬೇಕಾಗುತ್ತದೆ. ಇವತ್ತು ಎಲ್ಲಾ ಕಡೆಗಳಲ್ಲಿ, ನಮ್ಮಲ್ಲಿಯೂ ಕೂಡ ಇದು ನಡೆದಿದೆ. ನಮ್ಮ ಮತಕ್ಷೇತ್ರದಲ್ಲಿ ಕೂಡ ನಡೆದಿದೆ. ಪ್ರತಿಯೊಂದು ಮತಕ್ಷೇತ್ರದಲ್ಲಿ ಇರತಕ್ಕಂಥ ಶಾಸಕರು ಯಾವುದೇ ಪಕ್ಷದ ಶಾಸಕರು ಇರಬಹುದು. ಇದನ್ನು ಯಾರು ಮಾಡಿದರೂ ಕೂಡ ಅವರಿಗೆ ಬುದ್ಧಿವಾದ ಹೇಳಬೇಕಾಗುತ್ತದೆ. ಈ ಜಿಲ್ಲೆಯ ಮಂತ್ರಿಗಳಾಗಲೀ, ಉಸ್ತುವಾರಿ ಮಂತ್ರಿಗಳಾಗಲೀ, ಈ ಜಿಲ್ಲೆಯಲ್ಲಿ ಇರತಕ್ಕಂಥ ರಾಜ್ಯಮಂತ್ರಿಗಳಾಗಲೀ ಇದರ ಕಡೆಗೆ ಲಕ್ಷ್ಯಕೊಟ್ಟು ನಮ್ಮ ಪಕ್ಷದ ಸದಸ್ಯರು ಇರಬಹುದು, ಬೇರೆ ಪಕ್ಷದ ಸದಸ್ಯರು ಇರಬಹುದು, ಇಂತಹ ಘಟನೆಗಳನ್ನು ಮಾಡಬೇಡಿರಿ, ಇದು ಸರಿಯಾಗುವುದಿಲ್ಲ ಎಂದು ಹೇಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಕಳೆದ ಎರಡು—ಮೂರು ದಿವಸಗಳ ಹಿಂದೆ ಒಂದು ಘಟನೆ ನಡೆದಿದೆ. ೧೫ ವರ್ಷದ ಸ್ಕೂಲ್ ಹುಡುಗ ಯಾವುದೋ ಸಂಕ್ರಮಣ ಜಾತ್ರೆಯಲ್ಲಿ ಹೋಗಿ ಸ್ವಲ್ಪ ಬ್ರೇಕ್ ಡ್ಯಾನ್ಸನ್ನು ನೋಡತಕ್ಕಂಥ ಸಂದರ್ಭದಲ್ಲಿ ಆ ಮಗುವನ್ನು ಪೋಲೀಸರು ಕರೆದುಕೊಂಡು ಹೋಗಿದ್ದಾರೆ. ಆ ಹುಡುಗನ ಹೆಸರನ್ನು ಇಲ್ಲಿ ನಾನು ಹೇಳುತ್ತೇನೆ, ಮಲ್ಲಪ್ಪ ಹೂವಪ್ಪ ಮಾದರ್, ಅರವಳ್ಳಿ ವಿಲೇಜ್, ಖಾನಾಪುರ ತಾಲ್ಲೂಕ್, ಈ ಹುಡುಗ ಇಲ್ಲಿಯವರೆಗೂ ಪತ್ತೆ ಇಲ್ಲ. ೧೫ ವರ್ಷದ ಈ ಹುಡುಗನನ್ನು ಜಾತ್ರೆಯಲ್ಲಿ ಬ್ರೇಕ್‌ಡ್ಯಾನ್ಸ್ ನೋಡಲಿಕ್ಕೆ ಹೋದಾಗ ಕರೆದುಕೊಂಡು ಹೋಗಿ ಇಲ್ಲದ ಸಲ್ಲದ ಆರೋಪ ಹೊರಿಸಿ ಕೊಲೆ ಮಾಡಿದ್ದಾರೆ. ಇದು ಯಾರಿಂದ ನಡೆದಿದೆ ಎಂದರೆ ಪೋಲೀಸರಿಂದ ನಡೆದಿದೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಈ ಪೋಲೀಸರಿಗೆ ಇಷ್ಟೊಂದು ಮತ್ತು ಏರತಕ್ಕಂಥ ಸಂದರ್ಭ ಬರಬೇಕಾದರೆ ಇದಕ್ಕೆ ಏನು ಕಾರಣ ? ಈ ಕಾರಣವನ್ನು ತಾವು ಏನಾದರೂ ತನಿಖೆ ಮಾಡಲಿಕ್ಕೆ ಹಾಕದೇ ಇದ್ದರೆ, ಇಡೀ ರಾಷ್ಟ್ರದ ಪರಿಸ್ಥಿತಿಯನ್ನು ಇವೊತ್ತು ನೋಡಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು, ಸದನದ ನಾಯಕರು ಈ ಸದನದಲ್ಲಿ ಇರುವುದರಿಂದ ಈ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇವತ್ತು ನಮ್ಮ ಪಕ್ಷ ಇರಬಹುದು. ಅಥವಾ ನಿಮ್ಮ ಪಕ್ಷ ಇರಬಹುದು. ಈ ಒಂದು ವಿಷಯವನ್ನು ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕು, ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ವಿಶೇಷವಾಗಿ ಎಸ್.ಪಿ.ಗಳ ಸಭೆ ಮಾಡಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಅಧಿಕಾರಿಗಳಲ್ಲಿ ಸಾರ್ವಜನಿಕರ ಮೇಲೆ ಅನುಕಂಪ ಇಲ್ಲ ಅಧಿಕಾರಿಗಳಿಗೆ ಏನೋ ಒಂದು ರೀತಿಯ ಮನೋಭಾವನೆ ಬಂದಿದೆ. ಈ ಮನೋಭಾವನೆಯನ್ನು ಕುಗ್ಗಿಸದೇ ಹೋದರೆ, ಪತ್ರಿಕಾಕರ್ತರ ಮೇಲೆ ಕೈ ಮಾಡುತ್ತಾರೆ, ಎಂ.ಎಲ್.ಎ, ಮೇಲೆ ಕೈ ಮಾಡುತ್ತಾರೆ, ಒಂದು ದಿನ ನಿಮ್ಮ ಮೇಲೂ ಕೈ ಮಾಡುತ್ತಾರೆ. ಅಲ್ಲಿಗೆ ಔದ್ಯೋಗಿಕ ಸಹಕಾರ ಮಂತ್ರಿಗಳೂ ಹೋಗಿದ್ದಾರೆ, ಅಲ್ಲಿ ಏನಾಗಿದೆ ಎಂದರೆ, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಯಾರಿಗೆ ರಕ್ಷಣೆ ಮಾಡಬೇಕಾ

ಗಿತ್ತೋ ಅವರನ್ನು ರಕ್ಷಣೆ ಮಾಡಿಲ್ಲ. ಹರಿಜನರ ಮೇಲೆ ದೌರ್ಜನ್ಯ ಮಾಡಿದವರ ಬಗ್ಗೆ ಸಸ್ಪೆಂಡ್‌ನಲ್ಲಿ ಇಡುವುದಕ್ಕಾಗಿಲ್ಲ, ಇವೊತ್ತು ಈ ದೇಶದ ಸಾಮಾನ್ಯ ಪ್ರಜೆ ಇರಬಹುದು, ಅಥವಾ ಎಂ.ಎಲ್.ಎ. ಇರಬಹುದು, ಅವರನ್ನು ಅನುಕಂಪದಿಂದ ನೋಡಿಲ್ಲ. ಹರಿಜನರ ಮೇಲೆ ದೌರ್ಜನ್ಯ ನಡೆದಿರುವ ಘಟನೆಗಳಲ್ಲಿ ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿ ಇಟ್ಟಿದ್ದೀರಿ ಎಂದು ಕೇಳಬೇಕಾಗುತ್ತದೆ ? ಆದುರಿಂದ, ಈ ರೀತಿಯ ದೌರ್ಜನ್ಯದ ಬಗ್ಗೆ ತನಿಖೆ ಮಾಡಿ, ನಡೆದಂಥ ದೌರ್ಜನ್ಯದ ಹಿನ್ನೆಲೆಯಲ್ಲಿ ಆ ಸಮಾಜದ, ಕುಟುಂಬಕ್ಕೆ ಆಗಿರತಕ್ಕಂಥ ಮಾನಸಿಕ ತೊಂದರೆ ನಿವಾರಣೆಗೆ ಸರ್ಕಾರದವರು ಕಡಿವಾಣ ಹಾಕದೇ ಹೋದರೆ, ಇದು ನಿಲ್ಲುವುದಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ನಂಜಯ್ಯನಮಠ್ ಅವರು ಮಾತನಾಡಿ — ಇವರು ಅಬ್ಸೆಂಟ್. ಹಾಗಾದರೆ ಮಾನ್ಯ ಬಂಗಾರಪ್ಪನವರು ಮಾತನಾಡಿ. ೧೫ ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರೀತಿಯಿಂದ ತಮಗೆ ೧ ಗಂಟೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ.

ಎಸ್ ಬಂಗಾರಪ್ಪ (ಸೊರಬ).— ಮಾನ್ಯ ಸಭಾಧ್ಯಕ್ಷರೇ, ರೂಲ್ ೬೯ರ ಪ್ರಕಾರ ಚರ್ಚೆ ಯಾಗುತ್ತಿರತಕ್ಕಂಥ ವಿಷಯ ಬಹಳ ಗಹನವಾದ ಮತ್ತು ಪ್ರಮುಖವಾಗಿರತಕ್ಕಂಥ ವಿಚಾರ ಎನ್ನ ತಕ್ಕಂಥ ಮಾತನ್ನು ನಾವೆಲ್ಲರೂ ಒಪ್ಪಿದ್ದೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಸಮಾಜದಲ್ಲಿರತಕ್ಕಂಥ ದುರ್ಬಲವರ್ಗದವರಿಗೆ, ಆರ್ಥಿಕವಾಗಿ ಸಾಮಾಜಿಕವಾಗಿ, ರಾಜಕೀಯವಾಗಿ, ಅತೀ ತುಳಿತಕ್ಕೆ ಸಿಕ್ಕಿರ ತಕ್ಕಂಥ ವರ್ಗಗಳಿಗೆ ನಾವು ಸುಮಾರಾಗಿ ದಲಿತರು ಎಂಬ ಅಭಿಪ್ರಾಯ ಇಟ್ಟು ಮಾತನಾಡುತ್ತೇವೆ. ಅದರಲ್ಲಿ ಹರಿಜನ ಗಿರಿಜನರು, ಅಲ್ಪಸಂಖ್ಯಾತರು, ಹಿಂದುಳಿದವರ್ಗದವರು ಸೇರಿಕೊಂಡಿರತಕ್ಕಂಥದ್ದು ವಿಚಾರಧಾರೆ. ಇವತ್ತು ಈ ವಿಚಾರವನ್ನು ನಾವು ಮಾತನಾಡಬೇಕಾದರೆ ಮೂಲಭೂತವಾಗಿ ಒಂದು ಅಂಶವನ್ನು ಗಮನಿಸಬೇಕು. ಯಾರು ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗಗಳಿದ್ದಾರೆ, ಸಪ್ರೆಸ್ಡ್ ಅಪ್ರೆಸ್ಡ್ ಎನ್ನತಕ್ಕಂಥ ಮಾತನ್ನು ನಾವು ಏನು ಹೇಳುತ್ತೇವೆ ಆ ವರ್ಗಗಳು ತಾವೇ ಸ್ವತಃ ತಮ್ಮ ಶಕ್ತಿ ಆಧಾರದ ಮೇಲೆ ತಮ್ಮ ಕಾಲ ಮೇಲೆ, ಕಾನೂನು ಪ್ರಜ್ಞೆ, ರಾಜಕೀಯ ಪ್ರಜ್ಞೆ, ಹಕ್ಕು ಬಾಧ್ಯತೆಗಳ ಪ್ರಜ್ಞೆ ಇದನ್ನು ಇಟ್ಟು ತಾವೇ ನಿಲ್ಲತಕ್ಕಂಥ ಸ್ವಶಕ್ತಿಯನ್ನು ಪಡೆದರೆ, ಆ ದಿನ ಸಂತೋಷ ಪಡತಕ್ಕಂಥ ದಿನ ಎಂದು ನಾನು ಭಾವಿಸಿಕೊಳ್ಳುತ್ತೇನೆ. ನಾವೆಲ್ಲರೂ ಕೂಡಾ ಇನ್ನೂ ಒಂದು ಪರಿಸ್ಥಿತಿ ಯಲ್ಲಿ ಸಿಲುಕಿಕೊಂಡಿದ್ದೇವೆ. ಈ ವರ್ಗಗಳು ಏನಿದ್ದಾವೆ ಇವುಗಳಿಗೆ ರಕ್ಷಣೆಯನ್ನು ಕೊಡತಕ್ಕಂಥ ವಿಚಾರವನ್ನು ನಾವು ಮಾತನಾಡುತ್ತೇವೆ ಈ ವರ್ಗಗಳು ರಕ್ಷಣೆಯನ್ನು ಕೇಳದೇ, ಸ್ವತ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಯನ್ನು ಮುಟ್ಟಬೇಕು. ಮುಟ್ಟದಿದ್ದರೆ ಈ ವರ್ಗ ಗಳಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ, ಸಮಾಜದಲ್ಲಿ ಯಾವ ವರ್ಗಗಳು ರಕ್ಷಣೆ ಕೊಡತಕ್ಕಂಥ ಶಕ್ತಿ ಯನ್ನು ಪಡೆದಿರುತ್ತವೆ ಆ ವರ್ಗಗಳ ಜವಾಬ್ದಾರಿಯಾಗುತ್ತದೆ. ಇವತ್ತು ಒಂದು ಸರ್ಕಾರ, ಕಾನೂನು ಪ್ರಕಾರ ಚುನಾಯಿತವಾಗಿ, ಬಹುಮತ ಪಡೆದು ಬಂದು ಒಂದು ಪಕ್ಷದ ಸರಕಾರ ರಚನೆ ಯಾದ ಕೂಡಲೆ ಅದು ಆ ಸರಕಾರದ ಜವಾಬ್ದಾರಿಯಾಗುತ್ತದೆ. ನಾವು ಅಂತಹ ಒಂದು ಕಾನೂನು ವ್ಯವಸ್ಥೆ, ಪೊಲಿಟಿಕಲ್ ಸಿಸ್ಟಮ್ ಮಾಡಿ ಇಟ್ಟುಕೊಂಡಿದ್ದೇವೆ. ಈ ಒಂದು ವರ್ಗಗಳಿಗೆ ಸಂಪೂರ್ಣ ವಾಗಿ ರಕ್ಷಣೆಯನ್ನು ಕೊಡತಕ್ಕಂಥ ಕರ್ತವ್ಯ ಆ ಒಂದು ಸರಕಾರದ ಮೇಲಿರುತ್ತದೆ. ನಾನು ಈ ಮಾತನ್ನು ಹೇಳಬೇಕಾದರೆ ಅದು ಯಾವುದೇ ಒಂದು ಪಕ್ಷದ ಸರಕಾರ ಇರಬಹುದು ಎಂದು ಹೇಳು ತ್ತಿದ್ದೇನೆ. ಹಿಂದೆ ಕಾಂಗ್ರೆಸ್ ಪಕ್ಷದ ಸರಕಾರ ಇದ್ದುದನ್ನು ನಾವು ನೋಡಿದ್ದೇವೆ. ನಾನು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತಗೊಳಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಬೇರೆ ವಿಚಾರಕ್ಕೆ ಈ ಸಂದರ್ಭದಲ್ಲಿ ನಾನು ಹೋಗುವುದಿಲ್ಲ. ಆಯಾ ರಾಜ್ಯದಲ್ಲಿರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ಆಯಾ ರಾಜ್ಯ ಸರಕಾರ ಗಳು ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಕೆಲವೊಮ್ಮೆ ಇದರಲ್ಲಿ ವ್ಯತ್ಯಾಸ ಬಂದಾಗ ಅದರ ಬಗ್ಗೆ ನಿಗಾ ಇಡಬೇಕಾದುದು ಕೇಂದ್ರ ಸರಕಾರದ ಕರ್ತವ್ಯ. ಕೆಲವೊಮ್ಮೆ ಸುತ್ತೋಲೆಗಳ ಮೂಲಕ, ಮಾತುಕತೆಗಳ ಮುಖಾಂತರ ಕೇಂದ್ರಕ್ಕೆ ಹೇಳತಕ್ಕಂಥಾದ್ದನ್ನು ನಾವು ಕಂಡಿದ್ದೇವೆ. ಕೇಳಿದ್ದೇವೆ. ಕಾಂಗ್ರೆಸ್ ಸರಕಾರ ಇದ್ದಾಗ ಸಮಾಜದಲ್ಲಿರತಕ್ಕಂಥ ಈ ವರ್ಗಗಳಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ ಯನ್ನು ಹೊತ್ತಿತ್ತು. ಆಗಲೂ ಕೂಡಾ ಈ ವರ್ಗಗಳಿಗೆ, ಹರಿಜನ ಗಿರಿಜನ, ಅಲ್ಪಸಂಖ್ಯಾತರ ಹಿಂದುಳಿದವರ್ಗಗಳು ಅಥವಾ ಯಾವುದೇ ಜಾತಿ ಗುಂಪಿಗೆ ಸೇರಿದಂಥ ಜನರಿದ್ದರೂ ಕೂಡಾ ಅಲ್ಲಿರ ತಕ್ಕಂಥ ದುರ್ಬಲವರ್ಗಗಳಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿಯನ್ನು ನಾವು ಹೊತ್ತಿದ್ದೆವು. ಅದು

ಸಾಲದು ಎನ್ನತಕ್ಕಂಥ ಕಾರಣದಿಂದ ಕಾಂಗ್ರೆಸ್ ಪಕ್ಷವನ್ನು ಚುನಾವಣೆಯಲ್ಲಿ ಜನ ಸೋಲಿಸಿದರು. ಸೋಲುವುದಕ್ಕೆ ಇದು ಕೂಡಾ ಒಂದು ಕಾರಣ ಆಗಿರಬಹುದು, ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಾರೆ. ಆದರೆ ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರ ಸೂತ್ರಗಳನ್ನು ಕೈಗೆ ತೆಗೆದು ಕೊಂಡಮೇಲೆ ಆ ಪಕ್ಷದ ಸರಕಾರದ ಜವಾಬ್ದಾರಿ ಇದಾಗುತ್ತದೆ. ಯಾವ ಹಿಂದಿದ್ದಂಥ ಸರಕಾರ ಈ ಕರ್ತವ್ಯ ನಿರ್ವಹಣೆ ಮಾಡತಕ್ಕಂಥ ವಿಚಾರದಲ್ಲಿ ಸಾಲದು ಎನ್ನತಕ್ಕಂಥ ಅಭಿಪ್ರಾಯ ದುರ್ಬಲವರ್ಗ ಗಳಿಗೆ, ದಲಿತ ವರ್ಗಕ್ಕೆ ಇತ್ತೊ, ಮತ್ತು ಅವರಿಗೆ ಅನುಕಂಪವನ್ನು ತೋರಿಸತಕ್ಕಂಥ ಬೇರೆ ವರ್ಗಗಳಿಗೆ ಇತ್ತೋ. ಈಗ ಸಂಪೂರ್ಣವಾಗಿ ಅದರ ಹೊಣೆಗಾರಿಕೆಯನ್ನು ಹೊತ್ತು ರಕ್ಷಣೆ ಕೊಡತಕ್ಕಂಥ ವಿಚಾರ, ಕಾನೂನು ಪ್ರಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಜವಾಬ್ದಾರಿ ಈ ಸರಕಾರದ ಮೇಲಿರುತ್ತದೆ. ಮೊನ್ನೆ ಮೊನ್ನೆ ತಾನೆ ಅವರ ೫ ವರ್ಷಗಳ ಆಡಳಿತ ಅಂತ್ಯದ ಸಮಾರಂಭವನ್ನು ಮಾಡಿ ಜನರಿಗೆ ತೋರಿಸಿದ್ದಾರೆ...

ಅಧ್ಯಕ್ಷರು.— ಅದು ಬಿಟ್ಟು ತಾವೀಗ ದೌರ್ಜನ್ಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀ ಎಂ. ರಾಮಪ್ಪ.— ತಾವೇ ರೂಲಿಂಗ್ ಕೊಟ್ಟು ಬಿಟ್ಟರಿ, ಎಂದರೆ ಇದನ್ನು ಒಪ್ಪಿಕೊಂಡ ಹಾಗೆ ಆಯಿತು.

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ, ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ ಅವರ ೫ ವರ್ಷಗಳ ಆಡಳಿತ ನೆನಪು ಮಾಡಿ ಕೊಡತಕ್ಕಂಥ ಸಮಾರಂಭವನ್ನು ಮಾಡಿದ್ದಾರೆ...

ಶ್ರೀ ರಾಮಕೃಷ್ಣ ಹೆಗಡೆ.— ಆಡಳಿತದ ಅಂತ್ಯ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಅಂದರೆ ತಾವು ೫ ವರ್ಷಗಳನ್ನು ದಾಟಿ ೬ನೇ ವರ್ಷಕ್ಕೆ ದಾಪು ಗಾಲಿಟ್ಟು ಹೋಗಿದ್ದೀರಿ ಎನ್ನುವ ಅರ್ಥದಲ್ಲಿ ನಾನು ಮಾತನಾಡಿದೆ. ನನ್ನ ಕನ್ನಡವನ್ನು ತಾವು ಅರ್ಥ ಮಾಡಿಕೊಂಡರೆ ಗೊತ್ತಾಗುತ್ತದೆ. ನೀವು ೫ ವರ್ಷಗಳ ಆಡಳಿತವನ್ನು ಮುಗಿಸಿ ಹೆಮ್ಮೆಯಿಂದ ತಲೆಗೊಂದು ಕಿರೀಟ, ಟೋಪಿ ಇಟ್ಟುಕೊಂಡು ಸಮಾರಂಭ ಮಾಡಿದಿರಿ. ಈ ಸಂದರ್ಭದಲ್ಲಿ ಯಾವ ಜವಾಬ್ದಾರಿ ನೀವು ಹೊತ್ತಿರೋ ಆ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥ ವಿಚಾರದಲ್ಲಿ ಲೋಪದೋಷ ಸರ್ಕಾರದಿಂದ ನಡೆದಿದೆ. ನಾವು ಮೂಲಭೂತವಾಗಿ ಈ ವಿಚಾರದಲ್ಲಿ ಮಾತನಾಡುವುದಾದರೆ ಸಂಪೂರ್ಣ ವಾಗಿ ಈ ಜವಾಬ್ದಾರಿ ನಿಮ್ಮ ಮೇಲಿದೆ ಕಾನೂನನ್ನು ರಚಿಸಿ, ಆ ಕಾನೂನನ್ನು ಕೈಗೆತ್ತಿಕೊಳ್ಳುವಂತಹ, ಕಾನೂನನ್ನು ಚಲಾವಣೆ ಮಾಡತಕ್ಕಂಥ ಹಕ್ಕು ಕರ್ನಾಟಕ ರಾಜ್ಯದ ಜನ ನಿಮ್ಮ ಕೈಗೆ ಕೊಟ್ಟಿರುವಾಗ ಅದನ್ನು ನೀವು ಚಲಾವಣೆ ಮಾಡತಕ್ಕಂಥ ವಿಚಾರದಲ್ಲಿ, ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪ ದೋಷವಾಗಿದೆ. ಆದ್ದರಿಂದ ಅದರ ಸಂಪೂರ್ಣ ಹೊಣೆಗಾರಿಕೆಯನ್ನು ನೀವೇ ಹೊರಬೇಕಾಗುತ್ತದೆ. ಇವತ್ತು ನಾವೊಂದು ವಿಚಾರವನ್ನು ವಿಚಾರ ಮಾಡೋಣ. ಹರಿಜನ ಮತ್ತು ಗಿರಿಜನರಿಗಾಗಲಿ, ಜನ ಸಾಮಾನ್ಯರಿಗಾಗಲಿ ಯಾವುದಾದರೊಂದು ತೊಂದರೆ ಬಂದರೆ, ವೈಯುಕ್ತಿಕ ಕಾರಣಗಳಿಂದ ತೊಂದರೆ ಯಾದರೆ, ಆಗಬಹುದು, ಅಥವಾ ರಾಜಕೀಯ ಕಾರಣದಿಂದಾಗಿ ತೊಂದರೆಯಾದರೆ ಫಿರ್ಯಾದುಗಳನ್ನು ಪೋಲೀಸು ಠಾಣೆಗಳಿಗೆ, ಕೋರ್ಟ್ ಕಛೇರಿಗಳಿಗೆ ಶಾಸನಸಭೆಗಳಿಗೆ ಮತ್ತು ಮಂತ್ರಿಗಳಿಗೆ ಶಾಸಕರಿಗೆ ಅಥವಾ ಅಧಿಕಾರಿಗಳಿಗೆ ದೂರುಗಳನ್ನು ಕೊಡುತ್ತಾರೆ, ಈ ಎರಡು ಕಾರಣಗಳಿಗಾಗಿ. ಆಗ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಈ ವಿಚಾರಗಳು ಗೊತ್ತಿರುತ್ತವೆ. ಮಂತ್ರಿಗಳಿಗೆ ಗೊತ್ತಿರುತ್ತವೆ. ಇತ್ತೀಚೆಗೆ ನಡೆದಿರತಕ್ಕಂಥ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಚುನಾವಣೆಗಳಿಗೆ ಸಂಬಂಧಪಟ್ಟಹಾಗೆ ರಾಜಕೀಯ ಕಾರಣಗಳ ಆಧಾರದ ಮೇಲೆ ಪಕ್ಷದ ಹೆಸರಿನ ಆಧಾರದ ಮೇಲೆ ಚುನಾವಣೆಗೆ ಸಂಬಂಧಪಟ್ಟ ಹಾಗೆ ಪಕ್ಷದ ಹೆಸರಿಗೆ ಸಂಬಂಧಪಟ್ಟಹಾಗೆ ದೂರುಗಳು ನಮ್ಮ ಗಮನಕ್ಕೆ ಬಂದಿವೆ. ಉದಾಹರಣೆಯಾಗಿ ಹೇಳುವುದಾದರೆ, ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕುರಕುಂಟಿ ಗ್ರಾಮದ ಮಂಡಲ ಪಂಚಾಯಿತಿ ಸದಸ್ಯರು ಹಿಂದುಳಿದ ವರ್ಗಕ್ಕೆ ಸೇರಿದ ಒಬ್ಬ ಕಾಂಗ್ರೆಸ್ ಸದಸ್ಯರು. ಅವರು ನನಗೆ ದಿನಾಂಕ ೨೮–೮–೮೭ರಲ್ಲಿ ಕಳುಹಿಸಿ ಕೊಟ್ಟಿರತಕ್ಕಂಥ ಅರ್ಜಿ. ಅವರು ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಕಳುಹಿಸಿದ್ದಾರೆ. ಅದರ ನಕಲು ನನ್ನಲ್ಲಿ ಇದೆ. ಇಲ್ಲಿ ದೂರು ಬಂದಿವೆ. ಅನೇಕ ಸಾರಿ ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆನ್ನುವ ವಿಚಾರ ಕೂಡ ಇಲ್ಲಿದೆ. ಅಲ್ಲಿ ಅಮರಣ್ಣ ಅಕಳಕುಂಪಿ ಇವರನ್ನು ಮಧ್ಯಾಹ್ನ

೧-೪೫ರ ಸಮಯದಲ್ಲಿ ಜುಲೈ ಒಂದನೇ ತಾರೀಖು ಬುಧವಾರ ೧೯೮೭ನೇ ಇಸವಿ ಸಿರವಾರ ಬಸ್ಸ್ಟ್ಯಾಂಡ್ ಸಮೀಪದಲ್ಲಿ ಸುಮಾರು ೧೫-೨೦ ಜನ ದುಷ್ಕರ್ಮಿಗಳು ಅದೂ ಜನತಾ ಪಕ್ಷದವರು ಸೇರಿಕೊಂಡು ಕೊಲೆ ಮಾಡಿದ್ದಾರೆ. ಇಂತಹ ವಿಷಯಗಳ ಬಗ್ಗೆ ಬರತಕ್ಕಂಥ ದೂರುಗಳ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಹೇಗೆ ? ಪಕ್ಷದ ಆಧಾರದ ಮೇಲೆ ಕೊಲೆಗಳು ನಡೆದರೆ, ಕೈಕಾಲುಗಳು ಮುರಿದು ಹಾಕಿದರೆ ಅನ್ಯಾಯಗಳು ನಡೆಯುತ್ತಿದ್ದರೆ ಪಕ್ಷಾತೀತವಾಗಿ ಕಾನೂನು ರಚನೆ ಮಾಡಿಟ್ಟುಕೊಂಡು ಅದನ್ನು ಚಲಾವಣೆ ಮಾಡದಿದ್ದರೆ ಹೇಗೆ ?

ಇವೊತ್ತು ತಮ್ಮ ಸರ್ಕಾರ ಬಂದಮೇಲೆ ಈ ಕಾನೂನು ಮಾಡಿದುದ್ದು. ಅಲ್ಲ ಈ ಮೊದಲೇ ನಾವು ಇದನ್ನು ರಚನೆ ಮಾಡಿಕೊಂಡಿದ್ದವು. ಇಲ್ಲಿ ಪ್ರಭಾವ ಇರತಕ್ಕಂಥವರು ಹಾಗೆಯೇ ಉಳಿದುಕೊಂಡರು, ಕೆಲವರನ್ನು ಅರೆಸ್ಟ್ ಮಾಡಬೇಕು ಎಂಬ ದೃಷ್ಟಿಯಿಂದ ಹೇಳಿದರೆ ಇವರು ಯಾರೂ ಅದಕ್ಕೆ ಗಮನ ಕೊಡಲಿಲ್ಲ, ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಯಾರು ಕೊಲೆ ಮಾಡಿದ್ದಾರೆ, ಅವರು ಇವೊತ್ತು ಆರಾಮವಾಗಿ ಇದ್ದಾರೆ, ಓಡಾಡುತ್ತಾ ಇದ್ದಾರೆ, ಎನ್ನತಕ್ಕ ವಿಚಾರ ಇದೆ. ಉದಾಹರಣೆಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೊಂದು ಇದನ್ನು ಯಾರು ಹೇಳಿದ್ದಾರೋ ಗೊತ್ತಿಲ್ಲ. ಹೇಳಿದ್ದರೆ ನಾನು ಅದನ್ನು ಹೇಳುವ ಅವಕಾಶ ಇರುತ್ತಿರಲಿಲ್ಲ. ಎಲ್ಲಪ್ಪ ರಾಮಪ್ಪ ಮಾಳಗಿ, ಮೊಕ್ಕಾಂ ಬೆಣಚನ ಮರಡಿ ತಾಲ್ಲೂಕು, ಗೋಕಾಕ್, ಬೆಳಗಾಂ ಜಿಲ್ಲೆ ೩-೧೨-೮೬ ರಲ್ಲಿ ಆದದ್ದು. ಪೂರ್ತಿ ವಿವರ ಹಾಗೂ ಆಧಾರಗಳನ್ನು ಕಳಿಸಿಕೊಟ್ಟಿದ್ದಾರೆ ಅದರಲ್ಲಿ ನನ್ನ ತಮ್ಮನಾದ ರಾಮಪ್ಪ ಕಂಪ್ಲೈಂಟ್ ಮಾಡಿದವನು ಎಲ್ಲಪ್ಪ, ರಾಮಪ್ಪ ರಾಮೋಜಿ ಮಾಳಗಿ ಮಂಡಲ್ ಉಪ ಪಧಾನ್ ಇವೊತ್ತು ಹಾಡು ಹಗಲಲ್ಲೇ ಗೋಕಾಕ್ ಶಿಹರ್‌ನಲ್ಲಿ ಕೊಲೆ ಆಗಿದೆ. ಕೊಲೆ ಆದ ಮೇಲೆ ಆರೋಪಿಗಳು ಅಲ್ಲೇ ಇದ್ದರೂ ಕೂಡ ಯಾರೂ ಅವರನ್ನು ತಪಾಸಣೆಗೆ ತೆಗೆದುಕೊಳ್ಳಲಿಲ್ಲ, ಕಂಪ್ಲೇಟ್ ಪ್ರಕಾರ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ೧೧ ಜನ ಕೂಡಿಕೊಲೆ ಮಾಡಿದ್ದಾರೆ. ಇವರುಗಳು ಈ ವಿಷಯವನ್ನು ಒಂದೇ ಸ್ಟ್ಯಾಂಪ್‌ನಲ್ಲಿ ತಿಳಿಸಿ ಕಂಪ್ಲೇಂಟ್ ಮಾಡಿದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ಹಾಗೂ ನನ್ನ ಚಿಕ್ಕಪ್ಪನ ಮಗ ವಿಠಲ ಅಚ್ಚಪ್ಪ ಮಾಳಗಿ ಹಾಗೂ ಬೇರೆಯವರ ಸಮಕ್ಷಮದಲ್ಲಿ ನಾವು ಅಲ್ಲೇ ನಿಂತಿದ್ದಕ್ಕೆ ಈ ರೀತಿ ಹೇಳಿದರು ನೀವು ಏನಾದರೂ ನಮ್ಮ ಬಗ್ಗೆ ಕಂಪ್ಲೇಂಟ್ ಮಾಡಿದರೆ ನಿಮ್ಮನ್ನು ಕೂಡ ಕೊಲೆ ಮಾಡುತ್ತೇವೆಂದು ಹೇಳಿದರು. ನಾವು ಸುಮ್ಮನೆ ನಿಂತುಕೊಂಡೆವು. ಇದೂ ಅಲ್ಲದೆ ಮೂರು ಜನ ನಮ್ಮನ್ನು ನಿಲ್ಲಿಸಿಕೊಂಡು ನೀವು ಮುಂದೆ ಬಂದರೆ ನಿಮ್ಮ ತಮ್ಮನ ಗತಿಯೇ ನಿಮಗೂ ಆಗುತ್ತದೆಂದು ಹೇಳಿದರು. ಇನ್ನು ಉಳಿದ ಮೂರು ಜನರನ್ನು ಮತ್ತೆ ಹೊಡೆಯಬೇಕೆಂದು ಯೋಜನೆ ಮಾಡಿದರು. ನಮ್ಮ ಹೆಣ ಸಹಸಿಗದಂತೆ ಮಾಡುತ್ತೇವೆಂದು ಹೆದರಿಸಿರುತ್ತಾರೆ, ಈಗ ನಾವು ತಿರುಗಾಡಬೇಕಾದರೆ ಬಹಳ ಅಂಜಿಕೆಯಿಂದ ತಿರುಗಾಡಬೇಕಾಗುತ್ತೇವೆ. ಬಹಳ ವಿವರಗಳನ್ನು ಕೊಟ್ಟಿದ್ದಾರೆ. ಸಧ್ಯಕ್ಕೆ ಎರಡು ಜನ ಆರೋಪಿಗಳನ್ನು ಮಾತ್ರ ಅರೆಸ್ಟ್ ಮಾಡಿರುತ್ತಾರೆ. ಇನ್ನುಳಿದ ೯ ಜನರನ್ನು ರಾಜಕೀಯ ಒತ್ತಡದಿಂದ ಬಂಧಿಸಿಲ್ಲ. ಇದರ ಬಗ್ಗೆ ನಾವು ಕಂಪ್ಲೇಂಟ್ ಕೊಟ್ಟಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳಿಗೂ ಕಂಪ್ಲೇಂಟ್ ಮಾಡಿದ್ದೇವೆ. ಪತ್ರ ಬರೆದು ಈಗಾಗಲೇ ನಿಮಗೆ ಮನವಿಯನ್ನು ಅರ್ಪಿಸಿದ್ದೇವೆ ತಾವು ಕ್ರಮ ತೆಗೆದುಕೊಳ್ಳಲು ಪತ್ರ ಬರೆದರೂ ಸಹ ಕಾಳಜಿ ವಹಿಸಿಲ್ಲ. ಅದೂ ಅಲ್ಲದೆ ೯-೧೨-೮೭ ರಂದು ಬೆಳಗಾಂ ಬಸ್‌ಸ್ಟ್ಯಾಂಡಿನಲ್ಲಿ ಆರೋಪಿಗಳು ಇದ್ದಾರೆಂದು ತಿಳಿಸಿದ್ದಾರೆ. ಎರಡು ಜನರನ್ನು ಮಾತ್ರ ಅರೆಸ್ಟ್ ಮಾಡಿದರು. ಕಸ್ಟಡಿಗೆ ತೆಗೆದುಕೊಂಡು ಕಸ್ಟಡಿಗೆ ತೆಗೆದುಕೊಂಡ ನಂತರ ರಾಜಕೀಯ ಒತ್ತಡದಿಂದ ಎರಡು ಜನರ ಮೇಲೆ ಕೇಸನ್ನು ದಾಖಲು ಮಾಡಿಕೊಂಡು ಕೋರ್ಟಿಗೆ ಹಾಜರ್ ಮಾಡದೆ ಸುಮ್ಮನೆ ಕಳಿಸಿಕೊಟ್ಟರು. ಐ ವಿಟ್ನೆಸಸ್ ಇದ್ದರೂ ಕೂಡ ಈ ರೀತಿ ಮಾಡಿದ್ದಾರೆ ಎನ್ನತಕ್ಕ ವಿಚಾರ. ಮಂಡಲ್ ಉಪ ಪ್ರಧಾನರನ್ನು, ನೀವು ಯಾವ ಜನರ ಕೈಗೆ ಅಧಿಕಾರ ಕೊಡುತ್ತೇವೆಂದು ಮಹಾ ವ್ಯಾಖ್ಯಾನ ಮಾಡಿದರೋ. ಯಾರನ್ನು ಉಪ ಪ್ರಧಾನರೆಂದು ತಾವು ಮಾಡಿದ್ದೀರೋ ಅವರನ್ನು ಕೊಲೆ ಮಾಡತಕ್ಕಂಥವರು ಇದ್ದಾರೆ. ಅವರಿಗೆ ವಿರೋಧವಾಗಿರುವಂಥವರು ಇದ್ದಾರೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಯಾವುದೇ ಕ್ರಮವನ್ನು ಅವರ ವಿರುದ್ಧ ತಾವು ಹಾಕಿಕೊಂಡಿಲ್ಲ. ಇದನ್ನು ನೋಡಿದರೆ ಯಾವ ಮಟ್ಟಕ್ಕೆ ತಮ್ಮ ಆಡಳಿತ ಹೋಗಿರಬಹುದು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಚೆನ್ನಗಿರಿ, ಶಿವಮೊಗ್ಗ ತಾಲ್ಲೂಕಿನ ವಿಚಾರ. ಅದು ಕೂಡ ಬಹಳ ದೊಡ್ಡ ರಾಕ್ಷಸೀ ಕೃತ್ಯವಾಗಿದೆ. ಚೆನ್ನಗಿರಿಯಲ್ಲಿ ಗೊಪ್ಪೇನಹಳ್ಳಿಯಲ್ಲಿ ಶೇಖರಪ್ಪ ಎಂಬುವನು ನಾಯಕ ಜನಾಂಗದ ಯುವಕ, ದಲಿತ ಒಂದು ಪದದ ಅರ್ಥ ಬರುವ ಯುವಕ. ಸುಮಾರು ೨೩-೨೪ ವರ್ಷ ಇರಬಹುದು. ಎಲೆಕ್ಷನ್ ಮುಗಿದ ಮೇಲೆ ಗೊಪ್ಪೇನಹಳ್ಳಿ ಮಂಡಲ್ ಪ್ರಧಾನ್

ಕೆ. ದೇವೇಂದ್ರಪ್ಪ, ಹಾಗೂ ಅವನ ಸಂಗಡಿಗರ ವಿರುದ್ಧ ಜಾತ, ಪ್ರತಿಭಟನೆ ಇತ್ಯಾದಿ ಆಯಿತು, ಬೇಕಾದಷ್ಟು ಮಾಡಿದ್ದಾರೆ ದಲಿತ ಸಂಘರ್ಷ ಸಮಿತಿಯವರು ಅವರು ಶೇಖರಪ್ಪ ಎನ್ನುವವನನ್ನು ಪಂಪ್ ಸೆಟ್ಟಿನ ಸ್ಟಾರ್ಟರ್ ಮಾಡತಕ್ಕ ಸಾಮಾನನ್ನು ಕದ್ದನೆಂಬ ಆರೋಪ ಹೇಳಿ ಮಂಡಲ್ ಕಛೇರಿಯ ಒಳಗಡೆ ಕೂಡಿ ಹಾಕಿ, ಹೊಡೆದು ಕೊಂದು ಹಾಕಿದ್ದಾರೆ ಎಂದು ಕಂಪ್ಲೇಂಟ್ ಇದೆ. ನಿಜ ಹೇಳಬೇಕೆಂದರೆ ಆತನು ಒಳ್ಳೆಯ ಇನ್‌ಕಮ್ ಇರತಕ್ಕ, ಸಾವಿರಾರು ರೂಪಾಯಿ ಇಟ್ಟುಕೊಂಡಿರತಕ್ಕ, ಸುಮಾರು ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಆಸ್ತಿ ಇರತಕ್ಕ ವ್ಯಕ್ತಿ ಶೇಖರಪ್ಪ ಒಮ್ಮೆ ಕೂಡ ಯಾರಿಗೂ ಕಂಪ್ಲೇಂಟ್ ಮಾಡದಿರತಕ್ಕಂಥ ಪ್ರವೃತ್ತಿಯನ್ನು ಹೊಂದಿರಲಿಲ್ಲ ಮರ್ಯಾದಸ್ಥ ಕುಟುಂಬದಿಂದ, ವಿದ್ಯಾವಂತ ಕುಟುಂಬದಿಂದ ಬಂದಂಥ ವ್ಯಕ್ತಿ ಆಗಿದ್ದಾನೆ.

೬–೩೦ ಪಿ. ಎಂ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಬಂಗಾರಪ್ಪನವರು ಹೇಳಿದ ವಿಚಾರ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. That is not the case. He belongs to a rich family. He has got a mania of theft ಅವನಿಗೆ ಕಳ್ಳತನ ಮಾಡತಕ್ಕಂಥ ಒಂದು ಚಟ ಇದೆ ಎಂದು ತಿಳಿದು ಬರುತ್ತದೆ. ಅದೊಂದು ಹವ್ಯಾಸ ಆತನದ್ದು, ಅವನು ಬಡವಲ್ಲ, ಲಕ್ಷಾಧೀಶ್ವರ. ಹೀಗೆ ಕಳ್ಳತನ ಮಾಡುವ ಹವ್ಯಾಸ ಹೊಂದಿರುವ ಅವನನ್ನು ಅವನ ತಂದೆತಾಯಿಗಳೇ ಮನೆಯಿಂದ ಹೊರಗೆ ಹಾಕಿದರು. ಅವನು ಸೂಸೈಡ್ ಮಾಡಿಕೊಂಡಿದ್ದಾನೆ.

ಶ್ರೀ ಎಸ್. ಬಂಗಾರಪ್ಪ.—ಅವನು ಲಕ್ಷಾಧೀಶ್ವರ ಎನ್ನುವ ಮಾತನ್ನು ತಮಗೆ ಯಾರು ಹೇಳಿದರು ?

ಶ್ರೀ ಜೆ. ಎಚ್. ಪಟೇಲ್.—ಯಾವುದಾದರೂ ಒಂದುಕಡೆ, ಕೊಲೆ ಸಾವು ಆಗಿದ್ದರೆ, ಅದರ ಬಗ್ಗೆ ನಮಗೆ ತಿಳಿದಂತೆ ಮಾತನಾಡುವುದು ಸರಿಯಲ್ಲ. ನೀವು ಯಾರಾದರೂ ಹೇಳಿರತಕ್ಕಂಥಾದ್ದನ್ನು ಕೇಳಿರಬಹುದು. ಬಹುಶಃ ಅದು ನಡೆವಾಗ ತಾವುಗಳು ಅಲ್ಲಿರಲಿಲ್ಲ, ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಕೂಡ ನನ್ನ ಹಾಗೆ ವಿಷಯವನ್ನು ಕೇಳಿತಿಳಿದುಕೊಂಡವರು. ಹಾಗೆಯೇ ಯಾರೂ ಕೂಡ ಇಂತಹ ಘಟನೆಗಳು ನಡೆಯುವಾಗ ಅಲ್ಲಿ ಇರುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ನೀವು ಅಂತಹ ಕಡೆ ಹೋಗಲಿಲ್ಲ, ಎಂಬ ನಿಮ್ಮ ಮಾತನ್ನು ಒಪ್ಪಿಕೊಂಡರೂ ಕೂಡ, ಅದು ವಸ್ತುಸ್ಥಿತಿ ಅಲ್ಲದಿದ್ದರೂ ಕೂಡ, ಯಾವುದಕ್ಕೂ ಒಂದು ರೀತಿ ನೀತಿ ಬೇಡವೆ ? ಒಂದು ಡೆತ್ – whether it is a murder or suicide the matter is before the Court. It has to be decided. ಮಾನ್ಯ ಬಂಗಾರಪ್ಪನವರು ಆರ್‌ಗ್ಯೂ ಮಾಡುತ್ತಾ ಹೋದರೆ ಅದಕ್ಕೆ ನಾವು ಏನನ್ನು ಹೇಳ ಬೇಕು ? ಅದು ಕೊಲೆ ಅಲ್ಲ ಆತ್ಮಹತ್ಯೆ ಎಂದು ಹೇಳಬೇಕು, ಯಾವುದೇ ಇಂತಹ ಘಟನೆ ಆದಾಗ ಅದು ಮರ್ಡರ್ ಹೌದೇ ಅಲ್ಲವೇ ಎಂದು ನೋಡಬೇಕು ಕೊಲೆಯಾಗಿರತಕ್ಕಂಥವರು ಯಾವ ಜಾತಿ ಎಂದು ನೋಡಿ ಅದರ ತೀವ್ರತೆಯನ್ನು ನಿರ್ಧರಿಸಬೇಕೆ ? ಮಾನ್ಯರು ಹೇಳುವ ಹಾಗೆ ನಾವು ಏನು ಮಾಡಬೇಕು ? ಇಲ್ಲಿ ಈಗ ನಿಯಮ ೬೯ರ ಕೆಳಗೆ ಮಾತನಾಡಲು ಮಾನ್ಯ ಸದಸ್ಯರು ಪ್ರಾರಂಭ ಮಾಡಿದ್ದಾರೆ. ರಾಜ್ಯದಲ್ಲಿ ನಡೆದ ಕೆಲವೊಂದು ಘಟನೆಗಳ ಬಗ್ಗೆ ಇಲ್ಲಿ ಸಹಜವಾಗಿಯೇ ಅವರು ಪ್ರಸ್ತಾಪ ಮಾಡುತ್ತಾರೆ. ಅದು ಅವರ ಪಾಲಿನ ಕರ್ತವ್ಯವಾಗಿರಬಹುದು. ಆದರೆ ಹೀಗೆ ನಡೆದ ಘಟನೆಗಳ ಬಗ್ಗೆ ಅದಕ್ಕೆ ಜಾತೀಯ ಬಣ್ಣವನ್ನು ಹಚ್ಚುವುದು ಸರಿಯಲ್ಲ. ಕೊಲೆಯಾದವನು ಹಿಂದುಳಿದ ಜಾತಿಯವನು, ಎಸ್. ಸಿ. ಎಸ್. ಟಿ. ವರ್ಗದವನು ಎಂದು ಬಣ್ಣ ಹಚ್ಚುವುದು ಸರಿಯಲ್ಲ ಹೀಗೆ ಈ ಚರ್ಚೆಯಲ್ಲಿ ಬಣ್ಣ ಹಚ್ಚಿ ಮಾತನಾಡಿದರೆ, ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ. ಆದರೆ ಈ ವಿಚಾರದಲ್ಲಿ ನನ್ನ ಆಕ್ಷೇಪಣೆ ಏನೆಂದರೆ, ಒಂದು ಸಾವು, ಕೊಲೆ ಮುಂತಾಗಿ ಆರೋಪಣೆ ಬಂದಾಗ ಆ ಆರೋಪಿಯನ್ನು ಬಂಧಿಸಿ ನ್ಯಾಯಾಲಯದ ಮುಂದೆ ಆ ವಿಚಾರವನ್ನು ಇಟ್ಟಾಗ, ಅದರ ತೀರ್ಮಾನ ಮಾಡತಕ್ಕವರು ನ್ಯಾಯಾಲಯದವರು. ಆ ಬಗ್ಗೆ ನಾವು ಇಲ್ಲಿ ಮಾತನಾಡುವುದು ಸರಿಯಲ್ಲ. ಈ ವಿಚಾರದಲ್ಲಿ ನಿರ್ಣಯ, ತೀರ್ಮಾನ ತೆಗೆದುಕೊಳ್ಳತಕ್ಕಂಥವರು ನಾವಲ್ಲ. ಆ ಕೆಲಸ ನಮ್ಮದಲ್ಲ. ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಾವು ಇಲ್ಲಿ ಪುನಃ ಪುನಃ ಎತ್ತುವುದು ಬೇಡ. ಹಾಗೆಯೇ ಈ ಚರ್ಚೆಯಲ್ಲಿ ದುರ್ಬಲ ವರ್ಗದವರ

ಮಾತು ಬರುತ್ತದೆ. ಇಲ್ಲಿಯೂ ಒಂದು ರೀತಿಯ ರಾಜಕೀಯದ ಕಪಟ ನಾಟಕ ಏನಿದೆ ಅದು ಬೇಡ. ವಾಸ್ತವಿಕವಾಗಿ ಎಲ್ಲಾದರೂ ಅನ್ಯಾಯ ಆಗಿದ್ದರೆ, ಅದಕ್ಕೆ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಅದನ್ನು ಬಿಟ್ಟು ಇಂತಹವರದ್ದೇ ಕೊಲೆ ಆಯಿತು. ಹಾಗೆ ಹೀಗೆ ಎಂದರೆ ನಾವು ಏನು ಹೇಳಬೇಕು ? ಹಾಗಾದರೆ ಕೊಲೆಯಲ್ಲಿಯೂ ಜಾತಿ ಇದೆಯೇ ? ಎಸ್. ಸಿ. ಯವರು ಕೊಲೆಯಾದರೆ ಅದು ಕೊಲೆ, ಲಿಂಗಾಯತರದ್ದು ಕೊಲೆಯಾದರೆ ಅದು ಕೊಲೆಯಲ್ಲವೇ ? ಅನ್ಯಾಯ. ಸಾವು, ಕೊಲೆ, ಇಲ್ಲಿ ಯಾವ ಜಾತಿ ಆದರೆ ಏನು ? ಈ ರೀತಿಯಲ್ಲಿ ಕ್ರೈಮ್‌ಗಳಲ್ಲಿಯೂ ಆ ಜಾತಿ ಈಜಾತಿ ಎಂದು ಬಣ್ಣವನ್ನು ತರಬೇಡಿ. ಸೋಶಿಯಲ್ ಜಸ್ಟಿಸ್ ಬಗ್ಗೆ ಮಾನ್ಯ ಎಂ. ಎಸ್. ಪಾಟೀಲರು ಮಾತನಾಡುತ್ತಾ, ದುರ್ಬಲ ವರ್ಗದವರ ಬಗ್ಗೆ ವ್ಯಾಖ್ಯಾನ ಮಾಡುತ್ತಾ, ಇದ್ದರು......

(ಗೊಂದಲ)

ಹಾಗೆಂದ ಮೇಲೆ ದುರ್ಬಲ ವರ್ಗದವರು ಯಾರು ಎಂದು ಮಾನ್ಯ ಎಂ. ಎಸ್. ಪಾಟೀಲರು ತಿಳಿಸಲಿ. ಬಿ. ಸಿ. ಬಿ. ಟಿ ಎಂದರೆ ಯಾರು ಎಂದು ತಿಳಿಸಲಿ, ಯಾರ್ಯಾರು ಯಾರ್ಯಾರ ಮೇಲೆ ದೌರ್ಜನ್ಯ ಮಾಡುತ್ತಾರೆ ಎಂಬ ಬಗ್ಗೆ ಇಲ್ಲಿ ಅರ್ಧ ದಿನದ ಚರ್ಚೆ ಬೇಕಾದರೆ ಇಟ್ಟುಕೊಳ್ಳೋಣ.

ಮಾನ್ಯ ರಾಮಪ್ಪನವರೇ, ವೆಂಕಟಸ್ವಾಮಿ ಆಯೋಗದ ವರದಿಯನ್ನು ವಿರೋಧ ಮಾಡಿದವರು ಯಾರು ? ಹಾವನೂರ್ ಕಮಿಷನ್ ವರದಿಯನ್ನು ವೆಲ್‌ಕಮ್ ಮಾಡಿದವರು ಯಾರು ? ಹಿ ನೇ ಹಿಂದುಳಿದ ವರ್ಗಗಳ ಕಮಿಷನ್ ಮಾಡಬೇಕೆಂದು ಮಾಡಿದವರು ಯಾರು ? ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಮೈನಾರಿಟೀಸ್ ಬಗ್ಗೆ, ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಇವರಿಗೆ ಏನು ವ್ಯಾಮೋಹ ಇದೆ ಎಂದು ಗೊತ್ತಿದೆ, ಅದರ ಬಗ್ಗೆ ಉತ್ತರ ಕೊಡುತ್ತೇವೆ. ಬೆಂಡೀ ಗೇರಿಯಲ್ಲಿ ಅನಾಹುತ ನಡೆಯಿತು. ಯಾವನು ತಪ್ಪು ಮಾಡಿದ್ದೇನೋ ಅವನಿಗೆ ಬೇಕಾದಷ್ಟು ಶಿಕ್ಷೆ ಕೊಡಿ ಬೇಡವೆಂದು ಹೇಳುವುದಿಲ್ಲ. ಗೊಪ್ಪೆನ್ನಹಳ್ಳಿಯು ಮಾನ್ಯ ಬಸವಣ್ಣಪ್ಪನವರ ಕ್ಷೇತ್ರದಲ್ಲಿದೆ. ಅದಕ್ಕೆ ಬಣ್ಣ ಕಟ್ಟಿ ಹೇಳುವುದು ಬೇಡ. ಕ್ರಿಮಿನಲ್ ಪ್ರೊಸೀಜರ್‌ನಲ್ಲಿ, ಇಂಡಿಯನ್ ಪೀನಲ್ ಕೋಡಿನಲ್ಲಿ ಇಂತಹವನ್ನು ಕೊಲೆ ಮಾಡಿದರೆ ಮಾತ್ರ ಮಾಡಬೇಕೆಂದು ಇಲ್ಲ. ಆ ರೀತಿ ಅದರಲ್ಲಿ ಎಲ್ಲೂ ಇಲ್ಲ. ಕೊಲೆಯಾಗಿದ್ದರೆ ಕೊಲೆ ಮಾಡಿದವನಿಗೆ ಶಿಕ್ಷೆಯಾಗಲಿ ಯಾವುದೇ ಕಾರಣದಿಂದ ಯಾರನ್ನೂ ನಾವು ಸೇಫ್ ಗಾರ್ಡ್ ಮಾಡುವುದಿಲ್ಲ. ಲಿಂಗಾಯಿತ ಇರಬಹುದು, ತಳವಾರ ಇರಬಹುದು, ಇಲ್ಲವೇ ಯಾರೇ ಇರಬಹುದು ಅಂಥವರನ್ನು ಈ ಸರಕಾರ ಯಾರನ್ನೂ ಸೇಫ್‌ಗಾರ್ಡ್ ಮಾಡುವುದಿಲ್ಲ. ಮಾನ್ಯ ಶ್ರೀನಿವಾಸ್ ರವರು ಬಹಳ ವರ್ಣ ರಂಜಿತವಾಗಿ ಶಿವಮೊಗ್ಗದ ಕೇಸ್ ಅನ್ನು ವಿವರಿಸಿದರು. ಅದರ ವಾಸ್ತವಾಂಶವನ್ನು ಈ ಸದನಕ್ಕೆ ಮಾನ್ಯ ಗೃಹ ಸಚಿವರು ತಿಳಿಸುತ್ತಾರೆ. ಅದು ಏನಾದರೂ ಇರಲಿ.

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ............

ಶ್ರೀ ಎಂ. ರಾಮಪ್ಪ.—ಮಾನ್ಯ ಸಭಾಧ್ಯಕ್ಷರೇ............

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್... ಈ ಘಟನೆಗಳಿಗೆ ಉತ್ತರ ಕೊಡುವುದಕ್ಕೆ ಸಾಕಷ್ಟು ಸತ್ಯಾಂಶ ಇದೆ ವಿಷಯಗಳು ಇವೆ. ಮತ್ತು ಇದು ಕೋರ್ಟಿನಲ್ಲಿ ಇದೆ, ಇಲ್ಲಿಯೇ ಕಂಪ್ಲೀಟ್ ಮಾಡಿದರೆ what right this House has got to decide the matter when it is before the Court and before it is decided by the Court This is only I would like to submit.

ಶ್ರೀ ಎಸ್. ಬಂಗಾರಪ್ಪ....ನೀವು ವಾದವನ್ನು ಬೇರೆ ರೀತಿ ತೆಗೆದುಕೊಂಡು ಹೋಗುತ್ತಿದ್ದೀರಿ. ಇನ್‌ವೆಸ್ಟಿಗೇಷನ್ ಸರಿಯಾಗಿಲ್ಲವೆಂದು ಹೇಳತಕ್ಕಂತಹ ಹಕ್ಕು ಸದಸ್ಯರಿಗೆ ಬರುವುದಿಲ್ಲವೇ ?

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ರೂಲ್ಸ್ ಪ್ರಕಾರ ಇದು ಸಬ್ ಜ್ಯುಡೀಸ್ ಆಗುತ್ತದೆ. We have not prevented the discussion. ಮೊದಲು ಇಂತಹ ವಿಷಯಗಳನ್ನು ಅಲೋ ಮಾಡುತ್ತಿರಲಿಲ್ಲ, ಮಾನ್ಯ ಅಧ್ಯಕ್ಷರು ಮ್ಯಾಗ್ನಾನಿಮಸ್ ಆಗಿ ಅಲೋ ಮಾಡಿದ್ದಾರೆ. ಮಾನ್ಯ ಎಂ. ಎಸ್. ಪಾಟೀಲ್‌ರವರು ತಾವು ಕೊಟ್ಟಿರತಕ್ಕಂತಹ ಅನುಮತಿಯನ್ನು ಎಲ್ಲಿಗೋ ಎಳೆದುಕೊಂಡು ಹೋಗಿದ್ದನ್ನು ನೋಡಿ ನನಗೆ ಅನ್ನಿಸಿತು ಬ್ಯಾಕ್ ವರ್ಡ್ ಕ್ಲಾಸ್ ಯಾರು ಎಂದು. ಈ ಕಪಟ ನಾಟಕ ಬೇಡ.

ಶ್ರೀ ಎಸ್ ಬಂಗಾರಪ್ಪ.—ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಕಪಟ ನಾಟಕವೆಂದು ಹೇಳತಕ್ಕಂತಹ ಮಾತನ್ನು ಪ್ರಯೋಗ ಮಾಡಿದರು. ಆ ಕೆಲಸವನ್ನು ವ್ಯವಸ್ಥಿತವಾಗಿ ಮಾಡ ತಕ್ಕಂತಹವರು ನೀವು ಅದರಲ್ಲಿ ಪಂಡಿತರು ಕೂಡ ಹೌದು. ನೀವು ಅದನ್ನು ಮಾಡುತ್ತಿದ್ದೀರಿ. ಆದರೆ ಜನತೆಯು ಅಧಿಕಾರವನ್ನು ನಿಮ್ಮ ಕೈಗೆ ಕೊಟ್ಟಾಗ ಯಾವ ರೀತಿಯಾಗಿ ಅದರ ಸದುಪಯೋಗ ವನ್ನು ಮಾಡಿಸಿಕೊಳ್ಳಬೇಕಾಗಿತ್ತೋ ಅದನ್ನು ಬಿಟ್ಟು ನೀವು ದುರುಪಯೋಗ ಮಾಡಿದ್ದೀರಿ ಎಂದರೆ ಸರಕಾರದವರು ದುರುಪಯೋಗ ಮಾಡಿದ್ದಾರೆ ನಾಯಕ ಜನಾಂಗವೆಂದು ನಾನು ಹುಟ್ಟಿಸಿಕೊಂಡು ಹೇಳಲಿಲ್ಲ. ಇದನ್ನು ದಲಿತ ಸಮಿತಿಯವರು ಪ್ರಿಂಟ್ ಮಾಡಿಸಿ ಕಳಿಸಿರತಕ್ಕಂತಹ ವಿಚಾರ ಇದೆ. ನೀವೂ ಕೂಡ ಪೋಲೀಸಿನವರು ಕೊಟ್ಟಿರತಕ್ಕಂತಹ ವರದಿಯನ್ನು ತಂದು ಇಲ್ಲಿ ಓದುತ್ತೀರಿ. ನಿಮ ಗೇನು ಮೇಲಂಗಡೆಯಿಂದ ಪ್ರಿಂಟ್ ಆಗಿ ಬರುತ್ತದೆಯೇ ? ಇಲ್ಲವೇ ನೀವು ಹೋಗಿ ನೋಡಿರುತ್ತೀರಾ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ನೋಡಿದ್ದೇನೆ. ನನ್ನ ಹತ್ತಿರ ಅವರೂ ಕೂಡ ಮಾತನಾಡಿದ್ದಾರೆ. ಇದನ್ನು ದಲಿತ ಸಮಿತಿಯವರು ಹಂಚಿದ್ದಾರೆ. ಏನೇನು ಕೊಳಮಾರ್ಜ ಇದೆ ಎಂದು ಹೇಳಬೇಕಾಗುತ್ತದೆ. ಉತ್ತರ ಕೊಡುವಾಗ ಹೇಳುತ್ತೇನೆ. ನಮ್ಮಲ್ಲಿ ಎರಡು ವಿಂಗ್ ಇದೆ civil police & SSB. ಸಿವಿಲ್ ಪೋಲೀಸಿನವರು ಕೊಟ್ಟ ವರದಿ ಏನಿದೆ ಅದು ಸರಿಯೋ ಅಲ್ಲವೋ ಎಂದು ಅನುಮಾನ ಬಂದರೆ ಎಸ್.ಎಸ್.ಬಿ.ಯವರಿಗೆ ರೆಫರ್‌ಮಾಡಿ ಇದು ಸುಳ್ಳೋ ನಿಜವೋ ಹೇಳಿ ಎಂದು ಅವರಿಗೆ ಹೇಳುತ್ತೇವೆ ಅವರು ಅದನ್ನು ಕಂಡು ಹಿಡಿದು ಹೇಳುತ್ತಾರೆ. ನಿಮ್ಮ ಕೈಯಲ್ಲಿ ರುವುದು ಸರಿಯೋ ಅಲ್ಲವೋ ಎಂದು ಯಾರಿಂದ ಅಸರ್ಟೈನ್ ಮಾಡಿಸಿ ಕೊಳ್ಳುತ್ತೀರಿ ? ಅವರು ಕೊಟ್ಟಿದ್ದನ್ನು ಇಲ್ಲಿ ಬಂದು ಹೇಳುತ್ತೀರಿ.

ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ನಡೆಸುವವರ ಹತ್ತಿರ ಸಿ. ಓ. ಡಿ. ಇರುತ್ತದೆ, ರೆಗ್ಯುಲರ್ ಪೋಲೀಸ್ ಇರುತ್ತದೆ, ಮತ್ತೆ ಇಂಟಲಿಜೆನ್ಸಿನಿಂದ ನೀವು ಏನು ಬೇಕಾದರೆ ತರಿಸಿಕೊಳ್ಳತಕಂಥದ್ದು, ನಿಮ್ಮ ಕಡೆ ಇರುತ್ತದೆ. ನಮಗೆ ಏನು ಇರುತ್ತದೆ ಎನ್ನುವ ಅಭಿಪ್ರಾಯವನ್ನು ನೀವು ಕೇಳುತ್ತಿದ್ದೀರಿ. ಇವತ್ತು ಸಿ. ಓ. ಡಿ. ಯಿಂದ ಆ ವರದಿಯನ್ನು ತರಿಸಿಕೊಳ್ಳುವಂಥ ವಿಚಾರ ಮತ್ತು ಆ ಅಧಿಕಾರ ನಮಗೆ ಬರುವುದಿಲ್ಲ. ಶಾಸಕರಿಗೂ ಕೂಡಾ ಬರುವುದಿಲ್ಲ. ಯಾರು ಸಂಬಂಧಪಟ್ಟಿರತಕ್ಕಂಥ ಸಚಿವರು ಇರುತ್ತಾರೆ ಅಥವಾ ಮಾನ್ಯ ಮುಖ್ಯಮಂತ್ರಿಗಳು ಇರುತ್ತಾರೆ. ಏಕೆಂದರೆ ಮಾನ ಮುಖ್ಯ ಮಂತ್ರಿಗಳು ಎಲ್ಲಾ ಇಲಾಖೆಗಳಿಗೂ ಬರತಕ್ಕಂಥ ಅವರ ಒಂದು ಅಧಿಕಾರ ಮತ್ತು ಅವರ ವ್ಯಾಪ್ತಿ ದೊಡ್ಡದು. ಸಂಬಂಧಪಟ್ಟ ಸಚಿವರಿಗೂ ಅವರು ಹೇಳಬೇಕಾಗುತ್ತದೆ. ಈ ವಿಚಾರ ಇಲ್ಲಿ ಸದಸದಲ್ಲಿ ಪ್ರಸ್ತಾಪ ಮಾಡಿ ಇದರ ಮುಖಾಂತರ ನಾವು ಸರ್ಕಾರದ ಗಮನವನ್ನು ಸೆಳೆದು ನಿಮ್ಮಿಂದ ವಿವರಣೆ ಯನ್ನು ಪಡೆಯತಕ್ಕಂಥ ಸಂದರ್ಭಗಳು ಇದ್ದವು. ಅದು ನಮಗೆ ಇರತಕ್ಕಂಥ ಹಕ್ಕು. ನೀವು ಆ ವ್ಯಕ್ತಿಯು ಸತ್ತಿರತಕ್ಕಂಥ ಕ್ಷೇತ್ರನಾಯಕ ಜನಾಂಗದ್ದು ಅಲ್ಲ ಎಂದು ಹೇಳುತ್ತೀರಿ ? ಸತ್ತಿರತಕ್ಕಂಥ ವ್ಯಕ್ತಿ ನಾಯಕ ಜನಾಂಗಕ್ಕೆ ಸೇರುವುದಿಲ್ಲ ಎಂದು ಹೇಗೆ ಹೇಳುತ್ತೀರಿ ? ಪೋಲೀಸ್ ಸ್ಟೇಷನ್‌ನ ಲ್ಲಿಯೂ ಕಂಪ್ಲೇಂಟ್ ಕೊಟ್ಟಿರುವ ಬಗ್ಗೆ ಎಫ್. ಐ. ಆರ್. ಕಾಪಿ ಕೂಡ ಇದೆ. ಇಲ್ಲಿ ಹೇಳಿಕೆಯಲ್ಲಿ ರಂಗಪ್ಪ, ಬಿನ್. ಕೆಂಚಪ್ಪ ರಂಗಪ್ಪ ಎನ್ನತಕ್ಕರವರು ತಳವಾರ ಜಾತಿಗೆ ಸೇರಿದವರು ಎಂದು ಬರೆದಿ ದ್ದಾರೆ. ನಾವು ಬರೆದಿದ್ದೇವೆಯೇ? ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಬ್ಬ ವ್ಯಕ್ತಿಯು ಐಡೆಂಟಿಫಿಕೇಷನ್‌ಗೋಸ್ಕರ ಒಂದು ಜಾತಿಯ ವಿಚಾರವನ್ನು ಅಲ್ಲಿ ತರತಕ್ಕಂಥದ್ದು ಬರುತ್ತದೆ. ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. To identify a person who has been murdered or who has given a statement in the course of the investigation ಈ ರೀತಿ ಇರತಕ್ಕಂಥ ಸಂದರ್ಭದಲ್ಲಿ ಜಾತೀಯ ಹೆಸರನ್ನು ತಂದರೆ ತಪ್ಪೇನೂ ಆಗುವುದಿಲ್ಲ. ಕೆಲವು ಸಾರಿ ದೊಡ್ಡ ಜಾತೀಯವರು ಎಲ್ಲರೂ ನಿಮ್ಮ ಮಾತನ್ನು ಕೇಳುವುದಿಲ್ಲ. ಸಣ್ಣ ಜಾತಿಯವರು

ದೊಡ್ಡ ಜಾತಿಯವರನ್ನು ಕೊಲೆ ಮಾಡಿರುತ್ತಾರೆ ಅದೇ ರೀತಿ ದೊಡ್ಡ ಜಾತಿ ಸಣ್ಣ ಜಾತಿಯವರನ್ನು ಕೊಲೆ ಮಾಡಿರುತ್ತಾರೆ. ಕೀಳು ದರ್ಜೆ, ಕೀಳು ಜಾತಿ ಸೇರಿರತಕ್ಕಂಥವರಿಗೆ ಶಕ್ತಿ ತನ್ನ ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದರೆ ಇವತ್ತು ಕೂಡ ಅವರು ತೊಂದರೆಯನ್ನು ಅನುಭವಿಸತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಈ ಸತ್ಯವನ್ನು ಯಾರು ಮರೆಮಾಚುವುದಕ್ಕೆ ಆಗುವುದಿಲ್ಲ.

ಈ ದೃಷ್ಟಿಯಿಂದ ಜಾತಿ ವಿಚಾರ ಈ ಸಂದರ್ಭದಲ್ಲಿ ಬಂದಾಗ ಅದಕ್ಕೆ ಯಾವಾಗಲೂ ಗಮನವನ್ನು ಕೊಡಬೇಕು ಮತ್ತು ಒತ್ತನ್ನು ಕೊಡಬೇಕು. ಈ ವಾದವನ್ನು ಎಲ್ಲಾ ರಾಜಕೀಯ ಪಕ್ಷಗಳು ಒಪ್ಪಿದ್ದಾವೆ, ಆದ್ದರಿಂದ ನಾನು ಈ ಸಂದರ್ಭದಲ್ಲಿ ಇವತ್ತು ಹರಿಜನ ವರ್ಗ ಮೇಲ್‌ಜಾತಿ ಎಂದು ಹೇಳಿದರೆ ನಾವು ಇದರ ಬಗ್ಗೆ ಗಲಿಬಿಲಿಗೊಳ್ಳುವುದು ಬೇಡ. ಇದು ನಗ್ನ ಸತ್ಯ. ಈ ಕಟುಸತ್ಯವನ್ನು ಮರೆಮಾಚದೆ ಹೇಳಬೇಕಾಗುತ್ತದೆ. ಮತ್ತು ನಮ್ಮ ಹಕ್ಕನ್ನು ಚಲಾವಣೆ ಮಾಡಬೇಕಾಗುತ್ತದೆ. ಅದನ್ನು ನೀವು ತುಂಬಾ ಪ್ರೀತಿಯಿಂದ ಸ್ವೀಕಾರ ಮಾಡಿ ಯಾರು ನಾಯಕ ಜಾತಿಗೆ ಸೇರುವುದಕ್ಕೆ ಸಾಧ್ಯ. ಅದನ್ನು ಮಾಡಬೇಕೆ ವಿನಹ ಮತ್ತೊಂದು ವಾದವನ್ನು ಇಟ್ಟು ರಕ್ಷಣೆಯನ್ನು ಕೊಡುತ್ತೀರಿ ಎಂದು ಹೇಳಿದರೆ ಆಗುವುದಿಲ್ಲ. ಈ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಎಂದು ಹೇಳುತ್ತೇನೆ, ಶ್ರೀ ಶೇಖರಪ್ಪ ಲಕ್ಷಾಧೀಶ ಎಂದು ಮಾನ್ಯ ಬಸವಣ್ಣೆಪ್ಪನವರೇ ಹೇಳಿದರು. ಇವನು ಒಂದು ಸ್ಟಾರ್ಟರ್ ಕದ್ದ ಎಂದು ಮೊಕದ್ದಮೆ. ಕಾರಣ ಏನು ಎಂದು ಹೇಳಿದರೆ ಕಳ್ಳತನ ಮಾಡತಕ್ಕಂಥ ಜಾಯಮಾನ ಇವನಿಗೆ ಆ ಚಟ ಇತ್ತು ಎನ್ನತಕ್ಕಂಥ ಮಾತನ್ನು ಹೇಳಿದರು. ಅವನನ್ನು ಹಿಡಿದು ರೆಡ್‌ಹ್ಯಾಂಡ್‌ನಲ್ಲಿ ಕ್ರಮ ತೆಗೆದುಕೊಳ್ಳಬೇಕು. ನೀವು ಹೊಡೆದುಹಾಕಿದ್ದು ನಿಜವಾದರೆ ಅವನನ್ನು ಹೊಡೆದು ಹಾಕಿದ್ದು ಸರಿ ಎಂದು ಹೇಳುವುದಕ್ಕಾಗುತ್ತದೆಯೇ ? ಇದೆ ಪಾಯಿಂಟ್ ಮೇಲೆ ನಾನು ಹೇಳತಕ್ಕಂಥ ವಿಚಾರ. ಈ ವಿಚಾರ ಮಾಡಿರತಕ್ಕಂಥದ್ದು ಪ್ರಬಲವಾದ ಕಂಪ್ಲೇಂಟನ್ನು ಕೊಟ್ಟಾಗ ನೀವು ಅದರ ಮೇಲೆ ಕ್ರಮ ತೆಗೆದುಕೊಳ್ಳದೇ ಕಾನೂನು ಬಾಹಿರವಾಗಿ ನೀವು ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದೀರಿ ಎನ್ನತಕ್ಕಂಥ ವಿಚಾರ. ದೇವೇಂದ್ರಪ್ಪ, ಮಂಡಲ ಪಂಚಾಯಿತಿಯ ಪ್ರಧಾನರು. ಉಳಿದಿರತಕ್ಕಂಥವರು ಕಂಪ್ಲೇಂಟ್ ಕೊಟ್ಟಿದ್ದಾರೆ, ಮತ್ತೆ ಇನ್ನು ಏನು ಮಾಡುತ್ತಾರೆ ಪ್ರಿಂಟ್ ಮಾಡಿ ಹಂಚಿದ್ದಾರೆ ನನ್ನ ಪ್ರಕಾರ ಸತ್ಯವನ್ನು ಬೆಳಕಿಗೆ ತರತಕ್ಕಂಥ ಸಂದರ್ಭ ಬಂದರೆ ಬಹಳ ಒಳ್ಳೆಯದು. ಯಾವುದೇ ಸನ್ನಿವೇಶದಲ್ಲಿ ಸರ್ಕಾರದ ಇಲಾಖೆಯವರು ಈ ಸದುದ್ದೇಶದಿಂದ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಆಮೇಲೆ ಇನ್ವೆಸ್ಟಿಗೇಷನ್ ಆದ ನಂತರ ಹೇಳಲಿ, ನೀವು ಹೇಳಿದ್ದುದು ಸರಿಯಿಲ್ಲ ಎಂದು, ಆದರೆ ತಮ್ಮ ಗಮನಕ್ಕೆ ತರುವ ಒಂದು ವಿಷಯ, ಆಪಾದನೆ ಮಾಡಿದ್ದಾರೆ, ನೀವು ಪ್ರಬಲ ಆಗಿರತಕ್ಕ ಜನಗಳಿಗೆ ನೀವು ಮಂತ್ರಿಗಳಿಂದ, ನಿಮ್ಮ ಪಕ್ಷದ ಆಧಾರದ ಮೇಲೆ ರಕ್ಷಣೆ ಕೊಟ್ಟಿದ್ದೀರಿ. ಆಪಾದನೆಯನ್ನು ದಲಿತ ಸಂಘರ್ಷ ಸಮಿತಿಯವರು ಅರ್ಜಿಯಲ್ಲಿ ಬರೆದಿದ್ದಾರೆ. ಇದು ಇನ್ವೆಸ್ಟಿಗೇಷನ್‌ನಲ್ಲಿ ಹೊರಗೆ ಬರಬೇಕಾಗುತ್ತದೆ.

ಅಧ್ಯಕ್ಷರು.—ಟೈಮ್ ಆಯಿತು ತಾವು ಮುಕ್ತಾಯಮಾಡಿ.

ಶ್ರೀ ಎಸ್. ಬಂಗಾರಪ್ಪ.- ಅವರು ಮಧ್ಯೆ ಮಧ್ಯೆ ಮಾತನಾಡುತ್ತಿದ್ದಾರೆ. ರಾಮದುರ್ಗದ ಸರ್ಕಲ್. ಇದು ಶ್ರೀ ಆಶಾಬಿ, ಕೋಂ ಲಾಡಸಾಬ ಜಮಾದಾರ್, ಒಬ್ಬ ಹೆಣ್ಣು ಮಗಳು ಅವರ ಕಂಪ್ಲೇಂಟ್ ಅನ್ನು ಸರ್ಕಾರಕ್ಕೆ ಕಳಿಸಿದ್ದಾರೆ. ಪೋಲೀಸ್ ಡಿ.ಐ.ಜಿ.ಅವರಿಗೆ ಡಿ.ಜಿ.ಪಿ.ಅವರಿಗೆ ಎಲ್ಲರಿಗೂ ಕಳಿಸಿದ್ದಾರೆ.ಮಾನ್ಯ ಸಿದ್ನಾಳ್ ಎಂ.ಪಿ.ಗೆ ಮತ್ತು ಎಸ್.ಪಿ.ಗೆ ಎಲ್ಲರಿಗೂ ಕೂಡ ಕಳಿಸಿದ್ದಾರೆ. ರಾಮದುರ್ಗದಸರ್ಕಲ್ ಇನ್ಸ್‌ಪೆಕ್ಟರ್ ಅವರು ಎಲ್. ಎಂ. ಜಮಾದಾರ್ ಅವರನ್ನು ಹೊಡೆದು ಹತ್ಯೆ ಮಾಡಿದ ಬಗ್ಗೆ ಕಂಪ್ಲೇಂಟ್ ಬಂದಿದೆ. ಇದು ನಡೆದದ್ದು ೨೨-೭-೧೯೮೭ ರಂದು ಬುಧುವಾರ ಮುಂಜಾನೆ ೮ ಗಂಟೆಗೆ ಮನೆಯಿಂದ.

ಶ್ರೀ ಜಿ, ನಾರಾಯಣಕುಮಾರ್.—ಯಾವುದೋ ಹರಿಕಥೆಯವರು ಪ್ರವಚನ ಮಾಡಿದ ಹಾಗೆ ಭಾಷಣ ಮಾಡುತ್ತಿದ್ದಾರೆ ಬಂಗಾರಪ್ಪನವರು...

SRI S. BANGARAPPA.—This is too much...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಪಾಠ ಓದಿಕೊಂಡು...

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮುಕ್ತಾಯ ಮಾಡಿ. ಸಾಕು. you have taken sufficient time.

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಬೇಕಾದಷ್ಟು ವಿಷಯಗಳು ಇವೆ...

(ಗೊಂದಲ)

ಅಧ್ಯಕ್ಷರು.—ಡಿಟೇಲ್ ಓದುವುದಕ್ಕೆ ಹೋಗಬೇಡಿ, ಫ್ಯಾಕ್ಟ್ಸ್‌ಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಡಿಟೈಲ್ ಓದುವುದಕ್ಕೆ ಹೋದರೆ ಒಂದೊಂದು ಒಂದು ಗಂಟೆ ಆಗುತ್ತದೆ. ನಾನು ಎಷ್ಟು ಹೊತ್ತು ಬೇಕಾದರೂ ಇದರ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು.—ನೀವು ಮೂರು ಗಂಟೆ ಬೇಕಾದರೂ ಮಾತನಾಡುತ್ತೀರಿ, ನನಗೆ ಗೊತ್ತು. ಟೈಮ್ ಆಯಿತು ಮುಕ್ತಾಯ ಮಾಡಿ. ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಆ ಮೇಲ ಶಮಸುದ್ದೀನ್, ನಜಾಬ್, ವೀರಯ್ಯಸ್ವಾಮಿ, ಜೋತಪ್ಪ, ಎನ್ನತಕ್ಕವರನ್ನು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿರತಕ್ಕದ್ದು. ಇನ್‌ಸ್ಪೆಕ್ಟರ್ ಹುಣಸಿಕಟ್ಟೆ ೧-೩೦ ಗಂಟೆಗೆ ಬಿಟ್ಟರು. ಅವರ ಮೇಲೆ ಗಾಯಗಳು ಆಗಿದ್ದು ಇದುವರೆಗೆ ಅವನ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎನ್ನುವ ವಿಚಾರ...

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿರಿ,

ಶ್ರೀ ಎಸ್. ಬಂಗಾರಪ್ಪ.—ಹೇಗೆ ಮುಕ್ತಾಯ ಮಾಡಲಿ, ವಿಚಾರಗಳು ರಾಶಿಯಾಗಿ ಬಿದ್ದಿವೆ.

(ಗೊಂದಲ)

ಅಧ್ಯಕ್ಷರು.—ಮುಕ್ತಾಯ ಮಾಡಿ, ಬಹಳ ಟೈಮ್ ಕೊಟ್ಟಿದ್ದೇನೆ, ೧೫ ನಿಮಿಷ ಟೈಮ್, ಬೇರೆ ಯುವರು ಮಾತನಾಡುವವರು ಇದ್ದಾರೆ, ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಆ ಮೇಲೆ ೩೦-೧೧-೧೯೮೭ರಂದು ವೆಂಕಟಾಪುರ, ಹೈರಪ್ಪಸಾಬ್ ಇನೂನ್‌ಸಾಬ್, ಮುಲ್ಲಾನವರ್, ಇವರೆಲ್ಲಾ ಮಂಡಲ್ ಪಂಚಾಯತ್ ಸದಸ್ಯರು. ಇವರಿಗೂ ಕಳಿಸಿ ಕೊಡಲಾಗಿದೆ, ನಾನು ಇವನ್ನೆಲ್ಲಾ ತಮಗೆ ಕಳಿಸಿಕೊಡುತ್ತೇನೆ. ಎಲ್ಲವನ್ನೂ ಹೇಳುವುದಕ್ಕೆ ಹೋದರೆ ಸುಮಾರು ಟೈಮ್ ಆಗುತ್ತದೆ.

ಅಧ್ಯಕ್ಷರು.—ನೆಕ್ಸ್ಟ್ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಚೂರಿಯಿಂದ ಇರಿದು, ೧೦-೧೨ ಜನರಿಗೆ ಗಾಯಗಳು ಆಗಿರತಕ್ಕದ್ದು ಇದೆ. ಆಮೇಲೆ ಬಳ್ಳಾರಿ ತಾಲ್ಲೂಕಿನ ಡಾ|| ಅಂಬೇಡ್ಕರ್ ನಗರ, ತಾಳೂರು ರಸ್ತೆ, ೧೮ನೇ ಬಾರ್ಡರ್‌ನಲ್ಲಿ ಹರಿಜನರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಮಾಡಿದ ಮತ್ತು ಕೆಟ್ಟಕೆಟ್ಟದಾಗಿ ಬೈಗುಳ ಬಯ್ದಿದನ್ನು, ಸೂಳೆ ಮಕ್ಕಳು...ಇತ್ಯಾದಿ

ಅಧ್ಯಕ್ಷರು.—ನೆಕ್ಸ್ಟ್ ನೆಕ್ಸ್ಟ್...

ಶ್ರೀ ಎಸ್. ಬಂಗಾರಪ್ಪ.—ನೆಕ್ಸ್ಟ್, ನೆಕ್ಸ್ಟ್ ಎಂದರೆ ತಾವೇ ಹೇಳಿಬಿಡಿ.

ಅಧ್ಯಕ್ಷರು.—ತಾವು ಹೇಳಿ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಬಂಗಾರಪ್ಪನವರು ಬರೇ ಪೋಲೀಸ್ ಸ್ಟೇಷನ್‌ನಲ್ಲೇ ಇರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಹಕ್ಕನ್ನು ಮೊಟಕು ಮಾಡಲು ಯಾರಿಗೂ ಬಿಡುವುದಿಲ್ಲ...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅವರು ಮತ್ತೆ ಮತ್ತೆ ಬಾಯಿ ಹಾಕಲು ಅವಕಾಶ ಮಾಡಿಕೊಡುತ್ತಿದ್ದೀರಿ...

ಅಧ್ಯಕ್ಷರು.—ನೋಡಿ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಹರಿಜನರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಯುತ್ತಿದೆ. ತಮ್ಮ ಮೇಲೆ ಎಷ್ಟೊಂದು ಜವಾಬ್ದಾರಿ ಇದೆ...

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರಿಗೆ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದು ಸರಿಯಲ್ಲ, ಇದು ತಮ್ಮದು ಕೂಡ ಜವಾಬ್ದಾರಿ ಇದೆ.

MR. SPEAKER.—I am Perfectly correct....

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ ತಮ್ಮ ಅಧಿಕಾರ ವಾಣಿಯಿಂದ ಅವರನ್ನು ಕುಳಿತು ಕೊಳ್ಳಲು ಹೇಳಿ...

(ಗೊಂದಲ)

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ವಿವರಗಳಿಗೆ ಹೋಗುತ್ತಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು.—ತಾವು ೧೫ ನಿಮಿಷಗಳ ಕಾಲ ಪ್ರಿಯಾಂಬಲ್‌ಗೆ ತೆಗೆದುಕೊಂಡಿರಿ. ಬೇರೆಯವರಿಗೆ ಅವಕಾಶ ಕೊಡುವುದು ಬೇಡವೇ?

ಶ್ರೀ ಎಸ್. ಬಂಗಾರಪ್ಪ.—ಇಂತಹ ವಿಚಾರಗಳನ್ನು ನಾವು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದು ನಮ್ಮ ಹಕ್ಕು. ಇದನ್ನು ನೀವು ಮೊಟಕುಗೊಳಿಸುವುದು ಸರಿಯಲ್ಲ. ನಾನು ಮೊದಲೇ ಪ್ರಸ್ತಾಪ ಮಾಡಿದಂತೆ ೧೮ನೇ ವಾರ್ಡ್‌ನ ಬಡಾವಣೆಯಲ್ಲಿರುವ ಹರಿಜನರ ಮೇಲೆ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ಬಸಪ್ಪನವರ ಮಗನಾದ ಶ್ರೀ ಬಸವರಾಜ ಮತ್ತು ಇವನ ಅನುಯಾಯಿಗಳಾದಂಥ ಸೇವ್ವಾರು ಕುಮಾರಿ, ದುರುಗಣ್ಣ, ಗೋವಿಂದ, ನಾಗರಾಜ, ಬಸಪ್ಪ ಮುಂತಾದವರು ನಡೆಸಿದ್ದಾರೆಂದು ದಿನಾಂಕ ೨೬–೧೧–೮೭ರಂದು ಡಾ. ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷರಾದ ಮಾರ್ಗೇಸ್ ಎಂಬುವರು ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಈ ರೀತಿಯ ದೌರ್ಜನ್ಯ ರಾತ್ರಿ ೯ ಗಂಟೆಯ ಸಮಯದಲ್ಲಿ ನಡೆದಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ವಿಷಯ ಬಿಟ್ಟು ಏನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇವರು ಪ್ರತಿಸಲವೂ ಈ ರೀತಿ ನಾನು ಮಾತನಾಡಲು ಅಡ್ಡಿಪಡಿಸುತ್ತಾರೆ. ಇದು ಸರಿಯಲ್ಲ. ತಾವು ನಮಗೆ ರಕ್ಷಣೆ ಕೊಡಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾತನಾಡುವಂತಹ ಸದಸ್ಯರಿಗೆ ನೀವು ರಕ್ಷಣೆ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ತಾವು ಮುಕ್ತಾಯ ಮಾಡಿ. ಇನ್ನೂ ಬಹಳ ಜನರು ಮಾತನಾಡುವವರು ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಒಬ್ಬರು ಸದಸ್ಯರು ಇಲ್ಲಿ ಮಾತನಾಡುವಾಗ ಈ ರೀತಿ ಅವರು ಪದೇ ಪದೇ ಎದ್ದು ನಿಂತು ಅಡ್ಡಿಪಡಿಸುವುದು ಸರಿಯಲ್ಲ ಎಂದು ನೀವು ಅವರಿಗೆ ಸರಿಯಾದ ಸೂಚನೆಯನ್ನು ಕೊಡಬೇಕು. ಯಾರೇ ಆಗಲಿ, ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ. ಈ ಮಾತನ್ನು ನಾನು ಇಲ್ಲಿ ಬಹಳ ವಿಷಾದದಿಂದ ಹೇಳಲೇಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಿಮಗೆ ಮಾತನಾಡಲು ೧೫–೨೦ ನಿಮಿಷಗಳಷ್ಟು ಹೆಚ್ಚು ಕಾಲಾವಕಾಶ ಕೊಟ್ಟಿದ್ದೇನೆ. ನಾನು ಬೇರೆಯವರಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಆದ್ದರಿಂದ ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅವರ ಪ್ರಚೋದನೆಗೆ ಸರ್ಕಾರದವರೇ ಕಾರಣವೆಂದು ಕಾಣುತ್ತಿದೆ ನನ್ನ ಭಾಷಣಕ್ಕೆ ಅವರು ಈ ರೀತಿ ಅಡ್ಡಿ ಪಡಿಸುವುದಾದರೆ ನಾನು ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ, ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ನಾನು ನನ್ನ ಭಾಷಣವನ್ನು ಮುಂದುವರೆಸುವುದಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.—ನೀವು ನಮಗೆ ರಕ್ಷಣೆ ಕೊಡುವ ಹಾಗಿಲ್ಲ. ಹಾಗಾದರೆ ನಾವು ಹೊರಟು ಹೋಗುತ್ತೇವೆ.

(ಮಾನ್ಯ ಸದಸ್ಯರಾದ ರಾಮಪ್ಪನವರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಭಾಧ್ಯಕ್ಷರೆ, ಈ ದೀನದಲಿತರ ಮೇಲೆ ಎಸ್.ಸಿ. ಯವರ ಮೇಲೆ ಅನೇಕ ದೌರ್ಜನ್ಯಗಳು ಆಗುತ್ತಿವೆ ಎನ್ನುವಂಥ ವಿಷಯವನ್ನು ಹಿಂದೆ ಎರಡೂ ಕಡೆಯ ಸದಸ್ಯರು ಈ ಸದನದ ಗಮನಕ್ಕೆ ತಂದಿದ್ದರು. ಅಂದು ಆದ ಚರ್ಚೆಯನ್ನು ಗಮನಿಸಿ ಸರ್ಕಾರದವರು ಈ ಸದನದ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಗೆ ಬಹಳ ಅನುಭವವುಳ್ಳಂಥ ಡಾ. ತಿಪ್ಪೇಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆ ಸಮಿತಿಯವರು ಎಲ್ಲಾ ಕಡೆಗಳಲ್ಲೂ ಹೋಗಿ ಅಲ್ಲಿ ಇರತಕ್ಕಂಥ ಸಾಕ್ಷಿ ಆಧಾರಗಳನ್ನು ಗಮನಿಸಿ ನಿಜವಾದಂಥ ಸಂಗತಿಗಳು ಏನು ಎನ್ನುವುದನ್ನು ತಿಳಿದು ಸ್ಪಷ್ಟವಾದ ವ್ಯಾಖ್ಯಾನವನ್ನು ಮಾಡಿದ್ದಾರೆ. ನಿಜ, ಈಗ ಚರ್ಚೆಯಾಗುವಾಗ ಅನೇಕ ಬಿಸಿ ಬಿಸಿ ಮಾತುಗಳು ಬಂದುವು. ದುರ್ದೈವದಿಂದ ಈ ಬಿಸಿ ವಾತಾವರಣವನ್ನು ಉಂಟು ಮಾಡಿದಾಗ ನಿಜವಾದ ಮರ್ಮವನ್ನು ಅರಿತುಕೊಳ್ಳಲಿಕ್ಕೆ ಅವಕಾಶ ಸಿಗದ ಹಾಗೆ ಆಗುತ್ತದೆ. ನಾನು ಇಷ್ಟೇ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಸರ್ಕಾರವನ್ನು ಟೀಕೆ ಮಾಡುವುದು ಒಂದೇ ನಮ್ಮ ಉದ್ದೇಶವಲ್ಲ, ಈ ಸರ್ಕಾರ ನಿಜವಾಗಿಯೂ ಜನತೆಗೆ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಬೇಕು, ಪರಿಶಿಷ್ಟ ವರ್ಗಕ್ಕಾಗಲಿ, ಎಸ್.ಸಿ.ನವರ ಬಗ್ಗೆಯಾಗಲಿ ಇನ್ನೂ ಹೆಚ್ಚು ಹೆಚ್ಚು ಗಮನವನ್ನು ಹರಿಸಿ ಅವರ ರಕ್ಷಣೆಗೆ ಬರಬೇಕು ಎನ್ನುವುದು ನಮ್ಮ ಅಭಿಪ್ರಾಯ. ಸರ್ಕಾರ ಯಾರ ಸಲುವಾಗಿ ಇರುತ್ತದೆ ಎಂದರೆ ಯಾರು ದೀನದಲಿತರು, ಅಬಲರು ಇರುತ್ತಾರೆ ಆ ಅಬಲರಿಗೆ ರಕ್ಷಣೆ ಕೊಡುವುದೇ ಸರ್ಕಾರದ ಮುಖ್ಯ ಕರ್ತವ್ಯ. ಅವನು ಯಾವ ಜಾತಿಯಲ್ಲಿ ಹುಟ್ಟಿರಲಿ ಆ ಅಬಲರಿಗೆ ರಕ್ಷಣೆ ಕೊಡದೇ ಇದ್ದರೆ ಆ ಸರ್ಕಾರ, ಸರ್ಕಾರ ಅನ್ನಿಸಿಕೊಳ್ಳುವುದಕ್ಕೆ ಸಹಿತ ಲಾಯಕ್ಕು ಇಲ್ಲ. ಇವತ್ತಿನ ದಿವಸ ಎಲ್ಲವನ್ನು ಸರ್ಕಾರದ ಮೇಲಾಗಲಿ, ಮುಖ್ಯಮಂತ್ರಿಗಳ ಅಥವಾ ಹೋಂ ಮಿನಿಸ್ಟರ್ ಮೇಲೆ ಹಾಕಲಿಕ್ಕೆ ಆಗುವುದಿಲ್ಲ. ಆದರೆ ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಇವತ್ತು ಈ ಅಧಿಕಾರಿ ವರ್ಗ ಏನಿದೆ ಈ ಅಧಿಕಾರಿ ವರ್ಗ ಸರ್ಕಾರವನ್ನೂ ಸಹ ತಿರಸ್ಕರಿಸಿ, ತಮ್ಮ ಹೊಟ್ಟೆ, ತಮ್ಮ ಜೇಬನ್ನು ತುಂಬಿಕೊಳ್ಳುವ ದೃಷ್ಟಿಯಿಂದ ಹಿತಾಹಿತಗಳನ್ನು ಗಮನಿಸದೆ, ಸಾರ್ವಜನಿಕ ಹಿತವನ್ನೂ ಸಹ ದುರ್ಲಕ್ಷಿಸಿದಷ್ಟು ಪ್ರವೃತ್ತಿಗೆ ಈಡಾಗಿ ಅನೇಕ ಘಟನೆಗಳನ್ನು ಮಾಡುತ್ತಾ ಇದ್ದಾರೆ. ಹಿಂದೆ ಶ್ರೀಮಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟರು. ಗಾಡಿ ಬಿದ್ದಾಗ, ಅಂದಾಗ ಅವರು ಗಾಡಿಯನ್ನು ನಡೆಸಲಿಕ್ಕೆ ಹೋಗಿದ್ದಾರೆ ಏನು? ಏನಿಲ್ಲ, ಆದರೂ ರಾಜಿನಾಮೆ ಕೊಟ್ಟರು. ಆಗಿನ ವಾತಾವರಣ ಬೇರೆ ಇತ್ತು. ಈಗ ವಾತಾವರಣ ಬೇರೆ ಇದೆ. ಆಗ ಅವರು ವಿರೋಧಪಕ್ಷದಲ್ಲಿದ್ದರು. ಈಗ ನಾವು ಇಲ್ಲಿ ವಿರೋಧಪಕ್ಷದಲ್ಲಿದ್ದೇವೆ. ಆದರೆ ನಾನು ಹೇಳುವುದಿಷ್ಟೆ. ಯಾವುದರ ಸಲುವಾಗಿ ಅವರು ರಾಜೀನಾಮೆ ಕೊಟ್ಟರು ಎನ್ನುವಂಥ ತತ್ವವನ್ನು ಪರಿಶೀಲನೆ ಮಾಡಬೇಕು. ಶ್ರೀ ಕಿದ್ವಾಯಿಯವರು ರಾಜಿನಾಮೆ ಕೊಡುವಂಥ ಪ್ರಸಂಗ ಏಕೆ ಬಂತು, ಉಪವಾಸ ಏಕೆ ಬಿದ್ದರು ಎನ್ನುವಂಥ ತತ್ವದ ಕಡೆಗೆ ಗಮನವನ್ನು ಹರಿಸಿದರೆ ಈ ಅಧಿಕಾರಿಗಳಿಗೆ ಒಂದು ಬೆದರಿಕೆಯನ್ನು ಹಾಕುವ ಸಲುವಾಗಿ ಅವರು ರಾಜಿನಾಮೆ ಕೊಟ್ಟರು ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಅವತ್ತು ಒಬ್ಬ ಪೇದೆ ಮಲ ತಿನ್ನಿಸಿದ, ಅವನಿಗೆ ಮತ್ತು ಒಬ್ಬ ಮಾಸ್ತರಿಗೆ ಶಿಕ್ಷೆ ಮಾಡಬೇಕು. ಅವರಿಗೆ ಶಿಕ್ಷೆ ಮಾಡಿರಿ, ಇದರ ಜೊತೆಗೆ ಡೆಪ್ಯೂಟಿ ಕಮಿಷನರ್ ಆಗಲಿ, ಡಿವಿಜನಲ್ ಕಮಿಷನರ್ ಆಗಲಿ ಮತ್ತು ಇನ್ನಿತರ ಡಿ.ಎಸ್.ಪಿ. ಯವರಾಗಲಿ ಯಾವ ಕೆಲಸವನ್ನು ಮಾಡಿದರು ಎನ್ನುವುದನ್ನು ಇವತ್ತು ಗಮನಿಸಬೇಕಾಗುತ್ತದೆ. ಈ

ಘಟನೆ ಬಗ್ಗೆ ಸರ್ಕಾರಕ್ಕೆ ಎಂ.ಎಲ್.ಎ. ಬಂದು ಹೇಳಬೇಕಾಗಿಲ್ಲ, ಮುಖ್ಯಮಂತ್ರಿಗಳ ಮನಸ್ಸನ್ನು ಹರಿಸಬೇಕಾಗಿಲ್ಲ. ಆ ಜಿಲ್ಲೆಯಲ್ಲಿ ಇರತಕ್ಕಂಥ ಅಧಿಕಾರಿಗಳ ಕೈಯಲ್ಲಿ ಪರಿಶಿಷ್ಟ ಜನರ ಹಿತವನ್ನು ಗಮನಿಸಿ ಎಂದು ಅಧಿಕಾರ ಕೊಟ್ಟಾಗ ಅವರು ಯಾವ ಗಮನವನ್ನು ಹರಿಸಿದರು? ಬರೀ ಪಗಾರ ತೆಗೆದುಕೊಳ್ಳುವುದೇ ತಮ್ಮ ಧರ್ಮ ಎಂದು ತಿಳಿದ ವರ್ಗ ಒಂದು ಕಡೆ, ಅಧಿಕಾರೇತರ ವರ್ಗ ಒಂದು ಕಡೆಗೆ ಇರುವಂಥ ಪರಿಸ್ಥಿತಿ ಬಂದೀತು. ಆ ದೃಷ್ಟಿಯಿಂದ ತಾವು ವಿವೇಚನೆ ಮಾಡಬೇಕು. ಈ ರಿಪೋರ್ಟಿನಲ್ಲಿ ಏನು ಬರೆದಿದ್ದಾರೆ ಎಂದರೆ, ಬೆಂಡಿಗೇರಿ ಗ್ರಾಮದ ಹರಿಜನರಿಗೆ ಮಲ ತಿನ್ನಿಸಿದ್ದುದು ನಿಜವೆಂದು ಮನವರಿಯಾಗಿದೆ. ಇದಕ್ಕೆ ರಾಜಕೀಯ ಹಾಗೂ ಜಾತಿಯ ಕಾರಣಗಳು ಇರಬಹುದು'' ಎಂದು ಇದೆ. ಇದನ್ನು ನಾವು ಹೇಳಿದ್ದಲ್ಲ ಇದು ಜನತಾ ಪಕ್ಷದ ಸದಸ್ಯರೇ ಬರೆದಂಥ ರಿಪೋರ್ಟ್. ಸೂಕ್ಷ್ಮವಾಗಿ ಆಲೋಚನೆ ಮಾಡುವಂಥ ವಿಷಯವಿದು—ಎನ್ನುವಂಥ ಮಾತನ್ನು ಇವತ್ತಿನ ದಿವಸ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರಿಪೋರ್ಟ್‌ನಲ್ಲಿ ''ಇದೊಂದು ಅಕ್ಷಮ್ಯ, ಹೇಯ ಹಾಗೂ ಹೀನಾ ಕೃತ್ಯ. ಈ ರೀತಿ ಮನುಷ್ಯರಿಗೆ ಮಲ ತಿನ್ನಿಸುವುದಕ್ಕಿಂತ ವಿಷ ಕುಡಿಸುವುದೇ ಲೇಸು'' ಎಂದು ಬರೆದಿದ್ದಾರೆ. ಹಾಗಾದರೆ ಇದು ಮರ್ಡರ್ ಮಾಡುವುದಕ್ಕಿಂತ ಹೀನಾಯವಾದುದು, ಜಗತ್ತಿನಲ್ಲಿ ಯಾವ ಮೂಲೆಯಲ್ಲೂ ಇಂತಹ ಹೀನಾಯವಾದ ಕೃತ್ಯವನ್ನು ಯಾರೂ ಎಸಗಿಲ್ಲ.

೨-೦೦ ಪಿ. ಎಂ.

ಅದಕ್ಕಾಗಿ ತಾವು ಈ ಕಡೆಗೆ ಲಕ್ಷ್ಯ ಕೊಡಬೇಕು. ಇದರಿಂದ ಒಳ್ಳೆಯ ಪರಿಪಾಠ ಬೆಳೆದು ಎಲ್ಲಾ ಜನರಿಗೆ ಬುದ್ಧಿ ಕಲಿಸಿದಂತಾಗಬೇಕು. ಇದು ಈ ಸದನದ ಅಭಿಪ್ರಾಯವಾಗಬೇಕು. ಇದರಲ್ಲಿ ಒಡಕು ಬರಬಾರದು. ಎಲ್ಲರೂ ಕೂಡಿ ಒಂದೇ ಅಭಿಪ್ರಾಯವನ್ನು ತಾಳಬೇಕು. ಅಲ್ಲದೇ ವರದಿಯಲ್ಲಿ ಅನೇಕ ಮಾತುಗಳನ್ನು ಹೇಳಿದ್ದಾರೆ. ಇದರ ಬಗ್ಗೆ ನಾನು ಬಹಳ ಹೊತ್ತು ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಡುವುದಿಲ್ಲ. ಇವತ್ತು ಹರಿಜನರ ಕಲ್ಯಾಣದ ಸಲುವಾಗಿ ಅನೇಕ ಸಮಯದಲ್ಲಿ ನಾವು ಪಕ್ಷಪಾತದಿಂದಾಗಲೀ, ಅಥವಾ ಮತ್ತಿತರ ಮಾರ್ಗದಿಂದಾಗಲೀ ಅನ್ಯಾಯವಾಗುವುದನ್ನು ನೋಡಿ ಸುಮ್ಮನಿದ್ದೇವೆ. ಒಂದು ಉದಾಹರಣೆಯನ್ನು ಕೊಡುವುದಾದರೆ, ಶಿರಹಟ್ಟಿ ತಾಲ್ಲೂಕಿನಲ್ಲಿ ಮಾಗಡಿ ಎನ್ನುವ ಊರು ಇದೆ. ಅವತ್ತು ಈ ವಿಷಯವನ್ನು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ಹಿಂದಿನ ಸರ್ಕಾರದವರು ಸದರಿ ಊರಿನ ಮಾದಾರ ಓಣಿಗೆ ಸಂಬಂಧಪಟ್ಟಂತೆ ೫೨ ಅಥವಾ ೫೬ ಎಕರೆ ಜಮೀನನ್ನು ಮಂಜೂರು ಮಾಡಿದ್ದರು. ಇಡೀ ಮಾದಾರ ಸಮಾಜಕ್ಕೆ ಸಂಬಂಧಪಟ್ಟಂತೆ ಒಂದು ಟ್ರಸ್ಟ್ ಮಾಡಿ ಜಮೀನು ಕೊಟ್ಟಿದ್ದರು. ಆದರೆ ಅದರಲ್ಲಿ ಒಬ್ಬ ವ್ಯಕ್ತಿ ಟ್ರಸ್ಟ್ ಇಲ್ಲ ಸತ್ತು ಹೋಗಿದೆಯೆಂದು, ದಾಖಲೆಗಳನ್ನು ಸೃಷ್ಟಿಸಿ, ಪತ್ರಗಳನ್ನು ಹಾಜರುಪಡಿಸಿ ಜಮೀನನ್ನು ಹೊಡೆದಿದ್ದಾನೆ ಆತ ಜಮೀನು ಹೊಡೆಯುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದ. ಸುದೈವದಿಂದ ಈಗ ನಿಮ್ಮ ಕಡೆಗೆ ಜಗಿದಿದ್ದಾನೆ. ಇವತ್ತು ನಿಮ್ಮಲ್ಲಿ ಆತನಿಗೆ ರಕ್ಷಣೆ ಸಿಕ್ಕಿದೆ. ಇಂಥವರ ಬಗ್ಗೆ ಇಲ್ಲೆ ಪ್ರಸ್ತಾಪ ಮಾಡಿದಾಗ, ಇದರಲ್ಲಿ ಶಾಮೀಲಾಗಿರುವ ಅಧಿಕಾರಿಗಳ ಬಗ್ಗೆ ಪ್ರಸ್ತಾಪ ಮಾಡಿದಾಗ, ಮಾನ್ಯ ಬೊಮ್ಮಾಯಿಯವರು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ ತಪ್ಪಿತಸ್ಥ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆಂದು ತಿಳಿಸಿದರು. ಸದನದ ಎದುರಿಗೆ ತಿಳಿಸಿದರೂ, ಇವತ್ತಿನತನಕ ಕ್ರಮ ತೆಗೆದುಕೊಂಡಿಲ್ಲ. ಒಂದು ವರ್ಷ ಹೋಯಿತು; ಎರಡು ವರ್ಷ ಹೋಯಿತು. ಶಿರಹಟ್ಟಿ ತಾಲ್ಲೂಕಿನ ಜನರು ನನ್ನ ಎದುರಿಗೆ ಬರಬೇಡಿ ಅಂದರೂ ಬರುತ್ತಾರೆ. ಅವರನ್ನು ಒದಿರಿ ಕಳುಹಿಸಲಿಕ್ಕೆ ನನಗೂ ಆಗುವುದಿಲ್ಲ. ಇದು ಅವರು ಶಾಸಕರಿಗೂ ಗೊತ್ತಿದೆ. ಮಾನ್ಯ ಕಂದಾಯ ಮಂತ್ರಿಯವರು ಕೊಟ್ಟಂತ ವಚನವನ್ನು ಪಾಲನೆ ಮಾಡದೇ ಇದ್ದರೆ ಹೇಗೆ ? ಈ ವಿಷಯವನ್ನು ಕಮಿಟಿಯವರ ಎದುರಿಗೂ ಒಂದು ಹೇಳಿದ್ದಾರೆ. ಆದುದ್ದು ನಿಜ, ಹೊಲ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಹರಿಜನರಿಗೆ ಕೊಟ್ಟಿದ್ದನ್ನು ಬಿಡಿಸಿ ಕೊಡಿ. ನಿಮ್ಮ ಭೂಸುಧಾರಣಾ ಕಾನೂನಿನ ಉದ್ದೇಶ ಏನು ? ಸರ್ಕಾರದ ಉದ್ದೇಶ ಏನು ? ನೀವು ಮಾತಿಗೆ ತಪ್ಪಿರುವಾಗ ಒಂದು ನಿಮಿಷ ಕೂಡ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಮಲ ತಿನ್ನಿಸಿದವರನ್ನು ಬಿಟ್ಟಿರಿ, ಇವತ್ತು ಇಡೀ ಜನಾಂಗವನ್ನು ನಾಶ ಮಾಡುವುದಕ್ಕೆ ಹೊರಟಿದ್ದೀರಿ ಇವರಿಗೆ ಯಾರು ರಕ್ಷಣೆ ಕೊಡಬೇಕು ? ಮಾನ್ಯ ಜೆ.ಹೆಚ್. ಪಟೇಲರು ಇದರ ಬಗ್ಗೆ ವಿಶ್ಲೇಷಣೆ ಹೇಳಬಲ್ಲರೆ ? ಇದಕ್ಕೆ ಜಾತೀಯ ಆಧಾರ ಎನ್ನಬೇಕೆ, ಪಕ್ಷದ ಆಧಾರ ಎನ್ನಬೇಕೆ ? ತಾವು ಈ ವಿಚಾರದಲ್ಲಿ ಗಂಭೀರವಾಗಿ ಆಲೋಚನೆ ಮಾಡ

ಬೇಕು. ಇವತ್ತು ಸಮಾಜದಲ್ಲಿ ಹರಿಜನರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುವುದಕ್ಕೆ ಪ್ರಾರಂಭವಾಗಿವೆ. ಇದು ಸುಳ್ಳಲ್ಲ. ತಾವು ಹೇಳಬಹುದು, ನಾವು ಜನತಾ ಪಕ್ಷದವರು ಕುಳಿತು ಹರಿಜನರಿಗೆ ಹೊಡೆಯುತ್ತೇವೆಯೆ ಎಂದು. ಅಂಥ ಶಬ್ದವನ್ನು ನಾನ ಬಳಸುವುದಿಲ್ಲ. ಅಧಿಕಾರಸ್ಥರು ಇದು ನಮ್ಮ ಸರ್ಕಾರ ನಮ್ಮ ಹಿಂದೆ ಸರ್ಕಾರ ಇದೆ ಇದೆಯೆಂದು ಇಲ್ಲಸಲ್ಲದ ಆ ಕಾರವನ್ನು ಉಪಯೋಗ ಮಾಡಿಕೊಳ್ಳುವಂಥ ಜಹಾಂಗ ತಯಾರಾಗಿದೆ. ಲಂಚಕೋರರನ್ನು ಹಿಡಿಯುತ್ತೇವೆಂದು ಲಂಚ ತಿನ್ನುವವರನ್ನೇ ಬಿಡುತ್ತೀರಿ. ಇಡೀ ಮಾನವಕುಲವೇ ತಲೆತಗ್ಗಿಸುವಂಥ ಕೆಲಸವನ್ನು ಯಾರು ಮಾಡಿದ್ದಾರೆ ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಶಿಕ್ಷೆ ವಿಧಿಸಿ ಸ್ಥಳೀಯ ಪೋಲೀಸರನ್ನು ಸಸ್ಪೆಂಡ್ ಮಾಡಬೇಡಿ. ನನ್ನ ಮಟ್ಟಿಗೆ ಹೇಳುವುದಾದರೆ, ಐ.ಜಿ. ಮತ್ತು ಡಿ.ಐ.ಜಿ. ಯವರನ್ನೇ ಸಸ್ಪೆಂಡ್ ಮಾಡಿ. ಆಗ ಸ್ವಲ್ಪ ಅಂಜಿಕೆ ಹುಟ್ಟುತ್ತದೆ. ಕೆಲಸ ಮಾಡಬೇಕೆಂಬ ಭಯ ಮೂಡುತ್ತದೆ. ಇನ್ನು ಮುಂದಕ್ಕಾದರೂ ಯೋಗ್ಯವಾದಂಥ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಂಡು. ಮತ್ತೊಮ್ಮೆ ಇಂಥ ಅನಾಹುತ ಕೃತ್ಯಗಳು ನಡೆಯದಂತೆ ನೋಡಿಕೊಳ್ಳಿ. ನಿಮ್ಮ ಕಾಲದಲ್ಲಿ ಹೀಗಾಯಿತು ಎಂದು ತಾವು ಹೇಳುವುದಕ್ಕೆ ಹೊರಟರೆ, ಅಪ್ರತ್ಯಕ್ಷವಾಗಿ ಬೆಂಬಲ ಕೊಡುತ್ತೀರಿ ಎನ್ನುವ ಭಾವನೆ ಬರುತ್ತದೆ. ಹರಿಜನರಿಗೆ ಯಾವಾಗಲೂ ಸಂರಕ್ಷಣೆ ಕೊಟ್ಟಿಲ್ಲ. ಸಂರಕ್ಷಣೆ ಕೊಟ್ಟವ ಮಹಾತ್ಮಗಾಂಧೀಜಿ ಮಾತ್ರ. ಶೋಷಣೆ ಮಾಡಿಸಿಕೊಳ್ಳುವುದೇ ದುರ್ಬಲರ ಕರ್ತವ್ಯ ಶೋಷಣೆ ಮಾಡುವುದೇ ಸಬಲರ ಕರ್ತವ್ಯವಾಗಿದೆ. ಇದನ್ನು ತಿದ್ದುಪಡಿ ಮಾಡಿಕೊಳ್ಳಲೇಬೇಕು. ತಾವು ಮುಖ್ಯಮಂತ್ರಿಯಿಂದ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಅನೇಕ ಮಿತ್ರರು ಈ ವಿಚಾರದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ; ಅದರ ಜೊತೆಗೆ ವಿಶ್ಲೇಷಣೆಯನ್ನು ಕೂಡ ಮಾಡಿದ್ದಾರೆ. ನಾನು ಅವರು ಹೇಳಿದ್ದನ್ನೇ ಪುನಃ ಉಚ್ಚಾರ ಮಾಡಲಿಕ್ಕೆ ಹೋಗುವುದಿಲ್ಲ. ಈಗಾಗಲೇ ಸನ್ಮಾನ್ಯ ಶ್ರೀನಿವಾಸ್ ಅವರು ಹೇಳಿದ ಪ್ರಕಾರ ದಲಿತರ ಮೇಲೆ ದೌರ್ಜನ್ಯದ ಒಂದು ಮಹಾಪೂರವನ್ನೇ ಇವೊತ್ತು ನಾವು ಕಾಣುತ್ತಿದ್ದೇವೆ ಅದರಲ್ಲಿ ಪ್ರಾಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕ ಕೆಲವೊಂದು ಘಟನೆಗಳನ್ನು ಉಲ್ಲೇಖಿಸಿ ಮಾತನಾಡುತ್ತೇನೆ. ಮಾನ್ಯ ಜೆ. ಹೆಚ್. ಪಟೇಲರು ಕ್ರೈಮ್ ಮತ್ತು ಸಾಮುದಾಯಿಕ ಘಟನೆಗಳನ್ನು ಬೆರಸಲಿಕ್ಕೆ ಹೋಗಬೇಡಿ ಎಂದು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಈಗ ನಾನು ಏನು ಪ್ರಸ್ತಾಪ ಮಾಡುತ್ತೇನೆ ಎಂದರೆ, ಇವೊತ್ತು ಇಡೀ ದಲಿತ ಜನಾಂಗದ ಮೇಲೆ ಒಂದು ದೌರ್ಜನ್ಯ ಏನು ನಡೆದಿದೆ ಈ ಘಟನೆ ಇವೊತ್ತು ಬರೀ ಪತ್ರಿಕೆಯಲ್ಲಿ ಬರತಕ್ಕದ್ದು, ಈ ಸದನದಲ್ಲಿ ಪ್ರಸ್ತಾಪ ಮಾಡಿ ತಾವು ಉತ್ತರ ಕೊಡುವುದಕ್ಕೆ ಸೀಮಿತವಾಗಿಲ್ಲ. ಈ ಎರಡು ಮೂರು ಘಟನೆಗಳ ಬಗ್ಗೆ ವರದಿಗಳು ನಮ್ಮ ಮುಂದೆ ಇವೆ ಇವು ಈ ಸದನದ ಸಮಿತಿಯ ವರದಿಗಳು ಇಡೀ ಸದನದ ವರದಿಯ ಒಂದು ದಾಖಲೆಯನ್ನು ನಮ್ಮ ಮುಂದಿಟ್ಟುಕೊಂಡು ಅದರಲ್ಲಿರತಕ್ಕ ವಿಚಾರಗಳ ಬಗ್ಗೆ ಇವೊತ್ತು ಪ್ರಸ್ತಾಪವನ್ನು ಸೀಮಿತಗೊಳಿಸಿದರೂ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ. ಆ ಗಂಭೀರತೆಯ ಬಗ್ಗೆ ನಾವು ಎಷ್ಟು ತೀವ್ರವಾಗಿ ಪ್ರತಿಕ್ರಿಯಿಸಿದ್ದೇವೆ. ನಮ್ಮ ಹೃದಯ ಆ ಕಡೆ ಹೋಗಿ ಅದರ ಬಗ್ಗೆ ನಾವು ಯಾವರೀತಿಯಾದ ಅನುಕಂಪವನ್ನು ತೋರಿಸಿದ್ದೇವೆ, ಅದು ಮಾತ್ರ ಅಲ್ಲ, ಇಂತಹ ದೌರ್ಜನ್ಯಗಳನ್ನು ಗುರುತಿಸಿ ಅವುಗಳನ್ನು ಹತ್ತಿಕ್ಕುವ ಬಗ್ಗೆ ಸರ್ಕಾರದ ಐರನ್ ಹ್ಯಾಂಡ್ ಎಷ್ಟರಮಟ್ಟಿಗೆ ಅಲ್ಲಿ ಹೋಗಿದೆ ಎನ್ನುವುದನ್ನು ಆಲೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ನಾವು ಘಟನೆಗಳ ಬಗ್ಗೆ ಬಿಡಿ ಬಿಡಿಯಾಗಿ ಹೇಳುವುದಕ್ಕೆ ಹೋದರೆ ಇನ್ನೂ ಹೆಚ್ಚು ಸಮಯ ಆಗುತ್ತದೆ, ಆದ್ದರಿಂದ ಇದನ್ನು ನಾನು ಬಹಳ ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಡಾ. ತಿಪ್ಪೇಸ್ವಾಮಿ ಸಮಿತಿಯವರ ಎರಡು ವರದಿಗಳನ್ನು ಕೊಟ್ಟಿದ್ದಾರೆ. ೪-೧೧-೮೭ ಬೆಂಡಿಗೇರಿಗೆ ಸಂಬಂಧಪಟ್ಟಿದ್ದು, ಗುಲ್ಬರ್ಗದ ಕಮ್ಮನಸಿರಸಿಗಿ ಗ್ರಾಮದ ವರದಿಯನ್ನು ಕೊಟ್ಟಿದ್ದರು. ಮೇದಕಿನಾಳ ಮತ್ತು ಗಣಿಗೇರಕ್ಕೆ ಸಂಬಂಧಪಟ್ಟಂತೆ ೨೨-೭-೧೯೮೭ ರಲ್ಲಿ ವರದಿಯನ್ನು ಒಪ್ಪಿಸಿದ್ದಾರೆ. ಇಷ್ಟು ಗಂಭೀರವಾದ ಆಪಾದನೆಗಳು ಸಿದ್ಧವಾಗಿದ್ದರೂ ಕೂಡ, ಪ್ರಮುಖವಾಗಿ ದಂಡಸಂಹಿತೆಯ ಸ್ವರೂಪವನ್ನು ಕೊಟ್ಟಿದ್ದರೂ ಕೂಡ ಈ ಎರಡು ವರದಿಗಳನ್ನು ತಾವು ಬರೀ ಪೋಲೀಸ್ ಅಧಿಕಾರಿಗಳ ಕೈಗೆ ಕೊಟ್ಟು, ಬರೀ ವಿಧಾನಮಂಡಲದ ಇಲಾಖೆಯ ಕಪಾಟಿನಲ್ಲಿ ಇಡಲಿಕ್ಕೆ ಒಪ್ಪಿದ್ದೀರಾ ? ಇದರ ಗಂಭೀರತೆಯನ್ನು ಪರಿಶೀಲಿಸಿ ಕ್ಯಾಬಿನೆಟ್‌ನಲ್ಲಿ ಇದರ ಶಿಫಾರಸ್ಸು ಬಗ್ಗೆ ತಂದಿದ್ದೀರೋ ಅಥವಾ ಜ್ಯುಡಿಷಿಯಲ್ ಕಮಿಷನ್ ಆಫ್ ಎನ್‌ಕ್ವಯಿರಿ ಬಗ್ಗೆ ಮಾತ್ರ ಕ್ಯಾಬಿನೆಟ್‌ನಲ್ಲಿ ತಂದು ಯಾವುದೋ

ಟೆಕ್ನಿಕಲ್ ಪಾಯಿಂಟ್‌ನಿಂದ ಅದನ್ನು ಅಕ್ಸೆಪ್ಟ್ ಮಾಡುತ್ತೇವೆ ಅಥವಾ ಬಿಡುತ್ತೇವೆ ಎನ್ನುವುದು ಅಲ್ಲ. ಮಾನವೀಯತೆಯ ದೃಷ್ಟಿಯಿಂದ ಇಂಥಾದ್ದು ತರಬೇಕಾಗುತ್ತದೆ.
ಯಾವ ಒಂದು ಅಮಾನುಷ ಕೃತ್ಯ, ರಾಕ್ಷಸೀ ಕೃತ್ಯ ಈ ದಿವಸ ಈ ದಲಿತ ಜನಾಂಗದ ಮೇಲೆ ನಡೆದಿದೆ, ಇದನ್ನು ತಾವು ಎಷ್ಟರಮಟ್ಟಿಗೆ ಗ್ರಹಿಸಿದ್ದೀರಿ ಎನ್ನತಕ್ಕ ಮಾತನ್ನು ನಾನು ಕೇಳುತ್ತಿದ್ದೇನೆ. ತಾವು ತಾವು ಇದನ್ನು ಹೇಳಬೇಕು. ಇದನ್ನು ನಮ್ಮ ಕರ್ನಾಟಕದ ಜನತೆ ತಿಳಿದುಕೊಳ್ಳಬೇಕು. ಸಮಿತಿಯವರು ಕೊಟ್ಟಂಥವರದಿಗಳನ್ನು ನಿಮ್ಮ ಕ್ಯಾಬಿನೆಟ್‌ನಲ್ಲಿ ಯಾವ ದಿವಸಇಟ್ಟು ರಿವ್ಯೂ ಮಾಡಿದ್ದೀರಿ? ಯಾವ ದಿವಸ ಚರ್ಚೆ ಮಾಡಿದ್ದೀರಿ ? ಎಂಬುದನ್ನು ಸಭೆಗೆ ತಿಳಿಸುತ್ತೀರಾ ? ತಾವು ಕ್ಯಾಬಿನೆಟ್ ಮಂತ್ರಿಗಳಾಗಿದ್ದೀರಿ. ಸಿ.ಆರ್.ಇ. ಸೆಲ್ ಇದೆ. ಆ ಮೂಲಕ ದಕ್ಷತೆಯಿಂದ ಕೆಲಸ ಮಾಡಬಹುದು. ತಾವು ಕ್ಯಾಬಿನೆಟ್ ಮಂತ್ರಿಗಳಾಗಿ ಈ ವರದಿಗಳ ಬಗ್ಗೆ ಏನು ಕಾರ್ಯಾಚರಣೆಯನ್ನು ಕೈಗೊಂಡಿದ್ದೀರಿ ? Place the entire file of the action taken, note by you and the reference made to the Chief Minister and the recommendation made by the Chief Minister to the Cabinet. Have you taken any decision ? You have to produce it, and nothing less than that. ಇಲ್ಲದಿದ್ದರೆ ಈ ಸದನದ ಸಮಿತಿಯ ವರದಿಗೆ ಗೌರವವನ್ನು ತಾವು ಕೊಟ್ಟಂತಾಗುವುದಿಲ್ಲ. ಹಾಗೆ ಗೌರವವನ್ನು ಕೊಡದಿದ್ದ ಮೇಲೆ ಸಮಿತಿಗಳನ್ನು ಏತಕ್ಕೆ ರಚನೆ ಮಾಡಬೇಕು ? ಅವರು ಈ ವರದಿಯನ್ನು ಏತಕ್ಕೆ ಕೊಡಬೇಕು ? ಇದಕ್ಕೆ ಬೆಂಕಿ ಹಚ್ಚಬೇಕು. ಈ ವರದಿಗೆ ಮಂತ್ರಿಗಳಾಗಲೀ ಅಥವಾ ಕ್ಯಾಬಿನೆಟ್ ಮೀಟಿಂಗ್‌ನಲ್ಲಾಗಲಿ ಮಾನ್ಯತೆ ಸಿಕ್ಕದಿದ್ದರೆ, ಪರಿಶೀಲನೆ ಆಗದಿದ್ದರೆ, ಅಥವಾ ಕಾರ್ಯಾಚರಣೆ ಕೈಗೊಳ್ಳದಿದ್ದರೆ, ನಾವು ಇದಕ್ಕೆ ಗೌರವ ಮರ್ಯಾದೆಯನ್ನು ಕೊಡತಕ್ಕ ಪ್ರಶ್ನೆಯೇ ಬರುವುದಿಲ್ಲ. ಇದರ ಬಗ್ಗೆ ತಾವು ಉತ್ತರ ಕೊಡಬೇಕು. You must explain about the action to be taken ತಾವು ಏನು ಹೇಳಿಕೆಗಳನ್ನು ಕೊಟ್ಟಿದ್ದೀರೆಂಬುದಕ್ಕೆ ದಯವಿಟ್ಟು ಪತ್ರಿಕೆಗಳನ್ನು ತೆಗೆದುನೋಡಿ ಮಾನ್ಯ ಜಾಲಪ್ಪನವರೇ, ತಾವು ಏನು ಹೇಳಿದ್ದೀರಿ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಯಾರು ದೌರ್ಜನ್ಯ ಮಾಡುತ್ತಾರೆ. ಯಾರು ಪುಂಡಾಟಿಕೆ ಮಾಡುತ್ತಾರೆ. ಯಾರು ಗೂಂಡಾಗಿರಿ ನಡೆಸುತ್ತಾರೆ ಅಂಥವರನ್ನು ಗಡೀಪಾರು ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಗಡೀಪಾರು ಮಾಡಬೇಕೆಂದು ಈ ವರದಿಯಲ್ಲಿಯೂ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಕಾನೂನಿನಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಇದು ಪರಿಶೀಲನೆ ಮಾಡತಕ್ಕ ಪ್ರಶ್ನೆಯಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಆ ರೀತಿ ಹೇಳಿದ್ದುದು ನಿಜ. ಯಾರು ಈ ರೀತಿ ದೌರ್ಜನ್ಯ ನಡೆಸುತ್ತಾರೆ. ಪುಂಡಾಟಿಕೆ ಮಾಡುತ್ತಾರೆ, ಗೂಂಡಾಗಿರಿ ಮಾಡುತ್ತಾರೆ ಅವರನ್ನು ಗಡೀಪಾರು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿ ಸಮಿತಿಯವರು ವರದಿಯನ್ನು ಕೊಟ್ಟಮೇಲೆ ಅದನ್ನು ನೋಡಿ ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಆದರೆ ಇದರಲ್ಲಿ ಒಂದೊಂದು ಪ್ರಕರಣಕ್ಕೆ ನಾವು ಗಡೀಪಾರು ಮಾಡುವುದಕ್ಕೆ ಬರುವುದಿಲ್ಲ. ಒಬ್ಬ ವ್ಯಕ್ತಿಯ ಮೇಲೆ ಕನಿಷ್ಟ ೭-೮ ಪ್ರಕರಣಗಳಾದರೂ ಇದ್ದರೆ ಅಂಥವರನ್ನು ಗಡೀಪಾರು ಮಾಡಬಹುದೆಂದು ಲಾ ಡಿಪಾರ್ಟ್‌ಮೆಂಟ್‌ನವರು ಹೇಳಿದ್ದಾರೆ. ನಾವು ಲಾ ಡಿಪಾರ್ಟ್‌ಮೆಂಟ್‌ನವರನ್ನು ಈ ಬಗ್ಗೆ ಕೇಳಿದ್ದೇವೆ, ಅದೂ ಅಲ್ಲದೆ, ಅಂಥ ವ್ಯಕ್ತಿಗಳ ಮೇಲೆ ಪುಂಡುಗಂದಾಯ ಹಾಕಬೇಕೇ ಗಡೀಪಾರು ಮಾಡಬೇಕೇ ಎಂಬುದನ್ನೂ ಯೋಚನೆ ಮಾಡುತ್ತಿದ್ದೇವೆ, ತಾವೆಲ್ಲಾ ಅಡ್ವೋಕೇಟ್‌ಗಳು ತಾವು ಏನು ಸಲಹೆಗಳನ್ನು ಕೊಡುತ್ತೀರೋ ಕೊಡಿ. ತಮಗೆ ಅನುಭವವಿದೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಈ ಕಡೆಗೆ ಗಮನ ಕೊಟ್ಟರೆ ಒಳ್ಳೆಯದು. ಇಲ್ಲಿ ನಡೆದಿರತಕ್ಕ ಕೃತ್ಯ ಅಮಾನವೀಯ ಕೃತ್ಯ ಇದರ ಬಗ್ಗೆ ನಾವು ಮಾತನಾಡಿದ್ದೇವೆ. ಸದನದ ಸಮಿತಿಯವರು ಏನು ವರದಿಯನ್ನು ಕೊಟ್ಟಿದ್ದಾರೆ ಅದರ ಮೇಲೆ ನಾವು ಚರ್ಚೆ ಮಾಡಿದ್ದೇವೆ. ಹಿಂದೆ ೨೦ ಅಂಶದ ಕಾರ್ಯಕ್ರಮದ ಅಡಿಯಲ್ಲಿ ಗೇಣಿದಾರರಿಗೆ ಭೂಮಾಲೀಕರು ತೊಂದರೆ ಕೊಡುತ್ತಿದ್ದಾರೆಂಬ ಕಾರಣದಿಂದಾಗಿ ಅಂಥ ಲ್ಯಾಂಡ್ ಲಾರ್ಡ್ಸನ್ನು ಗಡೀಪಾರು ಮಾಡುವುದಕ್ಕೆ ಎಕ್ಸ್‌ಟರ್ನ್‌ಮೆಂಟ್ ಆರ್ಡರ್‌ನ್ನು ೧೯೭೭-೭೮ರಲ್ಲಿ ಪಾಸ್ ಮಾಡಿದೆವು. ಆದರೆ

೧೯೮೩ರಲ್ಲಿ ನೀವು ಆರ್ಡರ್‌ನ್ನು ವಿತ್‌ಡ್ರಾ ಮಾಡಿಕೊಂಡಿರಿ. ಅಲ್ಲಿಲಕ್ಷ್ಮಣನಾಯ್ಕನ ಕೊಲೆ ಆಯಿತು. ತಾವು ಆ ಊರಿಗೆ ಹೋಗಿದ್ದಿರಿ, ಅಲ್ಲಿನ ಜನರೂ ಹೇಳಿದ್ದಾರೆ. ಮತ್ತೆ ಅದನ್ನೇ ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಸ್ವಾಮಿ ಅಧ್ಯಕ್ಷರೆ. ತಾವು ಎಷ್ಟೋ ಆರ್ಡಿನೆನ್ಸ್‌ನ್ನು ತರುತ್ತೀರಿ. ಈಗ ಹೇಗೂ ಗೂಂಡಾ ಆ್ಯಕ್ಟ್ ಜಾರಿಯಲ್ಲಿದೆ. ಅದಕ್ಕೇ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. We will approve it. ಅಥವಾ ರಾಜ್ಯಪಾಲರ ದಸ್ಕತ್ತನ್ನಾದರೂ ತೆಗೆದುಕೊಳ್ಳಿ. ಆದರೆ ನಿಮ್ಮ ಮನಸ್ಸು ಈ ಕಡೆಗೆ ಹರಿದಿಲ್ಲ. ನೀವು ನಿಮ್ಮ ಆತ್ಮಶೋಧನೆ ಮಾಡಿ ಕೊಂಡು ನೋಡಿಕೊಳ್ಳಿ. ನೀವು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ನಾವು ನೋಡಬೇಕಾಗಿದೆ ನಿಮ್ಮ ಹೃದಯದಲ್ಲಿ ಹರಿಜನರ ಬಗ್ಗೆ ಎಷ್ಟರಮಟ್ಟಿಗೆ ಅನುಕಂಪ ಇದೆ ಎಂಬುದನ್ನು ನೋಡಬೇಕಾಗಿದೆ.

ಏತಕ್ಕೆ ಭಾಷಣ ಮಾಡುತ್ತೀರಿ? ದಲಿತರ ಬಗ್ಗೆ ಬರೀ ಭಾಷಣ ಮಾಡತಕ್ಕಂಥ ಕಾಲ ಹೋಯಿತು. ದಲಿತರ ಬಗ್ಗೆ ಕಾರ್ಯಾಚರಣೆ ಮಾಡುವ ಧೈರ್ಯ. ಎದೆಗಾರಿಕೆ ನಿಮಗೆ ಇದ್ದರೆ, ಅಧಿಕಾರ ಹೋದರೂ ಕೂಡ ಕಾರ್ಯಾಚರಣೆ ಮಾಡುತ್ತೇವೆಂದು ಹೇಳಿ. ಆ ಎದೆಗಾರಿಕೆ ಇದ್ದರೆ ನಿಮಗೆ ನಾವು ಸಲಹೆ ಕೊಡಬಹುದು ನೀವು ಏನು ಹೇಳುತ್ತೀರೆಂದರೆ ಡಿ.ಸಿ. ಮತ್ತು ಎಸ್.ಪಿ ಯವರುಗಳಿಗೆ ಜಾಯಿಂಟ್ ರೆಸ್ಪಾನ್ಸಿಲಿಟಿಯನ್ನು ಫಿಕ್ಸ್ ಮಾಡಿದ್ದೇವೆಂದು. ಇದರ ಬಗ್ಗೆ ಈ ಸದನದಲ್ಲಿ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೋ ಯಾರಿಗಾದರೂ ಡಿಮೋಟ್ ಮಾಡಿದ್ದೀರಾ ? ಯಾರಿಗಾದರೂ ಇನ್‌ಕ್ರಿಮೆಂಟ್ ವಿತ್‌ಹೋಲ್ಡ್ ಮಾಡಿದ್ದೀರಾ ? ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನಲ್ಲಿಯಾದರೂ ಹೇಳಿದ್ದೀರಾ ? ಏತಕ್ಕೆ ಈ ರೀತಿ ಸ್ಟೇಟ್‌ಮೆಂಟ್ ಕೊಡುತ್ತೀರಿ. Have you kept any of he SPs or DCs uner suspendion ಸರ್ವೀಸ್‌ಸಿಂದ ರಿಮೂವ್ ಮಾಡಿದ್ದೀರಾ ಏನೇನೂ ಮಾಡಿಲ್ಲ ಸಾಮಾನ್ಯ ಕಾರಣಕ್ಕಾಗಿ ವರ್ಗಾವಣೆ ಮಾಡುತ್ತೀರಿ. ಸಸ್‌ಪೆಂಡ್ ಮಾಡುತ್ತೀರಿ ಅಷ್ಟೆ. ರಾತ್ರಿ ಬೆಳಗಾದರೆ ಯಾರೋ ಒಬ್ಬ ಲಂಚ ತೆಗೆದುಕೊಂಡ ಎಂದು ಸಸ್‌ಪೆಂಡ್ ಮಾಡುತ್ತೀರಿ ಮತ್ತೆ ರಿವೋಕ್ ಮಾಡುತ್ತೀರಿ ಇನ್ನೊಂದು ದೊಡ್ಡ ಜವಾಬ್ದಾರಿಯನ್ನು ಹೊರಿಸಿ ಅನ್ಯಾಯ ನಡೆದಿರುವ ಕಡೆ ಎಸ್‌ಪಿಗಳ ಮೇಲೆ ಮತ್ತು ಡಿಸಿಗಳ ಮೇಲೆ. ತಾಲ್ಲೂಕು ಮ್ಯಾಜಿಸ್ಟ್ರೇಟರ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಅದರ ಬಗ್ಗೆ ವರದಿ ಬೇಕು. ಬರೀ ಬಾಯಿ ಮಾತಿನಲ್ಲಿ ಹೇಳಿ ನಮ್ಮನ್ನು ಇಲ್ಲಿ ಕೂರಿಸುವುದಕ್ಕೆ ಹೋಗಬೇಡಿ, ಪೋಲೀಸ್ ವರದಿ ನಮಗೆ ಬೇಕಾಗಿಲ್ಲ, ಡಾಕ್ಟರ್ ತಿಪ್ಪೇಸ್ವಾಮಿಯವರು ಕೊಟ್ಟಿರತಕ್ಕಂಥ ವರದಿ ಅದನ್ನು ಒಪ್ಪಿ ಕೊಳ್ಳುತ್ತೀರೋ ಅಥವಾ ತಿರಸ್ಕಾರ ಮಾಡುತ್ತೀರೋ ಅದನ್ನಾದರೂ ಹೇಳಿ. ನೀವು ಹೇಳದೆ ಇದ್ದರೆ ಅವರು ಕೊಟ್ಟಿರತಕ್ಕ ವರದಿಯನ್ನು ಅನುಷ್ಠಾನಕ್ಕೆ ತರುವ ಎದೆಗಾರಿಕೆ ನಿಮ್ಮಲ್ಲಿ ಇಲ್ಲವೆಂದು ನಾವು ಹೇಳಬೇಕಾಗುತ್ತದೆ. ಯಾರು ಬಲಿಷ್ಟರು ಇದ್ದಾರೋ ಅವರ ಕೈಯಲ್ಲಿ ಅಧಿಕಾರ ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ತಾವು ಅವರನ್ನು ಕೇಳಿ ಅಧಿಕಾರಿ ಮಾಡಬೇಕು ಎನ್ನುವುದಾದರೆ ದಯವಿಟ್ಟು ಹೇಳಿ. ಈ ರೀತಿ ಮಾಡಲಿಕ್ಕೆ ಹೋಗಬೇಡಿ. ಏತಕ್ಕೆಂದರೆ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ.We are going to establieh two more CRE cells ಎಂದು ಎಲ್ಲೆಲ್ಲಿ ಯಾವ ಯಾವ ಡಿವಿಷನ್ಸ್‌ನಲ್ಲಿ ಮಾಡಿದ್ದೀರಿ ?

SRI G. BASAVANNAPPA.— In Mangalore and Davangere we are going to start CRE cells.ಸಿ.ಆರ್.ಇ. ಸೆಲ್ ಪ್ರಾರಂಭಿಸಲು ಸ್ಟೇಟ್‌ನಿಂದ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಇದೆ. ಸೆಂಟ್ರಲ್‌ದು ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಬರಬೇಕಾಗಿದೆ. At the state level wr have accotded sanction.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮಗೆ ಮನಸ್ಸಿದ್ದರೆ You constitut the CHE to cells FIRSH and then ask the centre. ಅವರು ಕಾಂಟ್ರಿಬ್ಯೂಷನ್ ಕೊಡದಿದ್ದರೆ Then you blame the centre. ನೀವೇ ಸ್ವತಃ ಕವರ್ ಮಾಡುತ್ತೇವೆನ್ನುವುದಾದರೆ ಗೌವರ್ನ್‌ಮೆಂಟ್ ಆರ್ಡರ್ ಕೊಡಿ Place the Governmet order, for having constitute two more cells.

ಶ್ರೀ ಜಿ. ಬಸವಣ್ಣಪ್ಪ.—ದೌರ್ಜನ್ಯದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಎಸ್.ಪಿ ಗಳಿಗೆ ಜಾಯಿಂಟ್ ರೆಸ್ಪಾನ್ಸಿಬಲ್ ಫಿಕ್ಸ್ ಮಾಡಬಾರದು ಎಂದು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿಆರ್‌ಪಿ ಸೆಲ್ ಮಾಡಿ ಮೊಸಳೆ ಕಣ್ಣೀರು ಸುರಿಸುವುದು ಬೇಡ. ಬರೆ ಅನುಕಂಪ ವ್ಯಕ್ತಪಡಿಸುವುದು ಬೇಡ. ಮಾನವೀಯ ದೃಷ್ಟಿಯಿಂದ ಪ್ರಯತ್ನ ಮಾಡಿದರೆ ಸಾಕು. ಅಸ್ಪೃಶ್ಯತೆಯ ಬಗ್ಗೆ ಏನಾದರೂ ಕೇಸ್‌ಗಳು ತಮ್ಮಲ್ಲಿ ಇದೆಯೇ ಇದ್ದರೆ ಅದರ ಬಗ್ಗೆ ವಿಚಾರಣೆ ಮಾಡಿದ್ದೀರಾ ? ಎಲ್ಲಿ ಎಷ್ಟು ಮಾಡಿದ್ದೀರಿ ಹೇಳಿ ?

ಶ್ರೀ ಜಿ. ಬಸವಣ್ಣಪ್ಪ.—ಪ್ರಯತ್ನ ಮಾಡಿದ್ದೇವೆ, ಬೆಳಗಾಂ ಮತ್ತು ಮೈಸೂರಿನಲ್ಲಿ ಮಾಡಿದ್ದೇವೆ. ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಿ ಪ್ರಾರಂಭ ಮಾಡಿದ್ದೀರಿ ದಯವಿಟ್ಟು ಹೇಳಿ Any action have you taken Kindly place all the papers connected with that ಈವತ್ತು ಕಾಗದದಲ್ಲಿ ತಾವು ಪ್ರಚಾರವನ್ನು ಸೂಕ್ಷ್ಮವಾಗಿ ಗಿಟ್ಟಿಸಿಕೊಳ್ಳುವ ವಿಚಾರ ಮಾಡಿದ್ದೀರಿ. ತಾವು ೫ ವರ್ಷ ಆಯಿತೆಂದು ಜನೋತ್ಸವ ಮಾಡಿದಿರಿ. ಐದು ವರ್ಷಗಳ ಕಾಲ ಇರುವುದೇ ಬಹಳ ಕಷ್ಟ. ಐದು ವರ್ಷ ಬದುಕಿ ಬಾಳಿದ್ದೀರಿ, ಬಹಳ ಸಂತೋಷ. ಆದರೆ ಜನೋತ್ಸವದಲ್ಲಿ ದಲಿತರ ಬಗ್ಗೆ ಏನನ್ನು ಹೇಳಲಿಲ್ಲ. ಪೋರ್ಜರಿ, ಸುಳ್ಳು ಇದೆಲ್ಲ ಮಾಡಿಯೂ ಕೂಡ ಮಾನ ಮರ್ಯಾದೆ ಯಾವುದೂ ಇಲ್ಲದೆ ೫ ವರ್ಷ ಬದುಕಿದ್ದೀರಲ್ಲ ಬಹಳ ಸಂತೋಷ. ಜುಡಿಶಿಯಲ್ ಕಮೀಷನ್‌ನವರು ಕೂಡ ಮುಖಕ್ಕೆ ಮಂಗಳಾರತಿ ಹಾಕಿದ್ದಾರೆ ವಿಶ್ವದಲ್ಲಿ ಎಲ್ಲಿ ಹುಡುಕಿದರೂ ಪೋರ್ಜರಿ ಮಾಡತಕ್ಕ ಸರ್ಕಾರ, ಪೋರ್ಜರಿ ಮಾಡತಕ್ಕ ಪಕ್ಷ ಎಲ್ಲಿಯೂ ಸಿಗುವುದಿಲ್ಲ. ಆ ದಾಖಲೆ ನಿಮ್ಮಲ್ಲಿ ಇದೆ. ಈ ವರದಿಗಳನ್ನೆಲ್ಲಾ ಏನು ಮಾಡಬೇಕೆಂದು ತಾವು ಹೇಳಬೇಕು. ದಲಿತರ ಮೇಲೆ ಎಷ್ಟು ಅವಮಾನುಷ ವರ್ತನೆ ನಡೆದಿದೆ ಎಂಬುದನ್ನು ನೋಡಬೇಕು. ಹರಿಜನರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟತಕ್ಕ ಪ್ರಚೋದನಾ ಕಾರ್ಯ ನಡೆದಿದೆ ಎಂದು ಅಸಿಸ್ಟೆಂಟ್ ಕಮಿಷನರ್ ಹೇಳಿದ್ದಾರೆ. ನಿಮ್ಮ ಸರ್ಕಾರ ನಡೆಯುತ್ತಿದೆ ಎಂದು ನಾನಂತೂ ಒಪ್ಪುತ್ತಿಲ್ಲ, ಒಂದೊಂದು ಕ್ಷೇತ್ರವೂ ಒಬ್ಬೊಬ್ಬರ ಜಹಗೀರ್ ಆಗಿದೆ. ಒಂದೊಂದು ಜಿಲ್ಲೆಯೂ ಒಬ್ಬೊಬ್ಬರ ಜಹಗೀರ್ ಆಗಿದೆ. ಬಲಿಷ್ಟರು ಯಾರಿದ್ದಾರೆ ಅವರ ಜನಾಂಗದವರ ಅಧಿಕಾರಿಗಳನ್ನು ಹಾಕತಕ್ಕ ಪ್ರಯತ್ನ ನಡೆಯುತ್ತಿದೆ. Social balance itself has been totally distorted by the kind of administration you have given whether it is police administration or revenue administration ಈ ಪರಿಸ್ಥಿತಿ ಇದ್ದರೆ ನಿಮಗೆ ಹಿಡಿತ ಎಲ್ಲಿ ಬರುತ್ತದೆ ? because the elegence group, the vested interest who has entrenched into the society, the vested interested they are very much there...ನೀವು ಕ್ರಿಯೇಟ್ ಮಾಡಿದ ವೆಸ್ಟೆಡ್ ಇಂಟರೆಸ್ಟ್ ಎಂದು ಹೇಳುತ್ತಿಲ್ಲ, ಅವರಿಗೆಲ್ಲ ರೆಕ್ಕೆಪುಕ್ಕ ಬಂದಿದೆ. ರೆಕ್ಕೆಪುಕ್ಕವನ್ನು ತೆಗೆಯತಕ್ಕ ಪ್ರಯತ್ನವನ್ನು ನೀವು ಏನು ಮಾಡಿದ್ದೀರಿ ಎಂಬುದು ಮುಖ್ಯ ಯಾವ ಸರ್ಕಾರವೇ ಆಗಲಿ, ಸರ್ಕಾರದವರು ಮಾಡಿದ್ದಾರೆ, ಮಂತ್ರಿಗಳು ಮಾಡಿದ್ದಾರೆ ಎಂಬುದು ಅಲ್ಲ ಮುಖ್ಯ ಪ್ರಶ್ನೆ ಈಗ ಪ್ರತಿ ಗ್ರಾಮದಲ್ಲಿ ದಲಿತ ಸಂಘರ್ಷ ಸಮಿತಿಗಳು ಇವೆ. ನೀವು ಈ ರೀತಿ ಆಡಳಿತವನ್ನು ಮುಂದುವರಿಸಿಕೊಂಡು ಹೋದರೆ the entire law will be taken charge of by the people themselves They may take it to protect themselves. It may take or any point of time. ಕರ್ನಾಟಕದಲ್ಲಿ ಆ ಒಂದು ಪರಂಪರೆ ಇರಬಾರದು. ಇವತ್ತು ರಾಜ್ಯಮಟ್ಟದಲ್ಲಿಯೂ ಕೂಡ ದಲಿತ ಸಂಘರ್ಷ ಸಮಿತಿ ಇದೆ. ಈ ಬಗ್ಗೆ ನೀವು ಸ್ವಲ್ಪ ವಿಶ್ಲೇಷಣೆ ಮಾಡಿಸಿ. ದಲಿತ ಸಂಘರ್ಷ ಸಮಿತಿ ಏತಕ್ಕೆ ಇದೆ ಎಂಬುದನ್ನು ವಿಚಾರ ಮಾಡಿ. ಒಬ್ಬರು ನೆಕ್ಸಲೈಟ್ ಕಾಗದ ಬರೆದರು ಎಂದರು. ಅದು ಜನತಾ ಅಥವಾ ಕಾಂಗ್ರೆಸ್ಸಿನ ಪ್ರಶ್ನೆ ಅಲ್ಲ. ಕರ್ನಾಟಕ ರಾಜ್ಯದಲ್ಲಿ ಯಾವ ಒಂದು ಕಾನೂನು ವ್ಯವಸ್ಥೆ, ಪರಂಪರೆ ಇದೆ ಅದನ್ನು ಸಂಪೂರ್ಣವಾಗಿ ಒಡೆದುಹಾಕತಕ್ಕ ಪ್ರವೃತ್ತಿ ಈಗ ನಡೆಯುತ್ತಿದೆ. ಇದನ್ನು ನೀವು ಡೈರೆಕ್ಟಾಗಿ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ. ಅದನ್ನು ತಡೆಯುವುದಕ್ಕೆ ನಿಮ್ಮಿಂದ ಸಾಧ್ಯವಾಗುತ್ತಿಲ್ಲ. ಯಾವ ಕಾಂಗ್ರೆಸ್ ಬಂದರೂ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ನಿಮ್ಮಿಂದ ಅಂತೂ ಆಗುವುದಿಲ್ಲ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಸಾಧ್ಯವಿಲ್ಲ. It may lead to anarchy...ಎಷ್ಟರ

ಮಟ್ಟಿಗೆಪಟ್ಟಭದ್ರ ಹಿತಾಸಕ್ತಿಗಳು ಬೆಳೆದುಕೊಂಡಿವೆ ಅವುಗಳನ್ನು ಮೀರಿ ಹೋಗುವುದಕ್ಕೆ ಇವತ್ತುಯಾವ ಕಾನೂನು ನಡೆಯುತ್ತಿಲ್ಲ. Everything may go out of order...ಅದಕ್ಕೆ ಯಾರು ಕಾರಣರು ಎಂಬುದನ್ನು ನಾನು ಈಗ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಕೆಲವು ಘಟನೆಗಳು ಅಲ್ಲಲ್ಲಿ ಬಹಳತೀವ್ರವಾಗಿ ಆಗುತ್ತಿದೆ. ನಡೆಯಬಾರದ್ದೆಲ್ಲ ನಡೆಯುತ್ತಿದೆ. ಇದಕ್ಕೆಲ್ಲ socio-economic analysis will have to be done in each villege and e chtaluka Such a insensitivity the whole society in Karnataka has developed. ಏನೇನು ಘಟನೆಗಳು ನಡೆಯುತ್ತಿವೆ. ಅದಕ್ಕೆಲ್ಲಾ Socialogical reasons and such other reasons are tampered by certain vested interests who have captured power in some of the localities, some of the villages some of the districts. ಅದನ್ನು ಒಡೆಯತಕ್ಕ ಪ್ರಯತ್ನ ಎಲ್ಲಿಯುವರೆಗೆ ನೀವು ಮಾಡುವುದಿಲ್ಲ ಅಲ್ಲಿಯುವರೆಗೆ ನಿಮ್ಮ ಆಡಳಿತ the wit of administration will not run in such place. ಆದ್ದರಿಂದ ನಾವು ಹೇಳಿದ್ದಕ್ಕೆ ಮಾತ್ರ ನೀವು ಉತ್ತರ ಕೊಡುವುದಕ್ಕೆ ಹೋಗಬೇಡಿ. ಇದಕ್ಕೆ ಉತ್ತರ ಕೊಡಿ. ಏನೇನು ಆಕ್ಷನ್ ತೆಗೆದುಕೊಂಡಿದ್ದೀರಿ ಅದು ನಮಗೆ ಬೇಕು, ಯಾವ ಮಟ್ಟದಲ್ಲಿ ತೆಗೆದು ಕೊಂಡಿದ್ದೀರಿ ಅದು ನಮಗೆ ಬೇಕು. We would like to know that factual action taken. ಇವರು ಹೇಳಿದಹಾಗೆ ನಾಳ್ಕೈದು ವಿಷಯ ಮಾಡಿದ್ದೇವೆ, ಮಾಡುತ್ತಾ ಇದ್ದೇವೆ, ಮಾಡುವುದರಲ್ಲಿದ್ದೇವೆ ಆ ರೀತಿ ಹೇಳುವುದು ಬೇಡ. ಅದನ್ನು ಕೇಳಿಕೇಳಿ ನಾವು ಸೋತು ಹೋಗಿದ್ದೇವೆ The people are not going to believe The whole credibility of your administration has been in shake because you have no guts to implement any of the recommendations ಜುಲೈನಲ್ಲಿ ಇದನ್ನು ಮಾಡಿದ್ದಾರೆ. ಐದಾರು ತಿಂಗಳಾಯಿತು. ಎರಡು ಮೂರು ತಿಂಗಳಾಗಿದೆ ವರದಿ ಕೊಟ್ಟು. ಆದರೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಈ ಸರ್ಕಾರ ಬಂದಮೇಲೆ ಕಾರ್ಯಾಚರಣೆ ಮಾಡತಕ್ಕ ಆತ್ಮಸ್ಥೈರ್ಯ ಇಲ್ಲ ಎಂಬ ಭಾವನೆ ನಮಗೆ ಬಂದಿದೆ. ಏಕೆಂದರೆ ಅಧಿಕಾರದ ಜುಟ್ಟು ವೆಸ್ಟೆಡ್ ಇಂಟರೆಸ್ಟ್‌ಗಳ ಕೈಯಲ್ಲಿದೆ ಎಂಬ ಭಾವನೆ ಜನರಲ್ಲಿ ದಲಿತರಲ್ಲಿ ಮತ್ತು ನಮ್ಮಲ್ಲಿ ಬಂದಿದೆ. ಇದಕ್ಕೆ ನೀವು ಆಕ್ಷೇಪಣೆ ಮಾಡಬೇಕಾದ ಪ್ರಮೇಯ ಇಲ್ಲ. ಅಧಿಕಾರದ ಜುಟ್ಟು it is there with the vested interest. ಈ ಶಕ್ತಿಗಳನ್ನು ಮೂಲೋತ್ಪಾಟನೆ ಮಾಡುತ್ತೇವೆ ಎಂಬ ಆತ್ಮಧೈರ್ಯದಿಂದ ಮುನ್ನುಗತಕ್ಕ ಪ್ರಯತ್ನ ಕಾರ್ಯದಲ್ಲಿ ಬರಬೇಕೇ ಹೊರತು ಮಾತಿನಿಂದ ಬಾದರೆ ನಂಬತಕ್ಕ ಪ್ರಸಂಗ ಹೊರಟುಹೋಗಿದೆ. I would like to have files about the action taken, the date of the Cabinet meeting, when this was considered and the proposals and the action which is decided by the Cabinet on this. Nothing short of this. ಇಷ್ಟನ್ನು ಕೊಡದೇಹೋದರೆ we will not be satisfied with the answer of the Minister.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ದಲಿತರ ಮೇಲೆ ಆಗುತ್ತಾ ಇರತಕ್ಕಂಥ ದಬ್ಬಾಳಿಕೆಗಳು ಮತ್ತು ಅತ್ಯಾಚಾರಗಳ ಬಗ್ಗೆ ಸವಿಸ್ತಾರವಾಗಿ ಮಾನ್ಯ ಸದಸ್ಯರು ಈ ಸಭೆಯ ಮುಂದೆ ಹೇಳಿದ್ದಾರೆ. ನಾನು ಮಧ್ಯೆ ಪ್ರವೇಶಿಸಿ ಮಾತನಾಡುವಾಗ ನೀವು ಏನೇನು ಮಾಡಿದ್ದೀರಿ ಅದರ ವಿವರ ಹೇಳುತ್ತೇನೆ ಎಂದು ಮಾನ್ಯ ಮಂತ್ರಿಗಳಾದ ಜಾಲಪ್ಪನವರು ಒಂದು ಮಾತು ಹೇಳಿದರು.

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮದು ಅಂದರೆ ನಿಮ್ಮ ಪಕ್ಷದ್ದು ಎಂದು.

ಶ್ರೀ ಜಿ. ನಾರಾಯಣ ಕುಮಾರ್.—ಯಾರು ಮಾಡಿದರೋ ಅವರಿಗಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಇದೇ ಮಾತನ್ನು ರಾಚಯ್ಯನವರೂ ಅವರು ಹೋಂ ಮಿನಿಸ್ಟರ್ ಆಗಿದ್ದಾಗ ಹೇಳುತ್ತಿದ್ದರು. ಆದರೆ ಒಂದೂ ಹೇಳಲಿಲ್ಲ. ಈಗ ಇವರಿಗೆ ಹೇಳಿ ಎಂದು ಹೇಳಿದ್ದೇನೆ, ಇವರೂ ಹೇಳುವುದಕ್ಕಾಗುವುದಿಲ್ಲ, ಒಂದು ಮಾತ್ರ ಹೇಳುತ್ತೇನೆ. ನಾನು ಹೋಂ ಮಿನಿಸ್ಟರ್ ಆಗಿರಲಿಲ್ಲ, ಡೆಪ್ಯುಟಿ ಹೋಂ ಮಿನಿಸ್ಟರ್ ಆಗಿದ್ದೆ. ಆದರೆ ಹೋಂ ಮಿನಿಸ್ಟರ್ ಕೆಲಸ ಮಾಡಿದೆ.

ನಾವು ಎಲ್ಲಿಯವರೆಗೆ ಇದ್ದೆವು ಅಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ ದಲಿತರಿಂದ ಯಾವ ದೂರೂ ನಮಗೆ ಬರಲಿಲ್ಲ. ಯಾರಿಗೆ ಅನ್ಯಾಯ ಆಗಿದ್ದುದನ್ನು ನಾವು ಕೇಳಲಿಲ್ಲ ನಾನು ಆಗ ಹೇಳಿದ್ದೆ. ಯಾರಾದರೂ ದಲಿತರಿಗೆ ಅನ್ಯಾಯವಾದರೆ ಬೇರೆಯವರಿಂದ ಅದನ್ನು ಟೆಲಿಗ್ರಾಂ ಮುಖಾಂತರ ನನಗೆ ತಿಳಿಸಿ ಎಂದು. ನಾನಿರುವವರೆಗೂ ಒಂದು ಟೆಲಿಗ್ರಾಂ ಬರಲಿಲ್ಲ. ಅಂದರೆ ನಾವು ರಾಜ್ಯಾಡಳಿತ ಮಾಡುವಾಗ ಬಡವರ ರಕ್ಷಣೆ ಮಾಡುತ್ತೇವೆ ಎಂದು ನಾವು ನಿಲುವು ತೆಗೆದುಕೊಂಡಾಗ ಈ ರೀತಿಯ ದೂರುಗಳು ಬರಬಾರದು.

ಶ್ರೀ ರಮೇಶ್‌ಕುಮಾರ್.---ನೀವು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ನಿಮಗೆ ಅನ್ಯಾಯವಾಯಿತು, ಪೂರ್ಣ ನಂಜೇಗೌಡರು ನಿಮ್ಮನ್ನು ಮನೆಗೆ ಕಳುಹಿಸಿದರು. ನಾನು ನಿಮ್ಮ ಜೊತೆ ನಿಂತು ಹೋರಾಟ ಮಾಡಿದ್ದೇನೆ. ಸಮ್ಮನೆ ಏತಕ್ಕೆ ಹೇಳುತ್ತೀರಿ ? ವೆಸ್ಟೆಡ್ ಇಂಟರೆಸ್ಟ್ ಎಲ್ಲಾ ಕಡೆ ಇರುತ್ತಾರೆ. Please tell-me-don't you stand by that ? Is it not the Congress people throw you out because of your ideologses and convictions. Vested interest are there in all the political parties. They are not confined to one pafty. They were there when the Congress was ruling. There presence will be very much there in all political parties.

ಶ್ರೀ ಜಿ. ನಾರಾಯಣ ಕುಮಾರ್.---ನಿಮ್ಮ ಚರ್ಚೆ ಕನ್ನಡಿಗರಿಗೂ ಅರ್ಥವಾಗಲಿ,

ಶ್ರೀ ರಮೇಶ್ ಕುಮಾರ್.---ನಿಮಗೆ ಟೆಲಿಗ್ರಾಂ ಬರುವುದಿರಲಿ ನಿಮ್ಮನ್ನೇ ಕಿತ್ತುಹಾಕಿದರಲ್ಲ.

ಅಧ್ಯಕ್ಷರು.--ಯಾರೂ ಬೇರೆಯವರು ಇಂಟರ್‌ಫಿಯರ್ ಮಾಡದಹಾಗೆ ಮಾತನಾಡಿ ವೀರಪ್ಪ ಮೊಯಿಲಿಯವರ ತರಹ, ನಾನೂ ಇಂಟರ್‌ಫಿಯರ್ ಮಾಡುವುದಿಲ್ಲ.

೭-೩೦ ಪಿ.ಎಂ.

ಮಾನ್ಯ ರಮೇಶ್ ಕುಮಾರ್ ರವರು ಮಾತನಾಡಿದ್ದೆಲ್ಲವನ್ನೂ ನಾನು ಒಪ್ಪುತ್ತೇನೆ. ಅದೇ ನನ್ನ ಕೀರ್ತಿ, ನಾನು ಈಗ ಇಲ್ಲಿ ಇದ್ದೇನೆ. ಆಗ ಅವರೂ ಅದೇ ಪಾರ್ಟಿಯಲ್ಲಿದ್ದರು. ಆದರೆ ದಲಿತರು ಎಂದರೆ ಇಲ್ಲದವರು ಏನು ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಥವಾ ಈ ದೇಶದಲ್ಲಿ ಅವರ ಗತಿ ಏನಾಗಿದೆ ಎಂದರೆ, ಅವರ ಬಗ್ಗೆ ಮಾತನಾಡುವವರೇ ಜಾಸ್ತಿಯಾಗಿದ್ದಾರೆ. ಇವರ ಯೋಗ ಕ್ಷೇಮದ ಬಗ್ಗೆ ಮಾತನಾಡುವವರೇ ಜಾಸ್ತಿಯಾಗಿದ್ದಾರೆ. ದಾಸಾನುದಾಸ ಎಂದು ಪುರಂದರದಾಸರು ಹೇಳಿದರು. ಜನತಾ ಪಾರ್ಟಿಯವರೂ ಅದನ್ನೇ ಹೇಳುತ್ತಿದ್ದಾರೆ. ಕಾಂಗ್ರೆಸ್ ಪಾರ್ಟಿಯವರು ಅದನ್ನೇ ಹೇಳುತ್ತಿದ್ದಾರೆ. ನನಗೆ ಭಿನ್ನಭೇದವೇ ಇಲ್ಲ ಇಲ್ಲದವನ ಶೋಷಣೆ ಏನು ಇದೆ, ಅದು ಈಗಲೂ ನಡೆಯುತ್ತಿದೆ. ಇದನ್ನು ನಿಲ್ಲಿಸುವವರು ಯಾರು ? ಯಾವಾಗ ನಿಲ್ಲಿಸುತ್ತೀರಿ ? ಅದು ನನ್ನ ಪ್ರಶ್ನೆ. ನಾನೂ ಹೋಮ್ ಮಿನಿಸ್ಟರ್ ಆಗಿದ್ದೆ. ಆಗ ನಾನು ನಿಲ್ಲಿಸಿದ್ದೆ.

ಶ್ರೀ ಯು. ಭೂಪತಿ.--ಡೆಪ್ಯುಟಿ ಹೋಮ್ ಮಿನಿಸ್ಟರ್ ಎಂದು ಹೇಳಿ

ಅಧ್ಯಕ್ಷರು.---ನೀವು ನನ್ನ ಕಡೆ ಮಾತನಾಡಿ. ಬೇರೆಯವರ ಕಡೆಗೆ ತಿರುಗಿ ಮಾತನಾಡಬೇಡಿ.

ಶ್ರೀ ಬಿ. ಬಸವಲಿಂಗಪ್ಪ.---ಡೆಪ್ಯುಟಿ ಹೋಂ ಮಿನಿಸ್ಟರ್ ಆಗಿದ್ದರೂ ಹೋಂ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೇನೆ. ಕಮ್ಯುನಿಸ್ಟ್ ಪರವಾಗಿ ಮಾತನಾಡಿದೆ ಅದಕ್ಕವರು ಹೇಳಿದರು. ಈ ಶೋಷಣೆ ಏನು ಇದೆ ಇದು ನಡೆಯುತ್ತಲೇ ಬಂದಿದೆ, ಆದರೆ ಜಿಲ್ಲಾ ಪರಿಷತ್ತಿಗೆ ಒಂದು ವರ್ಷದ ಹಿಂದೆ ಚುನಾವಣೆಯಾಯಿತು. ಜಿಲ್ಲಾ ಪರಿಷತ್ತಿಗೂ ಹಾಗೂ ಮಂಡಲ್ ಪಂಚಾಯ್ತಿಗೂ ಚುನಾವಣೆ ಆದ ಮೇಲೆ ಎಷ್ಟು ಅಪರಾಧಗಳು ಆಗಿವೆ ? ಅದರ ಹಿಂದೆ ಎಷ್ಟು ಅಪರಾಧಗಳು ಆಗಿವೆ ಎಂಬುದನ್ನು ಯೋಚನೆ ಮಾಡಬೇಕು. ನಾನು ಹೇಳುತ್ತೇನೆ. ಜಿಲ್ಲಾ ಪರಿಷತ್ತಿನ ಚುನಾವಣೆಯಾದ ಮೇಲೆ ಯಾರು ಬಲಿಷ್ಠರು ಇದ್ದಾರೆ, ಬಲ್ಲಿದರು ಇದ್ದಾರೆ, ಅವರ ಮೇಲೆ ಒಂದು ಅತ್ಯಾಚಾರವಾಗಲಿ, ಕೊಲೆಯಾಗಲಿ ಅಷ್ಟಾಗಿ ಆಗೇ ಇಲ್ಲ. ಆದರೆ ದಲಿತರ ಮೇಲೆ ಇವುಗಳು ಜಾಸ್ತಿಯಾಗುತ್ತಿವೆ. ಇದಕ್ಕೆ ಕಾರಣವೇನೆಂದರೆ, ಒಂದೇ ಒಂದು ಕಾರಣ. ಜಿಲ್ಲಾ ಪರಿಷತ್ತಿನ ಅಧಿಕಾರ ಇವತ್ತು ಯಾರ ಕೈಯ್ಯಲ್ಲಿ ಹೋಗಿದೆ ? ಬಲಿಷ್ಠರ ಕೈಯ್ಯಲ್ಲಿ. ಯಾರು ಉಳ್ಳವರು ಇದ್ದಾರೋ ಅವರ ಕೈಯಲ್ಲಿ ಇವತ್ತು ಅಧಿಕಾರ ಹೋಗಿದೆ. ಯಾರು

ರಾಜ್ಯಭಾರ ಮಾಡಿದ್ದರೋ. ಜಾತೀಯ ಹೆಸರಿನಲ್ಲಿ, ಮತಗಳ ಹೆಸರಿನಲ್ಲಿ ರಾಜ್ಯಭಾರ ಮಾಡಿದ್ದಾರೋ ಅವರ ಕೈಯ್ಯಲ್ಲೇ ಅಧಿಕಾರ ಹೋದರೆ ಜಿಲ್ಲಾಪರಿಷತ್ತಿನ ಅಧಿಕಾರ ಹೋಗಿದೆ. ಇವತ್ತು ದಲಿತರ ಕೈಯಲ್ಲಿ ಆ ಒಂದು ಅಧಿಕಾರ ಇಲ್ಲವೇ ಇಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.-- ಪಾರ್ಲಿಮೆಂಟ್‌ನಲ್ಲಿ ಯಾರ ಕೈಯ್ಯಲ್ಲಿದೆ ಅಧಿಕಾರ.

ಶ್ರೀ ಬಿ. ಬಸವಲಿಂಗಪ್ಪ.— ಇದು ದುಶ್ಚಟ ಎಂದು ಕಾಣುತ್ತದೆ. ಕೇಳಿದರೆ ಏನು ಹೇಳುತ್ತಾರೆ ಎಂದರೆ, ಅಲ್ಲಿ ಹೋಗಿ ಎಂದು ಹೇಳುತ್ತಾರೆ. ಅದನ್ನೂ ನೋಡೋಣ ಸ್ವಾಮಿ. ಕೇಂದ್ರದಲ್ಲೂ ನೋಡೋಣ. ತಪ್ಪು ಮಾಡಿದ್ದರೆ ಅವರಿಗೂ ಹೇಳುವುದಕ್ಕೆ ಹಿಂದೆ ಬೀಳುವುದಿಲ್ಲ. ನಾನು ಕಾಂಗ್ರೆಸ್ ಅಥವಾ ಜನತಾ ಪಾರ್ಟಿ ಎಂದು ಭೇದ ಭಾವ ಮಾಡಲೇ ಇಲ್ಲ, ಶೋಷಣೆ ಮಾಡುವಾಗ ಜಾಸ್ತಿ ಶೋಷಣೆ ಯಾವಾಗ ಆಯಿತು ಎಂಬುದಕ್ಕೆ ಬರುತ್ತಿದ್ದೇನೆ. ಜನತಾ ಪಾರ್ಟಿಯವರು ಒಂದು ವರ್ಷದ ಹಿಂದೆ ಜಿಲ್ಲಾಪರಿಷತ್ತಿನ ಚುನಾವಣೆಯನ್ನು ಮಾಡಿದರು. ಈ ಒಂದು ಚುನಾವಣೆ ಆದ ಮೇಲೆ ಏನೇನು ಆಯಿತು ? ಎಷ್ಟೆಷ್ಟು ಕೊಲೆಗಳಾಗಿವೆ ? ದಲಿತರ ಕೊಲೆಗಳಾಗಿವೆಯೋ ಎಂಬುದನ್ನು ನೋಡಬೇಕು. ಯಾರಾದರೂ ಮನುಷ್ಯರಾಗಿ ಬಾಳಬೇಕು, ತಲೆ ಎತ್ತಿ ನಡೆಯಬೇಕು. ಈ ಸಮಾಜದಲ್ಲಿ ಮರ್ಯಾದೆಯಿಂದ ಹಾಗೂ ಗೌರವದಿಂದ ಜೀವನ ಮಾಡಬೇಕು. ನೀವು ಅಧಿಕಾರಕ್ಕೆ ಬಂದ ಮೇಲೆ ಎಷ್ಟೆಷ್ಟು ಕೊಲೆಗಳಾಗಿವೆ ? ಎಷ್ಟೆಷ್ಟು ಅನ್ಯಾಯಗಳು ಆಗಿವೆ ಎಂಬುದರ ವಿವರಗಳನ್ನು ಕೊಡಬೇಕು ಇದರ ಬಗ್ಗೆ ನಾನು ಹೇಳುವುದೇನೆಂದರೆ ಜಿಲ್ಲಾ ಪರಿಷತ್ತಿನ ಚುನಾವಣೆ ಆಗುವುದಕ್ಕಿಂತ ಮುಂಚಿತವಾಗಿ ಅಷ್ಟಾಗಿ ಇಂತಹ ಕೃತ್ಯಗಳು ಆಗುತ್ತಿರಲಿಲ್ಲ. ಆಗಿರುವುದೆಲ್ಲಾ ಜಿಲ್ಲಾಪರಿಷತ್ತಿನ ಚುನಾವಣೆಯಾದ ಮೇಲೆಯೇ. ಮಲ ತಿನ್ನಿಸಿದ್ದೀರಲ್ಲಾ, ಇದು ಆಗಬಾರದು ಎಂದು ಹೇಳುತ್ತಿಲ್ಲ. ಇಂತಹದ್ದು ಸಾವಿರ ಕೃತ್ಯಗಳು ಆಗಬೇಕೆಂಬುದೇ ನನ್ನ ಅಭಿಪ್ರಾಯ ಇದಕ್ಕೆ ಕಾರಣಗಳು ಇವೆ. ಈ ಸಮಾಜದಲ್ಲಿ ಸಾವಿರಾರು ವರ್ಷಗಳಿಂದಲೂ ದಲಿತರನ್ನು ತುಳಿಯುತ್ತಲೇ ಬಂದಿದ್ದಾರೆ. ದಲಿತರನ್ನು ಕೀಳು ಜಾತಿಯವರು ಎಂದು ಕರೆಯುತ್ತಾರೆ. ಅವರು ಆಸ್ತಿವಂತರಾಗುವುದಕ್ಕೆ ಬಿಡುವುದೇ ಇಲ್ಲ. ಗೌರವದಿಂದ ಜೀವನ ಮಾಡುವುದಕ್ಕೆ ಊರಿನಲ್ಲೇ ಬಿಡುವುದಿಲ್ಲ. ಯಾರಾದರೂ ವಿದ್ಯಾವಂತರಾಗಿ ಊರಿನಲ್ಲಿ ತಿರುಗಾಡಿದರೆ ಅವರನ್ನು ನೋಡಿ ಸಹಿಸಿಕೊಳ್ಳುವಂತಹ ಸಹನೆ ಇಲ್ಲ. ಬೆಂಡಿಗೇರಿಯಲ್ಲಿ ವಿದ್ಯಾವಂತ ಮಕ್ಕಳು ಇದ್ದಾರೆ. ಅವರನ್ನು ನೋಡಿ ಸಹಿಸಿಕೊಳ್ಳುವ ಸಹನೆ ಇಲ್ಲ. ಅವರಿಗೆ ಆ ರೀತಿ ಮಾಡಿರುವುದಕ್ಕೆ ಕಾರಣಗಳೇನು ? ಇಲ್ಲಿ ಕಳ್ಳತನ ಮಾಡಿದ್ದಾರೆಂದು ಹೇಳಿದ್ದಾರೆ. ನಾನು ಒಂದು ಹಂತದಲ್ಲಿ ಹೇಳಿದ್ದೇನೆ ಕಳ್ಳತನ ಅಪರಾಧ ಅಲ್ಲ ಎಂದು ತೀರ್ಮಾನ ಮಾಡಬೇಕು ಎಂದು. ಕಾರಣ, ಯಾರು ಈ ಸಮಾಜದಲ್ಲಿ ಆಸ್ತಿ ಇಟ್ಟುಕೊಂಡಿದ್ದಾರೆ, ಹಣ ಇಟ್ಟುಕೊಂಡಿದ್ದಾರೆ, ಯಾರ ಹತ್ತಿರ ಅದು ಪರಂಪರೆಯಾಗಿ ಮುಂದುವರೆಯುತ್ತಾ ಬರುತ್ತಿದೆ...

ಶ್ರೀ ಆರ್. ಎಲ್. ಜಾಲಪ್ಪ.— ಉದಾಹರಣೆ ನಿಮ್ಮದೇ ಇಟ್ಟುಕೊಳ್ಳಿ.

SRI. B. BASAVALINGAPPA — Richness of a man cannot be distributed among all the people of this country. Even the wealth of Government, even treasury of the Government cannot be distributed among the people to solve problem of poverty. ಬೆಂಡಿಗೇರಿಯಲ್ಲಿ ಏನಾಗಿದೆ ? ದಲಿತರಿಗೆ ತಿನ್ನಿಸಿದ್ದೀರಿ. ನಂತರ ಏನು ಮಾಡಿದಿರಿ ಎಂಬುದು ಪ್ರಶ್ನೆ. ನೀವು ತಿನ್ನಿಸಿದ್ದೀರಿ ಎಂದು ಹೇಳುತ್ತಿಲ್ಲ. ಇಂಥ ಅಪರಾಧ ಪ್ರಪಂಚದಲ್ಲಿ ಎಲ್ಲೂ ಆಗಿಲ್ಲ. ಯಾವ ಮನುಷ್ಯರೂ ಇದನ್ನು ಯೋಚನೆ ಮಾಡಿಲ್ಲ. ಇಂಡಿಯಾ ದೇಶದಲ್ಲಿ ಎಲ್ಲಿಯೂ ಇಂಥದ್ದು ನಡೆದಿಲ್ಲ. ಇದೇ ಕರ್ನಾಟಕದಲ್ಲಿ ಜನತಾ ಪಾರ್ಟಿಯವರು ಅಧಿಕಾರದಲ್ಲಿರುವಾಗ ಇಂಥ ಒಂದು ಘಟನೆ ನಡೆದಿದೆ. ನಡೆದಮೇಲೆ ನೀವು ಏನು ಕೆಲಸ ಮಾಡಿದ್ದೀರಿ. ಇವತ್ತು ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ. ತಾವೂ ಭಾಷಣಗಳನ್ನು ಕೇಳಿದ್ದೀರಿ. ಈ ದೇಶಕ್ಕೆ ಹಾಗಾಗಬೇಕು ಹೀಗಾಗಬೇಕು ಎಂದು ನಾನು ಹೇಳುವುದಿಲ್ಲ. ಒಟ್ಟಿನಲ್ಲಿ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಂಡು ಇಂಥದನ್ನು ಕೊನೆ ಮಾಡಬೇಕು. ಪಾಯಖಾನೆ ತಿನ್ನಿಸಿ ಈ ಜನಾಂಗವನ್ನೇ ಏನು ಅಗೌರವ ಮಾಡಿದ್ದೀರಿ ಈ ಕಳಂಕ ಗಂಧದೆಣ್ಣೆ ಹಚ್ಚಿ ತೊಳೆದರೂ ಹೋಗುವುದಿಲ್ಲ. ತಮ್ಮ ಸ್ಮೃತಿಗೆ ಒಂದು ವಿಷಯ ತರುತ್ತೇನೆ. ತಾವು ಮ್ಯಾಕ್‌ಬೆತ್ ಎಂಬ ಷೇಕ್ಸ್‌ಪಿಯರ್ ನಾಟಕ ನೋಡಿದ್ದೀರಿತಾನೆ. ಡಂಕನ್ ದೊರೆ ಮಲಗಿದ್ದಾಗ ತನ್ನ ಹೆಂಡತಿಯ ಪ್ರೇರೇಪಣೆಯಿಂದ ಚೂರಿ ತೆಗೆದುಕೊಂಡು ಹೋಗಿ ಮ್ಯಾಕ್‌ಬೆತ್ ಕೊಲೆ ಮಾಡುತ್ತಾನೆ. ಆಗ ರಕ್ತ ಬರುತ್ತದೆ. ಕೈಯೆಲ್ಲಾ

ರಕ್ತ ಆಗುತ್ತದೆ. ಆಗ ಹೇಳುತ್ತಾರೆ "All the perfumes of Arabia will not sweaten this little hard" ಆ ರೀತಿಯು ಕಳಂಕ ಏನಿದೆ ನಿಮ್ಮ ಮೇಲೆ ಮತ್ತು ಕರ್ನಾಟಕ ರಾಜ್ಯದಲ್ಲಿ ದಲಿತರ ಮೇಲೆ ಏನು ಅತ್ಯಾಚಾರ ನಡೆದಿದೆ, ಏನು ತಿನ್ನಿಸಿದ್ದೀರಿ ಅದನ್ನು ಮರೆತು ಬಿಡುತ್ತೇವೆ, ನಾವು ನುಂಗಿಬಿಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ಆದರೆ ನಿಮ್ಮ ಹತ್ತಿರ ಏನು ಹಣ ಇದೆ, ಜನತಾ ಪಾರ್ಟಿ ಸರ್ಕಾರ ದಲಿತರ ಉದ್ಧಾರಕ್ಕೆ ಹಾಕಿರುವ ಎಲ್ಲಾ ಕಾರ್ಯಕ್ರಮಕ್ಕೆ ಆ ಎಲ್ಲ ಹಣವನ್ನು ಉಪಯೋಗಿಸಿದರೂ ಕೂಡ ನಿಮ್ಮ ಮೇಲೆ ಬಂದಿರು ಕಳಂಕವನ್ನು ಮುಚ್ಚು ವುದಕ್ಕಾಗುತ್ತದೆಯೆ ? ಬಡಜನರೇನಿದ್ದಾರೆ, ಏನು ಶೋಷಣೆಗೆ ಒಳಗಾಗಿದ್ದೇವೆ, ನಾವು ಅದಕ್ಕೆ ಪಶ್ಚಾತ್ತಾಪ ಪಡುವುದಿಲ್ಲ. ನಾವು ಉಪವಾಸ ಇರುವುದಕ್ಕೆ ತಯಾರಾಗಿದ್ದೇವೆ. ಸಾವಿರಾರು ವರ್ಷ ಗಳಿಂದ ಉಪವಾಸ ಇದ್ದೇವೆ. ಆಸ್ತಿ ಇಲ್ಲ. ಹೀಗೇ ಇದ್ದೇವೆ. ಯಾರು ಯಾರು ಜಮೀನ್ದಾ ರರಿದ್ದಾರೆ ಅವರ ಮನೆಯಲ್ಲಿ ಕೂಲಿ ಮಾಡಿ ಮಾಡು ಜೀವನ ಮಾಡಿದ್ದೇವೆ. ಹೊಲೆಮಾದಿಗರು ಎಂದು ಹೇಳಿದರೂ ಸಹಿಸಿಕೊಂಡು ಅಗೌರವದಿಂದ ಜೀವನ ಮಾಡಿದ್ದೇವೆ. ತಲೆಯೆತ್ತಿ ನಡೆಯಬೇಕು ಎಂದು ಪ್ರಯತ್ನ ಮಾಡಿದಾಗ ಇಂಥ ಪ್ರಯತ್ನ ನೀವು ಮಾಡುತ್ತೀರಿ, ರಕ್ಷಣೆ ಮಾಡುವುದಿಲ್ಲ ಪೋಲೀಸ್ ಇಲಾಖೆಯವರು ಹೀಗೆ ಮಾಡಿದ್ದಾರೆ ಎಂದು ಹೇಳುತ್ತಿಲ್ಲ. ಪೋಲೀಸ್ ಇಲಾಖೆಯವರಿಗೆ ಅವಕಾಶ ಕೊಟ್ಟಿದ್ದರೆ ಅವರು ತಹಬಂದಿಗೆ ತರುತ್ತಿದ್ದರು. ಆದರೆ ಪೋಲೀಸ್ ಇಲಾಖೆ ಅವರ ಕೈಯಲ್ಲಿಲ್ಲ. ರಾಜಕೀಯ ಜನ ಏನಿದ್ದಾರೆ ಅವರ ಕೈಯಲ್ಲಿದೆ. ಈ ಪೋಲೀಸ್ ಇಲಾಖೆ ಪೋಲೀಸರು ಯಾವ ಆದೇಶವನ್ನು ಅನುಸರಿಸಬೇಕು ? ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇದ್ದಾರೆ. ಅವರ ಆದೇಶ ಪಾಲನೆ ಮಾಡಬೇಕೋ ಅಥವಾ ರಾಜಕಾರಣಿಗಳ ಆಜ್ಞೆ ಪರಿಪಾಲನೆ ಮಾಡಬೇಕೋ ? ಈ ಒಂದು ಗೊಂದಲದಲ್ಲಿ ಇಂಥ ಅನಾಹುತ ಆಗುತ್ತಿದೆ. ಜಿಲ್ಲಾಪರಿಷತ್ತು ಆದಮೇಲೆ ಸಾರೋದ್ಧಾರವಾಗಿ ಇಂಥದ್ದು ನಡೆಯುತ್ತಿದೆ. ನ್ಯಾಯ ಪಂಚಾಯಿತಿ ತನ್ನಿ. ದೇಶ ಎಲ್ಲಾ ಹರಾಜು ಎದ್ದು ಹೋಗುತ್ತದೆ ನ್ಯಾಯ ಪಂಚಾಯಿತಿ ತರಬೇಕೆಂದು ನಾನು ನಜೀರ್‌ಸಾಬ್ ಅವರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಕಾರಣವೇನೆಂದರೆ ಈ ದಲಿತ ಜನ ಏನು ಕೊಲೆಗೆ ಒಳಗಾಗಿದ್ದಾರೆ ಅವರು ಇನ್ನೂ ಕೊಲೆಗೆ ಒಳಗಾಗಲಿ. ಇನ್ನೂ ಅವರಿಗೆ ತಿನ್ನಿಸಿ.

ನಮಗೆ ಇನ್ನೂ ಸಿಟ್ಟು ಬಂದಿಲ್ಲ. ನಾವು ಮಕ್ಕಳು ಹುಟ್ಟಿಸುವುದಕ್ಕೆ ಹಿಂಜರಿಯುವುದಿಲ್ಲ. ಎಷ್ಟು ಬೇಕಾದರೂ ಮಕ್ಕಳು ಹುಟ್ಟಿಸುತ್ತೇವೆ. ಅದರಲ್ಲಿ ಅರ್ಧಭಾಗವನ್ನು ನಾವು ತ್ಯಾಗಮಾಡಲಿಕೆ ತಯಾ ರಾಗಿದ್ದೇವೆ. ಇನ್ನುಮೇಲೆ ನಾವು ಗೌರವದಿಂದ ಜೀವನಮಾಡತಕ್ಕ ಮನಸ್ಸು ಮಾಡಿದ್ದೇವೆ. ಯಾವ ಸರ್ಕಾರವೇ ಆಗಲಿ, ಯಾವ ಪಕ್ಷವೇ ಆಗಲಿ ನಮ್ಮನ್ನು ತುಳಿದು ಕಣ್ಣಿಗೆ ಮಣ್ಣು ಹಾಕಿ ಇನ್ನೂ ಮುಂದೆ ಸರ್ಕಾರ ನಡೆಸಿಕೊಂಡು ಹೋಗುತ್ತೇವೆ ಎನ್ನುವುದನ್ನು ದಯವಿಟ್ಟು ಕೊನೆಮಾಡಿ. ನಿಮ್ಮ ಕೈಯಲ್ಲಿ ಆಗುವುದಿಲ್ಲ. ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಯಾರಿಗೆ ರಕ್ಷಣೆ ಇದೇ ದಲಿತರಿಗೆ ರಕ್ಷಣೆ ಇದೆಯೋ ದಲಿತ ವಿದ್ಯಾವಂತ ಮಕ್ಕಳಿಗೆ ಹಳ್ಳಿಗಳಲ್ಲಿ ರಕ್ಷಣೆ ಇದೆಯೋ ? ಎಲ್ಲಿದೆ ದಯಮಾಡಿ ತೋರಿಸಿ. ನಾವು ಹೇಗೆ ಜೀವನ ಮಾಡುವುದು ? ನೀವು ಕೊಲೆಗಳನ್ನು ಎಷ್ಟು ಬೇಕಾದರೂ ಮಾಡಿ ಅದು ನಮಗೆ ಬೇಕಾಗಿಲ್ಲ. ನೀವು ಎಷ್ಟು ಜನ ಕೊಲೆ ಮಾಡಿದರೂ ಬಿಹಾರದಲ್ಲಿ ಕೊಲೆ ಮಾಡಿಲ್ಲವೆ, ಮಹಾರಾಷ್ಟ್ರ ದಲ್ಲಿ ಮಾಡಿಲ್ಲವೇ ನಾವು ಸ್ವಲ್ಪ ಮಾಡಿದ್ದೇವೆಂದು ಹೇಳಿದರೆ ಏನು ಪ್ರಯೋಜನ ? ನೀವು ಮಾದರಿ ಸರ್ಕಾರವೆಂದು ಹೇಳಿಬಿಟ್ಟು ಡಂಗೂರ ಹೊಡೆಯತಕ್ಕ ಜನ ನೀವು ಮಾದರಿಯಾಗಿ ಬಾಳಬೇಕು. ಬಡವ ರಿಗೆ ಮಾನಸಿಕ ಶಾಂತಿ ಬರಬೇಕು. ಇದರಿಂದ ಏದಾಗಿದೆ, ಕರ್ನಾಟಕ ರಾಜ್ಯದಲ್ಲಿ. ನಾವು ದಲಿತರು ಏನಿದ್ದೇವೆ ಇಂಡಿಯಾದೇಶದಲ್ಲಿ, ನಮಗೆ ಹಿಂದೂಮತದಲ್ಲಿದ್ದು ನಾವು ನರಳಿದ್ದೇವೆ, ಹಿಂದೂ ಸಮಾಜ ದಲ್ಲಿದ್ದು ನರಳಿದ್ದೇವೆ. ಸ್ವಾತಂತ್ರ್ಯ ಬಂದಮೇಲೆ ಈ ಪ್ರಪಂಚದಲ್ಲಿ ಸ್ವತಂತ್ರ ಜೀವನ ಮಾಡಬೇಕೆಂದು ಅದಕ್ಕೂ ಅವಕಾಶವಿಲ್ಲ. ದಲಿತ ವಿದ್ಯಾವಂತರಿಗೆ ಕೆಲಸ ಕೊಡುತ್ತೇವೆಂದು ಮಾನ್ಯಮುಖ್ಯಮಂತ್ರಿಗಳ ಹೇಳಿದ್ದೆ ಹೇಳಿದ್ದು, ಒಬ್ಬರಿಗೂ ಕೆಲಸ ಸಿಗಲಿಲ್ಲ, ಐದು ವರ್ಷ ಆಯಿತು. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅದಕ್ಕೆ ಬರುತ್ತೇನೆ. ಆದರೆ ಮಾದರಿ ಸರ್ಕಾರ ನಡೆಸುತ್ತೇನೆ ಎಂದು ಹೇಳ ತಕ್ಕವರು, ಬೆಳಗಾಂ ಜಿಲ್ಲೆಯ ಬೆಂಡಿಗೇರಿಯಲ್ಲಿ ಅಮಾನುಷವಾಗಿರತಕ್ಕ. ಪ್ರಪಂಚದಲ್ಲಿ ಎಲ್ಲಿಯೂ ನಡೆಯದೇ ಇರತಕ್ಕ ಕೃತ್ಯ ನಡೆದಿದೆ. ಅದಕ್ಕೆ ಕಾರಣಕರ್ತರು ಯಾರಿದ್ದಾರೆ ಅವರಿಗೆ ಯಾವರೀತಿ ಶಿಕ್ಷೆ ಮಾಡಿದ್ದೀರಿ? ಅದನ್ನು ನಾವು ನೋಡುತ್ತಿದ್ದೇವೆ. ಕೆಲಸದಲ್ಲಿರತಕ್ಕ ಅವರನ್ನು ಕೆಲಸದಿಂದ ವಜಾ ಮಾಡುವುದಕ್ಕಾಗು ವುದಿಲ್ಲವೆ ? ಸುಪ್ರೀಂ ಕೋರ್ಟ್‌ನವರು ನಮಗೆ ಒಂದು ಅಸ್ತ್ರವನ್ನು ಕೊಟ್ಟಿದ್ದಾರೆ. ಸೆಕ್ಷನ್ ೩೧೧ರ

ಪ್ರಕಾರ, ಯಾರು ಅಯೋಗ್ಯರಿದ್ದಾರೆ ಇಂತಹವರು ಪ್ರೂವ್ ಆದರೆ ಯಾರನ್ನೂ ಬೇಕಾದರೂ ಡಿಸ್ ಮಿಸ್ ಮಾಡಬಹುದು. ಐದು ಜನ ಸರ್ಕಾರಿ ನೌಕರರು ಯಾರಿದ್ದಾರೆ ಅವರನ್ನು ಇದುವರೆಗೆ ಏತಕ್ಕೆ ವಜಾ ಮಾಡಲಿಲ್ಲ ? ಮಾನ್ಯ ಜಾಲಪ್ಪನವರು ಈ ಬಗ್ಗೆ ಕಾನೂನು ಇದೆ ಐಪಿಸಿ ಪ್ರಕಾರ ಲಾಯರ್ ಇದ್ದಾರೆಂದು ಹೇಳುತ್ತಾರೆ ನೀವು ಮಾದರಿಯ ಶಿಕ್ಷೆಯನ್ನು ತಪ್ಪು ಮಾಡಿದವರಿಗೆ ಕೊಡಬೇಕು. ಹಾಗೆ ಮಾಡದೇ ಹೋದರೆ ನಿಮಗೆ ಗೌರವ ಬರುತ್ತದೆಯೇ ? ನಿಮಗೆ ಗೌರವ ಬರುತ್ತದೆಂದು ತಿಳಿದುಕೊಳ್ಳ ಬೇಡಿ. ನಮಗೆ ಹೊಟ್ಟೆಹುರಿ ಬಂದು ಕೇಳುತ್ತಿದ್ದೇವೆ, ಅವೊಂದು ತೀರ್ಮಾನವನ್ನು ನಾವು ತೆಗೆದು ಕೊಂಡು ಇವತ್ತು ಮಾತನಾಡುತ್ತಿದ್ದೇವೆ. ಹೊಟ್ಟೆ ಇಲ್ಲದವರಿಗೆ ಏನೂ ಹೇಳಿದರೂ ಪ್ರಯೋಜನ ಮಾನ್ಯ ಪಟೇಲ್‌ರವರು ಕೊಲೆಯ ಬಗ್ಗೆ ತಮಾಷೆಯಾಗಿ ಕೊಲೆಯಾಗಬಾರದೆ ಎಂದು ಹೇಳಿರಬಹುದು ಕೊಲೆಯಾಗಲಿ ನಾನೂ ಹೇಳುತ್ತಿದ್ದೇನೆ, ಕೊಲೆಗಳು ಸಾವಿರಾರು ಆಗಲಿ, ದಲಿತರ ಕೊಲೆಯಾಗಿ ಆ ಜನರಿಗೆ ಸಿಟ್ಟು ಬಂದು ದೇಶದಲ್ಲಿ ಒಂದು ಕ್ರಾಂತಿ ತರಬಹುದು, ಒಂದು ಬದಲಾವಣೆ ತರಬಹುದು.

ಶ್ರೀ ಜೆ. ಎಚ್. ಪಟೇಲ್.—ನಿಮಗೆ ಸಿಟ್ಟು ಬರಬೇಕೆನ್ನುವುದೇ ನನ್ನ ಉದ್ದೇಶ. ೮೦೦ ವರ್ಷ ಗಳಿಂದ ಸಿಟ್ಟು ಬರಲಿಲ್ಲ. ೩೫ ವರ್ಷಗಳು ಮುಗಿದಮೇಲೂ ಇರಲಿಲ್ಲ. ಐದು ವರ್ಷಗಳಿಂದ ಸಿಟ್ಟು ಬಂದಿದೆ, ದಯವಿಟ್ಟು ಸಿಟ್ಟು ಮಾಡಿಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ದಯವಿಟ್ಟು ಕಾದು ನೋಡಿ. ಹಿಂದೂ ಸಮಾಜದಲ್ಲಿ ನಾವೆಲ್ಲಿಯ ವರೆಗೆ ಇರುತ್ತೇವೆಯೋ ಅಲ್ಲಿಯವರೆಗೂ ಇದು ಇದ್ದದ್ದೇ ನೀವು ಕೀಳು ಜಾತಿಯವರು ಮೇಲಾತಿಯವರು ಎಂದು ಹೇಳುತ್ತಾರೆ. ಒಬ್ಬರು ಪಾರ್ಟಿಯಲ್ಲಿ ದೊಡ್ಡ ಜಾತಿಯವರು ಸಣ್ಣ ಜಾತಿಯವರು ಎಂದರು ಯಾವನ್ರಿ ದೊಡ್ಡ ಜಾತಿ ? ಯಾವನ್ರಿ ಸಣ್ಣ ಜಾತಿ ?

ನಾವು ಏಕೆ ಸಣ್ಣ ಜಾತಿಯವರು ? ನೀವು ಏಕೆ ದೊಡ್ಡ ಜಾತಿಯವರು? ಕರೆದುಬಿಟ್ಟು ನಮ್ಮನ್ನು ನಮ್ಮ ಅವಮಾನ ಮಾಡುವುದು ನಿಮ್ಮ ಕೆಲಸವೇನು? ನಾವೂ ಏತಕ್ಕೆ ನಾಗರೀಕ ಜೀವನ ಮಾಡಬಾರದು? ಎಲ್ಲರೂ ಸಮಾನವಾಗಿ ಮಾನವೀಯತೆಯಿಂದ ಜೀವನ ಏಕೆ ಮಾಡಬಾರದು ? ಇಂತಹ ಒಂದು ಸಮಾಜ ದಲ್ಲಿ ಮಾರ್ಪಾಡು ಮಾಡತಕ್ಕಂಥ ಜವಾಬ್ದಾರಿಯನ್ನು ಹೊತ್ತುಕೊಂಡಿರತಕ್ಕಂಥವರು ನೀವು ಯಾವ ರೀತಿಯಿಂದ ನಡೆದುಕೊಳ್ಳಬೇಕು ? ಇವತ್ತು ಮಾನಸಿಕ ಕ್ರೌರ್ಯತ್ವವನ್ನು ಮಾಡುತ್ತಿದ್ದಾರೆ. ಎಷ್ಟು ಕ್ರೌರ್ಯತ್ವದಿಂದ ಮಾನಸಿಕವಾಗಿ ನಮ್ಮನ್ನು ತೊಂದರೆ ಮಾಡುತ್ತಿದ್ದಾರೆ, ಇವತ್ತು ನಾವು ಮಾನಸಿಕ ಸ್ವಾತಂತ್ರ್ಯ ಪಡೆಯಬೇಕೆಂದು ಹೊರಟಿದ್ದೇವೆ. ನಿಮ್ಮ ಸಹವಾಸವೇ ಬೇಡ. ಹಿಂದುಗಳ ಮಧ್ಯೆ ಇದ್ದರೆ ತಾನೆ ನಮ್ಮನ್ನು ಹೊಲೆಯ, ಮಾದಿಗರು ಎಂದು ಕರೆಯುವುದು ? ಎಲ್ಲಿ ಸ್ವಾತಂತ್ರ್ಯ ಇರು ತ್ತದೆಯೋ ಅಂತಹ ಮತವನ್ನು ನಾವು ಸ್ವೀಕಾರ ಮಾಡುತ್ತೇವೆ. ನಮಗೆ ನಿಮ್ಮ ದೇವರು ಬೇಡ, ನಿಮ್ಮ ಡಿಂಡರು, ನಿಮ್ಮ ಮತ ಬೇಡ. ಜಾತಿ ಬೇಡ, ನಿಮ್ಮ ಸಮಾಜ ಬೇಡ. ಉಪವಾಸ ಇದ್ದರೂ ಪರವಾಗಿಲ್ಲ, ನಿಮ್ಮ ಶೋಷಣೆ ಬೇಡ. ನಾಗರೀಕರಾಗಿ ಈ ದೇಶದಲ್ಲಿ ಇರಬೇಕೆಂದು ನಾವು ಮನಸ್ಸು ಮಾಡಿದ್ದೇವೆ. ನಾವು ಎಲ್ಲರೂ ಮನಸ್ಸನ್ನು ಕಲ್ಲು ಮಾಡಿಟ್ಟಿದ್ದೇವೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿರಿ.

ಶ್ರೀ ಬಿ. ಬಸವಲಿಂಗಪ್ಪ.—ಹಾಗೇನಾದರೂ ಆದರೆ ಸಮಾಜ ಬದಲಾವಣೆ ಆಗುತ್ತದೆ ಎಂದು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಆದ್ದರಿಂದ ನಮ್ಮ ಉದ್ದೇಶ ಇಷ್ಟೇ. ನೀವು ಡಂಗುರ ಹೊಡೆಯ ತಕ್ಕಂಥ ಜನ. ಡಂಗುರ ಹೊಡೆಯಿರಿ, ಬೇಡ ಎನ್ನುವುದಿಲ್ಲ ಆದರೆ ದಲಿತರಿಗೆ ಪಾಯಿಖಾನೆ ತಿನ್ನಿಸಿ ದ್ದೇವೆ ಎಂದು ಡಂಗುರ ಹೊಡೆಸಿಕೊಂಡು ಹೊರಗೆ ಓಡಾಡಬೇಡಿ. ಇದರಿಂದ ನಿಮಗೆ ಗೌರವ ಬರುವು ದಿಲ್ಲ. ಕಾನೂನು ಪ್ರಕಾರ ತಪ್ಪಿತಸ್ಥರಿಗೆ ಅವರಿಗೆ ಏನು ಶಿಕ್ಷೆ ಮಾಡಬೇಕೋ ಅದನ್ನು ಮಾಡಿ. ಯಾರು ಅನ್ಯಾಯಕ್ಕೆ ಒಳಗಾಗಿದ್ದಾರೋ, ಅವರಿಗೆ ಪುನರ್ ವ್ಯವಸ್ಥೆ ಮಾಡಿ. ಯಾರು ಅನಾಹುತಗಳಿಗೆ ಒಳಗಾಗಿದ್ದಾರೆ ಅವರಿಗೆ ೫೦ ಸಾವಿರ, ೧ ಲಕ್ಷ ಕೊಟ್ಟು ಪುನರ್‌ವ್ಯವಸ್ಥೆ ಮಾಡಿ, ಅದುಬಿಟ್ಟು ತಪ್ಪು ಮಾಡಿದವರನ್ನು ನೌಕರಿಯಲ್ಲಿ ಮುಂದುವರೆಸಿದರೆ ಏನಾಗುತ್ತದೆ ? ವಜಾ ಮಾಡುವುದು ಅಷ್ಟೇ ಅಲ್ಲ, ಅವರಮೇಲೆ ಚಾರ್ಜ್‌ಶೀಟ್ ಹಾಕಿ ಶಿಕ್ಷೆಗೆ ಅವರನ್ನು ಗುರಿಮಾಡಬೇಕು. ಇಷ್ಟು ಈ ಸದನಕ್ಕೆ ನನ್ನ ಕಳ ಕಳಿಯ ನಿವೇದನೆ ಇದೆ ದಲಿತನಾಗಿ ನಾನು ಮಾತನಾಡುತ್ತಿಲ್ಲ ಒಬ್ಬ ಮನುಷ್ಯನಾಗಿ ಮಾತನಾಡು ತ್ತಿದ್ದೇನೆ. ಈ ದೇಶದ ಒಬ್ಬ ನಾಗರೀಕನಾಗಿ ಮಾತನಾಡುತ್ತಿದ್ದೇನೆ. ನಿಮ್ಮ ಕರ್ತವ್ಯ ಬಹಳದೊಡ್ಡದು. ನಾವು ಸರ್ಕಾರ ನಡೆಸುತ್ತೇವೆ ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದು ನೀವು ಜವಾಬು ಹೇಳ ಬಹುದು, ಇದನ್ನು ಎಲ್ಲಾ ಮಂತ್ರಿಗಳೂ ಮಾಡಿದ್ದಾರೆ ಆದ್ದರಿಂದ ತಾವು ಆಲೋಚನೆ ಮಾಡಿ. ಈ

ಒಂದು ಕೆಲಸವನ್ನು ತಾವು ಮಾಡಿ. ಇಂತಹ ಒಂದು ಕಳಂಕ ಯಾವತ್ತೂ ಹೋಗುವುದಿಲ್ಲವೆಂದು ನನ್ನ ಭಾವನೆ. ನಾವು ದಲಿತರು ಇದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿರುತ್ತೇವೆ. ನನ್ನ ಜನಾಂಗದ ನೋವಿನ ಅರಿವು ನನಗಿದೆ. ನಾನು ತಿಳಿದುಕೊಂಡಿದ್ದೇನೆ ಏನೆಂದರೆ, ಇಂತಹ ಕೆಲಸ ಏನು ನಡೆದಿದೆ, ಇದು ನಾವು ಮರೆಯದೇ ಇರತಕ್ಕಂಥ ಕೆಲಸ. ದಲಿತಸಂಘದವರು, ಕ್ರಿಯಾ ಸಮಿತಿಯವರು ಯಾರೇ ಆಗಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅವರು ಹೊರಗಡೆ ವ್ಯಕ್ತಪಡಿಸಿದ್ದಾರೆ, ನಾವು ಒಳಗಡೆ ನಮ್ಮ ಅಭಿಪ್ರಾಯ ಎನ್ನು ವ್ಯಕ್ತಪಡಿಸಿದ್ದೇವೆ. ನೀವು ನಿಮ್ಮ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಮಾನವೀಯತೆಯಿಂದ ನಡೆದುಕೊಳ್ಳಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ) —ಮಾನ್ಯ ಸಭಾಧ್ಯಕ್ಷರೇ, ಹಿರಿಯ ಸಹದ್ಯೋಗಿಗಳು ಈಗಾಗಲೇ ದಲಿತರ ಮೇಲೆ ನಡೆದಿರತಕ್ಕ ದೌರ್ಜನ್ಯದ ಬಗ್ಗೆ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ದಲಿತರ ಮೇಲೆ ಆಗತಕ್ಕಂಥ ಅನ್ಯಾಯವನ್ನು ಪ್ರತಿಭಟಿಸಬೇಕು ಎನ್ನತಕ್ಕದ್ದು ಮತ್ತು ಈ ಅನ್ಯಾಯ ಆಗದಂತೆ ತಡೆಯಬೇಕು ಎನ್ನತಕ್ಕದ್ದು ಮತ್ತು ಅನ್ಯಾಯ ಮಾಡಿದವರ ಮೇಲೆ ಸರಿಯಾದ ಕ್ರಮ ಕೈಗೊಳ್ಳಬೇಕು ಎನ್ನತಕ್ಕದ್ದು ಮುಖ್ಯ ಉದ್ದೇಶ. ಆದ್ದರಿಂದ ಅಧ್ಯಕ್ಷರೇ, ಇದು ಬೆಂಡಿಗೇರಿಯಲ್ಲಿ ಆಗಿರತಕ್ಕಂಥಾದ್ದಾಗಲೀ, ಶಿವಮೊಗ್ಗದಲ್ಲಿ ಆಗಿರತಕ್ಕಂಥ ಪೋಲೀಸ್ ದಬ್ಬಾಳಿಕೆಯಾಗಲೀ, ಅಥವಾ ಗುಲ್ಬರ್ಗಾ ಜಿಲ್ಲಾ ಪರಿಷತ್ ಸದಸ್ಯ ಶ್ರೀ ಲಕ್ಷ್ಮಣ ನಾಯಕನನ್ನು ಪೋಲೀಸ್ ಸ್ಟೇಷನ್ ಮುಂದೆ ಕೊಂದಿರತಕ್ಕದ್ದಾಗಲೀ, ಖಾನಾಪುರದಲ್ಲಿ ೧೫ ವರ್ಷದ ಹುಡುಗನನ್ನು ನಾಪತ್ತೆ ಮಾಡಿರತಕ್ಕಂಥಾದ್ದು ಆಗಲೀ, ಅಥವಾ ಗೋಕಾಕ್‌ನಲ್ಲಿ ಉಪಪ್ರಧಾನ ಅವರ ಬಹಿರಂಗವಾಗಿ ಕೊಲೆ ಮಾಡಿದ್ದು ಆಗಲಿ – ಇವೆಲ್ಲವನ್ನೂ ಇವತ್ತು ನಾವು ಯೋಚನೆ ಮಾಡುವಾಗ ನಾವು ಎಲ್ಲಿದ್ದೇವೆ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ, ಎಂತಹ ಸಮಾಜದಲ್ಲಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ನಮಗೆ ಎಷ್ಟರ ಮಟ್ಟಿಗೆ ರಕ್ಷಣೆ ಇದೆ ಎನ್ನುವುದನ್ನು ನಾವು ಇವತ್ತು ಕೇಳಬೇಕಾಗಿದೆ. ಇವತ್ತಿನದಿವಸ ಅನೇಕ ರೀತಿಯಲ್ಲಿ ಅಲ್ಲಿ ನಡೆದಿರತಕ್ಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ಅಂದರೆ, ಮಾನ್ಯ ದಿವಂಗತ ದೇವರಾಜ ಅರಸರ ಕಾಲದಲ್ಲಿ ಸ್ವಲ್ಪಮಟ್ಟಿಗೆ ದಲಿತರಿಗೆ ರಕ್ಷಣೆ ಸಿಗುತ್ತಿತು, ಹಿಂದುಳಿದವರಿಗೆ ರಕ್ಷಣೆ ಸಿಗುತ್ತಿತ್ತು, ಅಲ್ಪಸಂಖ್ಯಾತರಿಗೆ ರಕ್ಷಣೆ ಸಿಗುತ್ತಿತ್ತು, ಆದರೆ ಇವತ್ತು ಎಲ್ಲವೂ ಹೋಗಿ, ಅವರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದನ್ನು ಎಲ್ಲರೂ ಒಪ್ಪತಕ್ಕಂಥಾದ್ದಾಗಿದೆ, ಇದು ಸತ್ಯವಾದ ವಿಚಾರ. ಇದನ್ನು ತಡೆಗಟ್ಟುವುದಕ್ಕೆ ಏಕೆ ಆಗುವುದಿಲ್ಲ ಅಥವಾ ತಡೆಗಟ್ಟಿದ್ದರೆ ಏಕೆ ಈ ರೀತಿ ಆಗುತ್ತಿತ್ತು, ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೇವೆ – ಈ ಎಲ್ಲಾ ಪ್ರಶ್ನೆಗಳನ್ನು ಹಾಕಿಕೊಂಡಾಗ, ಖಂಡಿತವಾಗಿಯೂ ಕೂಡ ದಲಿತರ ಮೇಲೆ ಆಗತಕ್ಕಂಥ ಅನ್ಯಾಯಗಳನ್ನು ತಡೆಗಟ್ಟತಕ್ಕಂಥ ಕ್ರಮ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಈಗಾಗಲೇ ನಮ್ಮ ಸದಸ್ಯರು ಹೇಳಿದಂತೆ, ಪೋಲೀಸ್ ಇಲಾಖೆಯವರು, ಅವರ ಕರ್ತವ್ಯವನ್ನು ಅವರು ಮಾಡುವುದಕ್ಕೆ ಬಿಟ್ಟರೆ ಖಂಡಿತವಾಗಿಯೂ ಎಲ್ಲವೂ ನಿಂತುಹೋಗುತ್ತವೆ. ಇಲ್ಲಿ ಮಧ್ಯೆ ಪ್ರವೇಶ ಮಾಡತಕ್ಕಂಥ ಪ್ರವೃತ್ತಿ, ರಾಜಕೀಯದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಕೂಡ ಮಧ್ಯೆ ಪ್ರವೇಶ ಮಾಡಿ, ಕರ್ತವ್ಯ ಪ್ರವೃತ್ತಿ ಮಾಡುವುದನ್ನು ತಡೆಗಟ್ಟಿ ತಮ್ಮ ಪ್ರಭಾವವನ್ನು ಬೆಳೆಸಿ, ಅಮಾಯಕರ ಮೇಲೆ ಅನ್ಯಾಯ, ಅತ್ಯಾಚಾರ, ಅಕ್ರಮ, ಶೋಷಣೆಗಳು ಏನು ನಡೆಯುತ್ತವೆ. ಇನ್ನು ಮುಂದೆ ಇವು ಬಹಳ ದಿವಸ ನಡೆಯುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ, ಇನ್ನು ಈ ಜನ-ಜಾಗೃತರಾಗಿ ಕೈಯಲ್ಲಿ ಕೊಡಲಿ ತೆಗೆದುಕೊಂಡು ಬರುತ್ತಾರೆ ಎನ್ನುವ ಎಚ್ಚರಿಕೆಯನ್ನು ಹೇಳಬೇಕಾಗುತ್ತದೆ. ಇವತ್ತು ಮಲ ತಿನ್ನಿಸುವುದಾಗಲೀ ಪೋಲೀಸಿನವರು, ಸ್ಟೇಷನ್‌ಗೆ ಹಾಕಿ ಅವರನ್ನು ಕೊಲೆ ಮಾಡುವುದಾಗಲೀ, ರಸ್ತೆಯಲ್ಲಿ ಕಡಿಯುವುದಾಗಲೀ–ಇವು ಸಾಮಾನ್ಯ ವಿಷಯಗಳಲ್ಲ. ಇದರ ಬಗ್ಗೆ ತಾವು ಹೇಳಬಹುದು, ಕೋರ್ಟಿನಲ್ಲಿ ಈ ವ್ಯವಹಾರ ನಡೆಯುತ್ತಿದೆ, ಕೇಸ್ ನಡೆಯುತ್ತಿದೆ ಎಂದು. ಆದರೆ ಕೊಲೆ ಮಾಡುವವರು ಯಾರೂ ಸಾಕ್ಷಿ ಹೇಳುವುದಕ್ಕೆ ಬರುವುದಿಲ್ಲ. ಈ ವಿಚಾರಗಳು ಯಾರಿಗೂ ಗೊತ್ತಿಲ್ಲ ಎಂದಲ್ಲ, ಎಲ್ಲರಿಗೂ ಗೊತ್ತಿರತಕ್ಕಂಥದ್ದು. ಆದ್ದರಿಂದ ಇಂತಹ ಜನರ ಮೇಲೆ ಸರಿಯಾದ ಕ್ರಮ ತೆಗೆದುಕೊಂಡು, ಇವತ್ತು ದಲಿತರು ಏನಿದ್ದಾರೆ ಅಥವಾ ಹಿಂದುಳಿದ ಜನರು ಏನಿದ್ದಾರೆ, ಆರ್ಥಿಕವಾಗಿ ದುರ್ಬಲವರ್ಗದವರು ಏನಿದ್ದಾರೆ – ಇಂತಹವರಿಗೆ ರಕ್ಷಣೆ ಕೊಡಬೇಕಾದ್ದು ಅಗತ್ಯ. ಸರ್ಕಾರದ ಸಹಾಯ ಬೇಕಾಗಿರುವುದು ಇಂಥವರಿಗೇ. ಇಂತಹವರ ಸಹಾಯಕ್ಕೆ ಇವತ್ತು

ಸರ್ಕಾರ ಬರದೇಹೋದರೆ ಈ ಸರ್ಕಾರ ಇರುವುದಾದರೂ ಏಕೆ ? ಬಲಿಷ್ಟರು ರಕ್ಷಣೆ ಮಾಡಿಕೊಳ್ಳುವುದಕ್ಕೆ ತಯಾರಿದ್ದಾರೆ. ದುರ್ಬಲವರ್ಗದವರಿಗೆ ಸಹಾಯ ಕೊಡದೇಹೋದರೆ ಕಷ್ಟವಾಗುತ್ತದೆ, ಇದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ಸಹಾಯಕ್ಕೆ ಯಾರೂ ಬರದೇಹೋದರೆ ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕಾಗುತ್ತದೆ. ಮನುಷ್ಯ ಸಾಯುವುದು, ಹುಟ್ಟುವುದು ಒಂದೇ, ಹುಟ್ಟಿದ ಮೇಲೆ ಸಾಯಲೇಬೇಕು. ಇದರ ಬಗ್ಗೆ ಸರಿಯಾದ ಹಾದಿಯನ್ನು ಹಿಡಿಯಲೇ ಬೇಕಾಗುತ್ತದೆ ಎಂಬ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಅಂತಹ ಪರಿಸ್ಥಿತಿ ಈ ರಾಜ್ಯಕ್ಕೆ ಬರಬೇಕು. ಅಂತಹ ಪರಿಸ್ಥಿತಿ ಬರದೇಹೋದರೆ ಈ ರಾಜ್ಯದಲ್ಲಿ ವ್ಯವಸ್ಥಿತವಾದ ಆಡಳಿತ ನಡೆಯಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಯಾರು ಅಧಿಕಾರವನ್ನು ವಹಿಸಿಕೊಂಡಿದ್ದಾರೆ, ಯಾರು ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ, ಜವಾಬ್ದಾರಿ ವಹಿಸಿಕೊಂಡಿರತಕ್ಕಂಥವರ ಒಂದು ಕರ್ತವ್ಯ ಅದು. ಈಗಾಗಲೇ ನಮ್ಮ ಮೊಯಿಲಿಯವರು ಹೇಳಿದಂತೆ ಮಾನ್ಯ ತಿಪ್ಪೇಸ್ವಾಮಿಯವರು ಕೊಟ್ಟಿರತಕ್ಕಂಥ ವರದಿಯ ಮೇಲೆ. ಆ ವರದಿ ಬಂದ ತಕ್ಷಣ ಆ ಜನರ ಮೇಲೆ ಕ್ರಮ ಕೈಗೊಳ್ಳಬೇಕಾಗಿತ್ತು. ಆ ವರದಿ ಬರುವವರೆಗೆ ಕಾಯಬೇಕಾದ ಅಗತ್ಯ ಇರಲಿಲ್ಲ. ಏಕೆಂದರೆ ಮಲ ತಿನ್ನಿಸಿದರು ಎನ್ನತಕ್ಕಂಥ ವಿಷಯ ಇಡೀ ರಾಜ್ಯಕ್ಕೆ ಕಳಂಕ ತರುವ ರೀತಿಯಲ್ಲಿ ಪ್ರಕಟವಾಗಿದೆ. ಇದು ಕೇವಲ ಒಂದು ಜಾತಿ ಅಥವಾ ಒಂದು ವ್ಯಕ್ತಿಗೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೇ ಕಳಂಕ ತರತಕ್ಕಂಥ ಪ್ರಶ್ನೆ ಇದು. ಇವತ್ತು ಕರ್ನಾಟಕದಲ್ಲಿ ಮನುಷ್ಯನಿಗೆ ಮಲ ತಿನ್ನಿಸತಕ್ಕಂಥ ಒಂದು ವ್ಯವಸ್ಥೆ ಇದೆ, ಅಂತಹ ಜನ ಇದ್ದಾರೆ, ಅಂತಹವರ ಬಗ್ಗೆ ಯಾವ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗದಿರತಕ್ಕಂಥ ಒಂದು ಸರಕಾರ ಇದೆ ಎಂದು ಹೇಳಿದರೆ, ನಿಜವಾಗಿಯೂ ಕೂಡಾ ನಾವು ನಾಚಿಕೆಪಟ್ಟುಕೊಳ್ಳಬೇಕು. ಆಡಳಿತ ನಡೆಸತಕ್ಕಂಥವರು ಯಾರೇ ಇರಬಹುದು ಯಾವುದೇ ಸರಕಾರ ಇರಬಹುದು, ಹಿಂದಿನಿಂದಲೂ ಸಹ ಇದು ನಡೆದುಕೊಂಡು ಬಂದಿದೆ. ದುರ್ಬಲ ವರ್ಗದವರಿಗೆ ಅನೇಕ ರೀತಿಯಾದಂಥ ತೊಂದರೆಗಳು ನಡೆದುಕೊಂಡು ಬಂದಿವೆ. ನಡುವೆ ೭–೮ ವರ್ಷ ಗಳವರೆಗೆ ಸ್ವಲ್ಪಮಟ್ಟಿಗೆ ಇದು ಕಡಿಮೆಯಾಗಿತ್ತು. ಆಗ ನಾವು ತಿಳಿದುಕೊಂಡಿದ್ದೆವು. ಇನ್ನು ಮುಂದು ಇದು ಸಂಪೂರ್ಣವಾಗಿ ಹೊರಟುಹೋಗುತ್ತದೆ, ಆರ್ಥಿಕವಾಗಿ ದುರ್ಬಲರಾಗಿರತಕ್ಕಂಥ ವರ್ಗದವರಿಗೆ, ಹಿಂದುಳಿದಿರತಕ್ಕಂಥ ವರ್ಗದವರಿಗೆ. ಅಲ್ಪಸಂಖ್ಯಾತರಿಗೆ ರಕ್ಷಣೆ ಸಿಗುತ್ತದೆ ಎಂದು. ಅದು ಇವತ್ತು ಸಂಪೂರ್ಣವಾಗಿ ಹೋಗಿ, ಅಂತಹವರು ಇವತ್ತು ಸಮಾಜದಲ್ಲಿ ಜೀವನ ಮಾಡುವುದು ಕಷ್ಟ, ಎನ್ನುವಂತಹ ಭಾವನೆ ಬೆಳೆದು ಬಂದಿದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು. ಸಂಬಂಧಪಟ್ಟ ಗೃಹ ಮಂತ್ರಿಗಳು ಹಾಗೂ ಇತರ ಎಲ್ಲಾ ಮಂತ್ರಿಗಳು ಕೂಡಾ ಯೋಚನೆ ಮಾಡಬೇಕು. ಇನ್ನು ಮುಂದಾದರೂ ಕೂಡಾ ಈ ವ್ಯವಸ್ಥೆಗೆ ಕಡಿವಾಣ ಹಾಕುವುದರ ಮೂಲಕ, ಅಧಿಕಾರಿಗಳಿಗೆ ಇನ್ನೂ ಹೆಚ್ಚು ಅಧಿಕಾರ ಕೊಟ್ಟು ಯಾರು ಇವತ್ತು ಅನ್ಯಾಯ ಮಾಡುತ್ತಾರೆ, ದುರ್ಬಲವರ್ಗದವರಿಗೆ ತೊಂದರೆ ಕೊಡುತ್ತಾರೆ, ಅಂತಹವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಂಡು ಶಿಕ್ಷೆ ಕೊಟ್ಟರೆ ಖಂಡಿತವಾಗಿ ಇದು ತಪ್ಪುತ್ತದೆ. ಕೇವಲ ಚರ್ಚೆಯಿಂದ ಈ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯ ಇಲ್ಲ. ಆ ನಂಬಿಕೆ ನಮಗಿಲ್ಲ. ಆದುದರಿಂದ ಇವತ್ತು ಯೋಚನೆ ಮಾಡಿ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ತಿಳಿದಂಥ ನಾಲ್ಕು ಮಾತುಗಳನ್ನು ಆಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು) —ಸನ್ಮಾನ್ಯ ಅಧ್ಯಕ್ಷರೇ, ಬೆಂಡಿಗೇರಿ, ಬಿದರಳ್ಳಿ, ಕಮ್ಮನಸಿರಸಿಗಿ ಗ್ರಾಮಗಳಲ್ಲಿ ನಡೆದಿರತಕ್ಕಂಥ ರಾಕ್ಷಸೀ ಕೃತ್ಯವನ್ನು ಖಂಡಿಸುವುದು ಬಹಳ ಅವಶ್ಯಕ. ಇದನ್ನು ಖಂಡಿಸುವುದರ ಜೊತೆಗೆ, ಇದನ್ನು ಡೀಪ್ ಆಗಿ ಅನಾಲಿಸಿಸ್ ಮಾಡಿದರೆ, ದಲಿತವರ್ಗದವರ ಮೇಲೆ, ದುರ್ಬಲವರ್ಗದವರ ಮೇಲೆ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ದೌರ್ಜನ್ಯ ನಲವತ್ತು ವರ್ಷಗಳಲ್ಲಿ ಏನೂ ಬದಲಾವಣೆ ಆಗುವ ಚಾನ್ಸಸ್ ಇಲ್ಲ. ಕಾಂಗ್ರೆಸ್ ಪ್ರಭುತ್ವ ಇರಬಹುದು, ಜನತಾ ಪ್ರಭುತ್ವ ಇರಬಹುದು, ಯಾವ ಪ್ರಭುತ್ವಗಳೂ ಅದನ್ನು ಸುಲಭವಾಗಿ ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಿಲ್ಲ ಎನ್ನುವುದನ್ನು ತೋರಿಸಿ ಆಗಿದೆ. ಇದು ಸಾಧ್ಯವಾಗಬೇಕಾದರೆ ದುರ್ಬಲ ವರ್ಗದವರು ಪ್ರಬಲರಾಗಿ ಸಂಘಟನೆ ಹೊಂದಿ, ವೆಸ್ಟೆಡ್ ಇಂಟರೆಸ್ಟ್ಸ್ ಏನಿದ್ದಾರೆ, ಅವರು ಒಂದು ಏಟು ಕೊಟ್ಟರೆ, ತಿರುಗಿ ಅವರಿಗೆ ಒಂದು ಏಟು ಕೊಡುತ್ತೇವೆ ಎನ್ನುವ ಮನೋಭಾವ ಯಾವಾಗ ಬರುತ್ತದೆ ಅಲ್ಲಿಯವರೆಗೆ ಈ ವೆಸ್ಟೆಡ್ ಇಂಟರೆಸ್ಟ್ಸ್‌ನ ಕಂಟ್ರೋಲ್

ಮಾಡುವುದಕ್ಕೆ ಸುಲಭವಾಗಿ ಸಾಧ್ಯವಿಲ್ಲ ಎಂದು ನನಗನ್ನಿಸುತ್ತದೆ. ಕೇರಳದಲ್ಲಿ ಇದು ಸಾಧ್ಯವಿಲ್ಲ, ವೆಸ್ಟ್ ಬೆಂಗಾಲದಲ್ಲಿ ಇದು ಸಾಧ್ಯವಿಲ್ಲ. ಕಾರಣ ಅಲ್ಲಿ ದುರ್ಬಲ ವರ್ಗದ ಜನರು ಚೆನ್ನಾಗಿ ಆರ್ಗನೈಸ್ ಆಗಿದ್ದಾರೆ. ಅವರ ಮೇಲೆ ಇಂತಹ ಕೇಸಿಗೆ ಕೈ ಹಾಕಿದರೆ, ಪ್ರಾಣ ಕಳೆದು ಕೊಳ್ಳುತ್ತೇವೆ ಎನ್ನುವ ಭಯ ವೆಸ್ಟೆಡ್ ಇಂಟರೆಸ್ಟ್‌ಗೆ ಇದೆ. ನಾವೂ ಕೂಡಾ ಇದರ ಬಗ್ಗೆ ಯೋಚನೆ ಮಾಡಿ, ಪ್ರಬಲವಾಗಿ ಹೋರಾಟ ಮಾಡಿ ಸಂಘಟನ ಮಾಡಿದರೆ ಇದನ್ನು ತಪ್ಪಿಸುವುದಕ್ಕೆ ಸಾಧ್ಯ ಎಂಬುದನ್ನು ತಿಳಿದುಕೊಳ್ಳಬೇಕು. ಬೆಂಡಿಗೇರಿಯಲ್ಲಿ ಆಗಿರುವುದು ಮನುಷ್ಯರು ಮಾಡುವ ಕೆಲಸ ಅಲ್ಲ. ನನ್ನ ಒಂದು ಸಂಕಟ ಏನೆಂದರೆ ಮಾನ್ಯ ಚಾಲಪ್ಪನವರು ಹೇಳುವ ನಿರಾಶಾದಾಯಕ ಉತ್ತರ, ಕಾನೂನು ಇಲ್ಲವೇ, ಐ.ಪಿ.ಸಿ. ಇಲ್ಲವೇ, ಸಿ.ಆರ್.ಪಿ.ಸಿ. ಇಲ್ಲವೇ ಆಂಟಿ ಗೂಂಡಾ ಆಕ್ಟ್ ಇಲ್ಲವೇ ಎಂದು ಹೇಳುತ್ತಾರೆ. ಅದೇ ಜೋಳದ ಕಡ್ಡಿಯನ್ನು ಯಾವೋನಾದರೂ ಒಬ್ಬ ಸಾಮಾನ್ಯ ಮನುಷ್ಯ ಕಳ್ಳತನ ಮಾಡಿಕೊಂಡು ಹೋದ ಎಂದು ಪೋಲೀಸ್ ಕಂಪ್ಲೇಂಟ್ ಇದ್ದರೆ, ಪೋಲೀಸರು ಬಂದು, ಅವನನ್ನು ನಾಲ್ಕು ದಿವಸ ಪೋಲೀಸ್ ಸ್ಟೇಷನ್‌ನಲ್ಲಿಟ್ಟು, ಬೆಂಡೆತ್ತಿ, ಅವನನ್ನು ತೀರಿಸಿಬಿಡುತ್ತಿದ್ದರೋ ಏನೋ ಗೊತ್ತಿಲ್ಲ. ಅದಕ್ಕೆ ಕಾನೂನು ಉಂಟು, ತಮಗೆ ಗೊತ್ತು. ಮಲ ತಿನ್ನಿಸಿದ ದೊಡ್ಡ ಮನುಷ್ಯರಿಗೆ ಬೇಡಿ ಹಾಕಬೇಕಾಗಿತ್ತು.

೮-೦೦ ಪಿ.ಎಂ.

ಯಾರಿಗೆ ಬೇಡಿ ತೊಡಿಸಿದ್ದಾರೋ ನನಗಂತೂ ಗೊತ್ತಿಲ್ಲ. ಶ್ರೀ ಜನ ಉಪಾಧ್ಯಾಯರಿಗೆ ಕೊಂದರೆ ಕೊಟ್ಟಾಗ ಕಾನೂನು ಇರಲಿಲ್ಲವೇ? ತಮಗೂ ಗೊತ್ತಿದೆ. ಅವರು ದೊಡ್ಡ ಮನುಷ್ಯರೆಂದು, ಆ ದೊಡ್ಡ ಮನುಷ್ಯರನ್ನು ಬೇಡಿ ಹಾಕಿ ಬೀದಿ ಬೀದಿಯಲ್ಲಿ ಸುತ್ತಿಸಿ ಇನ್ನು ಅಕ್ಕಪಕ್ಕದ ನಾಲ್ಕೈದು ಊರುಗಳಲ್ಲಿ ಮೆರವಣಿಗೆ ಮಾಡಿಸಿದ್ದರೆ ಇನ್ನುಳಿದಂತಹ ದೊಡ್ಡ ಮನುಷ್ಯರಿಗೂ ಸ್ವಲ್ಪ ಭಯ ಬರುತ್ತಿತ್ತು. ನಿಮ್ಮಲ್ಲಿ ಸಿ.ಆರ್.ಪಿ.ಸಿ. ಇದೆ. ಅರೆಸ್ಟ್ ಮಾಡಬಹುದು, ಆದರೆ ನೀವು ಸಣ್ಣ ಸಣ್ಣ ಬಡಜನರ ಮೇಲೆ ಕೇಸುಗಳನ್ನು ಹಾಕಿ ಅರೆಸ್ಟ್ ಮಾಡುತ್ತೀರಿ ಇವರನ್ನೇಕೆ ಅರೆಸ್ಟ್ ಮಾಡಲಿಲ್ಲ? ಇವರಿಗೇಕೆ ತಾವು ಬೇಡಿ ಹಾಕಲಿಲ್ಲ? ತಮ್ಮಲ್ಲಿ ಆಂಟೀ ಗೂಂಡಾ ಆಕ್ಟ್ ಇದೆ. ಆ ಪ್ರಕಾರವಾದರೂ ಇವರನ್ನೂ ಅರೆಸ್ಟ್ ಮಾಡಬಹುದಿತ್ತು. ಪೋಲೀಸ್‌ನವರಿಗೆ ಎಲ್ಲಾ ಗೊತ್ತಿದೆ ಬಲಿಷ್ಟರ್ಯಾರು ಇರುತ್ತಾರೋ, ಅವರ ತಂಟೆಗೆ ಹೋಗುವುದಿಲ್ಲ. ಏಕೆಂದರೆ ಅವರಿಗೆ ರಾಜಕೀಯ ಜನರ ಸಹಾಯ ಇರುತ್ತದೆ. ಅದಕ್ಕೆ ಭಯ ಪಡುತ್ತಾರೆ, ಸುಮ್ಮನೆ ಬಿಟ್ಟುಬಿಡುತ್ತಾರೆ. ನಿಮ್ಮಲ್ಲಿರತಕ್ಕ ಕಾನೂನು ಶಕ್ತಿಯನ್ನು ಸರಿಯಾಗಿ ನೀವು ಉಪಯೋಗಿಸುತ್ತಿಲ್ಲ. ಅಂದರೆ ನಿಮಗೆ ಮನಸ್ಸು ಇಲ್ಲ ಮನಸ್ಸಿದ್ದರೆ ಮಾರ್ಗ. ಮನಸ್ಸಿದ್ದರೆ ಕಾನೂನನ್ನು ಯಾವ ರೀತಿಯಲ್ಲಿ ಬೇಕಾದರೂ ಉಪಯೋಗಿಸಿಕೊಳ್ಳಬಹುದಿತ್ತು. ಆದರೆ ಮನಸ್ಸಿಲ್ಲ. ಇಂತಹ ಕೃತ್ಯ ನಡೆದಿದ್ದರೂ ತಾವು ಸುಮ್ಮನೆ ಇರುವುದು ಸರಿಯಲ್ಲ. ಇಂತಹ ದೌರ್ಜನ್ಯಗಳನ್ನು ಖಂಡಿಸುವುದಕ್ಕೆ ಸಾಕಷ್ಟು ಕಾನೂನುಗಳು ಇವೆ. ಸಾಕಷ್ಟು ಎವಿಡೆನ್ಸ್ ಇವೆ, ಆದರೆ ಮನಸ್ಸಿಲ್ಲದಿದ್ದರೆ ಮಾರ್ಗವೆಲ್ಲಿಂದ ಬರುತ್ತದೆ ? ಮನಸ್ಸಿದ್ದರೆ ಬಲಿ ಹಾಕಬಹುದು. ನಿಮ್ಮ ಹತ್ತಿರ ಕಾನೂನು ಇಲ್ಲವೇ ? ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕಂಥ ಕೃತ್ಯದ ಬಗ್ಗೆ ಸ್ವಲ್ಪ ಮಾನ ಮರ್ಯಾದೆ ಇರತಕ್ಕಂಥವರು ಯಾರಾದರೂ ಆದರೆ ತಲೆ ತಗ್ಗಿಸಲೇಬೇಕಾಗುತ್ತದೆ. ಇಂತಹ ದೌರ್ಜನ್ಯಗಳು ಜಾತಿಯ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಯ ಮೇಲೆ ನಡೆಯುವುದಾದರೆ ಹೇಗೆ ? ಒಂದು ವೇಳೆ ಆರ್ಥಿಕ ವ್ಯವಸ್ಥೆಯಲ್ಲಿ ಸ್ವಲ್ಪ ಮುಂದಿದ್ದರೆ ಈ ಜನರ ತಂಟೆಗೆ ಯಾರೂ ಹೋಗುವುದಿಲ್ಲವೆಂದು ನನ್ನ ಭಾವನೆ. ಆರ್ಥಿಕ ಪರಿಸ್ಥಿತಿಯಲ್ಲಿ ಚೆನ್ನಾಗಿದ್ದರೆ ಅವರನ್ನು ಯಾರೂ ಮುಟ್ಟುವುದಿಲ್ಲ, ಅವರು ಊರಿಗೆ ಹೋದರೆ ಹೂವಿನ ಹಾರ ಹಾಕಿ ಸ್ವಾಗತ ಮಾಡುತ್ತಾರೆ. ಉದಾಹರಣೆಗೆ ನಮ್ಮ ಮಾನ್ಯ ಬಸವಲಿಂಗಪ್ಪನವರನ್ನೇ ತೆಗೆದುಕೊಳ್ಳಿ ಅವರನ್ನು ಯಾರು ಮುಟ್ಟುತ್ತಾರೆ. ಆದ್ದರಿಂದ ಈ ಜನರ ಆರ್ಥಿಕ ಪರಿಸ್ಥಿತಿಯಾದರೂ ಚೆನ್ನಾಗಿರಬೇಕು. ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿದ್ದರೆ ಆಗ ಅವರು ಒಂದು ತರಹ ಹೆಲ್ಪ್‌ಲೆಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಹಳ್ಳಿಯಲ್ಲಿ ಒಬ್ಬ ಶ್ರೀಮಂತ ಹರಿಜನ ಮತ್ತು ಗಿರಿಜನ ವ್ಯಕ್ತಿ ಇರುತ್ತಾನೆಂದು ಇಟ್ಟುಕೊಳ್ಳಿ, ಅವನು ಆ ಹಳ್ಳಿಯಲ್ಲಿ ಒಂದು ಹೋಟೆಲ್ ತೆರೆಯುತ್ತಾನೆ ಆದರೆ ಅವನ ಹೋಟೆಲ್‌ಗೆ ಹೋಗಿ ಯಾರೂ ಟೀ ಕುಡಿಯುವುದಿಲ್ಲ. ಆಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೂ ಏನು ಬಂತು ? ನಮ್ಮ ಸಮಾಜ ಯಾವ

ರೀತಿ ಇದೆ ? ಈ ಜನ ಶ್ರೀಮಂತರಾದರೂ ಬೆಲೆ ಇಲ್ಲ, ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೂ ಬೆಲೆ ಇಲ್ಲ. ಸಮಾಜಿಕ ಪರಿವರ್ತನೆಯಾಗಬೇಕು. ಬೆಂಗಳೂರು ಮೈಸೂರು ಇಂತಹ ದೊಡ್ಡ ದೊಡ್ಡ ಸಿಟಿಗಳಲ್ಲಿ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ನಿಮಗಿಂತ ಚೆನ್ನಾಗಿಯೇ ಕಾಣುತ್ತಾರೆ, ಆದರೆ ಹಳ್ಳಿಗಳಲ್ಲಿ ನಿಮ್ಮನ್ನೇ ಒಂದು ತರಹ ನೋಡುತ್ತಾರೆ. ಅವರನ್ನೇ ಒಂದು ತರಹ ನೋಡುತ್ತಾರೆ, ಒಟ್ಟಿನಲ್ಲಿ ಆರ್ಥಿಕ ಪರಿಸ್ಥಿತಿಗಿಂತ ಹಿಂದೂ ಧರ್ಮ ಬದಲಾವಣೆಯಾಗಬೇಕೆಂದು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸದಸ್ಯರು ತಪ್ಪು ತಿಳಿದು ಕೊಂಡಿದ್ದಾರೆ. ಮಾನ್ಯ ಖರ್ಗೆಯವರಿಗೆ ಇಂತಹ ಮನೋಭಾವನೆ ಇದುವುದರಿಂದಲೇ ನಮ್ಮ ದೇಶವೂ ಹಿಂದುಳಿದಿರುವುದು. ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಮಾನ್ಯ ಜಾಲಪ್ಪನವರು ಸಹಾಯ ಬೇಕಾಗುವುದಿಲ್ಲ, ಯಾರ ಸಹಾಯ ಬೇಕಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಸುಮಾರು ೩೫ ವರ್ಷಗಳಿಂದ ತಾವೇ ಅಧಿಕಾರದಲ್ಲಿದ್ದೀರಿ. ತಾವು ಸಾಮಾಜಿಕ ಬದಲಾವಣೆ ಏತಕ್ಕೆ ಮಾಡಲಿಲ್ಲ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗ ತಾವು ಎಲ್ಲಿದ್ದೀರಿ ಎಂಬುದನ್ನು ಯೋಚನೆ ಮಾಡಿ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನಾನು ಅರಸುರವರ ಜೊತೆಯಲ್ಲಿದ್ದೆ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರ್ಥಿಕ ಪರಿಸ್ಥಿತಿ ಇದ್ದರೆ ಸರಿ ಹೋಗುವುದಿಲ್ಲ. ನಮ್ಮ ಸಮಾಜದ ಸಾಮಾಜಿಕ ಪರಿಸ್ಥಿತಿ ಬದಲಾವಣೆಯಾಗಬೇಕು. ಆ ಮಾತು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಸಮಾಜ ಸರಿಯಾಗಿದೆ. ಅಲ್ಲಿ ಯಾವುದೇ ಜಾತಿ ಅಡ್ಡ ಬರುವುದಿಲ್ಲ.

ಅಧ್ಯಕ್ಷರು.—ನೀವು ಇನ್ನು ೩ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಮಧ್ಯೆ ಮಧ್ಯೆ ಈ ತರಹ ಇಂಟರ್‌ಪ್‌ಷನ್ ಆದರೆ ಹೇಗೆ ? ಈ ಜನರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಯಾರೂ ಗಲಾಟೆ ಮಾಡುವುದಿಲ್ಲ. ನೀವು ತಪ್ಪು ತಿಳಿದು ಕೊಂಡಿದ್ದೀರಿ ? ಈ ಹಿಂದೆ ಯಾರು ಈ ಜಾತಿ ವ್ಯವಸ್ಥೆಯನ್ನು ಮಾಡಿದರೋ ಗೊತ್ತಿಲ್ಲ. ಆದರೆ ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಇವತ್ತಿಗೂ ಕೆಲವರು ದುರ್ಬುದ್ಧಿಯಿಂದ ಇವನು ಲಿಂಗಾಯಿತ, ಇವನು ಹರಿಜನ, ಇವನು ಒಕ್ಕಲಿಗ ಎನ್ನತಕ್ಕ ರೀತಿಯಲ್ಲಿ ಸಮಾಜವನ್ನು ಹಾಳು ಮಾಡುತ್ತಿದ್ದಾರೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಸಮಾಜದಲ್ಲಿರುವವರೆಲ್ಲಾ ಒಂದೇ ಜಾತಿ ಎಂದು ಹೇಳುವಂತಾಗಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಸಮಾಜದ ಜನರ ಮನಸ್ಸಿನಲ್ಲಿರುವ ಈ ಜಾತಿ ಪದ್ಧತಿಯನ್ನು ಹೋಗಲಾಡಿಸುವುದು ಬಹಳ ಕಷ್ಟವಾಗಿದೆ. ಆದ್ದರಿಂದ, ಎಲ್ಲೆಲ್ಲಿ ಈ ರೀತಿ ಜಾತಿಗಳ ಮೇಲೆ ಗಲಾಟೆ ಮಾಡುತ್ತಾರೋ ಅಂಥ ಕಡೆ ಕಾನೂನುಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಗಲಾಟೆ ಆಗದ ರೀತಿಯಲ್ಲಿ ತಡೆಗಟ್ಟಬೇಕು. ಮಾನ್ಯ ಗೃಹ ಸಚಿವರಾದ ಜಾಲಪ್ಪನವರು ಬಹಳ ತಿಳುವಳಿಕೆಯುಳ್ಳವರು, ಮೊದಲು ಅವರು ಕಮ್ಯುನಿಸ್ಟ್ ಪಕ್ಷದಲ್ಲೇ ಇದ್ದವರು, ನಂತರ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಆಮೇಲೆ ಜನತಾ ಪಕ್ಷದಲ್ಲಿ ಇದ್ದಾರೆ. ಮಾನ್ಯ ಜಾಲಪ್ಪನವರು ಪೋಲೀಸಿನವರ ಮೇಲೆ ಒಳ್ಳೆಯ ಕಂಟ್ರೋಲ್ ಇಟ್ಟುಕೊಂಡು ಎಲ್ಲೂ ಇಂಥ ಘಟನೆಗಳು ಜರುಗದ ಹಾಗೆ ನೋಡಿಕೊಳ್ಳಬೇಕು. ಬೆಂಡಿಗೇರಿಯಲ್ಲಿ ಈ ರೀತಿ ಅಮಾನುಷವಾಗಿ ಮನುಷ್ಯರಿಗೆ ಮನುಷ್ಯರ ಮಲವನ್ನು ತಿನ್ನಿಸಿದರು ಎಂದರೆ ನಾಚಿಕೆಪಟ್ಟುಕೊಳ್ಳಬೇಕು. ಈ ಕೃತ್ಯದಲ್ಲಿ ೫ ಜನ ಅಫಿಶಿಯಲ್ಸ್‌ಗಳು ಇನ್‌ವಾಲ್ವ್ ಆಗಿದ್ದಾರೆ. ಈ ೫ ಜನರ ಜೊತೆಗೆ ಇನ್ನೂ ೪ ಜನ ಸೇರಿಕೊಂಡು ಮಾಡಿರುವುದು ಸರಿಯಲ್ಲ. ಇವರುಗಳ ಮೇಲೆ

ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಸಾಹುಕಾರರ ಸಮಾಜದಲ್ಲಿ ಬಡವರು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲವೇ ಎಂಬ ಅನುಮಾನ ನಮಗೆ ಬರುವಂತಾಗಿದೆ. ನಮ್ಮ ಸಮಾಜದಲ್ಲಿ ಬಡವರಿಗೆ ಕಾನೂನು ಸರಿಯಾಗಿ ನೆರವು ಕೊಡುವುದಿಲ್ಲ. ಸಾಹುಕಾರರಿಗೆ ಮಾತ್ರ ಕಾನೂನು ಸರಿಯಾಗಿ ಅನುಕೂಲಕರವಾಗಿದೆ. ಕೆಲವು ದಿನಗಳ ಹಿಂದೆ ಆಳಂದ್ ತಾಲ್ಲೂಕಿನಲ್ಲಿ ಲಕ್ಷ್ಮಣ್ ನಾಯಕ್ ಎಂಬ ಹಿಂದುಳಿದ ಜನಾಂಗದವನನ್ನು ಕೊಲೆ ಮಾಡಲಾಗಿದೆ. ಕೊಲೆ ಮಾಡಿದವರನ್ನು ಇದುವರೆಗೂ ಪೋಲೀಸರು ಬಂಧಿಸುವ ಕೆಲಸವನ್ನು ಮಾಡಿಲ್ಲ. ಪೋಲೀಸರು ಮನಸ್ಸು ಮಾಡಿದರೆ ಆ ಕೊಲೆಗಾರರನ್ನು ೮ ದಿನಗಳಲ್ಲಿ ಬಂಧಿಸಬಹುದಾಗಿತ್ತು. ದುರ್ಬಲ ವರ್ಗದವರಿಗೆ ಸರ್ಕಾರ ರಕ್ಷಣೆ ಕೊಡಬೇಕು. ದುರ್ಬಲ ವರ್ಗದವರಿಗೆ ರಕ್ಷಣೆ ಕೊಡಬೇಕಾದರೆ ಮೊದಲು ಸರ್ಕಾರಕ್ಕೆ ಮನಸ್ಸು ಇರಬೇಕು. ಬೆಂಡಿಗೇರಿಯಲ್ಲಿ ನಡೆದ ಕೃತ್ಯಕ್ಕೆ ಇಡೀ ಕರ್ನಾಟಕವೇ ತಲೆಬಗ್ಗಿಸಬೇಕು. ಈ ತರಹ ಕೃತ್ಯ ಇಡೀ ಪ್ರಪಂಚದಲ್ಲಿ ಎಲ್ಲೂ ನಡೆದಿಲ್ಲ. ಸ್ವಾತಂತ್ರ್ಯ ಬಂದು ನಮ್ಮ ಭಾರತಕ್ಕೆ ೪೦ ವರ್ಷಗಳಾಯಿತು. ಈಗಲೂ ಇಂಥ ಅನ್ಯಾಯಗಳು ನಮ್ಮ ರಾಷ್ಟ್ರದಲ್ಲಿ ನಡೆಯುತ್ತವೆ ಎಂದರೆ ಹೇಗೆ? ಮೊದಲು ಇಂಥ ಅನ್ಯಾಯಗಳು ಆಗದಂತೆ ಕ್ರಮವನ್ನು ತೆಗೆದುಕೊಳ್ಳಬೇಕು. ಮಲ ತಿನ್ನಿಸಿ ಅವಮಾನ ಮಾಡಿದ್ದಾರೆ. ಇನ್ನು ಮುಂದಾದರೂ ಇಂಥ ಕೆಲಸಗಳು ನಮ್ಮ ರಾಜ್ಯದಲ್ಲಿ ನಡೆಯದ ಹಾಗೆ ನೋಡಿಕೊಳ್ಳಬೇಕು. ಇಂಥ ಕೆಲಸ ಮಾಡಿದವರಿಗೆ ಪೋಲೀಸಿನವರು ಸರಿಯಾಗಿ ಬುದ್ಧಿ ಕಲಿಸಬೇಕು.

† ಶ್ರೀ ಬಿ. ಎಸ್, ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮಾನವ ಕುಲಕ್ಕೆ ಕಳಂಕ ತರುವಂಥ ಘಟನೆ ಬೆಂಡಿಗೇರಿಯಲ್ಲಿ ನಡೆದಿದೆ. ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿ ಈಗಾಗಲೇ ನನ್ನ ಅನೇಕ ಶಾಸಕ ಸ್ನೇಹಿತರು ಮಾತನಾಡಿದ್ದಾರೆ. ನನ್ನ ಮನಸ್ಸಿನಲ್ಲಿ ಆಗುತ್ತಿರುವ ಕಳವಳ ಏನೆಂದರೆ, ಇಂಥ ಘಟನೆಗಳಿಗೆ ಇಲ್ಲಿ ಕುಳಿತಿರುವ ಅನೇಕ ಜನ ಕಾರಣಭೂತರಾಗಿದ್ದಾರೆ. ಈ ರೀತಿ ಸಮಾಜಘಾತುಕ ಕೆಲಸ ಮಾಡಿದಂಥ ವ್ಯಕ್ತಿಗಳಿಗೆ ಬೆಂಬಲ ಕೊಡುವಂಥ ಪ್ರವೃತ್ತಿ ಕೆಲವರಲ್ಲಿ ಬೆಳೆದಿದೆ. ಡಾ. ತಿಪ್ಪೇಸ್ವಾಮಿಯವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಕೊಟ್ಟಿರತಕ್ಕಂಥ ವರದಿಯಲ್ಲಿ ಈ ಘಟನೆ ನಿಜವಾದಂಥದ್ದಾಗಿದೆ ಎಂದು ಹೇಳಿದ್ದಾರೆ. ಈ ವರದಿ ಆಧಾರದ ಮೇಲೆ ತಪ್ಪಿತಸ್ಥರ ಮೇಲೆ ಕ್ರಮಗಳನ್ನು ತೆಗೆದುಕೊಂಡಿದ್ದರೆ ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು. ಸ್ವಾತಂತ್ರ್ಯ ಬಂದು ೪೦ ವರ್ಷಗಳಾಗಿವೆ. ಎಲ್ಲಾ ಜಾತಿಯವರು ಒಂದೇ ಎಂದು ಹೇಳುವ ಸಮಯದಲ್ಲಿ ಇಂಥ ಘಟನೆ ನಡೆದಿದೆ. ಸಮಾಜದ ಯಾವುದೇ ಸವಲತ್ತು ಸಿಗದೆ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವ ದೀನ ದಲಿತರು ಸಮಾಜದಿಂದ ದೂರ ಉಳಿಯುವಂತಹ ವಿಚಿತ್ರ ಸನ್ನಿವೇಶ ಇಂತಹ ಘಟನೆಗಳ ಮೂಲಕ ಆಗುತ್ತಾ ಇದೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಂಥ ಘಟನೆಗಳು ನಡೆದಂತಹ ಸಂದರ್ಭಗಳಲ್ಲಿ ಘಟನೆಗೆ ಕಾರಣರಾದವರು ಎಂತಹ ಪ್ರಭಾವಶಾಲಿ ವ್ಯಕ್ತಿಯಾಗಿದ್ದರೂ ಸಹ ಅಧಿಕಾರ ಮಾಡುವಂತಹ ಜನ ಅಂತಹವರ ಮೇಲೆ ಸರಿಯಾದಂತಹ ಕ್ರಮವನ್ನು ತೆಗೆದುಕೊಂಡು, ಮುಂದೆ ಈ ರೀತಿಯ ಘಟನೆಗಳು ಯಾರಿಂದಾದರೂ ನಡೆದುದ್ದೇ ಆದರೆ ಅಂತಹವರು ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ವಾತಾವರಣವನ್ನು ಮಾಡಿಸಿದರೆ ಮಾತ್ರ ಇಂತಹ ಘಟನೆಗಳು ನಿಲ್ಲಬಹುದೆಂದು ನನಗನ್ನಿಸುತ್ತದೆ. ಮಾನ್ಯ ಬಸವಲಿಂಗಪ್ಪನವರು ಭಾವಾವೇಶಕ್ಕೆ ಒಳಗಾಗಿ, ಅವರ ದುಃಖವನ್ನು ವ್ಯಕ್ತಪಡಿಸುತ್ತಾ, ಈ ಜನರು ಇವೊತ್ತು ಎಲ್ಲರಿಂದಲೂ ಹೊರಗಡೆ ಇದ್ದಾರೆ, ಹಿಂದೂ ಸಮಾಜದಿಂದ ಬೇಕಾದರೂ ಹೊರಗಡೆ ಇರೋಣ. ಆದರೆ ಅವರು ನೆಮ್ಮದಿಯಿಂದ ಜೀವನ ನಡೆಸುವಂತೆ ಇರಬೇಕು ಎಂದು ಮಾನ್ಯರು ಅವರ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಬಹಳ ವರ್ಷಗಳಿಂದಲೂ ಮಾನ್ಯರ ಸರಕಾರ ಆಡಳಿತದಲ್ಲಿ ಇತ್ತು. ಇತ್ತೀಚೆಗೆ ೪-೫ ವರ್ಷಗಳಿಂದ ಬೇರೆಯವರು ಅಧಿಕಾರಕ್ಕೆ ಬಂದಿರಬಹುದು. ಎಲ್ಲರ ಪ್ರಯತ್ನದಿಂದ ಎಲ್ಲರೂ ಒಂದಾಗಿ ಬಾಳುವಂತಹ ಒಂದು ಹೊಸ ವಾತಾವರಣವನ್ನು ಸೃಷ್ಟಿಸಬೇಕು. ಅದಕ್ಕಾಗಿ ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕಬೇಕೋ ಅದನ್ನು ಹಾಕಿಕೊಳ್ಳಬೇಕು, ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ ಸಹ ಅದನ್ನು ಮಾಡಬೇಕು. ಇವೊತ್ತು ವಡಗೇರಿಯಲ್ಲಿ ಲಕ್ಷ್ಮಣ ನಾಯಕನ ಕೊಲೆ ಆಯಿತು. ಆತನು ಜಿಲ್ಲಾ ಪರಿಷತ್ ಸದಸ್ಯನಾಗಿದ್ದವನು. ಒಬ್ಬ ಸಾಮಾನ್ಯ ಮನುಷ್ಯ, ತಾಂಡದಲ್ಲಿ ಹುಟ್ಟಿ ಬೆಳೆದು, ಸಮಾಜದಲ್ಲಿ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿ, ಅಲ್ಲಿಯ ಶ್ರೀಮಂತರ ಬಗ್ಗೆ ಅವರ ಅನ್ಯಾಯಗಳ ವಿರುದ್ಧವಾಗಿ ಹೋರಾಟ ಮಾಡುತ್ತಾ, ಅನ್ಯಾಯವನ್ನು ಎದುರಿಸುತ್ತಿದ್ದಾಗ ಅವನ ಮೇಲೆ ಎಲ್ಲಾ ರೀತಿಯ ಪ್ರಹಾರ ಮಾಡುವ ಪ್ರಯತ್ನ ನಡೆಯಿತು.

೧೯೭೮ರಲ್ಲಿ ಯಾದಗೀರ್‌ನ ಭೀಮಾ ಸೇತುವೆಯ ಹತ್ತಿರ ಅವನ ಕೊಲೆ ಮಾಡುವ ಪ್ರಯತ್ನ ಮಾಡಿದಾಗ ಇಡೀ ಊರಿನ ಜನರು ಒಟ್ಟುಗೂಡಿ ಹತ್ತು ಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿಕೊಟ್ಟು ಅವನಿಗೆ ಪಿಸ್ತೂಲ್‌ನ್ನು ಕೊಡಿಸುವ ಪ್ರಯತ್ನವನ್ನು ಮಾಡಿದರು. ಹೋರಾಟವನ್ನು ಮುಂದುವರಿಸಿಕೊಂಡು ಬಂದ ಅವನು ಜಿಲ್ಲಾಪರಿಷತ್‌ನಲ್ಲಿ ಸೀಟ್ ಸಿಕ್ಕುವ ಮೂಲಕ ಅಧಿಕ ಬೆಂಬಲದಿಂದ ಗೆದ್ದು ಬಂದುದು ಅವನ ಸಾವಿಗೆ ಕಾರಣವಾಯಿತು. ಮಂಡಳ ಪಂಚಾಯತ್ ಚುನಾವಣೆಯಲ್ಲಿ ಜವಾಬ್ದಾರಿಯುತವಾಗಿ ತನ್ನ ಕರ್ತವ್ಯವನ್ನು ಮಾಡಿದವನು ಅವನು. ತನ್ನ ಗುಂಪನ್ನು ಗೆಲ್ಲಿಸಿ, ಕೆಲವರ ವಿರುದ್ಧವನ್ನು ಕಟ್ಟಿಕೊಂಡು, ಮಂಡಳದ ಪ್ರಧಾನ ಮತ್ತು ಉಪಪ್ರಧಾನರನ್ನು ತನ್ನ ಗುಂಪಿನರನ್ನು ಆರಿಸಿ ಬರುವಂತೆ ಮಾಡುವುದರಲ್ಲಿ ಯಶಸ್ವಿಯಾದನು. ಅದೊಂದು ತಪ್ಪಾಯಿತು. ಇಂತಹ ಒಂದು ಘಟನೆಯು ನಡೆದ ಮೇಲೆಯೂ ಸಹ ಈಗ ಯಾರಿದ್ದಾರೆ, ಪ್ರಧಾನರಾದ ಪ್ರಭು ತುಮಕೂರ ಮತ್ತು ಉಪಪ್ರಧಾನರಾದ ಯಂಕಪ್ಪ ಬಲ್ಲಾಳ, ಇವರಿಬ್ಬರಿಗೂ ಸಹ ತಮ್ಮ ಪ್ರಾಣದ ರಕ್ಷಣೆ ಸಿಗುತ್ತದೆ ಎಂಬ ನಂಬಿಕೆ ಇಲ್ಲ. ಅವರ ಮೇಲೆಯೂ ಪ್ರಹಾರ ನಡೆಯುತ್ತಾ ಇದೆ. ಅಲ್ಲಿಯ ಭಾಸ್ಕರರಾವ್ ಎಂಬ ಒಬ್ಬ ವಕೀಲರು ಹೀಗೆ ದೀನದಲಿತರ ಮೇಲೆ ಅನ್ಯಾಯವಾಗಬಾರದು ಎಂದು ಜನರನ್ನು ಒಂದುಗೂಡಿಸಿ ಪ್ರತಿಭಟನೆ ಮಾಡಿದಾಗ ಅವರ ಮೇಲೆಯೂ ಪ್ರಹಾರ ನಡೆಯುವ ಪ್ರಯತ್ನಗಳು ನಡೆಯುತ್ತಾ ಇವೆ. ಈ ಸದನದ ಒಂದೇ ಒಂದು ಉದ್ದೇಶ ಅಂದರೆ, ಮತ್ತೆ ಮತ್ತೆ ಈ ತರಹದ ಘಟನೆಗಳು ನಡೆಯದಂತೆ ರಕ್ಷಣೆ ಕೊಡುವ ಬಗ್ಗೆ ಚಿಂತನೆ ಮಾಡುವುದು ಅತ್ಯವಶ್ಯವಾಗಿದೆ. ಇಲ್ಲದಿದ್ದರೆ ಒಂದು ತಾಂಡದಿಂದ ಬಂದ ಸಾಮಾನ್ಯ ಮನುಷ್ಯ ರಾಜಕೀಯ ಕ್ಷೇತ್ರದಲ್ಲಿ ಪ್ರಭಲವಾಗಿ ಬೆಳೆಯುತ್ತಾ ಬಂದರೆ ಪ್ರಭಲ ಕೋಮಿನವರಿಗೆ ಮಾರಕವಾಗಬಹುದು ಎಂಬ ಒಂದು ಕಾರಣಕ್ಕೋಸ್ಕರವಾಗಿ ಈ ರೀತಿಯ ವ್ಯವಸ್ಥಿತವಾದಂತಹ ಸಂಚಿನ ಮೂಲಕ ಲಕ್ಷ್ಮಣ ನಾಯಕನ ಕೊಲೆ ಆಯಿತು. ಇದರ ಬಗ್ಗೆ ಇಲ್ಲಿರುವಂತಹ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು ಯೋಚನೆ ಮಾಡಬೇಕಾಗಿದೆ.

ಇನ್ನೊಂದು ಸಂಗತಿ, ಈ ರೀತಿಯಲ್ಲಿ ಯಾವುದಾದರೂ ಒಂದು ಕ್ಷೇತ್ರದಲ್ಲಿ ಹಿಂದುಳಿದ ವರ್ಗದರೂದವರು, ದೀನದಲಿತರು ದುರ್ಬಲ ವರ್ಗದವರು ಒಡನಾಟ ಮಾಡಿಕೊಂಡು ಚೆನ್ನಾಗಿ ಇದ್ದರೆ ಅಲ್ಲಿ ಪ್ರಯತ್ನಗಳ ಮೂಲಕ ಒಡಕು ಹುಟ್ಟಿಸುವ ಒಂದು ಹೀನ ಕೃತ್ಯವನ್ನು ಸಾಮರಸ್ಯವನ್ನು ಒಡೆಯುವ ಏನಾದರೊಂದು ಹೀನ ಕೆಲಸವನ್ನು ಕಲವು ರಾಜಕೀಯ ಪಕ್ಷಗಳ ಮುಖಂಡರುಗಳು ಮಾಡುತ್ತಿರುವುದು ಬಹಳ ದುಃಖದಾಯಕವಾದ ಸಂಗತಿಯಾಗಿದೆ, ನಾನು ಮುಖ್ಯಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಡಾಕ್ಟರ್ ತಿಪ್ಪೇಸ್ವಾಮಿಯವರ ನೇತೃತ್ವದ ಸಮಿತಿಯು ಮಾಡಿದ ರಿಪೋರ್ಟ್‌ನ್ನು ಪರಿಗಣಿಸಿ ಅದರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಸಮಿತಿಯವರು ಸೂಚಿಸಿರುವ ಸಲಹೆಗಳ ಮೂಲಕ ಸರಿಯಾದ ಕ್ರಮಗಳನ್ನು ತತ್‌ಕ್ಷಣ ಕೈಗೊಳ್ಳಬೇಕು. ಯಾವುದೇ ಪ್ರಭಾವಶಾಲಿಗಳ ಒತ್ತಡಕ್ಕೂ ಮಣಿಯಬಾರದು. ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವಲ್ಲಿ ಹಿಂದೆಗೆಯಬಾರದು, ಎಂದು ಹೇಳಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಈಗಲಾದರೂ ನೀವು ಕ್ರಮ ತೆಗೆದುಕೊಳ್ಳಬೇಕು, ಲಕ್ಷ್ಮಣನಾಯಕನ ಮೇಲೆ ಅನೇಕ ಸಲ ಹಲ್ಲೆಯಾದಂತಹ ಸಂದರ್ಭದಲ್ಲಿ ಅವನನ್ನು ಉಳಿಸುವುದಕ್ಕೆ ನಮಗೆ ಆಗದೇ ಇರಬಹುದು ಈಗ ಯಾರು ಆ ಒಂದು ಕೊಲೆಗೆ ಕಾರಣಕರ್ತರಾಗಿದ್ದಾರೆ ಅವರನ್ನು ಇದುವರೆಗೂ ಅರೆಸ್ಟ್ ಮಾಡುವುದಕ್ಕೆ ಆಗಿಲ್ಲ. ಆತ ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದಾನೆ ಎಂದು ಹೇಳುವುದಾದರೆ ಜನಗಳಲ್ಲಿ ಯಾವ ರೀತಿಯ ಭಾವನೆ ಮೂಡಬಹುದು ಎಂಬುದನ್ನು ಈ ಸದನದಲ್ಲಿ ಇವತ್ತು ಹೇಳಬೇಕಾಗಿದೆ. ವ್ಯವಸ್ಥಿತವಾದ ರಕ್ಷಣೆಯನ್ನು ಕೊಡುವ ಭಾವನೆ ಜನಗಳಲ್ಲೇ ಮೂಡಬಹುದು, ಅದಕ್ಕೆ ಅವಕಾಶ ಮಾಡಿಕೊಡದೆ ಇತ್ತೀಚಿಗೆ ಏನು ಇಂತಹ ಕೃತ್ಯಗಳು ಜಾಸ್ತಿಯಾಗುತ್ತಿವೆ ಇದು ಆಗದಂತೆ ಬಿಗಿ ಬಂದೋಬಸ್ತನ್ನು ಮಾಡಬೇಕು. ಕಾನೂನನ್ನು ಕೈಗೆ ತೆಗೆದುಕೊಳ್ಳಬೇಕು. ನಿಮ್ಮದೇ ಆದಂತಹ ಕ್ರಮವನ್ನು ಕಾನೂನು ಪ್ರಕಾರ ತೆಗೆದುಕೊಂಡರೆ ಜನಗಳಿಗೆ ರಕ್ಷಣೆ ಸಿಕ್ಕೇ ಸಿಗುತ್ತದೆ. ನಮ್ಮ ಸಮಾಜ ಜಾಗೃತವಾಗಿದ್ದರೆ ಯಾರೂ ಇಂತಹ ಕೃತ್ಯವನ್ನು ಎಸಗುತ್ತಾರೆ ಅವರನ್ನು ಸ್ಥಳದಲ್ಲಿಯೇ ಗುಂಡಿಕ್ಕಿ ಕೊಲ್ಲಬೇಕಾಗಿತ್ತು. ಇಂತಹ ಕೆಲಸ ಮಾಡಿದವರು ಬದುಕುವುದಕ್ಕೆ ಸಾಧ್ಯವಿಲ್ಲವೆಂದು ಅವರನ್ನು ಹೊರಗಡೆ ಇಡುವ ಪ್ರಯತ್ನವನ್ನು ಮಾಡಿದ್ದರೆ ಇಲ್ಲವೇ ಅವನನ್ನು ಸಾರ್ವಜನಿಕವಾಗಿ ಬೆಂಕಿಗೆ ಹಾಕಿ ಸುಡುವ ಪ್ರಯತ್ನ ಮಾಡಿದ್ದರೆ ಮುಂದೆ ಯಾರೂ ಇಂತಹ ಕೆಲಸವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಜನರು ತಿರುಗಿ ಬೀಳುವ ಪರಿಸ್ಥಿತಿ ಬರುವ ಮುಂಚೆಯೇ ಇದರ ಬಗ್ಗೆ ಸೂಕ್ತವಾದ ಬಿಗಿ ಕ್ರಮ ತೆಗೆದು

ಒಳ್ಳೆತಕ್ಕಂತಹ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ಚರ್ಚೆಯನ್ನು ನಾಳೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿದ್ದ ಇದರ ಉದ್ದಿಶ್ಯ ಇಷ್ಟೇ ಇದರ ಬಗ್ಗೆ ಸಂಬಂಧಪಟ್ಟ ಪೂರ್ಣ ಮಾಹಿತಿಯನ್ನು ತಮ್ಮ ಗಮನಕ್ಕೆ ತರಬೇಕು ಮತ್ತು ಇದೊಂದೇ ಅಲ್ಲ ಇನ್ನೂ ಏನೇನಾಗಿದೆ ಆ ಬಗ್ಗೆ ಕೂಡ ಎಲ್ಲಾ ವಿವರಗಳನ್ನು ಕ್ರೋಢೀಕರಿಸಿ ಈ ಸದನದ ಗಮನಕ್ಕೆ ತರಬೇಕು ಎನ್ನುವುದು ತಾವು ಈ ಘಟನೆಯ ತೀವ್ರತೆಯನ್ನು ಅರಿತು ಇವತ್ತೇ ಚರ್ಚೆ ಆಗಬೇಕೆಂದು ಹೇಳಿದ್ದೀರಿ. ನನ್ನ ಸ್ನೇಹಿತರು ಮಾತನಾಡಿದ್ದನ್ನು ನಾನು ಇಲ್ಲಿಯೇ ಕುಳಿತುಕೊಂಡು ಕೇಳಿಸಿಕೊಂಡೆ. ಈಗ ನಾನು ಉತ್ತರ ಕೊಡುವುದಕ್ಕೆ ನಿಂತಿದ್ದೇನೆ. ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸ್ನೇಹಿತರು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಕಳೆದ ಸೆಪ್ಟೆಂಬರ್ ತಿಂಗಳ ೧೧ನೇ ತಾರೀಖು ಎಂದು ಕಾಣುತ್ತದೆ ಅಂದು ಮಾನ್ಯ ಧರ್ಮಸಿಂಗ್‌ರವರು ಮತ್ತು ಖರ್ಗೆಯವರು ಇದರ ಬಗ್ಗೆ ಮಾತನಾಡಿದ್ದಾರೆ. ಆ ದಿವಸವೇ ಹೇಳಿದೆ ನಾಗರೀಕತೆ ಇರುವ ಮನುಷ್ಯ ಇದನ್ನು ಸಹಿಸುವುದಿಲ್ಲ ಇದು ನಮ್ಮ ನಾಗರೀಕತೆಗೇ ಕಳಂಕ ಎಂದು. ಇದರಲ್ಲಿ ಪಕ್ಷಗಳು ಅಥವಾ ಜಾತಿಗೆ ಮಾತ್ರ ಸಂಬಂಧಪಟ್ಟಿದ್ದು ಇದ್ದ ನಮ್ಮಲ್ಲಿ ಬಹಳಷ್ಟು ಸಾಧು ಸಂತರು ಗುರುಗಳು ಎಲ್ಲಾ ಆಗಿ ಹೋದರು ನಮ್ಮಲ್ಲಿ ಶ್ರೀರಾಮ ಹುಟ್ಟಿದ್ದಾನೆ, ಶ್ರೀ ಕೃಷ್ಣ ಹುಟ್ಟಿದ್ದಾರೆ, ಬುದ್ಧ, ಜೈನ ಜಲ್ಲರೂ ಹುಟ್ಟಿದ್ದಾರೆ ನೀವು ಇದನ್ನು ನಂಬದೇ ಇರಬಹುದು ನಾನು ಇದನ್ನು ನಂಬುತ್ತೇನೆ. ನೀವು ರೆವಿನ್ಯೂ ಮಂತ್ರಿಗಳಾಗಿದ್ದಾಗ ತಲಘಟ್ಟ ಗ್ರಾಮಕ್ಕೆ ಜಮೀನು ಕೊಟ್ಟಿರಿ ನಾನು ಬಂದು ಕೇಳಿಕೊಂಡೆ ಒಂದು ಎರಡು ಎಕರೆ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ೪ ಎಕರೆ ಕೊಡಿ ನಾನು ಲ್ಯಾಂಡ್ ಡೆವಲಪ್ ಬ್ಯಾಂಕ್‌ನಿಂದ ಸಾಲ ಕೊಡಿಸುತ್ತೇನೆ ಎಂದು. ಯಾರೋ ಒಬ್ಬ ಹರಿಜನ ತಮ್ಮನ್ನು ನೋಡಲು ಬಂದಾಗ ಹೋಗುವಾಗ ವಾಸನೆ ಹೊಡೆಯುತ್ತದೆ ಎಂದು ಹೇಳಿದಿರಿ.

ಶ್ರೀ ಬಿ. ಬಸವಲಿಂಗಪ್ಪ.—ಯಾರ ವಾಸನೆ.

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ವಾಸನೆ ಅಲ್ಲ ಅವರ ವಾಸನೆ. ಮಾತಿಗೂ ಕೃತಿಗೂ ನಮ್ಮಲ್ಲಿ ಬಹಳಷ್ಟು ಅಂತರವಿದೆ. ನಾವು ಭಾಷಣ ಮಾಡುವುದರಲ್ಲಿ ಪ್ರವೀಣರು. ತಾವು ಹೇಗೆ ಬಿಹೇವ್ ಮಾಡುತ್ತಿದ್ದಿರಿ ಎಂದು ಹೇಳಿದ್ದೇನೆ. ಅದೇ ಒಂದು ಸಂಘಟನೆಗೆ ಸೇರಿರುವುದು, ಅದೇ ಗುಂಪಿಗೆ ಸೇರಿದ ಜನ, ತಾವು ಹೇಗೆ ಬಿಹೇವ್ ಮಾಡುತ್ತೀರಿ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದೇ ಆಧಾರದ ಮೇಲೆ you want to defend yourself ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಅವರು ಭಾಷಣವನ್ನು ಪ್ರಾರಂಭ ಮಾಡಿ ಇನ್ನು ಅರ್ಧ ಗಂಟೆ ಕೂಡಾ ಆಗಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನೀವು ಹೇಳುವುದನ್ನು ನಾವು ಕೇಳಿದ್ದೇವೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟು ಹೊತ್ತಿನವರೆಗೂ ಶಾಂತಿಯುತವಾಗಿ ಚರ್ಚೆ ನಡೆದಿದೆ. ಆ ಕಡೆಯ ನಮ್ಮ ಸ್ನೇಹಿತರುಗಳು ಭಾವಾವೇಶದಿಂದ ಬಹಳ ಕಟುವಾಗಿ ಮಾತನಾಡಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಇಷ್ಟು ಒಳ್ಳೆಯ ಭಾಷಣ ಮಾಡಿದ್ದನ್ನು ನಾನು ಹಿಂದೆಂದೂ ಕೇಳಿರಲಿಲ್ಲ. ಆದರೂ ಅವರು ಯಾವ ರೀತಿ ಮಾತನಾಡಿದರು ಎಂದರೆ ನೀವು **ತಿನ್ನಿಸಿದಿರಿ ಎಂದು ಇದನ್ನು ಸರ್ಕಾರ ಮಾಡಿದ್ದಲ್ಲ. ಆ ರೀತಿ ಮಾಡಿದ್ದನ್ನು ನಾವೂ ಖಂಡಿಸುತ್ತೇವೆ. ಆ ರೀತಿ ಮಾಡಿದ್ದು ಇದೊಂದು

**Expunged as ordered by the chair.

ಕಳಂಕ ಎಂದು ನಾನು ಒಪ್ಪುತ್ತೇನೆ. ಆದರೆ ಇದನ್ನು ಸರ್ಕಾರ ಮಾಡಿದ್ದಲ್ಲ. ಅದಕ್ಕೆ ನಾವು ತಕ್ಷಣ ಕಾಯ್ದೆಬದ್ಧವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಈಗ ಅವರು ಉತ್ತರ ಕೊಡುತ್ತಿದ್ದಾರೆ.

SRI M. MALLIKARJUNA KHARGE.—You tell the facts. We agree.

MR. SPEAKER.—ನೀವು ಹೇಲು ತಿನ್ನಿಸಿದಿರಿ ಎಂದು ಏನು ಹೇಳಿದಿರಿ, It will be expunged. I will expunge it. It is not a decent word:

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರಾಗಲಿ, ಮಾನ್ಯ ಬಂಗಾರಪ್ಪನವರಾಗಲಿ, ಮಾನ್ಯ ಮೊಯಿಲಿಯವರಾಗಲೀ, ಮಾನ್ಯ ಕೆ. ಹೆಚ್. ಪಾಟೀಲ್‌ರವರಾಗಲೀ, ಮಾನ್ಯ ಬಸವಲಿಂಗಪ್ಪನವರಾಗಲೀ, ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರಾಗಲೀ, ನೀವೆಲ್ಲಾ ಮಾತನಾಡುವಾಗ ಸುಮ್ಮನೆ ಕುಳಿತುಕೊಂಡು ನಾವು ಕೇಳಲಿಲ್ಲವೆ ? ಈಗ ಉತ್ತರ ಕೊಡುವುದು ನಮ್ಮ ಕರ್ತವ್ಯ ಅದು ಹೌದೋ ಅಲ್ಲವೋ ?

ಶ್ರೀ ಎಸ್. ಬಂಗಾರಪ್ಪ.—ನೀವು ಸುಮ್ಮನೆ ಕುಳಿತುಕೊಂಡಿದ್ದಿರಿ. ಆದರೆ ನಾನು ಮಾತನಾಡುವಾಗ ಜೆ.ಹೆಚ್. ಪಟೇಲರು ಮಧ್ಯೆ ಮಧ್ಯೆ ಬಾಯಿ ಹಾಕಲಿಲ್ಲವೇ ? ಅವರು ಸುಮ್ಮನೆ ಕುಳಿತು ಕೊಂಡಿದ್ದರೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ನಿಮ್ಮ ಭಾಷಣಕ್ಕೆ ಆತಂಕ ಮಾಡಲಿಲ್ಲ. ಕೆಲವು ಸಂದರ್ಭದಲ್ಲಿ ಮಧ್ಯೆ ಮಧ್ಯೆ ಬಾಯಿ ಹಾಕತಕ್ಕಂಥದ್ದು ಸ್ವಾರಸ್ಯವನ್ನು ಹೆಚ್ಚು ಮಾಡುತ್ತದೆ.

ಶ್ರೀ ಆರ್.ಎಲ್ ಜಾಲಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದೆ. ಕಳೆದ ಸಾರಿ ಈ ವಿಷಯದಲ್ಲಿ ಚರ್ಚೆ ಮಾಡುವಾಗ ಉತ್ತರ ಕೊಡುವಾಗ ಹೇಳಿದ್ದೆ. ಯಾರೇ ಆಗಲಿ ಮನುಷ್ಯ ಕುಲದಲ್ಲಿ ಹುಟ್ಟಿದವರು ಕೃತ್ಯವನ್ನು ಮಾಡುವುದಿಲ್ಲ. ಇವರು ನಾಗರೀಕತೆಗೆ ಕಳಂಕ ಹಚ್ಚಿದ್ದಾರೆ, ಹಿಂದೂ ಸಂಸ್ಕೃತಿಗೆ ಕಳಂಕವನ್ನು ಹಚ್ಚಿದ್ದಾರೆ ಎಂದು ನಾನು ಹೇಳುತ್ತಿದ್ದೆ. ಬಹಳಷ್ಟು ಜನ ನಮ್ಮಲ್ಲಿ ಆಗಿ ಹೋಗಿದ್ದಾರೆ. ಅದನ್ನು ಬಸವಲಿಂಗಪ್ಪನವರು ಒಪ್ಪುವುದಿಲ್ಲ ನಾನು ನಂಬಿಕೊಂಡಿದ್ದೇನೆ. ಬಸವೇಶ್ವರರು ಹುಟ್ಟಿದ್ದು, ಶಂಕರಾಚಾರ್ಯ, ಮಧ್ವಾಚಾರ್ಯ ಎಲ್ಲರೂ ಹುಟ್ಟಿದರು. ಆದರೂ ಜನತೆಯ ಮನಸ್ಸಿನ ಮೇಲೆ ಈ ಒಂದು ಕಳಂಕಮಯವಾದ ಭಾವನೆಗಳು ಏನು ಇವೆ, ಇವನ್ನು ತೊಡೆದು ಹಾಕುವುದಕ್ಕೆ ಸಾಧ್ಯವಾಗಲಿಲ್ಲ. ಮರ್ಡರ್ ಹೇಗೆ ಮಾಡುತ್ತಾರೆ. ಎಷ್ಟು ಜನ ಸಿಕ್ಕಿಹಾಕಿಕೊಳ್ಳುತ್ತಾರೆ, ಕಷ್ಟ ಇದೆ. ಯಾವುದೇ ಕಾನೂನು ಈ ಮನುಷ್ಯನ ಮನಸ್ಸನ್ನು ಪರಿವರ್ತನೆ ಮಾಡುವುದಕ್ಕೆ ಆಗುವುದಿಲ್ಲ. ಅದರಲ್ಲಿ ನಾವು ನೀವು ಒಟ್ಟಾಗಿ ಸೇರಿ ಮನಸ್ಸನ್ನು ಪರಿವರ್ತನೆ ಮಾಡಬಹುದು. ಈ ಸಮಾಜವನ್ನು ಸರಿಪಡಿಸಬಹುದು ಎಂದು ಹೇಳಬಹುದು. ನಿಮ್ಮ ಕಾಲದಲ್ಲಿ ಜಾಸ್ತಿ ಆಯಿತು, ನಮ್ಮ ಕಾಲದಲ್ಲಿ ಜಾಸ್ತಿ ಆಯಿತು, ಎಂದು ಒಬ್ಬರಿಗೊಬ್ಬರು ಹೇಳಿಕೊಂಡು ಕುಳಿತುಕೊಂಡರೆ ಆಗುವುದಿಲ್ಲ. ಈ ಪಿನ್‌ಪಾಯಿಂಟ್ ನಿಮ್ಮ ಕಾಲದಲ್ಲಿ ಜಾಸ್ತಿ ಎನ್ನತಕ್ಕಂಥದ್ದು ನಿಮ್ಮ ರಾಜಕೀಯ ಕಾಲದಲ್ಲಿ ಏನು ನಡೆಯಿತು ಎಂದು ಹೇಳಬೇಕಾಗುತ್ತದೆ. ನಾವು [ರಾಜಕಾರಣಿಗಳು. ನೀವು ರಾಜಕಾರಣ ಮಾಡಲಿಕ್ಕೆ ಹೊರಟರೆ, ನಾವೇನೂ ಕಾವಿಬಟ್ಟೆ ತೊಟ್ಟಿಲ್ಲ. ನಾನು ಅದನ್ನು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕಾಲದಲ್ಲಿ ಆದರೆ ಅದು ಸರಿ ಎಂದು ಜಸ್ಟಿಫೈ ಮಾಡುವುದಕ್ಕೆ ತಪ್ಪು ಮಾಡಿದವರಿಗೆ ನೀವು ಪಕ್ಕ ಕೊಡುತ್ತೀರೋ ?

ಶ್ರೀ ಆರ್.ಎಲ್. ಜಾಲಪ್ಪ.—ದಯಮಾಡಿ ತಾವು ನಾನು ಹೇಳುವುದನ್ನು ಕೇಳಿ. ಆಮೇಲೆ ತಾವು ಏನು ಬೇಕಾದರೂ ಕೇಳಬಹುದು. ನಾನು ಹೇಳುವುದು ಏನೆಂದರೆ ನಿಮ್ಮ ಕಾಲದಲ್ಲಿ ಜಾಸ್ತಿ ಆಯಿತು ನಮ್ಮ ಕಾಲದಲ್ಲಿ ಜಾಸ್ತಿ ಆಯಿತು ಎಂದು ಒಬ್ಬರಿಗೊಬ್ಬರು ವಾಗ್ವಿವಾದ ಮಾಡುವುದು ಬೇಡ. ಇದರಿಂದ ಏನು ಪ್ರಯೋಜನ ? ಆದರೆ ನೀವು ರಾಜಕಾರಣ ಮಾಡುವುದಕ್ಕೆ, ಅದರಲ್ಲಿ ಈ ವಿಚಾರವನ್ನು ಬೆರೆಸುವುದಕ್ಕೆ ಹೊರಟಿರುವುದು ಸರಿಯಲ್ಲ. ಯಾರಾದರೂ ನಮ್ಮ ಪಕ್ಷದವರು ಒಬ್ಬರಾದರೂ ಮಲ ತಿನ್ನಿಸಿದ್ದು ಸರಿಯೆಂದು ಹೇಳುತ್ತಾರೆಯೇ ? ಮಲವನ್ನು ತಿನ್ನಿಸಿದ್ದು ಸರಿ ಎಂದು ಯಾರೂ ಹೇಳುವುದಿಲ್ಲ. ನಾವು ಮನುಷ್ಯರು, ಸಂಸ್ಕೃತಿ ಇದೆ, ನಮಗೂ ಆತ್ಮ ಇದೆ, ಪಂಚೇಂದ್ರಿಯಗಳು ಇವೆ.

ಅಧ್ಯಕ್ಷರು.—ಕೇಳಿರಿ......

ಶ್ರೀ ಆರ್. ಎಲ್. ಜಾಲಪ್ಪ.—ಏಕೆ ಬಡಿದಾಡುತ್ತೀರಿ, ಮಾನ್ಯ ಬಸವಲಿಂಗಪ್ಪನವರೇ ತಾವು ಕುಳಿತುಕೊಂಡು ಕೇಳಿ. ಇಡೀ ಪ್ರಪಂಚದಲ್ಲಿ ಎಲ್ಲರೂ ತಲೆತಗ್ಗಿಸುವಂತಹ ಕೃತ್ಯ ಇದು ಇದನ್ನು ನಾನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ನಿಂತಿಲ್ಲ. ನಾನೂ ದಲಿತವರ್ಗದಿಂದ ಬಂದವನು, ನಮ್ಮ ವಂಶದವರೂ ಇವೊತ್ತು ಅನ್‌ಟಚಬಲ್ಸ್. ಮಾನ್ಯ ಬಂಗಾರಪ್ಪನವರ ಜಿಲ್ಲೆಯಲ್ಲೂ ಅನ್‌ಟಚಬಲ್ಸ್ ಎಂದು ಹೇಳುತ್ತಾ ಇದ್ದಾರೆ. ನಮ್ಮವರು ಎಷ್ಟೋ ಜನ ಕೂಳು ಇಲ್ಲದೆ ಇದ್ದಾರೆ, ನಾನು ಒಬ್ಬ ಬಿಳಿ ಬಟ್ಟೆ ಹಾಕಿಕೊಂಡ ಮಾತ್ರಕ್ಕೆ ದಲಿತನಲ್ಲವೆಂದು ಹೇಳಿಕೊಳ್ಳುವುದಕ್ಕೆ ಸಿದ್ಧನಿಲ್ಲ. ದಲಿತರನ್ನು ರಕ್ಷಣೆ ಮಾಡುವ ಯೋಗ್ಯತೆ ಇಲ್ಲವೆಂದಾದರೆ ಇಲ್ಲಿ ಇರುವುದಕ್ಕೂ ನಾನು ಯೋಗ್ಯನಲ್ಲ. ನನಗೂ ಒಂದು ಇತಿ ಮಿತಿ ಇದೆ, ಆ ಇತಿಮಿತಿಯೊಳಗೆ ಕೆಲಸ ಮಾಡಬೇಕಾಗುತ್ತದೆ. ರಾಜ್ಯಾಂಗಬದ್ಧವಾಗಿ ಕೆಲಸ ಮಾಡಬೇಕಾಗುತ್ತದೆ, ಶಿವಮೊಗ್ಗದಲ್ಲಿ ಜಾಸ್ತಿ ಆಯಿತೆಂದು ಹೇಳಿದ್ದು ನಿಜ, ಮಾನ್ಯ ಶ್ರೀನಿವಾಸ್‌ರವರ ಹತ್ತಿರ ಬೇಕಾದಷ್ಟು ವಿವರ ಇರಬಹುದು. ಇವೊತ್ತು ಅದನ್ನು ಸರಿ ಮಾಡುವುದಕ್ಕೆ ಹೋದರೆ ಹೇಗೆ ಆಗುತ್ತದೆ. ನಮ್ಮ ಹೊಸನಗರದಲ್ಲಿ ಮಾನ್ಯ ಸದಸ್ಯರ ಊರಿನಲ್ಲಿ ಸೂಡೂರ್, ನನಗೆ ವರದಿ ಬಂದಿದೆ, ಅಲ್ಲಿ ಗಂಡ ಹೆಂಡತಿ ಸಂತೆ ಮುಗಿಸಿಕೊಂಡು ಬರುತ್ತಿದ್ದಾಗ ಹಿಂದೆ ಮೂವರು ಸೇರಿಕೊಂಡು ಗಂಡನ ಎದುರಿಗೆ ಹೆಂಡತಿಯನ್ನು ರೇಪ್ ಮಾಡಿದರು. ಇದರ ಬಗ್ಗೆ ಕೇಸ್ ಕೊಟ್ಟಿಲ್ಲ, ಪಿಟಿಷನ್ ಫೈಲ್ ಮಾಡಲಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಪೋಲೀಸ್‌ನವರು ರಿಕ್ಷಾದಲ್ಲಿ ಬಂದು ರೇಪ್ ಮಾಡಿದ್ದು ಇನ್ನೂ ದಾಖಲು ಆಗಿಲ್ಲ. ಅವರನ್ನು ಹಿಡಿದಿದ್ದಾರೆಯೋ ?

ಶ್ರೀ ಆರ್. ಎಲ್. ಜಾಲಪ್ಪ.—ನನಗೆ ಗೊತ್ತಿಲ್ಲ. ತಮಗೆ ಗೊತ್ತಿದ್ದರೆ ಹೇಳಿ ಹಿಡಿಯೋಣ. ಪೋಲೀಸಿನವರ ಕೈಗೆ ಬಡಿಗೆ ಕೊಟ್ಟು ಹೊಡೆಯುವುದಕ್ಕೆ ಹೋದರೆ ಅವರು ಬಡಿಯುತ್ತಾರೆ. ಪೋಲೀಸಿನವರು ಬಟ್ಟೆ ಹಾಕಿದಾಗ ಅವರನ್ನು ಮಾತನಾಡಿಸುವುದುಂಕಷ್ಟ. ಅವರ ಕೈಗೆ ದೊಣ್ಣೆ ಕೊಟ್ಟರೆ ಕೋತಿ ಕೈಗೆ ಹೆಂಡ ಕುಡಿಸಿದ ಹಾಗೆ ಆಗುತ್ತದೆ. ಅವರ ಕೈಯಲ್ಲಿ ದೊಣ್ಣೆ ಎಷ್ಟು ಅಪಾಯ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅವರನ್ನು ಕಂಟ್ರೋಲ್‌ನಲ್ಲಿ ಇಡಬೇಕಾಗುತ್ತದೆ. ಅವರನ್ನು ಕಂಟ್ರೋಲ್ ಮಾಡಲು ಖಿಂಡಿತ ಪ್ರಕಾರ ಅರೆಸ್ಟ್ ಮಾಡಿ ಕೋರ್ಟಿಗೆ ಇಡಿ ಎಂದು ಹೇಳಿದ್ದು. ಇದು ಅತಿ ಆಯಿತು. ನನ್ನ ಸಬ್ಮಿಷನ್ ತಮ್ಮ ಹತ್ತಿರ ಏನೆಂದರೆ ಇದು ಬರೀ ತಮ್ಮ ಕಾಲದಲ್ಲಿ ಜಾಸ್ತಿ ಆಯಿತು, ನಮ್ಮ ಕಾಲದಲ್ಲಿ ಆಯಿತು ಎಂದು ಹೇಳುವುದು ಬೇಡ. ನಾನು ಏಕೆ ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆಂದರೆ...

ಶ್ರೀ ಧರ್ಮಸಿಂಗ್.—ಯಾವುದು, ಯಾರದು ಎಷ್ಟು ಜಾಸ್ತಿ ಎಂದು ಎಷ್ಟು ಸಾರಿ ಹೇಳುವುದು......

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹೇಳಿದ್ದನ್ನೇ ಮತ್ತೆ ಮತ್ತೆ ರಿಪೀಟ್ ಮಾಡಿದ್ದೀರಿ,

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ, ಅವರು ಏನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಧರ್ಮಸಿಂಗ್.—ನನಗೂ ಸ್ವಲ್ಪ ಅವಕಾಶ ಕೊಡಿ.

Mr. SPEAKER.—I have not Permitted you, ನಾನು ನಿಮಗೆ ಅಲೋ ಮಾಡುವುದಿಲ್ಲ. ತಾವು ಕುಳಿತುಕೊಳ್ಳಿ ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಧರ್ಮಸಿಂಗ್.—ನನ್ನ ಕಾನ್ಸಿಟ್ಯೂಯನ್ಸಿಯಲ್ಲಿ......

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ದಯಮಾಡಿ ಕುಳಿತುಕೊಳ್ಳಿ, ಮುಂದೆ ಅವಕಾಶವಾದರೆ ನೋಡೋಣ.

ಶ್ರೀ ಧರ್ಮಸಿಂಗ್.—ನಾನು ಏನು ಹೇಳಿದೆ ಎಂದರೆ, ಇದು ನನ್ನ ಕಾನ್ಸಿಟ್ಯೂಯನ್ಸಿಯಲ್ಲಿ ನಡೆದಿರುವುದು. ಬುದವ್ಯನ ಕೊಲೆ ಆಗಿದೆ. ಕೊಲೆ ಆದ ಮೇಲೆ ನಾಲ್ಕು ದಿವಸದ ನಂತರ ಎಸ್.ಐ ಅವರನ್ನು ಸ್ಪೆಸಿಫಿಕ್‌ಆಗಿ ಟ್ರಾನ್ಸ್‌ಫರ್ ಮಾಡಿದರು. ನಾನು ಹೇಳಿದೆ, ಅವರನ್ನು ಟ್ರಾನ್‌ಫರ್ ಮಾಡಬೇಡಿ, ಎಫಿಷಿಯಂಟ್ ಇದ್ದಾರೆ ಅವರು ಕೊಲೆಗಾರರನ್ನು ಹಿಡಿಯುತ್ತಾರೆ, ಎಂದು. ಆಮೇಲೆ

ನೀವು ಒಬ್ಲೈಜ್ ಮಾಡಿದಿರಿ, ಅವನನ್ನು ರಿಟೇನ್ ಮಾಡಿದರು. ಈಗ ಆ ಮಹದೇವಪ್ಪನನ್ನು ಹಿಡಿದು ಹಾಕಿದ್ದಾರೆ.

೮–೩೦ ಪಿ.ಎಂ.

ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಈ ಒಂದು ಕೊಲೆ ಆದಾಗ ತಾವು ರಾಜಕಾರಣಿಗಳ ಒತ್ತಡಕ್ಕೆ ಒಳಗಾಗಿ ಅಲ್ಲಿನ ಸಬ್–ಇನ್ಸ್‌ಪೆಕ್ಟರ್ ಅವರನ್ನು ಅಲ್ಲಿಂದ ವರ್ಗ ಮಾಡಿದಿರಿ, ಈ ವಿಚಾರ ಕೂಡ ಕಳೆದ ಅಧಿವೇಶನದಲ್ಲಿ ಇಲ್ಲಿ ಚರ್ಚೆಯಾಯಿತು. ಈ ಪ್ರಕರಣಕ್ಕೆ ಸಂಬಂಧಪಟ್ಟ ನಿಜಾಂಶ ತಿಳಿದುಕೊಳ್ಳಲು ಡಾ॥ ತಿಪ್ಪೇಸ್ವಾಮಿ ಅವರ ನೇತೃತ್ವದ ಕಮಿಟಿಯವರು ನಮ್ಮ ಜಿಲ್ಲೆಗೆ ಬಂದಿದ್ದಾಗ ಅಲ್ಲಿನ ಜನರು ನಡೆದ ಸಂಗತಿಗಳನ್ನೆಲ್ಲಾ ಹೇಳಿದ್ದಾರೆ. ಅಲ್ಲಿನ ಜನತಾ ಪಕ್ಷದ ಅಧ್ಯಕ್ಷರ ಒತ್ತಡದ ಕಾರಣ ನೀವು ಅಲ್ಲಿನ ಸಬ್–ಇನ್ಸ್‌ಪೆಕ್ಟರ್ ಅವರನ್ನು ವರ್ಗ ಮಾಡಿದಿರಿ ಅದೇ ಸಬ್–ಇನ್ಸ್‌ಪೆಕ್ಟರ್‌ನ್ನು ಪುನಃ ಅದೇ ಜಾಗಕ್ಕೆ ತರುವವರೆಗೆ ಕೊಲೆ ಮಾಡಿದವರನ್ನು ಹಿಡಿಯುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ ನೀವು ಅವರನ್ನು ಪುನಃ ಅದೇ ಜಾಗಕ್ಕೆ ವರ್ಗ ಮಾಡಿದಿರಿ. ಇಂಥದ್ದಕ್ಕೆಲ್ಲಾ ರಾಜಕೀಯ ಪುಡಾರಿಸ್ಥಾನದಲ್ಲಿರುವಂತಹ ರೀ–ಆಕ್ಷನರಿ ಫೋರ್ಸಸ್ ಕಾರಣ ಎಂದು ನಾನು ಹೇಳುತ್ತಿರುವುದು.

Sri R. L. Jalappa,—Sir, it was like Anthony's speech without any effect. Sir, I am sorry I am totally denaying the allegations he is making about our Government in transferring that Sub-Inspector. That is just a wild charge. It is like beating with the butt of the gun. He is trying to shut my mouth I don't agree with this, Sir.

ಶ್ರೀ ಧರ್ಮಸಿಂಗ್.—ನಿಮ್ಮ ಪಕ್ಷದ ಪಂಚಾಯಿತಿ ಸದಸ್ಯರೊಬ್ಬರು ಹೊಡೆದಿದ್ದಾರೆ.

ಅಧ್ಯಕ್ಷರು.—ಅವರು ಮಾತನಾಡಲು ತಾವು ಅವಕಾಶ ಕೊಡಿ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಆದರೂ ಈ ರೀತಿ ನೀವು ಪದೇಪದೇ ಎದ್ದುನಿಂತು ಮಾತನಾಡಿದರೆ ಹೇಗೆ ?

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಮಂತ್ರಿಗಳು ಸೀರಿಯಸ್ ಆಗಿ ಉತ್ತರ ಕೊಡುತ್ತಿದ್ದರೆ ಇವರು ಹುಡುಗಾಟಿಕೆ ಮಾಡುತ್ತಿದ್ದಾರೆ ?

ಶ್ರೀ ಧರ್ಮಸಿಂಗ್.—ಇದು ಬಹಳ ತುಂಬಾ ಆಯಿತು. ಏನೋ ಒಂದು ರೀತಿಯಲ್ಲಿ ಅವರನ್ನು ಸಾಕಿದ್ದೀರಿ. ಅದಕ್ಕಾಗಿ ಅವರು ಏನೋ ಒಂದು ರೀತಿಯಲ್ಲಿ ಹೀಗೆಲ್ಲಾ ಮಾತನಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಧ್ಯದಲ್ಲಿ ಯಾರೂ ಸಹ ಮಾತನಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ಈ ಮಾತನ್ನು ನೀವು ಅವರಿಗೆ ಹೇಳಿ.

ಅಧ್ಯಕ್ಷರು.—ನಾನು ಎರಡು ಕಡೆಯವರಿಗೂ ಹೇಳುತ್ತೇನೆ. ಯಾರೂ ಸಹ ಮಧ್ಯೆಮಧ್ಯೆ ಮಾತನಾಡಬಾರದು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಬೇರೆ ರಾಜ್ಯಗಳ ಅಂಕಿಅಂಶಗಳನ್ನು ಮಂತ್ರಿ ನಮ್ಮ ರಾಜ್ಯದ ಅಂಕಿಅಂಶಗಳನ್ನು ಕೇವಲ ರಾಜಕೀಯಕ್ಕಾಗಿ ಕೊಡುತ್ತಿಲ್ಲ. ಇರತಕ್ಕಂಥ ವಾಸ್ತವಾಂಶಗಳನ್ನು ತಿಳಿಸಲು ವಿವರಗಳನ್ನು ಕೊಡುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಬೇರೆ ರಾಜ್ಯಗಳ ಅಂಕಿಅಂಶಗಳನ್ನು ಕೊಡಬೇಡಿ. ಏಕೆಂದರೆ, you will be committing a breach of privilege of the Hon'ble Chief Minister because it is his prerogative.

ಶ್ರೀ ಆರ್. ಎಲ್. ಜಾಲಪ್ಪ.—ಈಗಿನ ನಮ್ಮ ಸಮಾಜ ಯಾವ ರೀತಿ ವರ್ತನೆ ಮಾಡುತ್ತಿದೆ, ಇದು ಯಾವ ರೀತಿ ಪರಿವರ್ತನೆ ಆಗಬೇಕು ಎಂಬ ಕಾರಣಕ್ಕಾಗಿ ನಾನು ಈ ವಿವರಗಳನ್ನು ಕೊಡುತ್ತಿದ್ದೇನೆಯೆ ಹೊರತು, ನಮ್ಮ ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗಿ ಅಲ್ಲ. ಇಂತಹ ಅವಮಾನವೀಯ ಕೆಲಸ ಮಾಡಿದವರನ್ನು ನಾವು ರಕ್ಷಣೆ ಮಾಡುವುದಿಲ್ಲ, ನಮಗೂ ಆತ್ಮಾಭಿಮಾನವಿದೆ. ಇಂತಹ ಕೆಲಸವನ್ನು ಪ್ರಪಂಚದಲ್ಲಿ ಯಾರೂ ಸಹ ಒಪ್ಪುವುದಿಲ್ಲ. ಇಂತಹ ಅನ್ಯಾಯಗಳನ್ನು ತಡೆಗಟ್ಟಲು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆಂಬುದನ್ನು ಹೇಳುತ್ತೇನೆ. ಮರ್ಡರ್‌ಗಳ ಬಗ್ಗೆ ಹೇಳಬೇಕೆಂದರೆ ೧೯೮೧ರಲ್ಲಿ ೩೧, ೧೯೮೨ರಲ್ಲಿ ೨೨, ೧೯೮೩ರಲ್ಲಿ ೧೭, ೧೯೮೪ರಲ್ಲಿ ೧೮, ೧೯೮೫ರಲ್ಲಿ ೨೧, ೧೯೮೬ರಲ್ಲಿ ೯, ಹಾಗೂ ಸೆಪ್ಟೆಂಬರ್ ೧೯೮೭ರವರೆ...

(ಗೊಂದಲ)

ಅಧ್ಯಕ್ಷರು.—ಉತ್ತರ ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ ತಾವು ಕುಳಿತುಕೊಳ್ಳಿ

ಶ್ರೀ ಆರ್. ಎಲ್. ಜಾಲಪ್ಪ.—ವಯಲೆನ್ಸ್ ರಿಸಲ್ಟಿಂಗ್ ಇನ್ ದಿ ಗ್ರೀವಿಯಸ್ ಹರ್ಟ್: ೧೯೮೧ರಲ್ಲಿ ೯, ೧೯೮೨ರಲ್ಲಿ ೬, ೧೯೮೩ರಲ್ಲಿ ೬, ೧೯೮೪ರಲ್ಲಿ ೩, ೧೯೮೫ರಲ್ಲಿ ೭, ೧೯೮೬ರಲ್ಲಿ ೧, ೧೯೮೭ರಲ್ಲಿ ಒಂದೂ ಆಗಿಲ್ಲ. ಆಮೇಲೆ ಮಾನಭಂಗ ಅಥವಾ ಅತ್ಯಾಚಾರ ; ೧೯೮೧ರಲ್ಲಿ ೭, ೧೯೮೨ರಲ್ಲಿ ೭, ೧೯೮೩ರಲ್ಲಿ ೯, ೧೯೮೪ರಲ್ಲಿ ೧೪, ೧೯೮೫ರಲ್ಲಿ ೧೧, ೧೯೮೬ರಲ್ಲಿ ೮, ೧೯೮೭ರಲ್ಲಿ ೮.

ಶ್ರೀ ಎಸ್. ಬಂಗಾರಪ್ಪ.—ದರೋಡೆ ಕೊಲೆಗಳು ಎಷ್ಟಾಗಿದೆ ಎನ್ನುವುದನ್ನು ಹೇಳಿ ?

ಶ್ರೀ ಆರ್. ಎಲ್. ಜಾಲಪ್ಪ.—ಅದನ್ನು ಹೇಳುತ್ತೇನೆ,

ಶ್ರೀ ಎಸ್. ಬಂಗಾರಪ್ಪ.—ಈಗ ನಾವು ಮಾಹಿತಿ ಕೇಳಿದ್ದಕ್ಕೆ ಬಲಗಡೆ ಜೇಬಿನಿಂದ ಸ್ಟ್ಯಾಟಿಸ್ಟಿಕ್ಸ್ ತೆಗೆದಿರಿ. ದರೋಡೆ, ಕೊಲೆಗಳು ಎಷ್ಟಾಗಿದೆ ಎನ್ನುವುದನ್ನು ಹೇಳಿ. ಆಮೇಲೆ ರೇಪ್ ಸ್ಟ್ಯಾಟಿಸ್ಟಿಕ್ಸ್ ಕೊಡಿ. ಎಲ್ಲೆಲ್ಲಿ, ಯಾವ ಯಾವ ಪಾಕೆಟ್‌ನಲ್ಲಿ ಸ್ಟ್ಯಾಟಿಸ್ಟಿಕ್ಸನ್ನು ಇಟ್ಟುಕೊಂಡಿದ್ದೀರಿ ಅಷ್ಟನ್ನೂ ತೆಗೆದು ಸಂಪೂರ್ಣವಾಗಿ ಇಟ್ಟರೆ ಅನುಕೂಲವಾಗುತ್ತದೆ.

ಶ್ರೀ ಆರ್. ಎಲ್, ಜಾಲಪ್ಪ.–ಸಧ್ಯಕ್ಕೆ ರೇಪ್ ಸ್ಟ್ಯಾಟಿಸ್ಟಿಕ್ಸನ್ನು ಅವರಿಗೆ ರಿಸರ್ವ್ ಮಾಡಿ ಇತರ ವಿಚಾರವನ್ನು ಹೇಳುತ್ತೇನೆ. ಆಮೇಲೆ ಅಂಡರ್ ಸೆಕ್ಷನ್ ೪೩೬ ಐ.ಪಿ,ಸಿ ;–೧೯೮೨ರಲ್ಲಿ ೧೩, ೧೯೮೩ರಲ್ಲಿ ೫, ೧೯೮೪ರಲ್ಲಿ ೯, ೧೯೮೫ರಲ್ಲಿ ೧೪, ೧೯೮೬ರಲ್ಲಿ ೬, ೧೯೮೭ರಲ್ಲಿ ೧೭. ಭಾರಿ ಅನಾಹುತ–೧೯೮೧ರಲ್ಲಿ ೩೮, ೧೯೮೨ರಲ್ಲಿ ೩೭, ೧೯೮೩ರಲ್ಲಿ ೪, ೧೯೮೪ರಲ್ಲಿ ೧೦, ೧೯೮೫ರಲ್ಲಿ ೩೫, ೧೯೮೬ರಲ್ಲಿ ೧೦, ೧೯೮೭ರಲ್ಲಿ ೧೦. ಆಮೇಲೆ ಹರಿಜನರ ಮೇಲೆ ಆಗಿರತಕ್ಕಂಥಾ ಅಟ್ರೊಸಿಟೀಸ್. ೧೯೮೧ರಲ್ಲಿ ೪೧೬, ೧೯೮೨ರಲ್ಲಿ ೩೯೯, ೧೯೮೩ರಲ್ಲಿ ೧೯೬, ೧೯೮೪ರಲ್ಲಿ ೧೭೧, ೧೯೮೫ರಲ್ಲಿ ೨೯೫, ೧೯೮೬ರಲ್ಲಿ ೨೨೯. ೧೯೮೭ರಲ್ಲಿ ೨೦೬. ನಾನು ಈಗಾಗಲೇ ಹೇಳಿದ್ದೇನೆ, ಈ ಅಂಕಿಅಂಶಗಳನ್ನು ಕೊಡುತ್ತಿರುವುದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅಲ್ಲ ಎಂದು. ಈಗ ಇಡೀ ಭಾರತ ರಾಷ್ಟ್ರದಲ್ಲಿ ಸಮಾಜದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳುತ್ತಾ ಇದ್ದೇನೆ ದಿನಾಂಕ ೨೧–೧೧–೧೯೮೭ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ರೀತಿ ಬಂದಿದೆ.

"UP tops list in attocities :

"There were 15,403 registered cases of atrocities on scheduled castes and scheduled tribes during 1986. Uttar Pradesh with 4697 cases tops the list followed by Madhya Pradesh with 4421 and Bihar with 1633 cases, Minister of State for Welfare Rajendra Kumari Bajpai said in the Rajya Sabha today."

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ನೀವು ಕೇಳಿಸಿಕೊಳ್ಳದೇ ಹೋದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಆಡಳಿತದಲ್ಲಿದ್ದಾಗ ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ಎಷ್ಟೆಷ್ಟು ಆಯಿತ ಎನ್ನುವುದನ್ನು ಹೇಳಿ.

ಶ್ರೀ ಆರ್. ಎಲ್ ಜಾಲಪ್ಪ.—ನೀವು ಅದನ್ನು ನಾಳೆ ತಂದು ಹೇಳಿ. ಆಮೇಲೆ ಹಿಂದೂಸ್ಥಾನ್ ಟೈಮ್ಸ್‌ನಲ್ಲಿ ಬಂದಿದೆ ಬಿಹಾರ್‌ನಲ್ಲಿ ಒಂದು ಕಡೆ ಒಂದು ಸ್ಟೇಷನ್‌ನಲ್ಲಿ ೨೦ ಜನರನ್ನು ಸಾಯಿಸಿದ್ದಾರೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನಾನು ಇದನ್ನು ಏಕೆ ಹೇಳುತ್ತಾ ಇದ್ದೇನೆ ಎಂದರೆ, ನಮ್ಮ ಹಿಂದೂ ಸಮಾಜದ ವೀಕ್ನೆಸ್ ಏನು ಎನ್ನುವುದಕ್ಕೆ ಹೇಳುತ್ತಾ ಇದ್ದೇನೆ. ನಾನು ಮೊದಲೇ ಹೇಳಿದ್ದೇನೆ. I am not defending, let them have some Patience. ಈ ರೀತಿ ಆದರೆ ಏನು ಪ್ರಯೋಜನ ?

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಈ ಜನರನ್ನು ಉದ್ಧಾರ ಮಾಡಿದ್ದೀರಾ? ಅವರ ಜೊತೆಗಿದ್ದುಕೊಂಡು ಅವರನ್ನೇ ಕೊಂದು ಹಾಕಿದಿರಿ.

ಶ್ರೀ ಆರ್. ಎಲ್. ಜಾಲಪ್ಪ.—ಇದು ಬಹಳ ಗಂಭೀರವಾದ ವಿಷಯ. ಸುಮ್ಮನೆ ಮಾತನಾಡ ಬೇಡಿ. ದಯಮಾಡಿ ಸುಮ್ಮನಿರಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದನ್ನು ಕಟ್ಟಿಕೊಂಡು ನಮಗೇನು? ನಮ್ಮ ರಾಜ್ಯದ ವಿಚಾರ ಮಾತನಾಡಿ. ಇನ್ನೂ ಪ್ರಾಸಂಗಿಕವಾಗಿ ಅದನ್ನು ಹೇಳಿದರೆ ಪರವಾಯಿಲ್ಲ. ಅದನ್ನು ಬಿಟ್ಟು, ಅದನ್ನೇ ಮೈನ್ ಡಿಫೆನ್ಸ್ ಮಾಡಿಕೊಂಡರೆ ಹೇಗೆ? ಒಂದೊಂದು ರಾಜ್ಯದಲ್ಲಿಯೂ ಪ್ರತ್ಯೇಕವಾದ ಆಡಳಿತ ಇದೆ. ಆ ರಾಜ್ಯಗಳೆಲ್ಲವೂ ಭಾರತದಲ್ಲಿದ್ದರೂ. ಬಿಹಾರವನ್ನು ಕರ್ನಾಟಕಕ್ಕೆ ಹೋಲಿಸುತ್ತೀರಾ ಕರ್ನಾಟಕವನ್ನು ಬಿಹಾರ್ ರಾಜ್ಯವನ್ನಾಗಿ ಮಾಡಬೇಕೆಂದು ಹೊರಟಿದ್ದೀರಾ?

ಶ್ರೀ ಆರ್. ಎಲ್. ಜಾಲಪ್ಪ.—ಕರ್ನಾಟಕ ರಷ್ಯಾದಲ್ಲಿಲ್ಲ. ಕರ್ನಾಟಕ ಇರುವುದೇ ಭಾರತದಲ್ಲಿ, ಭಾರತದ ಇತರೆ ಯಾವುದೇ ಭಾಗದಲ್ಲಿ ಆದಂತದ್ದು ಕರ್ನಾಟಕದಲ್ಲೂ ಆಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್.—ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹ ಧೈರ್ಯ ನಿಮಗಿದೆಯೇ ಕರ್ನಾಟಕವನ್ನು ಯು. ಪಿ. ಬಿಹಾರ್ ರಾಜ್ಯಕ್ಕೆ ಹೋಲಿಕೆ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ನನ್ನ ಧೈರ್ಯದ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಅದನ್ನು ಹೇಗೆ ಪ್ರೂವ್ ಮಾಡಲಿ. I cannot oblige him I am sorry.

ಶ್ರೀ ಧರ್ಮಸಿಂಗ್.—ಅದರ ಬಗ್ಗೆ ಅಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಕಳಕಳಿ ಇದ್ದರೆ ಈ ರೀತಿ ಆಗುತ್ತಿರಲಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಮಾತನಾಡುತ್ತಾ ಇತ್ತೀಚೆಗೆ ನಡೆದ ದೌರ್ಜನ್ಯಗಳು ಇದಕ್ಕೆ ಪೋಲೀಸ್‌ನವರ ಕುಮ್ಮಕ್ಕು ಇದಕ್ಕೆಲ್ಲಾ ಅವರು ಸಹಿ ಮಾಡಿಕೊಟ್ಟಿದ್ದಾರೆ. ಪೋಲೀಸ್‌ನವರು ಕುಮ್ಮಕ್ಕು ಕೊಟ್ಟು ಅಫೆನ್ಸ್ ಮಾಡಿಸುವ ಕಾಲ ಈಗ ಹೋಗಿದೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ವಿಶ್ವಾಸ ಇದೆಯೇ?

ಶ್ರೀ ಆರ್ ಎಲ್ ಜಾಲಪ್ಪ.—ಹೌದು ನನಗೆ ವಿಶ್ವಾಸ ಇದೆ. ಪೋಲೀಸ್‌ನವರು ಪೂರ್ತಿ ಕೆಟ್ಟು ಹೋಗಿದ್ದರೆ ನಾನು ನೀವು ಇಬ್ಬರೂ ಇಲ್ಲಿರುವುದಕ್ಕಾಗುತ್ತಿರಲಿಲ್ಲ.

ಶ್ರೀ ಎಸ್ ಬಂಗಾರಪ್ಪ.—ನಮ್ಮನ್ನು ಮುಗಿಸಿಬಿಡುತ್ತಿದ್ದರೋ.

ಶ್ರೀ ಆರ್. ಎಲ್. ಜಾಲಪ್ಪ.—ಇರಬಹುದು. ಜನ ಬೇರೆಯವರನ್ನು ಮುಗಿಸಿಬಿಡುತ್ತಿದ್ದರು. ನಮ್ಮನ್ನು ಈ ರೀತಿ ಹುಚ್ಚಾಟ ಆಡುವುದಕ್ಕೆ ಎಲ್ಲಿ ಬಿಡುತ್ತಿದ್ದರು? ಜನ ಈ ರೀತಿ ಹುಚ್ಚಾಟ ಆಡುವುದಕ್ಕೆ ಬಿಡುತ್ತಿರಲಿಲ್ಲ.

ಶ್ರೀ ಆರ್. ಎನ್. ನಾಯಕ್.—ಏನು ಮಾಡುತ್ತಿದ್ದರು?

ಶ್ರೀ. ಆರ್. ಎಲ್. ಜಾಲಪ್ಪ.—ಕುಳಿತುಕೊಳ್ಳಿ ನಾಯಕರೇ ಇಲ್ಲಿ ಕೂಗಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಬೆಂಡಿಗೇರಿ ಕುಮ್ಮನಸಿರಸ್ಗಿ ಮತ್ತು ಬಿದರೊಳ್ಳಿ ಈ ಹಳ್ಳಿಗಳಲ್ಲಿ ಏನು ಆಗಿದೆ ಅದೇ ರೀತಿ ಬೇರೆ ಕಡೆಯೂ ಆಗಿದ್ದಷ್ಟು ನನ್ನ ಮಾನ್ಯ ಮಿತ್ರರು ಹೇಳಿದ್ದಾರೆ. ಆಗಿಲ್ಲ ಎಂದು ಹೇಳುವುದಕ್ಕೆ ನಾನು ನಿಂತಿಲ್ಲ. ಆದರೆ ಮಾನ್ಯ ಡಾ. ತಿಪ್ಪೇಸ್ವಾಮಿಯವರು ಮತ್ತೊಂದು ವರದಿಯನ್ನು ಕೊಟ್ಟಿದ್ದಾರೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಎಲ್ಲಾ ಮಾನ್ಯ ಸದಸ್ಯರುಗಳೂ ಕೇಳಿದ್ದಾರೆ. ಅದೇ ಬಹಳ ಮುಖ್ಯ. ಅದರ ಬಗ್ಗೆ ಮಾನ್ಯ ಸದಸ್ಯರುಗಳ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಮೊದಲನೇಯ ಕೇಸಿನಲ್ಲಿ ಕುಮ್ಮನ ಸಿರಸಿಗಿಯ ವಿಚಾರದಲ್ಲಿ ಪುಟ ೬ರಲ್ಲಿ ಸಮಿತಿಯವರು ಕೆಲವೊಂದು ಸಲಹೆಗಳನ್ನು ಶಿಫಾರಸ್ಸು ಮಾಡಿದ್ದಾರೆ. ಅದು ಈ ರೀತಿ ಇದೆ.

> "ಮೃತಳಾದ ಶ್ರೀಮತಿ ಬುದ್ದವ್ವಳ ಗಂಡ ಶ್ರೀ ಸಿದ್ದಪ್ಪನು ಸಾಗುವಳಿ ಮಾಡುತ್ತಿರುವ ಜಮೀನಿನ ವಿವಾದವನ್ನು ಬಗೆಹರಿಸಿ ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ."

ಇದರ ಬಗ್ಗೆ ಬೇರೆ ಜಮೀನು ಕೊಡಲಿಕ್ಕೆ ಈಗ ಪ್ರಯತ್ನ ಮಾಡಬಹುದು. ಈಗ ತೊಂದರೆ ಏನಾಗಿದೆ ಎಂದರೆ ನಮ್ಮ ಸರ್ಕಾರ ಬರುವುದಕ್ಕೆ ಮೊದಲು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಬೇರೆಯವರ ಪರವಾಗಿ ಆಗಿದೆ. ಆದ್ದರಿಂದ. ಈಗ ಹೇಗೆ ಮತ್ತೆ ಅದನ್ನು ರೀ ಓಪನ್ ಮಾಡಲಿಕ್ಕೆ ಆಗುತ್ತದೆ, ಈಗ ಅವರಿಗೆ ರೀಹೆಬಿಲಿಟೇಟ್ ಮಾಡಲಿಕ್ಕೆ We can think of giving them some lands. we are at it.

ಇನ್ನು ಎರಡನೆಯದು ಅಂದರೆ,

> "ಮೃತಳಾದ ಶ್ರೀಮತಿ ಬುದ್ದವ್ವಳ ಕುಟುಂಬಕ್ಕೆ ಹೆಚ್ಚಿನ ಧನ ಸಹಾಯ ಹಾಗೂ ಇತರ ಸವಲತ್ತುಗಳನ್ನು ಸರ್ಕಾರದ ವತಿಯಿಂದ ಮಂಜೂರು ಮಾಡಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ."

ಈಗಾಗಲೇ ೧೦ ಸಾವಿರ ರೂಪಾಯಿಗಳನ್ನು ಅವಳ ಗಂಡನಿಗೆ ಕೊಟ್ಟಿದ್ದೇವೆ ಬೇರೆಯವರಿಗೂ ಸಹ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನೂ ಹೆಚ್ಚಿನ ಧನಸಹಾಯ ಮಾಡಬೇಕೆಂದು ಹೇಳಿದ್ದಾರೆ, ಅದರ ಬಗ್ಗೆಯೂ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಮೂರನೆಯದು ಅಂದರೆ,

> "ಶ್ರೀಮತಿ ಬುದ್ದವ್ವಳ ಕೊಲೆಯ ಪ್ರಕರಣಕ್ಕೆ ಕಾರಣರಾದ ಎಲ್ಲಾ ಆರೋಪಿಗಳನ್ನು ಬಂಧಿಸುವ ಕಾರ್ಯವನ್ನು ರಾಜ್ಯದ ಗುಪ್ತ ದಳಕ್ಕೆ ಒಪ್ಪಿಸಿ ಈ ಕಾರ್ಯವು ಜರೂರಾಗಿ ಇತ್ಯರ್ಥಗೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ." ಎಂದು ಹೇಳಿದ್ದಾರೆ.

ಇದರ ಬಗ್ಗೆ ಮಾತನಾಡುವಾಗ ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು. ಅವರು ಹೋಗಿ ಆಂಟಿಸಿಪೇಟರಿ ಬೇಲ್ ತಂದರು ಎಂದು ಹೇಳಿದರು. ಅವರು ತಂದಿಲ್ಲ ಅವರೇ ಹೋಗಿ ಸರೆಂಡರ್ ಆಗಿದ್ದಾರೆ. ಒಟ್ಟು ೨೭ ಜನರ ಮೇಲೆ ಕಂಪ್ಲೇಟ್ ಕೊಟ್ಟಿದ್ದರು. ಅದರ ಬಗ್ಗೆ ವೆರಿಫೈ ಮಾಡಿ ೮ಜನ ನಿಜವಾದ ಅಕ್ಯೂಸ್ಡ್ ಎಂದು ಕೇಸ್ ಹಾಕಿದ್ದೇವೆ, ೪ಜನ ಅರೆಸ್ಟ್ ಮಾಡಿದ್ದೇವೆ ಇವರು ೪ಜನ ಕೋರ್ಟ್ ಮುಂದೆ ಸರೆಂಡರ್ ಆಗಿ ಬಂದರು. ಲೀಡರ್ ಆಫ್ ದಿ ಗ್ರೂಪ್ ಮಹದೇವಪ್ಪ ಅರೆಸ್ಟೆಡ್ ಬೈದಿ ಪೋಲೀಸ್. ರೆಗ್ಯುಲರ್ ಪೋಲೀಸಿನವರೇ ಇವರನ್ನು ಅರೆಸ್ಟ್ ಮಾಡಿದ್ದಾರೆ. ನಾಲ್ಕು ಜನ ಕೋರ್ಟ್ ಮುಂದೆ ಸರೆಂಡರ್ ಆದರು ಈ ಸಮಯದಲ್ಲಿ ಒಂದು ವಿಷಯವನ್ನು ನಮ್ಮ ಸ್ನೇಹಿತರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಎಷ್ಟೋ ಕೇಸುಗಳಲ್ಲಿ ಆಂಟಿಸಿಪೇಟರಿ ಬೈಲ್

ತರುತ್ತಿದ್ದಾರೆ, ಮರ್ಡರ್ ಕೇಸಿನಲ್ಲಿ, ರೇಪ್ ಕೇಸಿನಲ್ಲಿ ಈ ತರಹ ಎಲ್ಲಾ ಕೇಸುಗಳಲ್ಲಿಯೂ ಆಂಟಿಸಿಪೇಟರಿ ಬೇಲ್ ತರುತ್ತಾರೆ ಅದಕ್ಕೆ ನಾವು ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ನಾನು ಕೂಡ ಈ ವಿಚಾರದ ಬಗ್ಗೆ ಕೇಂದ್ರದ ಗೃಹ ಸಚಿವರಿಗೆ ಕಾಗದ ಬರೆಯುತ್ತಿದ್ದೇನೆ. ತಾವು ಸಹ ತಮ್ಮ ಶಿಫಾರಸು ಉಪಯೋಗ ಮಾಡಿ ಹೇಳಬೇಕು. ಏಕೆಂದರೆ, ಈಗ ಇರತಕ್ಕ ಪ್ರಕಾರ ಕೋರ್ಟಿನ ಮುಖಾಂತರ ಆಂಟಿಸಿಪೇಟರಿ ಬೇಲ್ ತಂದು ತಪ್ಪಿಸಿಕೊಳ್ಳಲಿಕ್ಕೆ ಅವಕಾಶ ಇದೆ. ಮುಂದೆ ಆಂಟಿಸಿಪೇಟರಿ ಬೇಲ್ ಕೊಡದ ಹಾಗೆ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಿ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಇವರು ಮನಸು ಮಾಡಿದ್ದರೆ ಹಿಡಿಯಬಹುದಾಗಿತ್ತು ಎಂದು ಹೇಳಿದರು, ನಿಮ್ಮ ಹತ್ತಿರ ಬೈಯಿಸಿಕೊಂಡು ಅವರನ್ನು ಬಿಡಬೇಕೆನ್ನುವಂತಾದ್ದು ಏನಿದೆ ಸ್ವಾಮಿ? ನಾವೇನು ಅವರಿಂದ ದುಡ್ಡು ತೆಗೆದುಕೊಂಡಿದ್ದೇವೆಯೋ? ಅವನ ಮಗನಿಗೆ ಅರೆಸ್ಟ್ ಮಾಡುವಾಗ, ಅವನಿಗೆ ಬಿಡುವಂತಾದ್ದು ಏನು ಇರುತ್ತದೆ, ಅವನು ಸಿಕ್ಕಲಿಲ್ಲ ಎಂದರೆ ನಾವು ಏನು ಮಾಡಬೇಕು. ಲಲಿತ ಮಹಾನ್ ಮರ್ಡರ್ ಆಯಿತು. ಒಂದೆರಡು ವರ್ಷಗಳ ಮೇಲೆ ಅವರನ್ನು ಹಿಡಿದರು. ನಾನು ಡೆಲ್ಲಿಯ ಪೋಲೀಸ್‌ಗೆ ಯೂಸ್‌ಲೆಸ್ ಪೋಲೀಸ್ ಎಂದು ಹೇಳಲಿಕ್ಕೆ ಆಗುತ್ತದೆಯೋ?

ಶ್ರೀ ಧರ್ಮಸಿಂಗ್.—ಅದು ಬೇರೆ,

ಶ್ರೀ ಆರ್, ಎಲ್. ಜಾಲಪ್ಪ.—ಪೋಲೀಸರಿಗಿಂತಲೂ, ತಪ್ಪಿತಸ್ಥರು ಸೂಕ್ಷ್ಮವಾಗಿ, ಬುದ್ಧಿವಂತರಾಗಿ ಇರಬಹುದು. ನಾವು ಬೇಕಾಗಿ ಬಿಟ್ಟರೆ ನೀವು ನಮ್ಮ ಮೇಲೆ ಅಕ್ಯೂಸ್ ಮಾಡಿ. ಪುರಾವೆ ಇದ್ದರೆ ಹೇಳಿ We are prepared to face tl e charge. ನಾನು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. We have tried our best to nab them. It was not possible. ಇನ್ನೊಂದು ಉದಾಹರಣೆ ಕೊಡುತ್ತೇನೆ. ಗೌರಿಬಿದನೂರು ಒಬ್ಬ ಅಡ್ವೊಕೇಟ್ ಮೇಲೆ ರಾಜಕಾರಣ ಕ್ಕೋಸ್ಕರ ಒಂದು ಪಂಚಾಯಿತಿ ಕಾಂಗ್ರೆಸ್ಸಿಗೆ ಹೋಗಬೇಕಾಗಿತ್ತು. ಅಲ್ಲಿ ಏನೇನೋ ಮಾಡುವಂತಾದ್ದು ನಡೆಯಿತು. ಕಡೆಗೆ ಅಲ್ಲಿ ಜನತಾದ್ದು ಪಂಚಾಯಿತಿ ಬಂದುಬಿಟ್ಟಿತು, ಅದು ಏನೇನು ಆಗುತ್ತದೆ ಎನ್ನುವುದು ನಮಗೂ ಗೊತ್ತಿದೆ. ನಿಮಗೂ ಗೊತ್ತಿದೆ. ನಾವು, ನೀವು ಜೊತೆಯಲ್ಲೇ ಇದ್ದವರು ನಮಗೆ ಗೊತ್ತಿಲ್ಲವೇ. ನಮ್ಮ ಕಸಬು ನಿಮಗೆ ಗೊತ್ತು. ನಿಮ್ಮ ಕಸಬು ನಮಗೆ ಗೊತ್ತು ಈಗ ಆ ವಿಚಾರ ಬೇಡ.

ಈ ಇನ್ನೂರು ಜನರು ಸೇರಿಕೊಂಡು ರಾತ್ರಿ ಸುಮಾರು ೭.೩೦ ಗಂಟೆಗೆ ಏನು ಮಾಡಿದರು ಮಾಡಿದರು ಎಂದರೆ, ಅವರ ತಂದೆಗೆ ಕಣ್ಣು ಆಪರೇಷನ್ ಆಗಿದೆ. ಅವರ ತಾಯಿ ಮದುವೆಗೆ ಬಂದಿದ್ದಾರೆ, ಅವರ ಹೆಂಡತಿ ತುಂಬು ಗರ್ಭಿಣಿ, ಸ್ಕೂಟರ್‌ನಲ್ಲಿ ಹೋಗುವವರನ್ನು ನಿಲ್ಲಿಸಿ ಬಕೆಟ್‌ನಲ್ಲಿ ಆಸಿಡ್ ತಂದು ಹೊಯ್ದಿದ್ದಾರೆ. ನಾವು ಅವರನ್ನು ಹಿಡಿಯುವುದಕ್ಕೆ ಆಗಲಿಲ್ಲ. ಅವರು ನಿಮ್ಮ ಪಕ್ಷದವರು. ಅಂದರೆ ನಾನು ಅವರಿಗೆ ಸಪೋರ್ಟ್ ಮಾಡುತ್ತಿದ್ದೇನೆಯೆ ? ನಾನು ಹೋಂ ಮಿನಿಸ್ಟರ್ ಆಗಿದ್ದೇನೆ. ಅದು ನನ್ನ ವಿ. ಪಿ. ಅವರು ಸಿಕ್ಕಲಿಲ್ಲ. ಅವರು ತಪ್ಪಿಸಿಕೊಂಡು ಓಡಿಹೋದರು. ಅವರು ಸಿಕ್ಕಲಿಲ್ಲ ಎಂದರೆ ಅದು ವೀಕ್‌ನೆಸ್, ನೀವು ಬೇಕಾಗಿಯೇ ಅವರನ್ನು ಹಿಡಿಯಲಿಲ್ಲ ಎಂದು ತಾವು ಹೇಳುವುದು ಸರಿಯಲ್ಲ, ಅವರಿಗೆ ಯಾರೋ ರಕ್ಷಣೆ ಕೊಡುತ್ತಿದ್ದಾರೆ......

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ನೀವು ಅವರನ್ನು ಹಿಡಿಯಬೇಕು. ಅವರು ಸಿಕ್ಕಲಿಲ್ಲ ಎಂದರೆ ಅವರ ಸಂಬಂಧೀಕರು ಯಾರಾದರೂ ಇದ್ದಾರೇನೋ ನೋಡಿ. ಮಾನ್ಯ ಜಾಲಪ್ಪನವರೇ ನಿಮ್ಮ ಕ್ಷೇತ್ರದಲ್ಲಿ ನೀವೇ ಅವರನ್ನು ಹಿಡಿಯಲಿಕ್ಕೆ ಆಗಲಿಲ್ಲ ಎಂದರೆ ಇನ್ನು ಯಾರ ಕ್ಷೇತ್ರದಲ್ಲಿ ಅವರನ್ನು ಹಿಡಿಯಬೇಕು ಹೇಳಿ.

ಶ್ರೀ ಆರ್, ಎಲ್, ಜಾಲಪ್ಪ.—ಇಂಥವರು ನಮ್ಮ ಕ್ಷೇತ್ರದಲ್ಲೂ ಇದ್ದಾರೆ, ನಿಮ್ಮ ಕ್ಷೇತ್ರದಲ್ಲೂ ಇದ್ದಾರೆ. ಆದರೆ ವಿಧಿಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಕೈಯಲ್ಲಿ ಅವರನ್ನು ಹಿಡಿಯುವುದಕ್ಕಾಗದಿದ್ದರೆ ಅಧಿಕಾರವನ್ನು ಬಿಟ್ಟು ಹೋಗಿ.

ಶ್ರೀ ಆರ್. ಎಲ್. ಜಾಲಪ್ಪ.—ದಯವಿಟ್ಟು ಕ್ಷಮಿಸಿ, ಇಲ್ಲಿ ಯಾರೂ ಪರ್ಮನೆಂಟ್ ಆಗಿರಲಿಲ್ಲ. ಮಂತ್ರಿಗಳಾಗಿ ನೀವೂ ಕೂಡ ಇಲ್ಲಿ ಕೆಲವು ದಿವಸಮಾತ್ರ ಇದ್ದಿರಿ. ಮುಂದೆ ನೀವು ಮತ್ತೆ ಬರುವ

ಭಾನ್ಸೂ ಇಲ್ಲ. ಅಶೋಕ ಚಕ್ರವರ್ತಿಯಂತಹವನೇ ಹೋದ. ಅಂದಮೇಲೆ ಇನ್ನು ನಮ್ಮ, ನಿಮ್ಮದು ಯಾವುದು ? ಎಲ್ಲರೂ ಒಂದಲ್ಲೊಂದು ದಿವಸ ಹೋಗಲೇಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಜಾಲಪ್ಪನವರೇ, ವರದಿಯ ವಿಚಾರದಲ್ಲಿ ಹೇಳುವುದಾದರೆ ೨೭ ಜನರ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದರಲ್ಲಿ ೮ ಜನ ಮುಖ್ಯ ಅಪರಾಧಿಗಳು. ನಾವು ಓದಿದ ಪ್ರಕಾರ ೮ ಜನರ ಕಂಪ್ಲೇಂಟ್‌ನ್ನು ಸಿ.ಓ.ಡಿ.ಗೆ ಕಳುಹಿಸಿಕೊಡಬೇಕೆಂಬ ರೆಕಮೆಂಡೇಷನ್ ಅದರಲ್ಲಿದೆ ಅದನ್ನು ಸಿ. ಓ. ಡಿ. ಗೆ ಕಳುಹಿಸಿಕೊಡುವ ಬಗ್ಗೆ ಏನು ಕ್ರಮವನ್ನು ಹಾಕಿಕೊಂಡಿದ್ದೀರಿ ? ಉಳಿದವರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡಿ ,ನಂತರ they have said there are only 8 accused. ೮ ಜನರು ಮುಖ್ಯ ಅಪರಾಧಿಗಳೆಂದು ಅವರ ಮೇಲೆ ಕೇಸು ಫೈಲು ಮಾಡಿದೆ: ಇದರಲ್ಲಿ ನಿಮ್ಮಗೆ ಏನಾದರೂ ಅನುಮಾನವಿದ್ದರೆ ಉಳಿದ ೧೯ ಜನರ ಮೇಲೂ ಛಾರ್ಜ್‌ಷೀಟ್ ಹಾಕಬೇಕೆಂದರೆ ಹಾಕುತ್ತೇವೆ. Yes, I am prepared to refer to the C. O. D.

ಶ್ರೀ ಎಸ್. ಬಂಗಾರಪ್ಪ.—ಸಮಿತಿಯ ವರದಿಯ ಬಗ್ಗೆ ನೀವು ಸಿ. ಓ. ಡಿ. ಗೆ ಕಳುಹಿಸುವ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಆಕ್ಚುಯಲ್ ಆಗಿ ಕೇಸ್ ಇರತಕ್ಕುದ್ದು ೮ ಜನರಮೇಲೆ. ಆ ೮ ಜನರನ್ನೂ ಅರೆಸ್ಟ್ ಮಾಡಿದ್ದೇವೆಂದು ನಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ೮ ಜನರ ಮೇಲಾದರೂ ಛಾರ್ಜ್‌ಷೀಟ್ ಹಾಕಿ ಶಿಕ್ಷೆ ಯನ್ನು ಕೊಡಿ.

ಶ್ರೀ ಆರ್. ಎಲ್. ಜಾಲಪ್ಪ.—ಈ ಕಮಿಟಿಯವರು ಹೋಗುವುದಕ್ಕೆ ಮುಂಚಿತವಾಗಿಯೇ ಅಂದರೆ ನವೆಂಬರ್‌ನಲ್ಲಿ ಆ ೮ ಜನರ ಮೇಲೆಯೂ ಛಾರ್ಜ್‌ಷೀಟ್ ಹಾಕಿದೆ. ಇನ್ನು ೨ನೇ ಸಮಿತಿಯವರ ಶಿಫಾರಸು ಎಂದರೆ ಅದು ಬಿದರೊಳ್ಳಿ ಗ್ರಾಮದ್ದು.

ಶ್ರೀ ಧರ್ಮಸಿಂಗ್.—ಇದರ ಜೊತೆಗೆ ಇನ್ನೂ ಯಾವುದನ್ನು ಸೇರಿರುತ್ತಿದ್ದೀರಿ. ಆರೋಪಿ ಗಳನ್ನೂ ಹಿಡಿದಿದ್ದೀರಿ. ಅಲ್ಲಿ ಏನಾಗಿದೆ ಎಂದರೆ, ಬೆಂಗಳೂರಿನಿಂದ ಮಾನ್ಯ ತಿಪ್ಪೇಸ್ವಾಮಿಯವರೂ ಬಂದರು. ಎಸ್. ಸಿ, ಎಸ್. ಟಿ. ಕಮಿಟಿಯವರೂ ಬಂದರು. ಎಲ್ಲರೂ ಬಂದು ನಮ್ಮನ್ನು ಏನು ಮಾಡಿದರು ? ನಾವು ಬೇಲ್ ತಗೆದುಕೊಂಡು ಬಂದೆವು ಎಂದು ಅವರು ಹೇಳುತ್ತಿದ್ದಾರೆ. ನಾನೂ ಕೂಡ ಅಲ್ಲಿಗೆ ಹೋಗಿದ್ದೇನೆ, ಆ ಗ್ರಾಮ ನನ್ನ ಕ್ಷೇತ್ರದಲ್ಲಿದೆ. ಅಲ್ಲಿಯ ಕೆಲವು ಜನರು ನನ್ನ ಹತ್ತಿರ ಬಂದಿದ್ದರು. ಅವರು ಹೇಳಿದ ಪ್ರಕಾರ ಕೆಲವರು ಇವರ ಹತ್ತಿರ ಬಂದು "ನಿಮ್ಮನ್ನು ಈ ಊರಿನಲ್ಲಿ ಇರುವುದಕ್ಕೆ ಬಿಡುವುದಿಲ್ಲ'' ಎಂದು ಬೆದರಿಕೆ ಹಾಕುತ್ತಿದ್ದಾರೆಂದು ಹೇಳಿದರು. ಆದ್ದರಿಂದ ಮೊದಲು ಇವರಿಗೆ ಸೂಕ್ತ ರಕ್ಷಣೆ ಕೊಡಬೇಕು. You have to give them full protection.

ಶ್ರೀ ಆರ್. ಎಲ್. ಜಾಲಪ್ಪ.—ನಾವು ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು ನೀವು ಆ ಊರಿಗೆ ೮ ದಿವಸಕ್ಕೊಂದುಸಾರಿಯಂತೆ ಹೋಗಿ ಬರಬೇಕೆಂದು ಹೇಳಿದ್ದೇವೆ. ಪೀಸ್ ಕಮಿಟಿಗಳನ್ನು ಮಾಡಿ ದ್ದೇವೆ.

ಶ್ರೀ ಧರ್ಮಸಿಂಗ್.—ಅಲ್ಲಿ ಮೊಟ್ಟಮೊದಲನೆಯದಾಗಿ ಹರಿಜನ ಮಹಿಳೆಯ ಕೊಲೆ ಆಗಿದೆ. ಅದು ೧೫ನೇ ತಾರೀಖು ಆಗಿದೆ......

ಶ್ರೀ ಆರ್. ಎಲ್. ಜಾಲಪ್ಪ.—ಅದಕ್ಕಾಗಿಯೇ ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು, ೮ ದಿವಸಕ್ಕೊಂದುಸಾರಿ ಆ ಊರಿಗೆ ಹೋಗಿರಬೇಕೆಂದು ಹೇಳಿದ್ದೇವೆ. ಇದಕ್ಕಿಂತ ಇನ್ನೇನು ಮಾಡುವುದ ಕ್ಕಾಗುತ್ತದೆ ? ಅಲ್ಲಿಗೆ ಒಬ್ಬ ಎಸ್. ಪಿ, ಯನ್ನೇ ಇಡುವುದಕ್ಕಾಗುತ್ತದೆಯೇ ? ನಾವು ಕ್ರಮ ತೆಗೆದ ಕೊಂಡಿದ್ದೇವೆ. ಈಗಾಗಲೇ ಬಿದರೋಳ್ಳಿಯ ಕೇಸು ಪ್ರಾರಂಭವಾಗಿದೆ ಅಲ್ಲಿಯವರಲ್ಲಿಯೇ ಅಲ್ಪಸ್ವಲ್ಪ ಅಸಮಾಧಾನ ಇತ್ತು. ಇದಕ್ಕೆ ಚಾಲನೆ ಕೊಟ್ಟಿದ್ದು ಎಂದು ಹೇಳಿದರೆ.

"......೧೯೮೭ನೇ ಆಗಸ್ಟ್ ೭ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಆ ಗ್ರಾಮದ ಲಿಂಗಾಯಿತರ ಜಾತಿಗೆ ಸೇರಿದ ಮಹದೇವ ಹಿರೇಕುಡಿಯವರ ಹೆಂಡತಿ ಶ್ರೀಮತಿ ಲಕ್ಷ್ಮೀಬಾಯಿ (೧೬ ವರ್ಷ) ಎಂಬ

ರುಹಿಳೆಯಂ ಊರ ಹೊರಗೆ ಬಹಿರ್ದೆಸೆಗೆ ಹೋದಾಗ ಅದೇ ಗ್ರಾಮದಲ್ಲಿರತಕ್ಕ ಹರಿಜನ ಯುವಕ ುಮಾರ ಸದಾಶಿವ ಲೇಕುಳಿ ದುರುದ್ದೇಶದಿಂದ ಆಕೆಯನ್ನು ಹಿಡಿದು ಎಳೆದನೆಂದೂ ಮತ್ತು ಈ ಷಯವನ್ನೂ ಆಕೆಯು ಮನೆಯಲ್ಲಿ ತಿಳಿಸದಂತೆ ಜೀವ ಬೆದರಿಕೆ ಹಾಕಿದ್ದಾನೆಂದೂ ತಿಳಿದುಬಂದಿದೆ.''

ಇದು ಇಲ್ಲಿಂದ ಪ್ರಾರಂಭವಾದು . ಸುಳ್ಳು ಇರಬಹುದು, ನಮ್ಮ ಸಮಿತಿಯವರೇ ಬರೆದಿರುವುದು ತಿಳಿದುಬಂದಿದೆ, ತಿಳಿದುಬಂದಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ನಡೆದುದು ಜನರು ಹೇಳಿದ್ದಾರೆ. ಮಗೆ ಗೊತ್ತಿಲ್ಲ, ಆರು ತಿಂಗಳ ಮೊದಲು ಮುಮ್ತಾಜ್ ಎಂಬ ಹೆಣ್ಣುಮಗಳನ್ನು ಕೆಣಕಿದ್ದ, ಮಾನ ಂಗ ಮಾಡಿದ್ದ ಈ ಎಲ್ಲಾ ವಿಷಯಗಳಿಂದ ದುರಾದುಷ್ಟವಶಾತ್ ಪ್ರಾರಂಭವಾಯಿತು. ಹುಡುಗ ವಿದ್ಯಾವಂತ ಇದರ ಬಗ್ಗೆ ನಮಗೆ ಸಮಿತಿಯವರು ಶಿಫಾರಸು ಮಾಡಿರುವುದೇನೆಂದರೆ ಈಗ ಸಮಾಧಾನ ವಾಗಿದೆ. ಪರಿಶಿಷ್ಟ ಜಾತಿಯವರು ಮತ್ತು ಸವರ್ಣೀಯವರು ಅಣ್ಣ ತಮ್ಮಂದಿರಂತೆ ಹೊಂದಾಣಿಕೆ ಯಿಂದ ಸಹಕರಿಸಿ ಜೀವನ ಸಾಗಿಸಬೇಕೆಂದು ಸಮಿತಿಯು ಶಿಫಾರಸು ಮಾಡಿತ್ತೆಂದು ಬರೆದಿರುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾವು ಪೀಸ್ ಕಮಿಟಿಯನ್ನು ಏರ್ಪಾಡು ಮಾಡಿ ಅವರವರಲ್ಲಿಯೇ ಮಿತ್ರಭಾವನೆ ಇರಲೆಂದು ಹೇಳಿದ್ದಾರೆ. ಈಗ ಸರಿಯಾಗಿ ನಡೆಯುತ್ತಿದೆ. ಎರಡನೆಯದಾಗಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಯಾವುದೇ ವಿಧವಾದ ತೊಂದರೆಗಳು ಆಗದಂತೆ ಸೂಕ್ತ ರಕ್ಷಣೆ ನೀಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. We have posted police there. ಈ ಘಟನೆಗೆ ಮುಖ್ಯ ಕಾರಣರಾದ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಸಮಿತಿಗೆ ೩ ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಧರ್ಮಸಿಂಗ್‌ರವರೂ ಕೂಡ ಒಪ್ಪಿಕೊಂಡಿದ್ದಾರೆ. ಅಲ್ಲಿ ಎಲ್ಲರನ್ನು ಅರೆಸ್ಟ್ ಮಾಡಿದ್ದೇವೆ. ಎಲ್ಲರ ಮೇಲೂ ಕೇಸು ಹಾಕಿದ್ದೇವೆ. ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕೆಂದು ಹೇಳಿದ್ದಾರೆ. ಅದರಂತೆ ವರದಿಯನ್ನು ಕೂಡ ಕೊಡುತ್ತೇವೆ. ಆಮೇಲೆ ಮುಖ್ಯವಾಗಿ ಬೆಂಡಿಗೇರಿ......

ಶ್ರೀ ಧರ್ಮಸಿಂಗ್.—ಅವರನ್ನು ಟ್ರಾನ್ಸ್‌ಫರ್ ಮಾಡಿಬಿಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರೂ ಸಹ ೫-೬ ವರ್ಷ ಆಡಳಿತ ಮಾಡಿರತಕ್ಕಂಥವರು ಅವರು ಆಡಳಿತ ನಡೆಸುವಾಗ ಇಂಥ ಸಬ್‌ಇನ್ಸ್‌ಪೆಕ್ಟರನ್ನು ನೋಡಿರಲಿಲ್ಲವೆಂದು ಕಾಣುತ್ತದೆ. I am happy at least you have got confidence in one Sub-Inspector. I am very happy. Probably they must not have seen such a Sub-Iuspector during their regime. At least during our time there is one man. ಆಮೇಲೆ ಅಧ್ಯಕ್ಷರೇ ನಮ್ಮ ಸಮಿತಿಯವರು ಮಾಡಿರತಕ್ಕಂಥ ಶಿಫಾರಸು

> ''ಈ ಕೃತ್ಯವನ್ನು ಎಸಗಿದ ೧೩ ಜನ ಯಾರಿದ್ದಾರೆ ಅವರಲ್ಲಿ ೫ ಮಂದಿ ನೌಕರರಿದ್ದಾರೆ. ಅನುಧಾನ ಪಡೆದ ಪ್ರೌಢಶಾಲೆಯ ಇಬ್ಬರು ಶಿಕ್ಷಕರು ಸಹಕಾರಿ ಸಕ್ಕರೆ ಕಾರ್ಖಾನೆಯ ಇಬ್ಬರು ನೌಕರರು ಮತ್ತು ಒಬ್ಬರು ಗುಮಾಸ್ತರು ಇದ್ದು ಇವರುಗಳು ತಮ್ಮ ಜವಾಬ್ದಾರಿಯನ್ನು ಹಾಗೂ ನೈತಿಕ ಹೊಣೆಯನ್ನು ಮರೆತು ಮಾನವ ಕುಲ ನಾಚಿಕೆ ಪಡುವಂತೆ ಈ ಕೃತ್ಯದಲ್ಲಿ ಅವರೂ ಕೂಡ ಪಾಲ್ಗೊಂಡಿದ್ದಾರೆ. ಇದು ತುಂಬಾ ಶೋಚ ನೀಯವಾದ ವಿಚಾರವಾಗಿದೆ. ಎಂದು ಹೇಳಿದ್ದಾರೆ.''

ಹೌದು, ಇದರಲ್ಲಿ ಇಬ್ಬರು ಏಡೆಡ್ ಸ್ಕೂಲಿನ ಟೀಚರ್ಸ್, ಇಬ್ಬರು ಶುಗರ್ ಫ್ಯಾಕ್ಟರಿಯ ಎಂಪ್ಲಾಯಿಸ್ ಒಬ್ಬ ಕೋರ್ಟಿನ ಗುಮಾಸ್ತ ಎಂದು ಐದು ಜನರನ್ನು ನಾವು ತಿಳಿಸಿದಮೇಲೆ ಅವರನ್ನು ಸಸ್‌ಪೆಂಡ್ ಮಾಡಿಸಿದ್ದೇವೆ. ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ನಡೆಯುತ್ತಿದೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಮಾತನಾಡುವಾಗ ಹೇಳಿದರು. ಅವರು ಹೇಳಿದ್ದು ಏನೆಂದರೆ ರಾಜ್ಯಾಂಗ ಬದ್ಧವಾಗಿ ಔಟ್‌ರೇಟ್ ಡಿಸ್‌ಮಿಸ್ ಮಾಡಬೇಕೆಂದು. ಅವರು ಸರ್ಕಾರಿ ನೌಕರರಿದ್ದರೆ ಮಾಡ ಬಹುದಿತ್ತು. ಅವರು ನಮ್ಮ ಎಂಪ್ಲಾಯಿಸ್ ಅಲ್ಲ. ಶುಗರ್ ಫ್ಯಾಕ್ಟರಿಯವರು. ಇಬ್ಬರು, ಏಡೆಡ್ ಸ್ಕೂಲ್‌ನವರು ಇಬ್ಬರು, ಕೋರ್ಟ್‌ನವರು ಒಬ್ಬರು ಇದ್ದಾರೆ. ಕೋರ್ಟಿನ ಎಂಪ್ಲಾಯಿ ಮೇಲೆ ಮ್ಯಾಜಿಸ್ಟ್ರೇಟರು ಕ್ರಮ ತೆಗೆದುಕೊಳ್ಳಬೇಕು. ಅವರಿಗೂ ಸಹ ಹೇಳಿದ್ದೇವೆ. ಆತನನ್ನು ಸಸ್‌ಪೆಂಡ್ ಮಾಡಿದ್ದಾರೆ. ಎನ್‌ಕ್ವಯರಿಗೆ ತೆಗೆದುಕೊಳ್ಳುತ್ತಾರೆ. ಪ್ರಾಪರ್ ಡಿಸಿಷನ್ ತೆಗೆದು

ಕೊಳ್ಳುತ್ತಾರೆ. ಈವತ್ತು ನಾವು ಏನನ್ನು ಮಾಡಲಿಲ್ಲವೆಂದು ಹೇಳಬೇಡಿ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. We are not at falut. We have requested them to keep them under suspension and punish them.

ಶ್ರೀ ಬಿ. ಬಸವಲಿಂಗಪ್ಪ.—ಎಕ್ಸಾಮಿನ್ ಮಾಡುತ್ತೀರಾ ? Exemplary action was not taken, to dismiss them.

ಶ್ರೀ ಆರ್. ಎಲ್. ಜಾಲಪ್ಪ.—ಆಮೇಲೆ ಅನೇಕ ವರ್ಷಗಳಿಂದ ಹರಿಜನರ ಮೇಲೆ ದೌರ್ಜನ್ಯ ನಡೆಯುತ್ತಿದೆ, ಇನ್ನೂ ನಡೆಯುತ್ತಲೇ ಇದೆ. ಆದರೆ ಈ ಕೃತ್ಯ ಏನಿದೆ ಇದು ಅತ್ಯಂತ ಹೀನಾಯವಾದ ಕೃತ್ಯವಾಗಿದೆ. ಇದರ ಬಗ್ಗೆ ಸರಕಾರ ತಕ್ಷಣ ಮೇಲ್ಕಂಡ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳತಕ್ಕದ್ದು. ಸೂಕ್ತ ಕ್ರಮವೆಂದರೆ ಅವರನ್ನು ಕೆಲಸದಿಂದ ವಜಾ ಮಾಡುವುದಲ್ಲದೆ ಈ ಜನರನ್ನು ಅಲ್ಲಿಯೇ ಉಳಿಸಿದರೆ ಇಂತಹ ಘಟನೆಗಳು ಆಗುವ ಸಂದರ್ಭ ಹೆಚ್ಚಾಗಿರುವುದರಿಂದ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಅವರನ್ನು ಆ ಊರಿನಿಂದಲೇ ಹೊರಕ್ಕೆ ಅಟ್ಟಬೇಕು ಎಂದು ಶಿಫಾರಸು ಮಾಡಿದ್ದಾರೆ.

೯-00 ಪಿ. ಎಂ.

ಶ್ರೀ ಕೆ. ಎಚ್. ಪಾಟೀಲ್.—ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಕಮಿಟಿಯವರು ಅಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಿದಾಗ ಅವರು ಹೌದು ಅಥವಾ ಇಲ್ಲವೆಂದು ಹೇಳುವಂಥ ಸ್ಥಿತಿಯಲ್ಲೇ ಇರಲಿಲ್ಲ. ಜನರನ್ನು ಪ್ರತ್ಯೇಕವಾಗಿ ವಿಚಾರ ಮಾಡಿದ್ದಕ್ಕೆ ಸಮಿತಿಯವರಿಗೆ ನಿಜಾಂಶ ತಿಳಿಯಿತು. ಸದನದ ಸಮಿತಿಯವರಿಗೆ ಅಧಿಕಾರಸ್ಥರಿಂದಲೂ ಮೋಸವೆ ? ಇಂಥವರನ್ನು ಇಟ್ಟುಕೊಂಡು ಸರ್ಕಾರವನ್ನು ನಡೆಸುವುದು ಯೋಗ್ಯವೆ ?

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ನಾನು ಪೂರ್ಣವಾಗಿ ವಿಚಾರಣೆ ಮಾಡುತ್ತೇನೆ. ವಿಷಯ ತಮಗೆ ಗೊತ್ತಿದ್ದೂ ಹೇಳದೇ ಇದ್ದರೆ 'dereliction of duty', ಅಂತಾಗುತ್ತದೆ. We will haul them ಸದನದ ಸಮಿತಿಗೆ ಸದನಕ್ಕೆ ಎಷ್ಟು ಹಕ್ಕು ಇದೆಯೋ ಅಷ್ಟೇ ಪೂರ್ಣವಾದ ಹಕ್ಕಿದೆ. They are liable for conterpt of the House. Kindly bear with me. I will look into it. ಆಮೇಲೆ ''ಈ ಗ್ರಾಮದಲ್ಲಿ ಎರಡು ಹರಿಜನ ಕೇರಿಗಳು ಇದ್ದು ಈ ಘಟನೆ ನಡೆದಿರತಕ್ಕಂಥಾದ್ದು ಕೇವಲ ಹತ್ತು ಮನೆಗಳು ಇರತಕ್ಕಂಥ ಭಾಗದಲ್ಲಿ. ಅಲ್ಲಿ ಬಡವರು ಕೂಲಿ ಮಾಡತಕ್ಕವರು ಇದ್ದು ಈ ಘಟನೆ ನಡೆದಮೇಲೆ ಅವರು ಅಲ್ಲಿ ವಾಸಮಾಡಲು ಭಯ ಪಡುತ್ತಿದ್ದಾರೆ. ಅವರಿಗೆ ಸೂಕ್ತ ಆರ್ಥಿಕ ನೆರವು ನೀಡುವುದಲ್ಲದೆ ಸೂಕ್ತ ಪುನರ್ವಸತಿ ಕಲ್ಪಿಸಿ ಕೊಡುವುದು ಹಾಗೂ ಅವರಿಗೆ ಪೋಲೀಸ್ ರಕ್ಷಣೆ ಕೊಡುವುದು ಅವಶ್ಯಕವಾಗಿದೆ'' ಪೋಲೀಸ್ ಪ್ರೊಟೆಕ್ಷನ್ ಅನ್ನು ಕೊಟ್ಟಿದ್ದೇವೆ, ಒಂದು ಸಮಯ ಬೇರೆ ಊರಿಗೆ ಹೋಗುತ್ತೇವೆ ಎಂದು ಅವರು ನಿರ್ಧಿಷ್ಟವಾಗಿ ಹೇಳಿದರೆ we will arrange for their rehabilitation elsewhere.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ದಯಮಾಡಿ ನಮ್ಮ ರಾಜ್ಯದಲ್ಲಿ ಈ ರೀತಿ ಅನ್ಯಾಯಕ್ಕೆ ಒಳಗಾದಂಥ ಜನರು ತಾವಿದ್ದ ಊರು ಬಿಟ್ಟು ಬೇರೆ ಕಡೆಗೆ ಹೋಗಿ ಬದುಕುವುದು ಬೇಡ. ಅವರಿಗೆ ಅಲ್ಲಿಯೇ ರಕ್ಷಣೆ ಕೊಡಿ. ಅವರು ಅಲ್ಲಿಯೇ ಬದುಕಿ ಬಾಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಜನತಾ ಕಾಲೋನಿಗಳನ್ನು ಮಾಡತಕ್ಕಂಥ ಉದ್ದೇಶವೇ ಎಲ್ಲರೂ ಒಟ್ಟಿಗೆ ಇರಬೇಕೆನ್ನುವುದು. ಅವರಿಗೆ ಬೇರೆ, ಇವರಿಗೆ ಬೇರೆ ಅಂದರೆ ಇದು ಇನ್ನೂ ನಡೆದು ಕೊಂಡು ಹೋಗುತ್ತದೆ. ಇದು ಆಗಬಾರದು ಎನ್ನುವ ಉದ್ದೇಶದಿಂದಲೇ ಜನತಾ ಕಾಲೋನಿಗಳನ್ನು ಮಾಡಿರುವುದು. ಮಾನ್ಯ ಬಸವಲಿಂಗಪ್ಪನವರೇ, ನೀವು ಹೇಗೆ ಇರಲಿ ಒಂದು ಕಾಲೋನಿಗೆ ಬಸವಲಿಂಗಪ್ಪ ಕಾಲೋನಿ ಅಂತ ಹೇಳಿ ನಿಮ್ಮ ಹೆಸರನ್ನೇ ಇಟ್ಟಿದ್ದೇವೆ, In recognition of your services I have named one colony after your name. ಕೆಲವೊಮ್ಮೆ ನೀವು ಯದ್ವಾತದ್ವಾ ಬಿಹೇವ್ ಮಾಡುತ್ತೀರಿ. ಆದರೆ ಏನು ಮಾಡುವುದಕ್ಕೆ ಆಗುತ್ತದೆ ?

ಆಮೇಲೆ ಈ ಗ್ರಾಮವನ್ನು ಪುಂಡಾಟಿಕ ಎಂದು ಘೋಷಿಸಿ ಪುಂಡು ಕಂದಾಯವನ್ನು ವಿಧಿಸುವುದರಿಂದ ಇದು ನಡೆಯದಂತೆ ಕ್ರಮ ತೆಗೆದುಕೊಳ್ಳುವುದು'' ಈ ಪುನಿಟಿವ್ ಫೈನ್ ಹಾಕಬೇಕಾದರೆ ಒಂದು ಕಾನೂನು ಇದೆ. ಗೂಂಡಾ ಆ್ಯಕ್ಟ್‌ಗೆ ತಿದ್ದುಪಡಿ ತನ್ನಿ ಎಂದು ತಾವು ಹೇಳಿದ್ದೀರಿ. I will consult with the Legal Department. Law Minister ಪುಸ್ತಕಗಳನ್ನು ತರಿಸಿಕೊಂಡಿದ್ದೇವೆ. ಒಂದೇ ಘಟನೆಯ ಆಧಾರದ ಮೇಲೆ. We consult externate them.

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ನೀವು ಕ್ವಾಲಿಟಿ ಮತ್ತು ಕ್ವಾಂಟಿಟಿ ಎಂದು ನೋಡಬೇಕಾಗಿಲ್ಲ. ಒಂದು ಘಟನೆ ನಡೆದರೂ ಸಾಕು.

ಶ್ರೀ ಆರ್. ಎಲ್. ಜಾಲಪ್ಪ.—ನನಗೆ ಅವರಿಗೆ ಬಹಳ ಸಲೀಸು. ಕೋರ್ಟಿನಲ್ಲಿ ವಾದ ಮಾಡುವ ಹಾಗೆ ಮಾತನಾಡುತ್ತಾರೆ. ಕೋರ್ಟಿನಿಂದ ಈ ಒಂದು ವರ್ಷದ ಹಿಂದೆ ಅಫೆನ್ಸ್ ಮಾಡಿದ್ದ, ಈಗ ಅಫೆನ್ಸ್ ಇಲ್ಲ. ಆದ್ದರಿಂದ ಇದು ಗೂಂಡಾ ಎಂದು ತೆಗೆದುಕೊಳ್ಳಲಾಗುವುದಿಲ್ಲ ಎಂದು ರಿಜೆಕ್ಟ್ ಆಗುತ್ತದೆ......

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುವುದೇನೆಂದರೆ ನಿಮ್ಮ ಹತ್ತಿರ ಲಾ ಮಿಶಿನರಿ ಇದೆ. ಎಕ್ಸಿಸ್ಟಿಂಗ್ ಲಾ ಏನಿದೆ, ಅದರ ಪ್ರಕಾರ ಅವರನ್ನು ಡಿಸ್ಟ್ರಿಕ್ಟ್ ಬಿಟ್ಟು ಹೊರಗೆ ಹೋಗುವಂತೆ ಮಾಡಿ ಅದನ್ನಾದರೂ ಮಾಡಿ, ಪರೀಕ್ಷೆ ಮಾಡಿ.

ಅಧ್ಯಕ್ಷರು.—ಇದನ್ನು ಎಕ್ಸಾಮಿನ್ ಮಾಡಿರಿ.

ಶ್ರೀ ಆರ್. ಎಲ್. ಜಾಲಪ್ಪ.—''ಪರಿಶಿಷ್ಟ ಜಾತಿಯವರಿಗೆ ಸಂವಿಧಾನಾತ್ಮಕವಾಗಿ ಜೀವಿಸಲು ಅಡಚಣೆ ಆಗದಂತೆ ಪ್ರೋತ್ಸಾಹ ಕೊಡಬೇಕು. ಅವರ ಪುರೋಭಿವೃದ್ಧಿಗೆ ಧನಸಹಾಯ ಮತ್ತು ಸರ್ಕಾರಿ ಜಮೀನುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿದೆ'' ಇದನ್ನು ನಾವು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ, ಈಗಲೂ ಮಾಡುತ್ತೇವೆ. ಅವರಿಗೆ ಬೇಕಾದರೆ ಎಕ್ಸ್‌ಟ್ರಾ ಕೇರ್ ಕೊಟ್ಟು ಯಾವುದೇ ವಿಧವಾದ ತೊಂದರೆ ಆಗದಂತೆ ಮಾಡುತ್ತೇವೆ. ಇದಕ್ಕೆ ನಾವು ಬದ್ಧರಾಗಿದ್ದೇವೆ. ಆಮೇಲೆ ಪರಿಶಿಷ್ಟ ಜಾತಿಯವರ ಮೇಲೆ ಇರುವ ಮೊಕದ್ದಮೆಗಳನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಿ ಅವರಿಗೆ ರಕ್ಷಣೆ ಕೊಡುವುದಲ್ಲದೆ ಇದರ ಬಗ್ಗೆ ತೀರ್ಪು ಕೊಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ''

ನಾವು ಹೇಗೆ ಕೋರ್ಟಿಗೆ ಹೋಗಿ ಬೇಗ ಮುಗಿಸಿ ಎಂದು ಹೇಳುವುದು ? ಕಷ್ಟವಾಗುತ್ತದೆ. ಆದರೂ we will request the Public Prosecuters to file application before the Hon ble Court. ಪರಿಶಿಷ್ಟ ಜಾತಿಯವರಿಗೆ ಬೇರೆಕಡೆ ಇದೇ ವಸತಿ ಏರ್ಪಾಡು ಮಾಡುವುದರ ಜೊತೆಗೆ ಅವರಿಗೆ ಬೇಸಾಯ ಮಾಡಲು ಅನುಕೂಲವಾಗುವಂತೆ ಭೂಮಿಯನ್ನು ನೀಡುವಂತೆ ಸಮಿತಿ ಶಿಫಾರಸ್ಸು ಮಾಡುತ್ತದೆ ಎಂದು ವರದಿಯಲ್ಲಿ ಹೇಳಿದ್ದಾರೆ. ಇದನ್ನು ನಾನು ಒಪ್ಪುವುದಿಲ್ಲ ಸ್ವಾಮಿ. ಏಕೆಂದರೆ ತಿರುಗ ಒಂದು ಕಾಲೋನಿ ಮಾಡಿ ದೂರ ಬಿಸಾಕಿ ಎಂದರೆ I don't want to treat them as untouchables ಇನ್ನೂ ಸಾವಿರಾರು ವರ್ಷ ಹೀಗೆ ಇಡುವುದಕ್ಕೆ ನಮಗೆ ಇಷ್ಟವಿಲ್ಲ. ಅವರಿರುವ ಕಡೆಯಲ್ಲೇ ಅವರಿಗೆ ರಕ್ಷಣೆಕೊಡುವುದು ನಮ್ಮ ಕರ್ತವ್ಯ. ಅದನ್ನು ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಜಮೀನು ಖರೀದಿ ಮಾಡಿ ಕೊಡಿ. ಅಲ್ಲೇ ಇರುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—''ಎಲ್ಲಾ ಮೇಲ್ಕಂಡ ಶಿಫಾರಸ್ಸುಗಳನ್ನೂ ಸರ್ಕಾರ ಮೂರು ತಿಂಗಳೊಳಗೆ ಕಾರ್ಯರೂಪಕ್ಕೆ ತಂದು ಸವರ್ಣೀಯರು ಹಾಗೂ ಹರಿಜನರು ಅನ್ಯೋನ್ಯವಾಗಿ ಬಾಳಲು ಅನುಕೂಲ ಮಾಡಿಕೊಡಬೇಕೆಂದು ಈ ಸಮಿತಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಈ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮದ ವರದಿಯನ್ನು ಸರ್ಕಾರಕ್ಕೆ ಮೂರು ತಿಂಗಳೊಳಗೆ ಕಳುಹಿಸಿಕೊಡುವುದು.'' ಮೂರು ತಿಂಗಳೊಳಗೆ ವರದಿಯನ್ನು ಕಳುಹಿಸಿಕೊಡುತ್ತೇನೆ. ಮಾನ್ಯ ಮೊಯಿಲಿಯವರು ಮಾತನಾಡುವಾಗ ಬಹಳ ಗಹನವಾದ ವಿಚಾರವನ್ನು ಎತ್ತಿದರು. ಈ ಸಮಿತಿಯ ವರದಿಯನ್ನು ಕ್ಯಾಬಿನೆಟ್ ಮುಂದೆ ಯಾವಾಗ ತಂದಿರಿ, ನಿಮ್ಮ ಡೆಲಿಬರೇಷನ್ ಏನು ಎಂದು ಕೇಳಿದ್ದಾರೆ. ಇದನ್ನು ಕ್ಯಾಬಿನೆಟ್ ಮುಂದೆ ನಾವು ತಂದಿಲ್ಲ. ವರದಿ ಬಂದ ೧೫ ದಿವಸದಲ್ಲಿ ನಾನು ಮತ್ತು ಬಸವಣ್ಣಪ್ಪನವರು

ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿದ್ದೇವೆ. ಅವರ ಸಲಹೆ ಮೇರೆಗೆ ಕೆಲವು ಕ್ರಮ ಕೈಗೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಸಲಹೆ ಮೇರೆಗೆ ಕೂಡಲೇ ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ನಾನು ಮತ್ತು ಬಸವಣ್ಣನಪ್ಪನವರಿಬ್ಬರೂ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೆಲ್ಲಾ ಆಕ್ಷನ್ ತೆಗೆದುಕೊಂಡ ವಿಚಾರ ಹೇಳಿದಿರಿ. ಬಹಳ ರೊಟೀನಾಗಿ ಅಡ್ಮಿನಿಸ್ಟ್ರೇಟೀವ್ ಆಕ್ಷನ್ ತೆಗೆದುಕೊಳ್ಳುವುದು ಮುಖ್ಯವಲ್ಲ. ಸಾಮಾನ್ಯವಾಗಿ ಇದನ್ನು ನೀವು ಮಾಡಿಯೇ ಮಾಡುತ್ತೀರಿ. ಇದರಿಂದ ವರದಿ ಮೇಲೆ ಗಂಭೀರವಾಗಿ ಆಕ್ಷನ್ ತೆಗೆದುಕೊಂಡಂತಾಗುವುದಿಲ್ಲ. ಇದನ್ನು ತಮ್ಮ ಲೆವೆಲ್‌ನಲ್ಲಿ ಮಾಡಬೇಕಾಗಿಲ್ಲ. ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದರೆ ಅವರೇ ಇದನ್ನು ಮಾಡುತ್ತಿದ್ದರು. ಇಷ್ಟು ಗಂಭೀರವಾದ ಪ್ರಸಂಗ ಆಗಿರುವಾಗ Whether your government has applied its mind. That is very important. Government means as the political has, the Cabinet... ಈ ರಿಪೋರ್ಟ್... ಮಲ ತಿನ್ನಿಸುವುದು ಅಮಾನುಷವಾದ ಕೆಲಸ, ಇಂಥ ಅಟ್ರಾಸಿಟೀಸ್ ಇಲ್ಲಿಯವರೆಗೆ ಆಗಿಲ್ಲ ಎಂಬುದನ್ನು ತಾವು ಒಪ್ಪಿದ್ದೀರಿ. ಆದರೆ What view the Cabinet has taken on this ? ವ್ಹೈಂಡ್ ಏತಕ್ಕೆ ಅಪ್ಲೈ ಮಾಡಲಿಲ್ಲ ಎಂದು ಹೇಳುತ್ತೇನೆ ಅಂದರೆ ಯಾರೋ ಗ್ರ್ಯಾಂಟ್-ಇನ್ ಏಡ್-ಕೋಡ್‌ನಲ್ಲಿ ಕೆಲಸ ಮಾಡುವಂಥ ಅಧಿಕಾರಿ, ಅಥವಾ ಷುಗರ್ ಫ್ಯಾಕ್ಟರಿ ನೌಕರ ಅವನ ಮೇಲೆ ಆಕ್ಷನ್ ತೆಗೆದುಕೊಳ್ಳುವುದು ಮುಖ್ಯವಲ್ಲ. ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳನ್ನು ಜವಾಬ್ದಾರಿಯನ್ನಾಗಿ ಮಾಡಬೇಕು. ಸಮಿತಿಯು ಮುಂದೆ ಈ ವಿಷಯದ ಬಗ್ಗೆ ಹೌದು ಅಥವಾ ಇಲ್ಲ ಎಂದು ಅಧಿಕಾರಿಗಳು ಹೇಳಲಿಲ್ಲ ಎಂದು ವರದಿಯಲ್ಲಿ ಹೇಳಿದ್ದಾರೆ. ಇಂಥ ಪ್ರಸಂಗ ಒಂದೆರಡು ಕಡೆ ನಡೆದಾಗ ಪ್ರಿವೆಂಟೀವ್ ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು.. that is more important. That could be taken only at your level. ಅಂಥ ಪೊಲಿಟಿಕಲ್ ವಿಲ್ ನಿಮ್ಮಲ್ಲಿದ್ದರೆ that is a serious lapse on the part of the government where you come into the picture. You have to shoulder that responsibility. ಜಿಲ್ಲಾಧಿಕಾರಿಯಾಗಲೀ, ಪೋಲೀಸ್ ಅಧಿಕಾರಿ ಆಗಲೀ ಆ ಮಟ್ಟದ ಅಧಿಕಾರಿಗಳ ಮೇಲೆ ಕಾರ್ಯಾಚರಣೆಯನ್ನು ಸರ್ಕಾರದವರು ಮಾಡಲಿಲ್ಲ. ಅಂದಮೇಲೆ ಏನು ಅಭಿಪ್ರಾಯ ಬರುತ್ತದೆ ? ದಲಿತ ಜನಾಂಗದವರನ್ನು ರಕ್ಷಣೆ ಮಾಡತಕ್ಕ ರಾಜಕೀಯ ಇಚ್ಛಾಶಕ್ತಿ ನಿಮ್ಮಲ್ಲಿಲ್ಲ ಎಂದು ನಾವು ಕನ್‌ಕ್ಲೂಡ್ ಮಾಡಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಎಲ್ಲಾ ಕಾರ್ಯಾಚರಣೆ ಮಾಡಿದ್ದೇವೆ. ಸಮಿತಿಯವರು ಹೇಳಿದ್ದರಲ್ಲಿ ಶೇಕಡ ೮೫-೯೦ರಷ್ಟು ಮಾಡಿದ್ದೇವೆ. ಕ್ಯಾಬಿನೆಟ್ ಮುಂದೆ ತರಲಿಲ್ಲ ಎಂಬುದೊಂದನ್ನೇ ಇನ್-ಆಕ್ಷನ್ ಎಂದು ಹೇಳಿದರೆ. ನಾನೇನು ಮಾಡುವುದಕ್ಕಾಗುತ್ತದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಸ್ಪೆಂಡ್ ಮಾಡಲಿಕ್ಕೆ ಹೇಳಿದ್ದೇವೆ, ಪುಂಡುಗಂದಾಯ ಹಾಕುವುದಕ್ಕೆ ಕಾನೂನಿಲ್ಲ ಎಂದರೆ ಇದೇನು ಆಕ್ಷನ್ ? ಇದು ಆಕ್ಷನ್ನೇ ಅಲ್ಲ. What action you have taken is not an action at all according to.

SRI R. L. JALAPPA.--What is other action ?

ಶ್ರೀ ಬಿ. ಬಸವಲಿಂಗಪ್ಪ.—ಈಗ ತಾವು ರಿಪೋರ್ಟ್ ಮೇಲೆ ಆಕ್ಷನ್ ತೆಗೆದುಕೊಂಡಿದ್ದು ಹೇಳಿದ್ದೀರಿ. ತಾವು ಮತ್ತು ಬಸವಣ್ಣನವರು ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದು ಹೇಳಿದ್ದೀರಿ. ಆಯಿತು. ಈಗ ಗಂಭೀರವಾದ ಚರ್ಚೆ ಈ ಸದನದಲ್ಲಿ ಆದಮೇಲೆ ಇಷ್ಟು ಸಲಹೆಗಳು ಬಂದಮೇಲೆ ತಾವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ ಅದನ್ನು ಮಾಡಿ ಸದನಕ್ಕೆ ವರದಿ ಕೊಟ್ಟರೆ ಬಹಳ ಸಂತೋಷವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಕೆ. ಎಚ್. ಶ್ರೀನಿವಾಸ್ ಅವರು ಶಿವಮೊಗ್ಗದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಿಜವಾಗಿ ಶಿವಮೊಗ್ಗದಲ್ಲಿ ಏನಾಗಿದೆ ಆ ಬಗ್ಗೆ ಪಶ್ಚಾತ್ತಾಪ ಪಡುತ್ತೇನೆ. ಆದರೆ ಅವರು ಒಂದು ವಿಷಯ ಹೇಳಿದರು. ಅವರನ್ನು ಏತಕ್ಕೆ ಹಿಡಿದುಕೊಂಡು ಬಂದರೋ ಏನು ಕಥೆಯೋ, ಅವರನ್ನು ಕರೆದುಕೊಂಡು ಬಂದು ಹೀಗೆಲ್ಲಾ ಮಾಡಿದರು ಎಂದು ಹೇಳಿದರು.

ಸ್ವಾಮಿ ಹಿಡ್ಕೊಂಡು ಬಂದಿದ್ದು, ಒಬ್ಬೊಬ್ಬರ ಮೇಲೂ, ಇದು ಒಂದೇ ಅಲ್ಲ. ಶ್ರೀ ರಾಜಕುಮಾರ್ ಮೇಲೆ ಎಂದರೆ ಸತ್ತವನ ಮೇಲೆ ೧೮ ಪ್ರಕರಣಗಳು ದಾಖಲಾಗಿವೆ ಕ್ರಿಮಿನಲ್ ಕೇಸ್‌ಗಳು. ನಲ್ಲಕುಮಾರ್ ಮೇಲೆ ೪ ಪ್ರಕರಣಗಳು, ಗುರುಮೂರ್ತಿಯ ಮೇಲೆ ೧೫ ಪ್ರಕರಣಗಳು, ಪ್ರಕಾಶ್ ಮೇಲೆ ೮ ಪ್ರಕರಣಗಳು, ಪುರುಶೋತ್ತಮನ ಮೇಲೆ ೩ ಪ್ರಕರಣಗಳು ಇವೆ. ರೀಸೆಂಟ್ ಆಗಿ ಹಿಡ್ಕೊಂಡು ಬರಬೇಕಾದ ಕಾರಣ ಏನೆಂದರೆ ೩೧-೧೨-೧೯೮೭ರಲ್ಲಿ ಶಿಲ್ಪ ಬಾರ್ ಮತ್ತು ಹೋಟೆಲ್ ಮುಂದುಗಡೆ ನಿಂತಿದ್ದ ರಾಜೇಂದ್ರಸಿಂಗ್ ಪುತ್ರ ಮತ್ತು ಇನ್ನಿತರೆ ೩ ಜನರಿಗೆ ಚಾಕುವಿನಲ್ಲಿ ತಿವಿದಿದ್ದರು. ಆಮೇಲೆ ಅದೇ ದಿವಸ ರಷೀದ್ ಎಂಬುವರಿಗೆ ಚಾಕುವಿನಲ್ಲಿ ತಿವಿದಿದ್ದರು. ಇದರಿಂದಾಗಿ ಅವರನ್ನು ಹಿಡ್ಕೊಂಡು ಬಂದಿದ್ದರು. ಮೊದಲೇ ಹಿಡ್ಕೊಂಡು ಬಂದರೋ ಅಥವಾ ಆಮೇಲೆ ಹಿಡ್ಕೊಂಡು ಬಂದರೋ ಎಂಬುದರ ಬಗ್ಗೆ ಇನ್ನೂ ಇನ್ವೆಸ್ಟಿಗೇಷನ್ ಆಗಬೇಕು. ೩೧-೧೨-೧೯೮೭ರ ನಂತರ ೮-೧೦-೧೨ ದಿವಸಗಳು ಆದ ಮೇಲೆ ಹಿಡಿದಿದ್ದಾರೆ ಎಂಬುದರ ಬಗ್ಗೆ ಈ ಸಮಯದಲ್ಲಿ ಅವರು ಹೇಳಿದ್ದು ಸರಿ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ ಅದನ್ನು ಇನ್ವೆಸ್ಟಿಗೇಷನ್ ಮಾಡಿಸುತ್ತೇನೆ. ಮತ್ತು ನಾನು ಈಗಾಗಲೇ ಹೇಳಿದ ಹಾಗೆ ಅವರ ಮೇಲೆ ದೂರುಗಳನ್ನು ಕೊಡದೇ ಇರುವಂತಹ ಪ್ರಕರಣಗಳು ಬೇಕಾದಷ್ಟನ್ನು ಮಾಡಿದ್ದಾರೆ. ಮಾನ ಮರ್ಯಾದೆ ದೃಷ್ಟಿಯಿಂದ ಎಷ್ಟೋ ಹೆಣ್ಣು ಮಕ್ಕಳು ದೂರುಗಳನ್ನು ಕೊಟ್ಟೇ ಇಲ್ಲ. ಒಂದು ಹೇಳುತ್ತೇನೆ. ಇವತ್ತು ಅವನು ಸತ್ತಾಗ ಯಾರೂ ಸಂತೋಷ ಪಡಬಾರದು ನಿಜ. ಆದರೆ ಆ ಹೆಣ್ಣು ಮಕ್ಕಳು ಆ ದಿವಸ ಸ್ವೀಟ್ಸ್ ಹಂಚಿಕೊಂಡು ತಿಂದಿದ್ದಾರೆ. ಹಾಲು ಹಂಚಿಕೊಂಡು ಕುಡಿದಿದ್ದಾರೆ ಆದರಿಂದ ಅವನು ಎಂತಹ ವ್ಯಕ್ತಿ ಎಂಬುದನ್ನು ತಾವು ಯೋಚನೆ ಮಾಡಬೇಕು. ಆದರೂ ಪೋಲೀಸ್‌ನವರು ಜಡ್ಜ್ ಆಗಬಾರದು. ನಾವೆಲ್ಲಾ ಪನಿಶ್‌ಮೆಂಟ್ ಕೊಡತಕ್ಕಂತಹವರು. ಅದನ್ನು ಕೊಡಬೇಕಾದಂತಹವರು ಕೋರ್ಟ್. ಆದರೆ ಆ ದಿವಸ ಇದು ವ್ಯತ್ಯಾಸ ಆಗಿದೆ. ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ ೩ ೫೮ ಪ್ರಕಾರ ಅವರನ್ನು ಅರೆಸ್ಟ್ ಮಾಡಿಸಿದ್ದೇನೆ. ಜ್ಯೂಡಿಷಿಯಲ್ ಕಸ್ಟಡಿಯಲ್ಲಿರಬೇಕು ಎಂದು ಕಾಣಿಸುತ್ತದೆ. ಏನೋ ಮಾಡಿ ಬಿಟ್ಟುಬಿಡುವ ಹಾಗಿದ್ದರೆ ನಾನು ಏನು ಮಾಡುತ್ತಿದ್ದೆ ಗೊತ್ತೆ ಸುಮ್ಮನೆ ಸಸ್‌ಪೆಂಡ್ ಮಾಡಿದ ಹಾಗೆ ಮಾಡಿ, ೬ ತಿಂಗಳು ಆದಮೇಲೆ ಬೇರೆ ಊರಿಗೆ ಟ್ರಾನ್ಸ್‌ಫರ್ ಮಾಡುತ್ತಿದ್ದೆ ಅವರ ೩೦೨ ಕಲಮನ್ನು ಅನ್ವಯ ಮಾಡುತ್ತಿರಲಿಲ್ಲ. ನಂಬಬೇಕು, ನಮ್ಮನ್ನು. ಪ್ರತಿಯೊಂದಕ್ಕೂ ಅಪನಂಬಿಕೆ ಇರುವಂತಹದ್ದು ಅದೊಂದು ಕಾಯಿಲೆ. ಯಾವಾಗಲೂ ಅಪನಂಬಿಕೆ ಇರಬಾರದು.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಕೆಳಗಡೆ ಇರತಕ್ಕ ಲೋಕಲ್ ಪೋಲೀಸ್‌ನವರು ಅವರ ಒಡನಾಡಿಗಳಾದ್ದಂತಹವರ ಕೈಯ್ಯಲ್ಲಿ ಅಸ್ತ್ರವನ್ನು ಕೊಟ್ಟರೆ ಅದು ಜಸ್ಟೀಸ್ ಆಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಅದನ್ನು ಕನ್ಸಿಡರ್ ಮಾಡೋಣ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇದರಲ್ಲಿ ಯಾರ್‍ಯಾರು ಇನ್ವಾಲ್ವ್ ಆಗಿದ್ದಾರೆ ಎಂಬುದು ಇನೂ ಪರಿಪೂರ್ಣವಾಗಿ ಇನ್ವೆಸ್ಟಿಗೇಷನ್ ಆಗಿಲ್ಲ. ಎಸ್ ಐ ಅವರನ್ನು ಸಸ್‌ಪೆಂಡ್ ಮಾಡಿದ್ದೀರಿ. ಅದನ್ನು ನೀವೇ ಯೋಚನೆ ಮಾಡಿ. ಯಾವ ಚಾರ್ಜ್‌ಮೇಲೆ ಅವರನ್ನು ಸಸ್‌ಪೆಂಡ್ ಮಾಡಿದ್ದೀರೆಂಬುದನ್ನು ಅನಲೈಸ್ ಮಾಡಿದರೆ It goes and connects him to the crime itself.

ಶ್ರೀ ಆರ್. ಎಲ್. ಜಾಲಪ್ಪ.— ೬ ಪೋಲೀಸ್‌ನವರು ಒಬ್ಬ ದಫೇದಾರ್ ಅನ್ನು ಅರೆಸ್ಟ್ ಮಾಡಿಸಿದ್ದೇನೆ. ಎಸ್.ಐ. ಅವರನ್ನು ಸಸ್‌ಪೆಂಡ್ ಮಾಡಿದ್ದೇನೆ. ಆದರೆ ಅವರೂ ಇದರಲ್ಲಿ ಶಾಮೀಲಾಗಿದ್ದಾರೆಯೋ ಎಂಬುದರ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿಸುತ್ತಿದ್ದೇನೆ. ಎಸ್.ಐ ನವರೂ ಇದರಲ್ಲಿ ಶಾಮೀಲಾಗಿದ್ದರೆ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಪರ್ಟಿಕ್ಯುಲರ್ಲಿ ನಿಮ್ಮ ಬೋನಫೈಡ್ ಅನ್ನು ಕ್ವೆಶ್ಚನ್ ಮಾಡದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಈ ಖಾತೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ನನಗೆ ಯಾವ ಒಬ್ಬ ಪೋಲೀಸ್ ಮಾಡಿದ್ದು ದು ಸರಿಯಲ್ಲವೆಂದು ನನ್ನ ಮನಸ್ಸಿಗೆ ಬಂದರೆ ನಾನು ಯಾರನ್ನೂ ಸ್ಪೇರ್ ಮಾಡಿಲ್ಲ ನನ್ನ ಮೇಲೆ ಎಷ್ಟೋ ಒತ್ತಡ ಬಂದರೂ, ಎರಡೂ ಕಡೆಯಿಂದ ಒತ್ತಡ ಬಂದರೂ, ನಮ್ಮ ಮನೆಯವರು ಹೇಳಿದರೂ, ನಮ್ಮ ಅಪ್ಪ ಹೇಳಿದರೂ ಅವರಿಗೆ ನಾನು

ಅಂಜದೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ಕೆ.ಹೆಚ್. ಪಾಟೀಲ್‌ರವರ ಕ್ಷೇತ್ರವಾದ ಗದಗಿನಲ್ಲೇ ಬಾಟ್ಲಿಂಗ್ ವ್ಯವಹಾರ ಮಾಡುತ್ತಿದ್ದಂತಹವರ ಜೊತೆ ಸೇರಿಕೊಂಡಿದ್ದಾರೆಂಬುದು ನನ್ನ ಗಮನಕ್ಕೆ ಬಂದ ಮೇಲೆ ಇನ್ಸ್‌ಪೆಕ್ಷನ್ ಮಾಡಿ ಅವನನ್ನು ಸಸ್‌ಪೆಂಡ್ ಮಾಡಿದ್ದೇನೆ. ಸಿ.ಒ.ಡಿ.ಗೆ ಕಳುಹಿಸಿ ಇನ್ವೆಸ್ಟಿಗೇಷನ್ ಮಾಡಿಸಿದ್ದೇನೆ. ನಾನು ಯಾರಿಗೂ ಮುಲಾಜು ತೋರಿಸಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.— ಅದನ್ನು ನಾನು ಹೇಳಿದಾಗಲೇ ಮಾಡಲಿಲ್ಲ. ಹಿಂದುಗಡೆಯಿಂದ ಅಂದರೆ ಎಲ್ಲಾ ಪೂರ್ತಿಯಾದ ಮೇಲೆ ಮಾಡಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.— ಅಂದರೆ ನೀವು ಹೇಳಿದಾಗಲೇ ಮಾಡಿದರೆ ಅದು ಪೊಲಿಟಿಕಲ್ ಇನ್‌ಫ್ಲೂಯನ್ಸ್ ಎಂದು ಹೇಳುತ್ತೀರಿ, ಯಾವುದನ್ನಾದರೂ ಸ್ವಲ್ಪ ವೆರಿಫೈ ಮಾಡಬೇಕು. "ಎತ್ತು ಈಯಿತು ಅಂದರೆ ಗೂಟಕ್ಕೆ ಕಟ್ಟು" ಅಂತ ಮಾಡುವುದಕ್ಕಾಗುತ್ತದೆಯೇ ? ಆ ರೀತಿ ಮಾಡುವುದಕ್ಕಾಗುವುದಿಲ್ಲ. I must know whether there is some truth. After knowing the truth I have kept him under suspension. ಆಮೇಲೆ ಇನ್ನೊಂದು ಚಾರ್ಜ್, ಬಹಳ ದೊಡ್ಡ ಚಾರ್ಜ್ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಇದರ ಬಗ್ಗೆ ಉತ್ಸಾಹ ಇಲ್ಲ. ನಿಮಗೂ ಇಲ್ಲ. ನಿಮ್ಮ ಕಾಲದಲ್ಲೇ ಇದೆಲ್ಲಾ ನಡೆಯುತ್ತಿದೆ ಎಂಬುದಾಗಿ ಹೇಳಿದ್ದಾರೆ. ಲಕ್ಷ್ಮಣನಾಯಕನ ಕೊಲೆ ಸಂಬಂಧದಲ್ಲಿ ಕೊಲೆಯಾದ ಕೆಲವು ದಿವಸದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಫೋನ್ ಮಾಡಿ ನೀವೇ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರಬೇಕೆಂದು ಹೇಳಿದರು. ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಆ ಬಗ್ಗೆ ಅವರಿಗೊಂದು ವರದಿಯನ್ನೂ ಕೂಡ ಕೊಟ್ಟಿದ್ದೇನೆ. ನಾನು ಅಲ್ಲಿಗೆ ಹೋಗಿದ್ದಾಗ ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರು ಸಿಕ್ಕಿದ್ದರು, ಅವರ ಜೊತೆ ಡಿಸ್‌ಕಸ್ ಮಾಡಿದ್ದೇನೆ. ನಂತರ ಅಲ್ಲಿಯ ಲೋಕಲ್ ಲೀಡರ್ ಜೊತೆ ಡಿಸ್‌ಕಸ್ ಮಾಡಿದ್ದೇನೆ. ಅವರ ಮನೆಗೆ ಹೋಗಿ ಅಲ್ಲಿದ್ದಂತಹ ಹೆಣ್ಣುಮಕ್ಕಳ ಜೊತೆ ಡಿಸ್‌ಕಸ್ ಮಾಡಿದ್ದೇನೆ. ಇದನ್ನೆಲ್ಲಾ ನೋಡಿದ ಮೇಲೆ ಪೋಲೀಸ್‌ನವರನ್ನು ಕರೆದು there is some lapse on your part ಅಂತಲೇ ಹೇಳಿಬಂದಿದ್ದೇನೆ. ಮೀಟಿಂಗ್ ಮಾಡುವುದಕ್ಕೆ ೧೬ ಸಾರಿ ಬ್ಯಾನ್ ಕೊಟ್ಟೇ ಮೀಟಿಂಗ್ ಆಗಿದೆ. ಯಾವುದೇ ಕಾರಣದಿಂದ ಮೀಟಿಂಗ್ ನಿಲ್ಲಿಸುವಂತಾಗಬಾರದು, ಧೈರ್ಯವಾಗಿ ಮೀಟಿಂಗ್ ನಡೆಯಬೇಕು ಅಂತ ಹೇಳಿ ಬಂದಿದ್ದೇನೆ. I bave taken prompt action. ಸಬ್ ಇನ್‌ಪೆಕ್ಟರ್ ವೀಕ್‌ಫೆಲೋ ಎಂದು ಗೊತ್ತಾದ ಮೇಲೆ ಅಲ್ಲಿಂದ ತಕ್ಷಣ ಟ್ರಾನ್ಸ್‌ಫರ್ ಮಾಡಿಸಿದ್ದೇನೆ. ಇದು ರಾಜಕೀಯ ಕೊಲೆ, ಇದು ಜಾತೀಯತೆ ಎಂದು ಕಲ್ಪಿಸುವುದು ಬೇಡ. ಒಂದು ತಾಲ್ಲೂಕಿನಲ್ಲಿ ಹಿಂದುಳಿದವರು ಒಕ್ಕಲಿಗರನ್ನು ಕೊಂದುಹಾಕಿದರು. ಇದು ರಾಜಕೀಯ ಕೊಲೆಯೇ ? ಬ್ರಾಹ್ಮಣರಿಗೆ ಆಸಿಡ್ ಹುಯ್ದರು ಇದು ರಾಜಕೀಯ ಕೊಲೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ವೀಕರ್ ಸೆಕ್ಷನ್‌ರವರು...

ಶ್ರೀ ಆರ್. ಎಲ್. ಜಾಲಪ್ಪ.— ಈಗ ಲಿಂಗಾಯಿತರು ಲಿಂಗಾಯಿತರನ್ನು ಕೊಂದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಏತಕ್ಕೆ ಬಣ್ಣ ಕಟ್ಟುತ್ತೀರಿ ? ಅವರು ಯಾವ ಪಕ್ಷಕ್ಕೆ ಸೇರಿದವರು ? ರಾಜಕೀಯವಾಗಿ ಅವರು ಮುಂದುವರಿಯಬಾರದು, ಅವರು ಮುಂದೆ ಬಂದಾಗ ಅಲ್ಲಿರತಕ್ಕ ಫ್ಯೂಡಲ್‌ಕ್ಲಾಸ್‌ನವರು ಕೊಲೆ ಮಾಡಿದ್ದಾರೆ. ವೀಕರ್ ಸೆಕ್ಷನ್‌ರವರಿಗೆ ರಕ್ಷಣೆ ಸಿಗುತ್ತದೆ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಭಯ ಫ್ಯೂಡಲ್‌ಕ್ಲಾಸ್‌ನವರಿಗೆ ಇದ್ದರೆ ಈ ರೀತಿ ಆಗುತ್ತಿರಲಿಲ್ಲವೆಂದು ಹೇಳಿದ್ದೇವೆ. ನಾವು ಆ ಜಾತಿ ಈ ಜಾತಿ ಎಂದು ಹೇಳಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ನಾನು ಹೇಳುವುದು ಇಷ್ಟೆ, ಲಿಂಗಾಯಿತರು ಲಿಂಗಾಯಿತರನ್ನು ಕೊಲೆಮಾಡಿದ್ದಾರೆ. ಒಕ್ಕಲಿಗರು ಒಕ್ಕಲಿಗರನ್ನು ಕೊಲೆ ಮಾಡಿದ್ದಾರೆ. ಹುಣಸೂರಿನಲ್ಲಿ ಏನಾಗಿದೆ? ಹರಿಜನರೇ ಬಡಿದಾಡಿದ್ದಾರೆ. ಗೌರಿಬಿದನೂರಿನಲ್ಲಿ ಏನಾಗಿದೆ, ಅಲ್ಲಿ ಒಂದು ಜಾತಿಯವರು ಬ್ರಾಹ್ಮಣ ಜಾತಿಯವರಿಗೆ ಆಸಿಡ್ ಹುಯ್ದರು. ಇದಕ್ಕೆ ಜಾತಿ ತರುವುದು ಬೇಡ. ನಾವು ರಕ್ಷಣೆಯನ್ನು ವೀಕರ್ ಸೆಕ್ಷನ್‌ದವರಿಗೆ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಲಂಬಾಣಿ ಜನಾಂಗದವನನ್ನು ಜಿಲ್ಲಾ ಪರಿಷತ್ ಸದಸ್ಯನಾಗಿದ್ದಾನೆ. ನಾವು ಇಷ್ಟೊಂದು ಶ್ರೀಮಂತರಿದ್ದು ಏನೂ ಆಗಲಿಲ್ಲವೆಂದು ಕೊಲೆಯಾಯಿತು ಎಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.— ಆ ಕೊಲೆ ಪೋಲೀಸ್‌ಸ್ಟೇಷನ್ ಮುಂದುಗಡೆ ನಡೆದಿದೆ.

ಶ್ರೀ ಆರ್. ಎಲ್. ಜಾಲಪ್ಪ.— ಪೋಲೀಸ್‌ಸ್ಟೇಷನ್ ಮುಂದುಗಡೆ ನಡೆಯಲಿಲ್ಲ. ಕೊಲೆ ನಡೆದುದು ಪೋಲೀಸ್‌ಸ್ಟೇಷನ್ ಹಿಂದುಗಡೆ 200 ಗಜ ದೂರ ಇರಬಹುದು. ಆ ಸಮಯದಲ್ಲಿ ಸ್ಟೇಷನ್‌ನಲ್ಲಿ ಪೋಲೀಸರು ಮೂರು ಜನ ಇದ್ದರು. ಸಬ್‌ಇನ್ಸ್‌ಪೆಕ್ಟರ್ ಹಿಂದಿನ ದಿವಸ ಮೀಟಿಂಗ್‌ಗೆ ಹೋಗಿದ್ದರು. ಅಷ್ಟರೊಳಗೆ ಬಾಡಿಯನ್ನು ಇನ್ಸ್‌ಪೆಕ್ಷನ್‌ಗೆ ಕಳುಹಿಸಿದ್ದರು. ಎಲ್ಲೋ ಒಂದು ಕಡೆ ಕೊಲೆಯಾದರೆ ಲಾ ಅಂಡ್ ಆರ್ಡರ್ ಮುಳುಗಿಹೋಯಿತು ಅಂದರೆ ಹೇಗೆ? ಹಾಗಾದರೆ ದೆಹಲಿಯಲ್ಲಿ ಕೊಲೆಯಾದರೆ ಲಾ ಅಂಡ್ ಆರ್ಡರ್ ಮುಳುಗಿಹೋಗುತ್ತದೆಯೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಬೆಳಿಗ್ಗೆ ಕೊಲೆಯಾದ ಮೇಲೆ ತಕ್ಷಣ ಟ್ರೀಟ್‌ಮೆಂಟ್ ಸಿಗಲಿಲ್ಲ. ಆಸ್ಪತ್ರೆಯಲ್ಲಿ ಬ್ಲಡ್ ಸಿಗಲಿಲ್ಲ. ಎರಡು ಮೂರು ಗಂಟೆ ಓಡಾಡಿದ್ದಾರೆ. ಅವೊತ್ತಿನ ದಿವಸವೇ ಎ.ಎಸ್.ಪಿಯವರ ಇನ್ಸ್‌ಪೆಕ್ಷನ್ ಇತ್ತು. ಎರಡು ಮೂರು ಗಂಟೆ ಓಡಾಡಿಸಿದ ಮೇಲೆ ಆತ ಕೊನೆಗೆ ಸತ್ತ.

ಶ್ರೀ ಆರ್. ಎಲ್. ಜಾಲಪ್ಪ.— ಅದು ಸಣ್ಣ ಆಸ್ಪತ್ರೆ ಅಲ್ಲಿ ರಕ್ತ ಇಲ್ಲ. ಗುಲ್ಬರ್ಗಕ್ಕೆ ಹೋಗುವಾಗ ಅವನು ಸತ್ತಿದ್ದಾನೆ. ತಕ್ಷಣ ಗುಲ್ಬರ್ಗಕ್ಕೆ ಹೋಗಿದ್ದರೆ ಉಳಿಯುತ್ತಿದ್ದನೇನೋ. ನಾವು ರಕ್ಷಣೆ ಕೊಟ್ಟಿದ್ದೇವೆ. ಊರಿನಲ್ಲಿ ಯಾರಾದರೂ ಗಲಾಟೆ ಮಾಡಿದರೆ ಕೈಕಾಲು ಮುರಿದುಹಾಕಿ ಎಂದು ಹೇಳಿದ್ದೇನೆ. ನಾನು ಹಾಗೆ ಹೇಳಿದರೆ ಹೇಳುವುದು ಬೇಡವೆಂದು ಹೇಳುತ್ತಾರೆ. ಶಿವಮೊಗ್ಗ ಕೇಸ್‌ನಲ್ಲಿ ದೇವೇಂದ್ರಪ್ಪ ಎನ್ನುವವರ ಮೇಲೆ ಮೂರು ಕೇಸುಗಳಿವೆ ಆದ್ದರಿಂದ ಅರೆಸ್ಟ್ ಮಾಡಿದ್ದೇವೆ. ನಾನು ಹೇಳಿದೆ ಅರೆಸ್ಟ್ ಮಾಡಿ ಕೋರ್ಟ್‌ಮುಂದೆ ಪ್ರೊಡ್ಯೂಸ್ ಮಾಡಿಯೆಂದು, ಅವನನ್ನು ಅರೆಸ್ಟ್ ಮಾಡಲಾಗಿದೆ. ಬೇರೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆ ಎಂದು ಕೇಳಿದ್ದೇನೆ. ಬಂದಿದ್ದೇನೆ. ಹೇಳಿದ್ದೇನೆ. ಪೋಲೀಸ್‌ನವರಿಗೆ ಹೇಳಿದ್ದೇನೆ. ಯಾವುದೇ ಕಾರಣದಿಂದ...

ಶ್ರೀ ಎಂ. ವೀರಪ್ಪ ಮೊಯಿಲ್ಲಿ.— ನೀವೇ ಹೇಳಿ ಅರೆಸ್ಟ್ ಮಾಡಿಸಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.— ತಪ್ಪೇನು. 2 ಸಾರಿ ಆಗಿದ್ದು, ಇದು ಮೂರನೇ ಸಾರಿ. ಹೇಳಿದ್ದೇನೆ.

SRI K. H. SRINIVAS.— Why that inordinate delay ? You explain that delay. ಪೋಲೀಸ್‌ನವರನ್ನು 48 ಗಂಟೆಗಳ ಕಾಲ ಎಲ್ಲಿ ಇಟ್ಟುಕೊಂಡಿದ್ದೀರಿ ? ಶಿವಮೊಗ್ಗಕ್ಕೆ ನೀವು ಬಂದು ಅರೆಸ್ಟ್ ಮಾಡಿಸುವವರೆಗೂ ಪೋಲೀಸ್‌ನವರು ಎಲ್ಲಿದ್ದರು ? ಪೊಲಿಟಿಕಲ್ ಪ್ರೆಸರ್ ಇದ್ದುದರಿಂದಲೇ ಮಾಡಲಾಗಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಪೊಲಿಟಿಕಲ್ ಪ್ರೆಸರ್ ನಿಮ್ಮ ಕಾಲದಲ್ಲೂ ಇತ್ತು. ನಮ್ಮ ಕಾಲದಲ್ಲೂ ಇದೆ.

ಶ್ರೀ ಎಸ್. ಬಂಗಾರಪ್ಪ.— ಕಡಿಮೆ ಮಾಡುತ್ತೇವೆಂದು ಬಂದಿರಿ ? ಇಂತಹ ಕಾರಣಗಳನ್ನು ಕೊಟ್ಟು ಅರೆಸ್ಟ್ ಮಾಡಿಸಿದ್ದೀರಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಇಲ್ಲ. ಅದು ಸಾಧ್ಯವಿಲ್ಲ. I cannot be considerate fellow. ಪೊಲಿಟಿಕಲ್ ಪ್ರೆಸರ್ ಬಗ್ಗೆ ಹೇಳುವುದಾದರೆ, ಈ ನಮ್ಮ ಡೆಮಾಕ್ರಸಿ ಮೆಚ್ಯೂರಿಟಿ ಅಟೇನ್ ಆಗುವವರೆಗೂ ಈ ಗೋಳು ಇದ್ದೇ ಇರುತ್ತದೆ. ನಿಮ್ಮ ಕಾಲದಲೂ ಇದು ಇತ್ತು. ನಮ್ಮ ಕಾಲದಲ್ಲೂ ಇದೆ.

ಶ್ರೀ ಎಸ್. ಬಂಗಾರಪ್ಪ.— ನಮ್ಮ ಕಾಲದಲ್ಲಿ ಇರಲೇ ಇಲ್ಲ. ನಮ್ಮ ಕಾಲದ ವಿಚಾರ ನಿಮಗೆ ಹೇಗೆ ಗೊತ್ತು ? ನಮ್ಮ ಕಾಲದಲ್ಲಿ ಇತ್ತು ಎಂಬುದನ್ನು ಹೇಗೆ ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ಚಿಂತಾಮಣಿದು ಒಂದು ಕೇಸು ಅಸೆಂಬ್ಲಿಯಲ್ಲಿ ಬಂದಿತ್ತು. ಆಗ ನೀವು ಅಗ್ರಿಕಲ್ಚರಲ್ ಮತ್ತು ರೆವಿನ್ಯೂ ಮಂತ್ರಿಗಳಾಗಿದ್ದಿರಿ ನಾನು ಪತ್ರಿಕಾ ಕರ್ತರ ಗ್ಯಾಲರಿಯಲ್ಲಿ ನಮಗಾಗಿಯೇ ಜಾಗ ಇತ್ತು ಅಲ್ಲಿಗೆ ಬಂದು ನೋಡಿದ್ದೇನೆ. ಆಗ ನೀವು ಸರ್ಕಾರದ ಪರವಾಗಿ ಡಿಫೆನ್ಸ್ ಮಾಡಿಕೊಂಡಿದ್ದೀರಿ. ಡಿಫೆನ್ಸ್ ಮಾಡಿಕೊಂಡಿಲ್ಲ. ಒಂದು ರೀತಿಯ ಉತ್ತರವನ್ನು ಕೊಟ್ಟಿದ್ದೀರಿ. ಅದನ್ನು ತರಿಸಿ ನೋಡಬೇಕು ಅದನ್ನು ನೋಡಬೇಕೆಂದಿತ್ತು. ಏನು ಇದೆ ಎಂಬುದನ್ನು ತರಿಸಿ

ನೋಡುತ್ತೇನೆ. ಅದಕ್ಕಾಗಿಯೇ ಸ್ವಲ್ಪ ಸಮಯ ಕೊಡಿ ಎಂದು ಕೇಳಿದರೂ ತಾವು ಕೇಳಲಿಲ್ಲ. ನೀವು ಮಾತನಾಡುತ್ತಿದ್ದುದನ್ನು ನೋಡಿ ನಾನೇ ಏನೋ ಮಾಡಿಬಿಟ್ಟಿದ್ದೇನೇನೋ ಎಂಬ ಗಾಬರಿ ನನಗಾಯಿತು. ನೀವು ಮಾತನಾಡಿದ್ದು ನಮಗೆ ಗೊತ್ತಿರಲಿಲ್ಲ. ನೀವು ಮಾತನಾಡಿದ ರಭಸವನ್ನು ನೋಡಿದರೆ I was wondering whether I mvself is a culprit. ಎಂದು ನನಗೆ ಅನುಮಾನ ಬಂದು ಓಡೋಡಿ ನಿಮ್ಮ ಎದುರಿಗೆ ಬಂದಿದ್ದೇನೆ, ಇನ್ನೂ ಹಲವಾರು ವಿಷಯಗಳನ್ನು ನನ್ನ ಹಲವಾರು ಮಿತ್ರರು ಹೇಳಿದ್ದಾರೆ. ಅದನ್ನೆಲ್ಲಾ ನಾನು ಬರೆದು ಕೊಂಡಿದ್ದೇನೆ. ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ವಿಷಯವನ್ನು ವಿನಯ ಪೂರ್ವಕವಾಗಿ ತಮ್ಮ ಗಮನಕ್ಕೆ ತರವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಯಾವುದೇ ಕಾರಣದಿಂದ ದೀನದಲಿತರ ಹಾಗೂ ಬಡವರನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಿಲ್ಲ. ಇದು ನಮ್ಮ ಕರ್ತವ್ಯ. ಒಂದು ಸಿವಿಲೈಸ್ಡ್ ಗೌರ್ನಮೆಂಟ್ ರೆಸ್‌ಪಾನ್ಸಿಬಿಲಿಟಿ ಇರತಕ್ಕಂತಹದ್ದು ಸರ್ಕಾರದ ಆದ್ಯ ಕರ್ತವ್ಯ. ದಯ ಮಾಡಿ ಇದರ ಬಗ್ಗೆ ಅನುಮಾನಪಡುವುದು ಬೇಡ. ಇಷ್ಟನ್ನು ಹೇಳುತ್ತಾ, ಇಷ್ಟೊಂದು ದೀರ್ಘವಾಗಿ ಉತ್ತರವನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ......

(ಗೊಂದಲ)

ಅಧ್ಯಕ್ಷರು.— ಈಗ ಸಭೆಯು ಎದ್ದು ನಾಳೆ ಬೆಳಗ್ಗೆ ೯-೦೦ ಗಂಟೆಗೆ ಪುನಃ ಸಮಾವೇಶ ಗೊಳ್ಳುತ್ತದೆ.

(ಸದನವು ರಾತ್ರಿ ೯-೨೩ಕ್ಕೆ ಮುಕ್ತಾಯವಾಗಿ ಮರುದಿನ ದಿನಾಂಕ ೨೨-೧-೧೯೮೭ರಂದು ಬೆಳಿಗ್ಗೆ ೯-೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)